# ನಮ್ಮ ಸಂಸ್ಕೃತಿ ಪರಂಪರೆ

ಬೆಟಗೇರಿ ಕೃಷ್ಣಶರ್ಮ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ನಮ್ಮ ಸಂಸ್ಕೃತಿ ಪರಂಪರೆ

**ಬೆಟಗೇರಿ ಕೃಷ್ಣಶರ್ಮ**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು

**NAMMA SAMSKRUTHI PARAMPARE -** Written by **Sri Anandha Kandha** (Betageri Krishnasharma); Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xx + ೧೨೭
ಬೆಲೆ : ರೂ. ೪೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦



# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ



## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಮೊದಲ ಮಾತು

ನಾನು ಕನ್ನಡನಾಡಿನ ದಿವ್ಯ–ಭವ್ಯ ಸಂಸ್ಕೃತಿಯ ಬಗೆಗೆ ವಿಸ್ತಾರವಾಗಿ ಬರೆಯಬೇಕೆಂದಿರುವ ಪರಿಚಯಾತ್ಮಕ ಗ್ರಂಥದ ಕೆಲವು ಅಂಶಗಳನ್ನು ಮಾತ್ರ ಈ ನಮ್ಮ ಸಂಸ್ಕೃತಿ ಪರಂಪರೆ ಒಳಗೊಂಡಿದೆ. ಇದನ್ನು ಇಷ್ಟರಲ್ಲಿಯೆ ನಾನು ಬರೆಯುತ್ತಿದ್ದೆನೋ ಇಲ್ಲವೋ, ಹುಬ್ಬಳ್ಳಿಯ ಕರ್ಮವೀರ ವಾರಪತ್ರಿಕೆಯ ಸಂಪಾದಕರ ಒಲವಿನ ಒತ್ತಾಯ, ಈ ಗ್ರಂಥದ ಬಹುಭಾಗವನ್ನು ಬರೆಯಿಸಿತು. ಚೈತ್ರಮಾಸದಿಂದ ಮೊದಲು ಮಾಡಿ ಫಾಲ್ಗುಣಮಾಸದವರೆಗಿನ ಹನ್ನೆರಡು ತಿಂಗಳುಗಳ ಸಂಸ್ಕೃತಿಯ ಪರಿಚಯಾತ್ಮಕ ಪ್ರಬಂಧಗಳನ್ನು ಅವರು ತಮ್ಮ ಪತ್ರಿಕೆಯ ಬೇರೆ ಬೇರೆ ಹನ್ನೆರಡು ಸಂಚಿಕೆಗಳಲ್ಲಿ ಪ್ರಕಟಿಸಿದರು. ಈ ಪ್ರಬಂಧಗಳನ್ನು ಓದುತ್ತಲಿದ್ದ ಸಹೃದಯಿಗಳಾದ ವಾಚಕರೂ, ವಿದ್ವಾಂಸರಾದ ಅನೇಕ ಜನ ಮಿತ್ರರೂ ನನ್ನ ಈ ಬರೆಹಗಳ ಬಗೆಗೆ ತಮ್ಮ ಮೆಚ್ಚಿಕೆಯನ್ನೂ ಸೂಚಿಸಿದರಲ್ಲದೆ, ಈ ಪ್ರಬಂಧಗಳನ್ನು ಸ್ವತಂತ್ರ ಪುಸ್ತಕವನ್ನಾಗಿ ಪ್ರಕಟಿಸಬೇಕೆಂಬ ಅಭಿಪ್ರಾಯವನ್ನೂ ತಿಳುಹಿದರು. ಆದುದರಿಂದ, ಈ ಪ್ರಬಂಧಗಳ ಮೂಲಪ್ರಚೋದಕರಾದ ಕರ್ಮವೀರ ಪತ್ರಿಕೆಯ ಸಂಪಾದಕರಿಗೆ ನನ್ನ ಧನ್ಯವಾದಗಳನ್ನು ಮೊದಲು ಸಮರ್ಪಿಸಿ, ಆಮೇಲೆ ಇವುಗಳನ್ನು ಮೆಚ್ಚಿ ನನ್ನನ್ನು ಪ್ರೋತ್ಸಾಹಿಸಿದ ಮಹನೀಯರಿಗೆಲ್ಲ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಮಾಜ ಪುಸ್ತಕಾಲಯ ಮತ್ತು ಪ್ರತಿಭಾ ಮುದ್ರಣಾಲಯದ ಒಡೆಯರಾದ ಶ್ರೀ ಬಾಲಚಂದ್ರ ಘಾಣೇಕರರೂ ಅವರ ಇಬ್ಬರು ಚಿರಂಜೀವಿಗಳೂ ಈ ಪುಸ್ತಕದ ಪ್ರಕಾಶನ ಮುದ್ರಣಗಳ ಹೊಣೆಯನ್ನು ಹೊತ್ತು, ಯಶಸ್ವಿಯಾಗಿ ತಮ್ಮ ಕಾರ್ಯವನ್ನು ನಿರ್ವಹಿಸಿದ್ದಾರೆ. ಇದು ಕಾದಂಬರಿಗಳ ಕಾಲ ಅದರಲ್ಲಿಯೂ ಬಣ್ಣಬಣ್ಣದ ಮುಖಚಿತ್ರಗಳುಳ್ಳ ಕಾದಂಬರಿಗಳೇ ಮಾರಾಟವಾಗುವ ಕಾಲ. ಲಾಭದ ಕಡೆಗೆ ದೃಷ್ಟಿಯಿರಿಸುವ ಪ್ರಕಾಶಕರು, ಪಠ್ಯಪುಸ್ತಕವಾಗಬಹುದೆಂಬ ವಿಶ್ವಾಸ ಇಲ್ಲದೆಹೋದರೆ, ಇಂತಹ ಗಂಭೀರಪ್ರವೃತ್ತಿಯ ಪ್ರಬಂಧಗಳ ಸಂಕಲನವನ್ನು ಪ್ರಕಾಶನಕ್ಕೆ ತೆಗೆದುಕೊಳ್ಳುವುದು ಅಸಾಧ್ಯ ವಿಷಯವೇ ಎನಿಸುವಂತಿದೆ. ಆದರೆ ಶ್ರೀ ಬಾಲಚಂದ್ರ ಘಾಣೇಕರರು, ಬರಿ ಪ್ರಕಾಶಕರಷ್ಟೇ ಅಲ್ಲ; ಸಂಸ್ಕೃತಿಯ ಅಭಿಮಾನಿಗಳೂ ಆಗಿದ್ದಾರೆ. ಎಂತಲೇ ಈ ಸಾಂಸ್ಕೃತಿಕ ಪ್ರಬಂಧಸಂಕಲನವನ್ನೂ ಪ್ರೀತಿಯಿಂದ ಸ್ವೀಕರಿಸಿ, ಪ್ರಕಟನೆಗೆ ಸಿದ್ಧರಾದರು. ಆದುದರಿಂದ ಅವರಿಗೂ ಅವರ ಮಕ್ಕಳಿಬ್ಬರಿಗೂ ನನ್ನ ವಿಶ್ವಾಸದ ಧನ್ಯವಾದಗಳು.

ಈ ಸಂಸ್ಕೃತಿ ಶಾರದೆಯ ಕೊರಳಿಗೆ ತಮ್ಮ ಅಮೂಲ್ಯವಾದ ಮುನ್ನುಡಿಯ ಮುತ್ತಿನ ಮಾಲೆಯನ್ನು ಆದರದಿಂದ ತೊಡಿಸಿದ ಡಾ. ಆರ್.ಸಿ.ಹಿರೇಮಠ, ಎಂ.ಎ., ಪಿ.ಎಚ್.ಡಿ, ಕರ್ನಾಟಕ ವಿ.ವಿ. ನಿಲಯ, ಧಾರವಾಡ ಅವರಿಗೆ ನನ್ನ ಅನಂತ ಧನ್ಯವಾದಗಳು. ತಮಗಿರುವ ಹರಿಹಿಂಗದ ಕಾರ್ಯಭಾರಗಳ ಗೊಂದಲದಲ್ಲಿಯೆ ಅವರು ಈ ಗ್ರಂಥವನ್ನು ಪೂರ್ಣವಾಗಿ ಓದಿ, ನನ್ನ ಸಾಹಿತ್ಯಿಕ ವ್ಯಕ್ತಿತ್ವವನ್ನು ಕುರಿತೂ ಈ ಪ್ರಬಂಧ ಸಂಕಲನವನ್ನು ಕುರಿತೂ ಮೆಚ್ಚಿಕೆಯ ಮಾತುಗಳ ಮಳೆಯನ್ನೇ ಸುರಿಸಿದ್ದಾರೆ. ಅವರ ಸ್ನೇಹಪೂರ್ಣವಾದ ಹೃದಯವೈಶಾಲ್ಯ ನನ್ನ ಅನುಭವದ ವಿಷಯವಾಗಿದೆ. ಕೃತಜ್ಞತೆಯ ಸಲುವಳಿಗಾಗಿ ನಾನು ನಾಲ್ಕು ಮಾತುಗಳನ್ನು ಹೆಚ್ಚಿಗೆ ಬರೆದರೂ ಮುದುಡಿಕೊಳ್ಳುವಂತಹ ಮೆಲ್ಲೆದೆ ಅವರದು.

ಈ ಬಗೆಯ ಸಂಸ್ಕೃತಿಯ ಸುತ್ತುನೋಟದ ಪರಿಚಯಾತ್ಮಕ ಗ್ರಂಥವು ಕನ್ನಡದಲ್ಲಿ ಇದೇ ಮೊದಲನೆಯದೆಂದು ಹೇಳಿದರೆ ತಪ್ಪೆನಿಸಲಾರದು. ಕನ್ನಡ ಜನಜೀವನದ ಇತಿಹಾಸ ಇಂದು ನಿನ್ನೆಯದಲ್ಲ, ಯುಗ–ಯುಗಾಂತರಗಳಿಂದಲೂ ಆ ಜನಜೀವನ, ವಿವಿಧ ರೀತಿಯ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ಆಚರಿಸುತ್ತ ಬಂದಿದೆ. ಶ್ರುತಿ, ಆಗಮ, ಸ್ಮೃತಿ, ಪುರಾಣ, ಜ್ಞಾನವಾದ, ಕರ್ಮವಾದ, ಭಕ್ತಿ ಇವೆಲ್ಲವುಗಳಿಂದಲೂ ಒಳ್ಳೆಯದನ್ನು ಸ್ವೀಕರಿಸಿ, ತನ್ನ ಸೌಂದರ್ಯವನ್ನು ವಿಸ್ತರಿಸಿಕೊಳ್ಳುತ್ತ ಬಂದಿದೆ. ಅವೆಲ್ಲ ಸೌಂದರ್ಯ ಸಂಕೇತಗಳು ಇಂದಿನ ನಮ್ಮ ಆಚಾರ–ವಿಚಾರಗಳಲ್ಲಿ ನೆಲೆನಿಂತಿರುವುದನ್ನು ನಾವು ಕಾಣಬಹುದು; ಆದರೆ ಆ ಸಂಕೇತಗಳ ಅರ್ಥವಿವೇಚನೆಯಿಲ್ಲದೆ ಹೋದುದರಿಂದ, ಅವೆಲ್ಲ ಇಂದು ನಮಗೆ ಅಂಧಪರಂಪರೆಯ ಮೂಢಾಚಾರ ಎನಿಸುತ್ತಲಿವೆ; ಆದುದರಿಂದಲೇ ನಾವು ನಮ್ಮ ಎಷ್ಟೋ ಸಂಸ್ಕೃತಿಯ ಪರಂಪರೆಯನ್ನು ಕಳೆದುಕೊಂಡಿದ್ದೇವೆ. ದುರ್ದೈವದ ಸಂಗತಿಯಿದು. ನಮ್ಮ ಜನಜೀವನದ ಪ್ರತಿಯೊಂದು ಆಚಾರಪರಂಪರೆಯೂ ಮಾನವತೆಯ ವಿಕಾಸನಕ್ಕಾಗಿ ಇದೆಯೆಂಬುದನ್ನು, ತಿಳಿದ ಹಿರಿಯರು ಆಗಾಗ ಜನತೆಗೆ ತಿಳಿಹೇಳಬೇಕಾಗಿತ್ತು; ಆದರೆ ಆ ಕೆಲಸವನ್ನು ಯೋಗ್ಯರೀತಿಯಿಂದ ಮಾಡಿದವರಾರೂ ಅರ್ವಾಚೀನ ಇತಿಹಾಸ ಪ್ರಪಂಚದಲ್ಲಿ ಕಂಡುಬರುವುದಿಲ್ಲ.

ಈ ಗ್ರಂಥ ಲೇಖನ ಕಾರ್ಯದಲ್ಲಿ ನಾನು ಬಳಸಿಕೊಂಡಿರುವ ಆಕರ ಗ್ರಂಥಗಳು ಅನೇಕ. ಮಾಡಿದರೆ ನೂರಾರು ಗ್ರಂಥಗಳ ಹೆಸರುಗಳನ್ನೊಳಗೊಂಡ ದೊಡ್ಡ ಪಟ್ಟಿಯೇ ಆಗಬಹುದು. ಬೇರೆ ಬೇರೆ ಪುರಾಣಗ್ರಂಥಗಳು, ಧರ್ಮಸಿಂಧು, ನಿರ್ಣಯಸಿಂಧು, ಸದಾಚಾರಸ್ಮೃತಿ, ಭಾಗವತ, ಭಕ್ತಿಸೂತ್ರಗಳು, ಜ್ಯೋತಿಷ್ಯವಿಷಯಕ ಪುಸ್ತಕಗಳು ಇವೆಲ್ಲವುಗಳನ್ನು ನೋಡಿ ವಿಷಯ ಮಂಥನ ಮಾಡಬೇಕಾಯಿತು. ನನಗೆ ಅವಶ್ಯಕವೆನಿಸಿದ ಅನೇಕ ಪುಸ್ತಕಗಳನ್ನು ಸಕಾಲದಲ್ಲಿ ಒದಗಿಸಿಕೊಟ್ಟ ಪೂಜ್ಯ



ಬಾಲಚಂದ್ರಶಾಸ್ತ್ರಿಗಳವರು, ಪೂಜ್ಯ ಅವಧಾನೀ ರಾಘವೇಂದ್ರಾಚಾರ್ಯರು, ಡಾ. ಕಮಲಾಪುರ ಕಾಂತರಾಯರು ಇವರೆಲ್ಲರಿಗೂ ನಾನು ಋಣಿಯಾಗಿದ್ದೇನೆ. ವಿಚಾರ ವಿವೇಕಿಗಳಾದ ವಾಚಕವರ್ಗ ಇದನ್ನು ಓದಿ ಮೆಚ್ಚಿದರೆ ನಾನು ಕೃತಾರ್ಥ.

ಈ ಗ್ರಂಥದ ಕೊನೆಯ ಭಾಗದಲ್ಲಿ ಬಂದಿರುವ 'ಕರ್ನಾಟಕದಲ್ಲಿ ವಸಂತೋತ್ಸವ' ಎಂಬ ಪ್ರಬಂಧವು ಕಸ್ತೂರಿ ಮಾಸಪತ್ರಿಕೆಯ ವಸಂತ ಸಂಚಿಕೆಯಲ್ಲಿ ಬೆಳಕಿಗೆ ಬಂದಿದೆ. 'ಶಮೀಸಂಕೇತ' ಎಂಬುದು ಧಾರವಾಡದ ಆಕಾಶವಾಣಿಯಿಂದ ಬಿತ್ತರಗೊಂಡುದು. 'ನಾಡಹಬ್ಬ' ಪ್ರಬಂಧವು ಬೆಂಗಳೂರು ರಾಜಾಜಿನಗರದ ನಾಡಹಬ್ಬ ಸಮಿತಿಯವರು ಹೇಳಿ ಬರೆಯಿಸಿದುದು. ಅವರೆಲ್ಲರಿಗೂ ನನ್ನ ಸಾದರ ವಂದನೆಗಳು.

ಧಾರವಾಡ
೧೯–೪–೧೯೬೯
ಅಕ್ಷಯ ತೃತೀಯ

**ಬೆಟಗೇರಿ ಕೃಷ್ಣಶರ್ಮ**

# ಮುನ್ನುಡಿ

ವರಸುಧಾರೋಗಣೆಗೆ ಮಾಧುರದ ಹಂಗೇಕೆ
ತರಣಿಯೋಲಗಕೆ ಸೊಡರಂ ಪಿಡಿವ ತೊಡಕೇಕೆ
ಪರುಷದಾಭರಣಗೆಲಸಕ್ಕೆ ಮಿಸುನಿಯನಟಿಸಿ
ತೊಲುವಾಯಸವೇತಕ್ಕೆ?

ಎಂಬ ಕವಿ ರಾಘವಾಂಕನ ಉಕ್ತಿ ಈಗ ಸ್ಮರಣೆಗೆ ಬರುತ್ತಿದೆ. ನಮ್ಮ ಸಂಸ್ಕೃತಿ ಪರಂಪರೆ ಎಂಬ ಶ್ರೀ ಬೆಟಗೇರಿ ಕೃಷ್ಣಶರ್ಮರ ಉನ್ನತಕೃತಿಗೆ ಮುನ್ನುಡಿಯ ಹಂಗೇಕೆ? ಎಂದು ಹೇಳಿ ವಿರಮಿಸುವಷ್ಟು ಭಕ್ತಿಭಾವ ಉಕ್ಕಿಬರುತ್ತಿದೆ.

ಶ್ರೀ ಬೇಟಗಿರಿ ಕೃಷ್ಣಶರ್ಮಾ ಅವರು, ಆಧುನಿಕ ಕನ್ನಡದ ಮಹಾಶಕ್ತಿ. ಅವರು ನಮ್ಮ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲೆಲ್ಲ ಕೃಷಿಗೈದು ಮೇರುಕೃತಿಗಳನ್ನು ರಚಿಸಿರುವರು. ಆಧುನಿಕ ಭಾವಗೀತಸಾಹಿತ್ಯದಲ್ಲಿ ಅವರ ಸ್ಥಾನ ಗುರುತರವಾಗಿದೆ. ಮಾರ್ಗ-ದೇಸಿಗಳ ಸಮನ್ವಯ, ಭಾವಭಾಷೆಗಳ ಪರಿಶುದ್ಧಿ, ವಿಚಾರದ ಔನ್ನತ್ಯ ಮುಂತಾದ ಗುಣಗಳಿಂದ ಆನಂದಕಂದರ ಕಾವ್ಯಸೃಷ್ಟಿ ಚೇತೋಹಾರಿಯಾಗಿದೆ; ಪುರಾತನ-ನೂತನಗಳ ಸಂಗಮವಾಗಿದೆ. ಆನಂದಕಂದರ ಕಾವ್ಯಶಕ್ತಿ ಅಸಾಮಾನ್ಯ!

ಆನಂದಕಂದರು ನಡೆದುದು ಮಾರ್ಗವಾಗಿದೆ; ನುಡಿದುದು ಸಾಹಿತ್ಯವಾಗಿದೆ. ಸಣ್ಣಕತೆ, ಕಾದಂಬರಿ ಕ್ಷೇತ್ರಗಳಲ್ಲಿ ಅವರ ಸ್ಥಾನ ಹಿರಿದಾಗಿದೆ. 'ರಾಜಯೋಗಿ', 'ಅಶಾಂತಿಪರ್ವ', 'ಮಲ್ಲಿಕಾರ್ಜುನ' ಮೊದಲಾದ ಕಾದಂಬರಿಗಳು ಕಲ್ಪಾಂತಸ್ಥಾಯಿ! ಸಣ್ಣಕತೆಗಳ ಕ್ಷೇತ್ರದಲ್ಲಿ ಅವರ ವೈಶಿಷ್ಟ್ಯ ಇನ್ನೂ ಎದ್ದು ಕಾಣುತ್ತದೆ. ಹಳ್ಳಿಯ ಬಾಳಿನ ಸುಖ-ದುಃಖಗಳನ್ನು ಚಿತ್ರಿಸುವಲ್ಲಿ ಆನಂದಕಂದರನ್ನು ಸರಿಗಟ್ಟುವವರೇ ಇಲ್ಲ!

ಆನಂದಕಂದರ ಅದ್ಭುತವಾದ ಈ ಸೃಜನಶಕ್ತಿ, ಅಪಾರವಾದ ವಿದ್ವತ್ತು, ನೈಪುಣ್ಯ, ಲೋಕ-ಶಾಸ್ತ್ರಕಾವ್ಯದಿಗಳ ನಿರೀಕ್ಷಣೆಗಳಿಂದೊಡಗೂಡಿ, ಅವರ ವ್ಯಕ್ತಿತ್ವದ ವ್ಯಾಪ್ತಿ-ದೀಪ್ತಿಗಳನ್ನು ಹೆಚ್ಚಿಸಿವೆ. ಮಾತಿಗಾಗಿ ಮಾತು; ಶಬ್ದಕ್ಕಾಗಿ ಶಬ್ದವೆಂಬುದು ಅವರ ವ್ಯಕ್ತಿತ್ವಕ್ಕೆ ಎಂದಿಗೂ ಸರಿಹೊಂದದು. ಅವರ ಮಾತು, ಭಾವ ಎಲ್ಲ ಅರ್ಥಪೂರ್ಣವಾಗಿರುತ್ತವೆ, ಶಾಶ್ವತತೆಯತ್ತ ಸಾಗಿರುತ್ತವೆ. ಇದಕ್ಕೆ ಪ್ರಸ್ತುತಕೃತಿ 'ನಮ್ಮ ಸಂಸ್ಕೃತಿ ಪರಂಪರೆ'ಯೇ ಒಂದು ಉತ್ತಮ ನಿದರ್ಶನ.

'ನಮ್ಮ ಸಂಸ್ಕೃತಿ ಪರಂಪರೆ' ಮುಖ್ಯವಾಗಿ ಭಾರತೀಯರ ದ್ವಾದಶಮಾಸಗಳನ್ನು



ಕುರಿತು ಬರೆದ ಪ್ರಬಂಧಗಳನ್ನೊಳಗೊಂಡಿದೆ. ಚೈತ್ರದಿಂದ ಫಾಲ್ಗುಣದವರೆಗೆ ಹರಿಯುತ್ತಿರುವ ಅಖಂಡವಾದ ಸಂಸ್ಕೃತಿಯ ಪ್ರವಾಹವನ್ನು ಇಲ್ಲಿ ಕಾಣುತ್ತೇವೆ. ಪ್ರತಿ ಪ್ರಬಂಧದ ಶೀರ್ಷಿಕೆಯೇ ಸಹೃಯದರ ಮನವನ್ನು ಒಮ್ಮೆಲೆ ಸೆಳೆಯುತ್ತಿದೆ: 'ಭದ್ರಭವಿಷ್ಯತ್ ಸಂಯೋಜಕ ಭಾದ್ರಪದಮಾಸ', 'ಅನ್ನದೇವರ ಅವತರಣಕಾಲ ಆಶ್ವಿನಮಾಸ', ಈ ತಲೆಬರಹಗಳು ಎಷ್ಟು ಅರ್ಥಪೂರ್ಣವಾಗಿವೆ; ಕಾವ್ಯಮಯವಾಗಿವೆಯೆಂಬುದನ್ನು ಸಹೃದಯರು ಕಂಡುಕೊಳ್ಳಬಹುದು. ಕವಿ ಚಿಂತನಪರನಾದಲ್ಲಿ ಎಂತಹ ಔನ್ನತ್ಯವನ್ನು ಸಾಧಿಸಬಲ್ಲನೆಂಬುದಕ್ಕೆ ಇವು ನಿದರ್ಶನವಾಗಿವೆ.

ಈ ಪ್ರಬಂಧಗಳು ನಮ್ಮ ಸಂಸ್ಕೃತಿಪರಂಪರೆಯ ಆಳ-ಅಗಲವನ್ನು ಸ್ಪಷ್ಟವಾಗಿ ಚಿತ್ರಿಸುತ್ತವೆ. ವೇದ, ಆಗಮ, ಪುರಾಣಕಾಲದಿಂದ ಇಂದಿನವರೆಗೂ ನಮ್ಮ ಜೀವನದಲ್ಲಿ ಕಂಡುಬರುವ ಅನೇಕ ಪರಂಪರೆಗಳ ಇತಿಹಾಸವೇ ಇಲ್ಲಿ ಕಂಡುಬರುತ್ತದೆ. 'ಒಳಪೊಕ್ಕು ನೋಡೆ' ನಮ್ಮ ಸಮಗ್ರ ಸಂಸ್ಕೃತಿಯ ಸಿಂಹಾವಲೋಕನ ಈ ಗ್ರಂಥ! ಭಾಗೀರಥಿಜಯಂತಿ, ರಾಮನವಮಿ, ವಟಸಾವಿತ್ರಿ, ತಪತೀಸ್ನಾನ ಇಂತಹ ನೂರಾರು ಪರಂಪರೆಗಳ ಉಗಮ-ವಿಕಾಸಗಳನ್ನು ಮಾರ್ಮಿಕವಾಗಿ ಚಿತ್ರಿಸಿರುವರು ಇಲ್ಲಿಯ ಲೇಖನಗಳಲ್ಲಿ. ಈ ಗ್ರಂಥವನ್ನು ಓದುತ್ತಲೆ ನಮ್ಮ ಮಾಸಗಳು, ಉತ್ಸವಗಳು, ಹಬ್ಬ-ಹರಿದಿನಗಳು ಎಷ್ಟು ಅರ್ಥಪೂರ್ಣವಾಗಿವೆಯೆಂಬುದರ ಭವ್ಯ ಕಲ್ಪನೆಯುಂಟಾಗುತ್ತದೆ.

ವಿಜ್ಞಾನದ ಗಂಡುದಾಳಿಗೆ ಸಿಲುಕಿದ ಆಧುನಿಕ ಭಾರತೀಯ ಅಂತೆಯೆ ಕನ್ನಡಿಗ, ನಮ್ಮ ಪರಂಪರಗಾತವಾದ ಜೀವನ ಅರ್ಥವಿಹೀನವಾಗಿದೆಯೆಂದು ಭಾವಿಸುತ್ತಾನೆ; ಪರಕೀಯರ ಸಂಸ್ಕೃತಿಯತ್ತ ಕೈ ಚಾಚುತ್ತಾನೆ. ಕಣ್ಣುಮುಚ್ಚಿ ನೋಡುವವನಿಗೆ ಎಲ್ಲವೂ ಕತ್ತಲೆಯಾಗಿ ಕಾಣುವುದು. ವಾಸ್ತವವಾಗಿ ನೋಡಿದರೆ, ಭಾರತದಷ್ಟು ಅರ್ಥಪೂರ್ಣ ಸಂಸ್ಕೃತಿ ಬೇರೊಂದಿಲ್ಲವೆಂದು ತೋರುತ್ತದೆ. ಇಲ್ಲಿಯ ಪರಂಪರೆ ಇಡೀ ಜಗತ್ತಿನ ಕಣ್ಣು ತೆರೆಯುವಂತಿದೆ. ಆದರೆ ಅದರ ಅರ್ಥವಾಗಬೇಕು. ಎಲ್ಲವನ್ನೂ ಮರೆತು ಪರಕೀಯ ಸಂಸ್ಕೃತಿಗೆ ಮಾರುಹೋಗುವ ನಮಗೆ ನಮ್ಮ ಸಂಸ್ಕೃತಿಯ ಅರ್ಥವಾಗಬೇಕು. ನಮ್ಮ ನಿತ್ಯ ಜೀವನದಲ್ಲಿ ಕಂಡುಬರುವ ಆಚಾರ ವಿಚಾರಗಳ ಅರಿವಾಗಬೇಕು. 'ನಮ್ಮ ಸಂಸ್ಕೃತಿಯ ಪರಂಪರೆ' ಈ ದೃಷ್ಟಿಯಿಂದ ಒಂದು ಮಹತ್ತ್ವದ ಗ್ರಂಥವೆಂದು ಅಭಿಮಾನದಿಂದ ಹೇಳಬಯಸುತ್ತೇನೆ. ಶ್ರೀ ಕೃಷ್ಣಶರ್ಮರ ಅಪಾರವಾದ ಅಭ್ಯಾಸ, ವಿದ್ವತ್ತುಗಳಿಗೆ ಎತ್ತಿಹಿಡಿದ ಕನ್ನಡಿ ಈ ಗ್ರಂಥ.

ಈ ಗ್ರಂಥದ ಇನ್ನೊಂದು ಮಗ್ಗಲು ನಮ್ಮ ಕನ್ನಡನಾಡಿನ ಜಾನಪದ ಜೀವನದ ಚಿತ್ರ. ಜನಪದಜೀವನದ ನಿರೀಕ್ಷಣೆ ಶ್ರೀ ಬೆಟಗೇರಿಯವರ ಪ್ರತಿಭೆಗೆ

ಮೀಸಲಾದಂತಿದೆ. ಹನ್ನೆರಡು ತಿಂಗಳಲ್ಲಿಯೂ ಬರುತ್ತಿರುವ ಹಬ್ಬಹುಣ್ಣಿಮೆಗಳಲ್ಲಿ ಜಾನಪದ ವೈಶಿಷ್ಟ್ಯವೊಂದು ಇದ್ದೇ ಇರುತ್ತದೆ. ಕಾರಹುಣ್ಣಿಮೆ, ಬಾದಮಿ ಅಮಾವಾಸ್ಯೆ, ಗುಳ್ಳವ್ವ, ಜೋಕುಮಾರನ ಹಬ್ಬ, ಅಗಿಯಹುಣ್ಣಿಮೆ ಮುಂತಾದುವುಗಳಲ್ಲಿ ರೈತನ ಸಂಭ್ರಮ ಉತ್ಸವಗಳನ್ನು ಶ್ರೀ ಬೆಟಗೇರಿ ಕೃಷ್ಣಶರ್ಮರು ಮಾರ್ಮಿಕವಾಗಿ ಚಿತ್ರಿಸಿರುತ್ತಾರೆ. ಉತ್ತರ ಕರ್ನಾಟಕದ ಜಾನಪದ ಉತ್ಸವಗಳ ಕೋಶವಾಗಿದೆ ಈ ಗ್ರಂಥ. ಆ ಆ ತಿಂಗಳಲ್ಲಿ ಪ್ರಕೃತಿಯ ವರ್ಣನೆ, ಅದಕ್ಕನುಗುಣವಾಗಿ ರೈತನ ಬಾಳು ಹದಗೊಳ್ಳುತ್ತಿರುವುದು–ಇವೆಲ್ಲವನ್ನೂ ಲೇಖಕರು ಮನೋಜ್ಞವಾಗುವಂತೆ ಚಿತ್ರಿಸಿರುವರು. ಕಾರಹುಣ್ಣಿಮೆಯಲ್ಲಿ ಕರಿಹರಿಯುವ ದೃಶ್ಯ, ಬಾದುಮೆಯ ಪೂಜೆ, ಜೋಕುಮಾರನ ಹಬ್ಬ ಇವನ್ನೆಲ್ಲ ಓದಿದರೆ, ಹಳ್ಳಿಯ ಜೀವನವನ್ನೇ ಎತ್ತಿ ಇಟ್ಟಂತಿದೆ. ನಮ್ಮ ಹಬ್ಬಗಳೆಲ್ಲ ರೈತನ ಉತ್ಸಾಹದ ಪ್ರತೀಕವಾಗಿರುವುದು ಗಮನಾರ್ಹ. ಶ್ರೀ ಕೃಷ್ಣಶರ್ಮರ ಜಾನಪದಜೀವನ ಚಿತ್ರಣ ಸಾರಸುಂದರವಾಗಿದೆ.

ಆಧುನಿಕ ಕನ್ನಡದಲ್ಲಿ ಶ್ರೀ ಬೆಟಗೇರಿ ಅವರ ಶೈಲಿಗೊಂದು ಉನ್ನತ ಸ್ಥಾನವಿದೆ. ಹೊಸ ಭಾವನೆ ವಿಚಾರಗಳನ್ನು ಸಮಗ್ರ ರೀತಿಯಿಂದ ವಿಸ್ತರಿಸುವ ವ್ಯಾಪ್ತಿ ಆ ಶೈಲಿಗೆ ಇರುವಂತೆ, ನಮ್ಮ ಭಾಷೆಯ ಪರಿಶುದ್ಧತೆಯನ್ನೂ ಪರಂಪರೆಯನ್ನೂ ಉಳಿಸಿಕೊಳ್ಳುವ ಶಕ್ತಿ ಅದಕ್ಕಿದೆ. ಅದು ಎಲ್ಲಿಯೂ ಶಿಥಿಲವಾಗದು. ಅದರ ನಡಿಗೆ ಶ್ರೀಮದ್ ಗಂಭೀರ; ಮತ್ತೆ ಜಾನಪದಕ್ಕೆ ಬಂದಾಗ ಅದರ ಶಕ್ತಿ ಶ್ರೀಮಂತಿಕೆಯನ್ನು ಅಳವಡಿಸಿಕೊಂಡ ಹೊಸ ಚೇತನ. ಇಂತಹ ಶೈಲಿ ವಿರಳವೆಂದೇ ನಮ್ಮ ಭಾವನೆ.

ಗ್ರಂಥದಲ್ಲಿ ಅಲ್ಲಲ್ಲಿ ಬರುವ ಕವಿಸಹಜವಾದ ಪ್ರಕೃತಿವರ್ಣನೆಗಳು, ಈ ಪ್ರಬಂಧಗಳ ಮೆರುಗನ್ನು ಹೆಚ್ಚಿಸಿವೆ. 'ಕಡಲೆಗಡುಬಿನ ಹುಣ್ಣಿಮೆ' ಮುಂತಾದುವುಗಳ ವ್ಯುತ್ಪತ್ತಿಯನ್ನು ಕಂಡುಹಿಡಿಯುವಲ್ಲಿ ವಿದ್ವತ್ತು, ಪ್ರತಿಭೆ ಮಿರಿಮಿರಿ ಮಿಂಚುತ್ತವೆ.

ಒಟ್ಟಿನಲ್ಲಿ 'ನಮ್ಮ ಸಂಸ್ಕೃತಿ ಪರಂಪರೆ' ಕನ್ನಡದಲ್ಲಿ ಶಾಶ್ವತವಾಗಿ ಉಳಿಯುವ ಹಿರಿಯ ಕೃತಿ. ಅದನ್ನು ಬರೆದ ಶ್ರೀ ಬೆಟಗೇರಿ ಕೃಷ್ಣಶರ್ಮ ಅವರಿಗೆ ಅನಂತ ಧನ್ಯವಾದಗಳು.

ಧಾರವಾಡ
೧೪–೪–೧೯೭೬ **ಆರ್.ಸಿ. ಹಿರೇಮಠ**



# ಪರಿವಿಡಿ


ಶುಭ ಸಂದೇಶ iii
ಚೆನ್ನುಡಿ iv
ಎರಡು ನುಡಿ v
ಅಧ್ಯಕ್ಷರ ಮಾತು vi
ಪ್ರಕಾಶಕರ ಮಾತು vii
ಆಯ್ಕೆ ಸಮಿತಿ ix
ಮೊದಲ ಮಾತು
ಮುನ್ನುಡಿ

೧. ಚಾಂದ್ರವತ್ಸರಾದಿ ಚೈತ್ರಮಾಸ
೨. ವಿಶಿಷ್ಟ ಮಹಿಮೆಯ ವೈಶಾಖಮಾಸ
೩. ಜಾನಪದ ಸಂಪ್ರದಾಯ ಸನ್ನಿವಿಷ್ಟ ಜ್ಯೇಷ್ಠಮಾಸ
೪. ಅನ್ನದೇವಿಯ ಆರಾಧನಾಕಾಲ ಆಷಾಢಮಾಸ
೫. ಶಿವ–ಶಕ್ತಿ ಪೂಜಾವ್ರತ ಸಮಾಕೀರ್ಣ ಶ್ರಾವಣಮಾಸ
೬. ಭದ್ರಭವಿಷ್ಯತ್ ಸಂಯೋಜಕ ಭಾದ್ರಪದಮಾಸ
೭. ಅನ್ನದೇವರ ಅವತರಣಕಾಲ ಆಶ್ವಿನಮಾಸ
೮. ಕಾಲರಾಜ್ಯದ ಕಲಾವಿಧಾತೃ ಕಾರ್ತಿಕಮಾಸ
೯. ಮಹಾಮಹಿಮಾಶಾಲಿ ಮಾರ್ಗಶಿರಮಾಸ
೧೦. ಪರ್ವಪ್ರವರ ಪ್ರತಿಷ್ಠಿತ ಪೌಷ್ಯಮಾಸ
೧೧. ಮಹಾಮಹಿಮ ಭೀಷ್ಮಸ್ಮಾರಕ ಮಾಘಮಾಸ
೧೨. ಪಂಚಬಾಣಲೀಲಾಪ್ರಸಂಗದ ಫಾಲ್ಗುಣಮಾಸ
೧೩. ಕರ್ನಾಟಕದಲ್ಲಿ ವಸಂತೋತ್ಸವ
೧೪. ಶಮೀಸಂಕೇತ
೧೫. ನಾಡಹಬ್ಬ

# ನಮ್ಮ ಸಂಸ್ಕೃತಿ ಪರಂಪರೆ

## ೧. ಚಾಂದ್ರವತ್ಸರಾದಿ ಚೈತ್ರಮಾಸ

ಚೈತ್ರಾದಿವತ್ಸರ ಎಂದರೆ ಚೈತ್ರಮಾಸವನ್ನು ಮೊದಲನೆಯದನ್ನಾಗಿ ಹಿಡಿದು ಎಣಿಸುವ ಒಂದು ವರ್ಷದ ಕಾಲ. ಹಿಂದಣದಲ್ಲಿ ವರ್ಷದ ಅವಧಿಯನ್ನು ಐದು ರೀತಿಯಿಂದ ಎಣಿಸುವ ಪದ್ಧತಿಯಿದ್ದಿತು; ೧. ಚಾಂದ್ರ, ೨. ಸೌರ, ೩. ಸಾವನ, ೪. ನಾಕ್ಷತ್ರ, ೫. ಬಾರ್ಹಸ್ಪತ್ಯ–ಇವೇ ಆ ಐದು ಪದ್ಧತಿಗಳು. ಈ ಐದರಲ್ಲಿ ಚಾಂದ್ರವತ್ಸರ ಗಣನಾಪದ್ಧತಿಯೇ ಹೆಚ್ಚು ಅನುಕೂಲವೆನಿಸಿದುದರಿಂದ, ಇದೇ ಭಾರತದಲ್ಲಿ ಹೆಚ್ಚು ಲೋಕಪ್ರೀತಿಗೆ ಪಾತ್ರವಾಗಿ, ಇದುವರೆಗೂ ನಡೆದುಕೊಂಡು ಬಂದಿದೆ.

ಚಾಂದ್ರವತ್ಸರವೆಂದರೆಯೆ ಚೈತ್ರಾದಿಯ ವರ್ಷ. ವಿಂಧ್ಯಗಿರಿಯ ದಕ್ಷಿಣ ಪ್ರದೇಶದಲ್ಲಿಯ ಬಹುಜನರು, ಚೈತ್ರಶುದ್ಧ ಪ್ರತಿಪದೆಯಿಂದ ಅಮಾವಾಸ್ಯೆಯವರೆಗೆ ಮಾಸಗಣನೆಯನ್ನು ಮಾಡಿ, ಮುಂದೆ ವೈಶಾಖಾದಿ ಫಾಲ್ಗುಣ ಅಮಾವಾಸ್ಯೆಯವರೆಗೆ ೧೨ ತಿಂಗಳುಗಳ ವರ್ಷವನ್ನು ಅನುಸರಿಸುತ್ತಿರುವರು. ಚಂದ್ರನ ಗತಿಯನ್ನು ಅವಲಂಬಿಸಿ ಎಣಿಕೆಗೊಳ್ಳುವ ಈ ಚಾಂದ್ರವತ್ಸರವು, ೩೫೪ ದಿನಗಳದಾಗುವುದು.

ಸೌರವತ್ಸರವೆಂದರೆ ಸೂರ್ಯನ ಗತಿಯನ್ನು ಅನುಸರಿಸಿ ಎಣಿಸುವ ವರ್ಷವು. ಸೂರ್ಯನು ಮೇಷರಾಶಿಯನ್ನು ಪ್ರವೇಶಿಸಿದ ದಿನದಿಂದಲೂ ಎಣಿಕೆಗೊಳ್ಳುವ ಈ ಸೌರವತ್ಸರವು, ಮೀನರಾಶಿಯನ್ನು ಅವನು ಬಿಡುವ ದಿನಕ್ಕೆ ಮುಗಿಯುವುದು. ಹನ್ನೆರಡು ರಾಶಿಗಳನ್ನು ಕ್ರಮಿಸುವುದಕ್ಕೆ ಸೂರ್ಯನಿಗೆ ೩೬೫ ದಿನಗಳು ಹಿಡಿಯುವುವು; ಎಂತಲೆ ಸೌರವತ್ಸರ ೩೬೫ ದಿನಗಳದು. ಈ ಸೌರವತ್ಸರ ಚಾಂದ್ರವತ್ಸರಗಳ ಎಣಿಕೆ ಜ್ಯೋತಿರ್ಗಣಿತದ ಲೆಕ್ಕಕ್ಕೆ ಸರಿಯಾಗಬೇಕೆಂದೇ ಚಾಂದ್ರವತ್ಸರದೆಣಿಕೆಯವರು, ೩೩ ತಿಂಗಳಿಗೊಂದು ಸಲ ಅಧಿಕಮಾಸವನ್ನು ಸೇರಿಸಿಕೊಳ್ಳುವರು.

ಸಾವನವತ್ಸರ ಪದ್ಧತಿಯನ್ನು ಪುರಸ್ಕರಿಸುವವರು ಹೆಚ್ಚು ವ್ಯವಹಾರಿಗಳು. ಇವರ ಪ್ರತಿಯೊಂದು ತಿಂಗಳಿಗೂ ೩೦ ದಿನಗಳು. ಹನ್ನೆರಡು ತಿಂಗಳ ವರ್ಷಕ್ಕೆ ೩೬೦ ದಿನಗಳು. ಚಾಂದ್ರಮಾನ–ಸೌರಮಾನಗಳ ಸೂಕ್ಷ್ಮಗಣಿತವನ್ನು ಇವರು

ಲೆಕ್ಕಿಸುವವರೇ ಅಲ್ಲ. ವ್ಯವಹಾರಕ್ಕೆ ಈ ಎಣಿಕೆಯ ಪದ್ಧತಿ ಸರಳ–ಸುಲಭವೆನಿಸಬಹುದಾದರೂ, ಜ್ಯೋತಿಶ್ಶಾಸ್ತ್ರಕ್ಕೆ ಇದು ಸಮ್ಮತವೆನಿಸಲಿಲ್ಲ.

ಚೈತ್ರದಿಂದ ಫಾಲ್ಗುಣದವರೆಗಿನ ಹೆಸರುಗಳನ್ನು ನೋಡಿದರೆ ಅವು ಚಿತ್ರಾ, ವಿಶಾಖಾ, ಜ್ಯೇಷ್ಠಾ, ಪೂರ್ವಾಷಾಢಾ, ಶ್ರವಣಾ, ಪೂರ್ವಾಭಾದ್ರ ಪದಾ, ಅಶ್ವಿನಿ, ಕೃತ್ತಿಕಾ, ಮೃಗಶಿರಾ, ಪುಷ್ಯ, ಮಘಾ, ಉತ್ತರಾ ಫಲ್ಗುಣೀ ಎಂಬೀ ಹನ್ನೆರಡು ನಕ್ಷತ್ರಗಳ ಹೆಸರಿನ ಮೂಲಕ ಬಂದಿರುತ್ತವೆ. ಏಕೆಂದರೆ, ಈ ಹನ್ನೆರಡು ನಕ್ಷತ್ರಗಳಲ್ಲಿ ಕ್ರಮವಾಗಿ ಪ್ರತಿಯೊಂದೂ ಒಂದೊಂದು ಮಾಸದಲ್ಲಿ ಪೂರ್ವೋದಯ ಪಶ್ಚಿಮಾಸ್ತಗಳ ಪೂರ್ಣಕ್ರಿಯೆಯನ್ನು ನಡೆಸುವವು. ಈ ನಕ್ಷತ್ರಗಳ ಚಟುವಟಿಕೆಗಳನ್ನು ಅನುಸರಿಸಿ ಎಣಿಕೆಮಾಡುವ ವರ್ಷವು 'ನಾಕ್ಷತ್ರವತ್ಸರ' ಎನಿಸುವುದು. ಆದರೆ ಹೀಗೆ ಎಣಿಸುವ ವರ್ಷ ೩೨೪ ದಿನಗಳಿಂದ ಕೂಡಿದುದಾಗಿ ಸೌರಮಾನದ ಲೆಕ್ಕಾಚಾರವೇ ತಪ್ಪಿಹೋಗುವುದು.

ಗುರುಗ್ರಹದ ಗತಿಯ ಮೂಲಕ ಎಣಿಸುವ ವರ್ಷ 'ಬಾರ್ಹಸ್ಪತ್ಯವತ್ಸರ' ಎನಿಸಿಕೊಂಡಿತು. ಒಂದು ರಾಶಿಯನ್ನು ದಾಟಿ ಇನ್ನೊಂದು ರಾಶಿಯನ್ನು ತಲ್ಪಬೇಕಾದರೆ, ಗುರುವಿಗೆ ೩೬೧ ದಿನಗಳು ಬೇಕಾಗುವುವು. ಚಾಂದ್ರಮಾಸದಂತೆ ಸುಲಭವಾಗಿರದೆ, ಗುರುವಿನ ಮಾಸವು ಸಾಮಾನ್ಯರಿಗೆ ಅಜ್ಞೇಯ=ಅಸ್ಪಷ್ಟ ಎನಿಸಿದುದರಿಂದ 'ಬಾರ್ಹಸ್ಪತ್ಯವತ್ಸರ'ವೂ ಲೋಕಪ್ರಿಯವಾಗಿ ನಿಲ್ಲಲಿಲ್ಲ. ಅದರಂತೆಯೆ ಸೌರಮಾಸವೂ ಅನಿಯಮಿತವಾಗಿ ಕಂಡುದರಿಂದ, ಬಹುಜನರು ಚಾಂದ್ರವತ್ಸರದ ಎಣಿಕೆಯನ್ನೇ ಪುರಸ್ಕರಿಸಿದರು. ದಕ್ಷಿಣ ಭಾರತದ ಕೆಲವು ಪ್ರದೇಶದಲ್ಲಿ ಸೌರವತ್ಸರ ಪದ್ಧತಿಯನ್ನು ರೂಢಿಯಲ್ಲಿದ್ದರೂ ಚಂದ್ರನ ಹುಣ್ಣಿಮೆ–ಅಮಾವಾಸ್ಯೆಗಳನ್ನು ಪ್ರತ್ಯಕ್ಷ ಅನುಭವಿಸಬೇಕಾಗುವುದರಿಂದ, ಚಾಂದ್ರವತ್ಸರ ಪದ್ಧತಿಯನ್ನು ಅವರು ಕಡೆಗಣಿಸಿ ನಡೆಯಲಾರರು.

ಚೈತ್ರಾದಿವತ್ಸರದ ಮೊದಲ ದಿನವಾದುದರಿಂದಲೇ ಚೈತ್ರಶುಕ್ಲ ಪ್ರತಿಪದೆಗೆ ಒಂದು ವಿಶಿಷ್ಟ ಹಬ್ಬದ ಸ್ವರೂಪ ಬಂದಿದೆ. ಹೊಸ ವರ್ಷದ ಪ್ರಾರಂಭ ದಿನವೆಂಬುದಂತೂ ಸರಿಯೇ ಸರಿ! ಅಲ್ಲದೆ ಈ ದಿನಕ್ಕೆ ಕಲ್ಪಾಂತರದ ಚರಿತ್ರೆಯ ಹಿನ್ನೆಲೆಯೂ ಇದೆ. ಸದ್ಯ ಊರ್ಜಿತದಲ್ಲಿರುವ ಶ್ವೇತವಾರಾಹ ಕಲ್ಪವು ಪ್ರಾರಂಭವಾದುದು ಚೈತ್ರಶುಕ್ಲ ಪ್ರತಿಪದೆಯ ದಿನವೇ! ಕಲಿಯುಗ ಮೊದಲಾದುದೂ ಇದೇ ದಿನ. ಅಲ್ಲದೆ ಯುಧಿಷ್ಠಿರ ಶಕ–ಶಾಲಿವಾಹನ ಶಕಗಳು ಚೈತ್ರಾದಿ ದಿನದಿಂದಲೇ ಪ್ರಾರಂಭವಾಗಿವೆ. ಆದುದರಿಂದಲೇ ಈ ದಿನವನ್ನು 'ಕಲ್ಪಾದಿ', 'ಯುಗಾದಿ' 'ಸಂವತ್ಸರಾದಿ' 'ವರ್ಷ ಪ್ರತಿಪದೆ' ಎಂದು ಬೇರೆ ಬೇರೆ ಹೆಸರಿನಿಂದ ಹೇಳುವ ರೂಢಿಯಿದೆ.



ಹೊಸವರ್ಷದ ಆರಂಭವೆಂದರೆ ಅಂದು ಎಲ್ಲ ಜನರಿಗೂ ಎಷ್ಟೊಂದು ಉಲ್ಲಾಸ, ಎಷ್ಟೊಂದು ಉತ್ಸಾಹ! ಎಲ್ಲೆಲ್ಲಿಯೂ ಹಿಗ್ಗಿನ ಹೊಳೆ ಹರಿಯುವುದು. ಅದೇಕೆ? ನಾಗರಿಕಜನರು ಅದೇನೇನೋ ಪೂರ್ವಪರಂಪರೆಯ ಭಾವನಾತ್ಮಕ ಕಾರಣಗಳಿಂದ ಉಲ್ಲಾಸ–ಉತ್ಸಾಹಗಳನ್ನು ಅನುಭವಿಸಬಹುದು; ಆದರೆ ಕೇವಲ ವ್ಯವಹಾರ ಬುದ್ಧಿಯ ಜಾನಪದರೂ ವರ್ಷಾದಿಯ ಈ ಹಬ್ಬವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವುದಕ್ಕೆ ಕಾರಣಗಳಿವೆ.

ಚಳಿಗಾಲದಲ್ಲಿ ಎಲೆಗಳೆಲ್ಲ ಉದುರಿಹೋಗಿ ಬರಲು ಬರಲಾಗಿದ್ದ ಗಿಡ–ಮರಗಳು, ಚೈತ್ರಮಾಸದಲ್ಲಿ ಹೊಸ ಚಿಗುರು–ತಳಿರುಗಳಿಂದ ಕೂಡಿ ಚೇತನಾಶೀಲವಾಗಿರುವುವು. ಕಾನನಪ್ರದೇಶವೆಲ್ಲ ನವಜೀವನದಿಂದ ತುಂಬಿರುವುದು. ಬೇವಿನ ಹೂಗಳ ಮಾದಕಸುಗಂಧ, ಜನರ ಹೃದಯವನ್ನು ಕೆಣಕುವುದು. ಮಾಧವೀಲತೆಗಳು ತಮ್ಮ ಸುಮಭಾರದ ಸೌರಭದಿಂದ, ಪ್ರೀತಿಯ ಜೀವಗಳಿಗೆ ಎಂತೆಂತಹದೋ ಸಂದೇಶವನ್ನು ನೀಡುತ್ತಿರುವುವು. ಮಾಮರಗಳು ತಮ್ಮ ಮಿಡಿಗಾಯಿಗಳನ್ನು ಹಣ್ಣಿಗಾಗಿ ಹುಳಿಗೊಳಿಸುತ್ತಿರುವುವು. ಪಡುವಣದಿಂದ ಬರುವ ಸುಳಿಗಾಳಿಯಲೆಗಳು, ಸೂರ್ಯನ ಬಿಸಿಲನ್ನು ನಿವಾರಿಸಿ ಜನತೆಯನ್ನು ತಣಿಸುವುವು. ಚೈತ್ರಮಾಸದ ಸೃಷ್ಟಿಯ ಈ ಸುಂದರಸ್ವರೂಪವು ನಾಗರಿಕರಿಗೂ ಇಷ್ಟ. ಜಾನಪದರಿಗೂ ಇಷ್ಟ. ವಸಂತ ಋತುವಿನ ಮುಖ್ಯಭಾಗವೇ ಚೈತ್ರಮಾಸವಲ್ಲವೇ? 'ಋತೂನಾಂ ಕುಸುಮಾಕರಃ' ಎಂದು ಶ್ರೀಕೃಷ್ಣನೇ ವಸಂತ ಋತುವನ್ನು ಹೊಗಳಿರುವನೆಂದ ಮೇಲೆ, ಚೈತ್ರಮಾಸದ ಮಹಿಮಾತಿಶಯಕ್ಕೆ ಬೇರೆ ಶಬ್ದಪ್ರಮಾಣಗಳೇತಕ್ಕೆ ಬೇಕು?

ಫಾಲ್ಗುಣಮಾಸದ ಕೊನೆಯೊಂದಿಗೆ ಹಳೆಯ ವರ್ಷ ಮುಗಿಯುವುದು; ಅದರೊಂದಿಗೆ ಕೃಷಿಕರ್ಮಿಗಳ ಹಳೆಯ ವರ್ಷದ ಬೆಳೆ ಬೆಳಸುಗಳೂ ಮುಗಿದಿರುವುವು. ಚೈತ್ರಮಾಸವೆಂದರೆ, ಅವರಿಗೆ ಹೊಸವರ್ಷದ ಕೃಷಿ ಸಂಪತ್ತಿಗಾಗಿ ಸಾಧನ ಮಾಡಬೇಕಾದ ಅವಧಿ. ಹೊಸ ವರ್ಷಗಳು–ಎಂದರೆ ಮಳೆಗಳು ಚೈತ್ರಮಾಸದಲ್ಲಿಯೇ ಪ್ರಾರಂಭವಾಗುವುವು. ವತ್ಸರಕ್ಕೆ 'ವರ್ಷ' ಎಂಬ ಹೆಸರು ಬರಬೇಕಾದರೆ, ಅದು ಕೃಷಿಪ್ರಾಧಾನ್ಯವಾಗಿಯೇ ಬಂದಿದೆಯೆಂದು ಹೇಳಬಹುದು. 'ವರ್ಷ', 'ವರ್ಷಾ' ಎಂದು ಮಳೆಗೆ ಹೆಸರು. ಸೂರ್ಯನು ಹನ್ನೆರಡು ತಿಂಗಳಲ್ಲಿ ಇಪ್ಪತ್ತೇಳು ನಕ್ಷತ್ರಗಳನ್ನು ದಾಟಿ ಹೊಸವರ್ಷದ ಚೈತ್ರಮಾಸಕ್ಕೆಂದರೆ, ಮರಳಿ ಅಶ್ವಿನೀ ನಕ್ಷತ್ರಕ್ಕೆ ಬಂದು ಹೊಸ ಮಳೆಗಾಲವನ್ನು ಪ್ರಾರಂಭಿಸುವನು. ಸಸ್ಯಾಹಾರವನ್ನು ಬಳಸುವ ಜನರೆಲ್ಲರಿಗೂ ಮಳೆಯ ಅಗತ್ಯವಿದ್ದೇ ಇರುವುದು.

ಹೊಸ ಮಳೆಗಾಲವೆಂದರೆ ಎಲ್ಲರಿಗೂ ಅತುರ-ಸಂಭ್ರಮಗಳು. ಮುಂದಿನ ವರ್ಷದ ಆಹಾರಧಾನ್ಯಗಳನ್ನು ಹೊಸವರ್ಷದ ಮಳೆಗಾಲದಿಂದಲೇ ಪಡೆಯಬೇಕು. ಆದುದರಿಂದಲೆ ಮಳೆಗಾಲಕ್ಕೆ ಪ್ರಾಧಾನ್ಯ ದೊರೆತು, ವತ್ಸರಕ್ಕೆ 'ವರ್ಷ' ಎಂಬ ಸಾರ್ಥನಾಮವು ಬಂದಿತು. ಕನ್ನಡದಲ್ಲಿ ಕೂಡ 'ಮಳೆಗಾಲ' ಎಂದರೆ ಒಂದು ವರ್ಷ ಎಂಬ ನುಡಿಗಟ್ಟು ರೂಢಿಯಲ್ಲಿದೆ "ನಾನು ಐವತ್ತು ಮಳೆಗಾಲಗಳನ್ನು ಕಳೆದಿದ್ದೇನೆ ಅರುವತ್ತು ಮಳೆಗಾಲಗಳನ್ನು ಕಂಡಿದ್ದೇನೆ" ಎಂಬುದಾಗಿ ತಮಗಾದ ವರ್ಷಗಳನ್ನು ಹೇಳುವುದನ್ನು ಅನೇಕರು ಕೇಳಿರಬಹುದು.

ಸಸ್ಯಾಹಾರದಿಂದ ಜೀವಿಸುವ ಎಲ್ಲ ಜೀವಿಗಳಿಗೂ ಚೈತ್ರಮಾಸವು ಮಹತ್ತ್ವದಾಗಿದೆ. ಎಂತಲೇ ಜೀವಕುಲವೆಲ್ಲವೂ ಅದನ್ನು ಪ್ರೀತಿಯಿಂದ ಸ್ವಾಗತಿಸುವುದು. ಚೈತ್ರಮಾಸದಲ್ಲಿ ಕುಕಿಲಿಡುವ ವಸಂತದೂತಿಕೆಯ ಕೂಹೂರವವೂ, ಬೇವು ಹೊಂಗೆಗಳ ಹೂಗೊಂಚಲು ಸುತ್ತ ಹಾರಾಡುವ ದುಂಬಿಗಳ ಗುಂಜಾರವವೂ, ಈ ಜೀವಕುಲವನ್ನು ಪ್ರತಿನಿಧಿಸಿ ಹೇಳುವ ಸ್ವಾಗತಗೀತದಂತಿರುವುವು. ಮೂಕ ಜೀವಕುಲವೇ ಚೈತ್ರಮಾಸವನ್ನು ಇಷ್ಟೊಂದು ಪ್ರೀತಿಸುವುದೆಂದಮೇಲೆ, ಮಾತು-ಮನ-ಮತಿಗಳನ್ನು ಪಡೆದ ಮಾನವಕುಲವು ಅದನ್ನು ಎಷ್ಟು ಪ್ರೀತಿಯಿಂದ ಕಾಣಬೇಡ? ಕೃಷಿಪ್ರಧಾನ ಕರ್ಮಿಗಳಿಗಂತೂ ಚೈತ್ರಮಾಸವೆಂದರೆ ಅದೊಂದು ದೈವದ ವರದಾನ! ಆದುದರಿಂದಲೇ ಕೃಷಿಕರು ಚೈತ್ರಮಾಸದಲ್ಲಿ ತಾವು ಉಪಾಸಿಸುವ ದೇವ ದೇವತೆಗಳಿಗೆಲ್ಲ ತಮ್ಮ ಕೃತಜ್ಞತೆಯ ಕಾಣಿಕೆಗಳನ್ನು ಸಲ್ಲಿಸುವರು.

ಚೈತ್ರ ಶುದ್ಧ ಪ್ರತಿಪದೆಯಿಂದ ಪೌರ್ಣಿಮೆಯವರೆಗೂ ಬೇರೆ ಬೇರೆ ದೇವರಿಗೆ ದವನಗಳನ್ನು ಸಲ್ಲಿಸುವ ಪದ್ಧತಿ ನಮ್ಮ ನಾಡಿನಲ್ಲಿರುವುದು; ಇಷ್ಟೇ ಅಲ್ಲ ಬೆಳುವಲ ಕನ್ನಡನಾಡಿನಲ್ಲಂತೂ ಚೈತ್ರಪೌರ್ಣಿಮೆಗೆ ದವನದ ಹುಣ್ಣಿಮೆ ಎಂದು ಹೆಸರಿದೆ. ಪ್ರತಿಯೊಂದು ಗ್ರಾಮದ ದೇವ ದೇವತೆಗಳಿಗೂ ಅಂದು ದವನವನ್ನು ನಿವೇದಿಸಲಾಗುವುದು. ಹೀಗೆ ದವನವನ್ನು ಅರ್ಪಿಸಿದರೆ, ಹೊಸ ವರ್ಷದಲ್ಲಿ ಮಳೆ ಬೆಳೆಗಳು ಸುಭಿಕ್ಷವಾಗುವುದೆಂಬುದು ನಮ್ಮ ಒಕ್ಕಲಿಗರಲ್ಲಿ ನೆಲೆನಿಂತ ಶ್ರದ್ಧೆ ವಿಶ್ವಾಸ.

ದವನವನ್ನು ಸಮರ್ಪಿಸುವುದೊಂದೇ ಅಲ್ಲದೆ, ಹಳ್ಳಿ-ಹಳ್ಳಿಗಳಲ್ಲಿಯೂ ಗ್ರಾಮದೈವತದ ಜಾತ್ರೆ-ರಥೋತ್ಸವಗಳೂ 'ಓಕಳಿ' ಎಂಬ ಹೆಸರಿನ ವಸಂತೋತ್ಸವಗಳೂ ಹೆಚ್ಚಾಗಿ ಚೈತ್ರಮಾಸದಲ್ಲಿಯೇ ನಡೆಯುವುವು. ಈ ಜಾತ್ರೆ-ಓಕಳಿಗಳೆಂದರೆ, ಹಳ್ಳಿಗರಲ್ಲಿ ಪ್ರೀತಿ ಸ್ನೇಹಗಳ ವಿನಿಮಯ-ಪರಿವೃದ್ಧಿಯ



ಪ್ರಸಂಗಗಳಾಗಿರುವುವು; ಅಲ್ಲದೆ ನಮ್ಮ ಜಾನಪದ ಸಂಸ್ಕೃತಿ ಕುಶಲತೆ ದೈಹಿಕಬಲಗಳ ಪ್ರದರ್ಶನಗಳೂ ಆಗಿರುವುವು. ಊರಿಗೊಂದು ಹನುಮಂತದೇವರ ಗುಡಿ ಇದ್ದೇ ಇರುವುದು. ಈ ಗುಡಿ ಇದ್ದಲ್ಲೆಲ್ಲ ವಸಂತೋತ್ಸವದ ಜಾತ್ರೆಯಾಗುವುದು. ವಸಂತೋತ್ಸವ ಅರ್ಥಾತ್ ಓಕಳಿಯನ್ನು ಮಾಡಿದರೆ, ಹನಮಪ್ಪ ಸಂತೃಪ್ತನಾಗಿ, ಹೊಸ ವರ್ಷದಲ್ಲಿ ಒಳ್ಳೆಯ ಮಳೆಗಾಲ ತರುವನೆಂದು ಪರಂಪರೆಯ ನಂಬಿಗೆ ನಮ್ಮ ನಾಡಿಗರಲ್ಲಿದೆ.

ಚೈತ್ರಪೌರ್ಣಿಮೆ 'ಚಿತ್ರಾಪೌರ್ಣಿಮೆ' ಎಂಬ ಹೆಸರಿನಿಂದ ನಮ್ಮ ನಾಗರಿಕರ ಹಬ್ಬವಾಗಿರುವುದು ಸರಿಯಷ್ಟೇ! ಆದರೆ ಈ ದವನದ ಹುಣ್ಣಿಮೆಯ' ಕುಲಧರ್ಮ ಹುಣ್ಣಿಮೆ'ಯಾಗಿರದ ಮನೆತನಗಳು ನಮ್ಮ ಉತ್ತರ ಕರ್ನಾಟಕದಲ್ಲಂತೂ ಅಪರೂಪವಾಗಿರುವುವು. 'ತುಳಜಾಭವಾನಿ' 'ಕೊಲ್ಹಾಪುರದ ದೇವಿ' 'ಎಲ್ಲಮ್ಮ' 'ಚಂದಲಾಪರಮೇಶ್ವರಿ' ಇವರೆಲ್ಲ ನಮ್ಮ ನಾಡಿಗರ ಕುಲದೈವತಗಳು. ಮೂಲದೇವಸ್ಥಾನದಲ್ಲಿ ಚೈತ್ರಮಾಸದಲ್ಲಿ ನಡೆಯುವ ವಿಶೇಷೋತ್ಸವದ ಸ್ಮರಣೆಯೇ ಅನೇಕರ ಮನೆತನಗಳನ್ನು ಕುಲಧರ್ಮದ ವಿಶೇಷಪೂಜೆಯಾಗಿ ಪರಿಣಮಿಸಿರುತ್ತದೆ. ಗ್ರಾಮದಲ್ಲಿ ತೇರಿನ ಜಾತ್ರೆಗಳೆಲ್ಲ ಚೈತ್ರಮಾಸದಲ್ಲಿಯೇ ನಡೆದು, ಈ ಮಾಸಕ್ಕೊಂದು ವಿಶೇಷ ಶೋಭೆಯನ್ನು ತಂದುತುಂಬುತ್ತಿರುತ್ತದೆ.

'ಒಟ್ಟಿದ ಬಣವೆ, ಹಾಕಿದ ಹಗೆ' ಇವು ಇನ್ನೂ ಅಚ್ಚುಮುಕ್ಕಾಗದೆ ಇರುವುದರಿಂದ ಚೈತ್ರಮಾಸದಲ್ಲಿ ಒಕ್ಕಲಿಗರು ನಿಶ್ಚಿಂತರಾಗಿರುವರು. ಆದರೂ ಮುಂದಿನ ಮಳೆಗಾಲದ ಕಡೆಗೆ ಅವರ ಲಕ್ಷ್ಯವಿದ್ದೇ ಇರುವುದು. ಆದುದರಿಂದ ದೇವರು ಮೆಚ್ಚುವಂತಹ ಕಾರ್ಯಗಳು ತಮ್ಮಿಂದ ಆಗಬೇಕೆಂದು ಅವರೆಲ್ಲರ ಬಯಕೆ. ಆದುದರಿಂದಲೇ ದೇವರ ಉತ್ಸವಗಳ ಹೆಸರಿನಿಂದ, ಸಾರ್ವಜನಿಕವಾಗಿ ದೀನ ದರಿದ್ರರಿಗೆ ಅಂಬಲಿಯೂಟವನ್ನು ಕೊಡುವರು; ನೀರಿಲ್ಲದ ಕಾಡುದಾರಿಗಳಲ್ಲಿ ಅರವಟ್ಟಿಗೆಗಳನ್ನು ಇರಿಸಿ, ಬೇಸಗೆಗಾಲದುದ್ದಕ್ಕೂ ನಡೆಯಿಸುವರು. ಕೆಲವು ಜನ ಪುಣ್ಯವಂತರು, ವೈಯಕ್ತಿಕವಾಗಿಯೂ ಅರವಟ್ಟಿಗೆಗಳನ್ನು ಅಲ್ಲಲ್ಲಿ ಇರಿಸುವರು. ನೀರಡಿಸಿ ಬರುವ ದನ ಕರುಗಳಿಗಾಗಿ ನೀರನ್ನು ಸಂಚಯಿಸಿದ ಡೋಣಿಗಳನ್ನು ಇರಿಸುವರು. ದೇವಧರ್ಮ-ಸಮಾಜಧರ್ಮಗಳೆರಡರ ಜಾಗೃತಿಯನ್ನೂ ಚೈತ್ರಮಾಸವು ಹುಟ್ಟಿಸುವುದು. ಎಂತಲೇ ನಮ್ಮ ಜನಜೀವನದಲ್ಲಿ ಚೈತ್ರಮಾಸಕ್ಕೆ ವಿಶಿಷ್ಟ ಮಹತ್ತ್ವದ ಸ್ಥಾನವಿದೆ.

ಚೈತ್ರಶುದ್ಧ ಪ್ರತಿಪದೆಯ ಸಂವತ್ಸರಾದಿಯ ದಿನವೆಂದಷ್ಟೇ ಅಲ್ಲ; ದೇವೀ ನವರಾತ್ರೋತ್ಸವಕ್ಕೂ ಶ್ರೀರಾಮ ನವರಾತ್ರೋತ್ಸವಕ್ಕೂ ಪ್ರಾರಂಭದಿನವಾಗಿದೆ.

ಅಲ್ಲದೆ ಚೈತ್ರಶುದ್ಧ ತೃತೀಯೆಯು ಶ್ರೀಮನ್ನಾರಾಯಣನ ಮತ್ಸ್ಯಾವತಾರದ ಜಯಂತಿಯ ದಿನವಾಗಿದೆ. ಇದೇ ತೃತೀಯೆಯು ಗೌರೀ ತದಿಗೆ ಎಂಬ ಹೆಸರಿನಿಂದ ನಮ್ಮ ನಾಡಿನಲ್ಲಿ ಸುಪರಿಚಿತವಾಗಿದೆ. ಇಂದಿನಿಂದ ಪ್ರಾರಂಭವಾಗುವ 'ದೋಲಾಗೌರಿ' ಅಥವಾ 'ವಸಂತಗೌರಿಯ' ಪೂಜೆ ಒಂದು ತಿಂಗಳವರೆಗೂ ನಡೆಯುವುದು. ಈ ಪೂಜೆಯನಡೆವಳಿ, ವಿಶೇಷವಾಗಿ ನಾಗರಿಕ ಸಮಾಜದಲ್ಲಿರುವುದು. ಪ್ರತಿಯೊಬ್ಬ ಸುಮಂಗಲೆಯೂ ಈ ಗೌರಿಯ ಪೂಜೆಯನ್ನು ಮಾಡಲೇಬೇಕು. ಪ್ರತಿ ಶುಕ್ರವಾರ–ಮಂಗಳವಾರದಂದು ಸುಮಂಗಲೆಯರನ್ನು ಮನೆಗೆ ಕರೆದು ಅರಿಸಿಣ–ಕುಂಕುಮ, ಪಾನಕ ಕೋಸಂಬರಿಗಳನ್ನು ಕೊಡಬೇಕು. ಹೊಸ ಮದುವಣಿಗಿತ್ತಿಯರಿಗಂತೂ ನಿತ್ಯವೂ ಮುತ್ತೈದೆಯರ ಕಾಲು ತೊಳೆಯುವ ವಿಶೇಷ ನಿಯಮವುಂಟು.

ಈ ಗೌರಿಯ ವಿಶೇಷ ವೈಭವದ ಪೂಜೆ 'ಹೂವೀಳ್ಯ' ಎಂಬ ಹೆಸರಿನಿಂದ ನಡೆಯುವುದು. ಪ್ರತಿಯೊಂದು ಮನೆಯ ಹೂವೀಳ್ಯವೂ ಒಂದೊಂದು ಕಲಾಪ್ರದರ್ಶನವಾಗಿರುವುದು. ಹೂವೀಳ್ಯದ ಆ ಅಲಂಕೃತ ಗೌರಿಯೆಂದರೆ, ನಮ್ಮ ಚಂಪೂಕಾವ್ಯಗಳಲ್ಲಿಯ ನಾಯಿಕೆಯರನ್ನು ನೆನಪಿಗೆ ತಂದುಕೊಡುವಳು. ಅಡಿಯಿಂದ ಮುಡಿಯವರೆಗೂ ಗೌರಿಗೆ ಸಂಪ್ರದಾಯೋಚಿತ ಆಭರಣಗಳು! ಗೌರಿಯ ನೈವೇದ್ಯಕ್ಕೆಂದು ಮಾಡಿ ಮುಂದೆ ಪ್ರದರ್ಶಿಸಿದ ತಿಂಡಿ–ತಿನಿಸುಗಳು, ನಮ್ಮ ಮಹಿಳೆಯರ ಪಾಕಶಾಸ್ತ್ರ ಪ್ರವೀಣತೆಗೆ ಸಾಕ್ಷಿಗಳಾಗಿರುವುವು. ಅಂದು ಮನೆಗೆ ಬಂದ ಸುಮಂಗಲೆಯರಿಗೆಲ್ಲ ಪಾನಕ–ಕೋಸಂಬರಿಗಳ ಸಂಭ್ರಮ ನಡೆಯಬೇಕು.

ಚೈತ್ರಶುದ್ಧ ನವಮಿ ರಾಮನವಮಿ. ಶ್ರೀಹರಿಯ ಏಳನೆಯ ಅವತಾರಿಯಾದ ಶ್ರೀರಾಮನು ಜನ್ಮಿಸಿದ ದಿನವಿಂದು. ಭಾರತದಲ್ಲಿಯ ಶ್ರೀರಾಮಭಕ್ತರೆಲ್ಲರಿಗೂ ಮಹತ್ತ್ವದ ಹಬ್ಬ ರಾಮನವಮಿ. ಪ್ರತಿಯೊಂದು ಶ್ರೀರಾಮಮಂದಿರದಲ್ಲಿಯೂ ಜಯಂತ್ಯುಚಿತ ಉತ್ಸವಗಳು ನಡೆಯುವುವು. ಮನೆ ಮನೆಗಳಲ್ಲಿಯೂ ಪೂಜೆ ಪಾರಾಯಣಗಳು ಜರುಗುವುವು. ನಮ್ಮ ದೇಶದ ಆದರ್ಶ ಪುರುಷನೊಬ್ಬನ ದಿವ್ಯಚರಿತ್ರೆಯ ನೆನಹನ್ನು ಹೊತ್ತುಕೊಂಡು ಬರುವ ಈ ಹಬ್ಬವು, ಚೈತ್ರಮಾಸದ ಅಂತಸ್ತನ್ನು ಮೇಲಕ್ಕೆತ್ತಿರುವುದು.

ಇನ್ನು ಚೈತ್ರಪೌರ್ಣಿಮೆಯ ಪವಾಡ. ಈ ದವನದ ಹುಣ್ಣಿಮೆ ಅನೇಕ ಮನೆತನಗಳಲ್ಲಿ 'ಕುಲಧರ್ಮ'ವಾಗಿರುವುದನ್ನು ಈ ಮೊದಲೆ ವಿಶದಪಡಿಸಲಾಗಿದೆ. ಈ ಹುಣ್ಣಿಮೆಯ ಮನ್ನಣೆ ಇನ್ನೂ ವ್ಯಾಪಕಗೊಂಡುದು 'ಹನುಮಜಯಂತಿ' ಎಂದು. ಶ್ರೀರಾಮಭಕ್ತನಾದ ವಾಯುಸುತನ ಜನ್ಮಕ್ಕೆ ಎಡೆಯಿತ್ತುದು ಈ ಹುಣ್ಣಿಮೆಯೇ! ಕನ್ನಡ ನಾಡಿನ ಪ್ರತಿಯೊಂದು ನಗರ ಪ್ರತಿಯೊಂದು ಗ್ರಾಮದಲ್ಲಿಯೂ ಈ ಜಯಂತ್ಯುತ್ಸವವು ಸಾರ್ವಜನಿಕವಾಗಿ ವಿಜೃಂಭಣೆಯಿಂದ ನಡೆಯುತ್ತದೆ. ಕೆಲವೊಂದು ಕಡೆಗೆ ರಥೋತ್ಸವದ ಸಂಪ್ರದಾಯವೂ ಇರುವುದು.



ಚೈತ್ರ ಅಮಾವಾಸ್ಯೆಯು 'ಕರಗದ ಅಮಾಸಿ' ಎಂಬ ಹೆಸರಿನಿಂದ ನಮ್ಮ ನಾಡಿನಲ್ಲಿ ರೂಢವಾಗಿದೆ. ವೀರರಸಪ್ರಧಾನವಾದ ಪ್ರಾಚೀನ ಕರ್ನಾಟಕದಲ್ಲಿ ಕರಗದ ಉತ್ಸವವು ಸರ್ವಜನಪರಿಚಿತವಾಗಿರಬಹುದು. ಈಗ ಮಾತ್ರ ಕರಗದ ಮಹೋತ್ಸವವು ಬೆಂಗಳೂರಿನ ಮಟ್ಟಿಗೆ ಸೀಮಿತವಾಗಿದೆ; ಆದರೂ ಸುಪ್ರಸಿದ್ಧವಾಗಿದೆ. ಅಲ್ಲಿ ನಡೆಯುವ ಧರ್ಮರಾಯನ ಕರಗ ಮಹೋತ್ಸವವು, ಮಹಾಭಾರತದ ಪರಂಪರೆಯನ್ನು ನೆನಪಿಗೆ ತಂದುಕೊಡುತ್ತ, ಪ್ರತಿವರ್ಷ ಚೈತ್ರಾಂತ್ಯದಲ್ಲಿ ನಡೆಯುವುದು.

ಚೈತ್ರಮಾಸವು ಉಪನಯನ ಸಮಾರಂಭಕ್ಕೆ ಅತ್ಯುಚಿತವಾದುದೆಂದು ಧರ್ಮನಿಯಮವಿದೆ. ವಿವಾಹಕಾರ್ಯಕ್ಕೆ ಇದು ನಿಷಿದ್ಧಕಾಲವಿದ್ದರೂ ಮೀನರಾಶಿಯ ಚೈತ್ರದಲ್ಲಿ ಮಾಡಬಹುದೆಂದು ಹೇಳುವರು.

* * *

## ೨. ವಿಶಿಷ್ಟ ಮಹಿಮೆಯ ವೈಶಾಖಮಾಸ

ಚಾಂದ್ರಮಾನ ವತ್ಸರವನ್ನು ಅನುಸರಿಸುವವರು ಚೈತ್ರಾದಿ ತಿಂಗಳುಗಳನ್ನು ಎರಡು ರೀತಿಯಿಂದ ಎಣಿಸುವ ಸಂಪ್ರದಾಯಗಳು ರೂಢಿಯಲ್ಲಿವೆ. ಶುಕ್ಲಪಕ್ಷದ ಪ್ರತಿಪದೆಯಿಂದ ಅಮಾವಾಸ್ಯೆಯವರೆಗಿನ ತಿಂಗಳೆಣಿಕೆ: ಶಾಲಿವಾಹನ ಶಕವರ್ಷ ನಡೆಯುತ್ತಿರುವ ದಕ್ಷಿಣಭಾರತದಲ್ಲೆಲ್ಲ ಇದೇ ಬಗೆಯ ತಿಂಗಳೆಣಿಕೆ ಇದೆ; ಆದರೆ ಉತ್ತರಭಾರತದಲ್ಲಿ ಚಾಂದ್ರಮಾನ ವತ್ಸರವನ್ನು ಅನುಸರಿಸುವ ಹಲವಾರು ಕಡೆಗಳಲ್ಲಿ ಮೊದಲ ತಿಂಗಳ ಕೃಷ್ಣ ಪ್ರತಿಪದೆಯಿಂದ ನಡೆಯುವ ತಿಂಗಳ ಪೌರ್ಣಿಮಾಂತ್ಯದವರೆಗೆ ದಿನಗಳನ್ನೆಣಿಸುವ ಪದ್ಧತಿಯಿದೆ. ಎಂದರೆ ಫಾಲ್ಗುಣ ಕೃಷ್ಣ ಪ್ರತಿಪದೆಯಿಂದ ಚೈತ್ರಪೌರ್ಣಿಮೆಯವರೆಗೆ ಚೈತ್ರಮಾಸ....ಚೈತ್ರಕೃಷ್ಣ ಪ್ರತಿಪದೆಯಿಂದ ವೈಶಾಖ ಶುದ್ಧಪೌರ್ಣಿಮೆಯವರೆಗೆ ವೈಶಾಖಮಾಸ... ಇತ್ಯಾದಿ. ಪ್ರಾಚೀನಕಾಲದಲ್ಲಿ ನಮ್ಮ ನಾಡಿನಲ್ಲಿಯೂ ಈ ಎರಡನೆಯ ಬಗೆಯ ಎಂದರೆ ಪೌರ್ಣಿಮಾಂತ್ಯ ತಿಂಗಳೆಣಿಕೆಯು ಇದ್ದಿತೆಂಬುದು, ನಮ್ಮ ನಾಡಿನ ಹಲವಾರು ತಾಮ್ರಶಾಸನ ಶಿಲಾಶಾಸನಗಳಲ್ಲಿ ಬರುವ ತಿಥಿ ಮಾಸಗಳ ಮೂಲಕ ಗೊತ್ತಾಗುವುದು. ಇಷ್ಟೇ ಅಲ್ಲ, ಈಗಲೂ ಆಚರಣೆಯಲ್ಲಿರುವ ಕೆಲವೊಂದು ವಿಶಿಷ್ಟ ಮಾಸಸ್ನಾನ ವಿಧಿಗಳಿಂದಲೂ ಈ ಮಾತು ಕಂಡುಬರುತ್ತದೆ. ಉದಾಹರಣೆಗಾಗಿ ವೈಶಾಖದಲ್ಲಿ ಅನುಸರಿಸಬೇಕಾದ ಪ್ರಾತಃಸ್ನಾನದ ವ್ರತವನ್ನು ಚೈತ್ರ ಪೌರ್ಣಿಮೆಯಿಂದಲೇ ಪ್ರಾರಂಭಿಸಬೇಕಾಗುತ್ತದೆ. ಇದೆಲ್ಲವನ್ನೂ ವಿಮರ್ಶಿಸಿ ನೋಡಿದರೆ, ಪೌರ್ಣಿಮಾಂತ ತಿಂಗಳೆಣಿಕೆಯ ಪದ್ಧತಿಯೇ ದಕ್ಷಿಣಭಾರತದಲ್ಲಿಯೂ ಬಹುಕಾಲ ರೂಢವಾಗಿದ್ದು, ಆಮೇಲೆ ಅಮಾವಾಸ್ಯಾಂತ ತಿಂಗಳೆಣಿಕೆ ಪ್ರಚಾರದಲ್ಲಿ ಬಂದಿರಬಹುದು ಎಂಬ ವಿಚಾರವು ಮನಸ್ಸಿನಲ್ಲಿ ಮೂಡದೆ ಹೋಗದು.

### ಕನ್ನಡ ಕವಿಗಳ ಕೊಂಡಾಟ

ನಮ್ಮ ಪ್ರಾಚೀನ ನಾಗರಿಕ ಸಮಾಜದಲ್ಲಿ ವೈಶಾಖಮಾಸಕ್ಕೆ ಒಂದು ವಿಶಿಷ್ಟ ಮಹತ್ತ್ವ ದೊರೆತಿದೆಯೆಂಬುದಕ್ಕೆ ಸಾಕಷ್ಟು ಪ್ರಮಾಣಗಳು ಸಿಕ್ಕುವುವು. ವೈಶಾಖಮಾಸದ ಪ್ರಾಕೃತಿಕ ಸೌಂದರ್ಯಕ್ಕೆ ಮನಸೋತ ಸುಪ್ರಸಿದ್ಧ ಕನ್ನಡ ಕವಿಗಳೆಲ್ಲರೂ ಇದರ ಮೇಲ್ಮೆಯನ್ನು ಮೆಚ್ಚಿಕೊಂಡಾಡಿದ್ದಾರೆ. ಅಲ್ಲದೆ ಅಷ್ಟಾದಶ ಮಹಾಪುರಾಣಗಳಲ್ಲಿ ಅನೇಕ ಪುರಾಣಗಳು ಈ ಮಾಸದ ಮಹಾತ್ಮ್ಯವನ್ನು ಪಾರಲೌಕಿಕ ಧರ್ಮದ ದೃಷ್ಟಿಯಿಂದ ಬಿತ್ತರಿಸುವುವು. ಸ್ಕಾಂದಪುರಾಣವು 'ವೈಶಾಖ ಧರ್ಮಾಃ ಸುಲಭಾಃ' ಎಂದು ಸಾರಿರುವುದು. ಈಗಲೂ ಕೂಡ ನಮ್ಮ ನಾಡಿನ ಪುರಾಣಿಕರು 'ವೈಶಾಖಮಾಸ ಮಾಹಾತ್ಮ್ಯ'ದ ಪುರಾಣವನ್ನು ಹೇಳಿ, ಈ ಮಾಸದಲ್ಲಿ ಮಾಡಬೇಕಾದ ಸ್ನಾನ, ದಾನ, ಧ್ಯಾನ ಮೊದಲಾದ ಮಾಸಧರ್ಮಗಳನ್ನು ವಿವರಿಸುತ್ತಿರುತ್ತಾರೆ. ಈ ಮಾಹಾತ್ಮ್ಯಗಳು ಹಲವಾರು ಸಂದರ್ಭೋಚಿತ ಕಥೆಗಳನ್ನೂ ಒಳಗೊಂಡಿರುತ್ತವೆ. ಇಂದಿನ ವಾಸ್ತವದೃಷ್ಟಿಯ ಬುದ್ಧಿವಾದಿಗಳಿಗೆ ಆ ಕಥೆಗಳು ಅವಾಸ್ತವವಾಗಿ ಕಾಣಬಹುದಾದರೂ, ಧರ್ಮದಲ್ಲಿ ಮುಗ್ಧಶ್ರದ್ಧೆಯನ್ನಿರಿಸಿ ನಡೆಯುವ ಸಂಪ್ರದಾಯವಾದಿಗಳಿಂದ, ಸಾಮಾಜಿಕ ಕಲ್ಯಾಣವೂ ಸಾಧಿಸುವಂತಹ ಅನೇಕ ಸತ್ಕಾರ್ಯಗಳನ್ನು ಮಾಡುವಂತಹ ತತ್ತ್ವವನ್ನು ಪಡೆದುವಾಗಿವೆ. ಈ ಬಗೆಯ ಪುರಾಣಕಥೆಗಳೇ ನಮ್ಮ ಪೂರ್ವಜರಲ್ಲಿ ಮಾನವತೆಯನ್ನು ಜಾಗೃತಗೊಳಿಸಿ, ಅವರಿಂದ ನೀರಿಲ್ಲದೆಡೆಗಳಲ್ಲಿ ಕೆರೆ–ಬಾವಿಗಳನ್ನು ಕಟ್ಟಿಸಹಚ್ಚಿವೆ; ಅರವಟ್ಟಿಗೆಗಳನ್ನು ಇರಿಸಹಚ್ಚಿವೆ. ನೆರಳಿಗಾಗಿ ದಾರಿಗುಂಟ ಸಾಲುಮರಗಳನ್ನು ನೆಡಿಸಲು ಹಚ್ಚಿವೆ. ದೇವ ಮಂದಿರಗಳೆಡೆಯಲ್ಲಿ ಉಪವನಗಳನ್ನು ರಚಿಸಲು ಹಚ್ಚಿವೆ. ಆದರೆ ಬುದ್ಧಿವಂತರಾದ ಇಂದಿನ ವಾಸ್ತವವಾದಿಗಳು, ಈ ಬಗೆಯ ಲೋಕಕಲ್ಯಾಣದ ಶಾಶ್ವತಕಾರ್ಯಗಳನ್ನು ಮಾಡಲು, ಆ ಮುಗ್ಧ ಶ್ರದ್ಧಾವಂತರಂತೆ ಸಿದ್ಧರಾಗಬಹುದೇ? ನಮ್ಮ ಪ್ರಾಚೀನ ಸಂಸ್ಕೃತಿ ಪರಲೋಕ ಮಾರ್ಗವನ್ನಷ್ಟೇ ತೋರಿಸಲಿಲ್ಲ; ಇಹಲೋಕವನ್ನೂ ಸುಖ–ಸಂತೃಪ್ತಿಗಳಿಂದ ತುಂಬುವ ಜೀವನ ಕಲ್ಯಾಣಮಾರ್ಗವನ್ನೂ ತೋರಿಸಿ, ಅದರೊಂದಿಗೆ ನಡೆಯಲು ಹಚ್ಚುತ್ತಿತ್ತು. ವೈಶಾಮಾಸದ ಮಾಹಾತ್ಮ್ಯವು ಹೇಳುವ ಪೌರಾಣಿಕ ಕಥೆಗಳಲ್ಲಿ ಹುದುಗಿರುವ ರಹಸ್ಯವನ್ನು ವಿಶ್ಲೇಷಿಸಿ ನೋಡುತ್ತಹೋದರೆ, ಅದರಲ್ಲಿ ಸಾಮಾಜಿಕ ಜೀವನದ ಸುಖ–ಸಮಾಧಾನಗಳ ಆದರ್ಶವೇ ನಮಗೆ ಎದ್ದುಕಾಣುವುದು.

### ಪ್ರಾಚೀನ ಸಂಸ್ಕೃತಿಯ ಆಗರ

ನಮ್ಮ ಜೀವನಕ್ಕೆ ಹಿನ್ನೆಲೆಯಾಗಿ ನಡೆದಿರುವ ಕಾಲಪುರುಷ, ಕಳೆದ ಕಾಲಗಳ ಹಲವಾರು ನೆನಹುಗಳನ್ನು ತನ್ನೊಂದಿಗೆ ಹೊತ್ತುತಂದಿರುವನು. ಈ ನೆನಹುಗಳಲ್ಲಿ ಕೆಲವು ವೈದಿಕ ಕಾಲದುವುಗಳಾಗಿದ್ದರೆ, ಇನ್ನು ಕೆಲವು ಪೌರಾಣಿಕ ಸಂದರ್ಭಗಳ ಸ್ಮಾರಕಗಳಾಗಿವೆ. ಮತ್ತೆ ಕೆಲವು ನಾಗರಿಕ ಇತಿಹಾಸ ಪರಂಪರೆಗಳ ಸಾಕ್ಷಿಗಳಾಗಿದ್ದರೆ,

ಮಿಕ್ಕುವೆಲ್ಲ ಜಾನಪದ ಇತಿಹಾಸದಿಂದ ಎದ್ದು ನಿಂತುವುಗಳಾಗಿವೆ. ವೈಶಾಖಮಾಸವು ಈ ಬಗೆಯ ಪ್ರಾಚೀನ ಸಂಸ್ಕೃತಿ-ಸಂಪ್ರದಾಯಗಳ ಸ್ಮಾರಕಗಳಿಗೆ ಆಗರವಾಗಿದೆಯೆಂದು ಹೇಳಬಹುದು.

ವಿಶಾಖಾ ನಕ್ಷತ್ರದ ಮೂಲಕ ಈ ತಿಂಗಳು 'ವೈಶಾಖ' ಎಂದು ಹೆಸರನ್ನು ಪಡೆದಿದೆ. ಈ ತಿಂಗಳ ರಾತ್ರಿಯನ್ನು ವಿಶಾಖಾ ನಕ್ಷತ್ರವೇ ನಡೆಸುವುದಲ್ಲದೆ, ಸಾಮಾನ್ಯವಾಗಿ ವೈಶಾಖಪೌರ್ಣಿಮೆಯ ದಿನ ವಿಶಾಖಾ ನಕ್ಷತ್ರ ನಿತ್ಯನಕ್ಷತ್ರವಾಗಿ ಬಂದಿರುವುದು. ಸೌರಮಾನದ ವೃಷಭಮಾಸ, ಈ ತಿಂಗಳಲ್ಲಿಯೇ ಪ್ರಾರಂಭವಾಗುವುದು. ಅಶ್ವಿನೀ, ಭರಣೀ ಮಳೆಯ ನಕ್ಷತ್ರಗಳು ಅಡ್ಡಮಳೆಗಳನ್ನು ಸುರಿಸಿ, ಹೊಲನೆಲಗಳನ್ನು ಉಳುಮೆಗೆ ಹದಗೊಳಿಸಿರುವುದರಿಂದ, ಒಕ್ಕಲಿಗರು 'ಬೇಸಗೆಯ ಗಳೆ'ಯನ್ನು ಈ ತಿಂಗಳಲ್ಲಿ ಸಂಭ್ರಮದಿಂದ ಸಾಗಿಸಿರುವರು. 'ಬೇಸಗೆಯ ದಿವಸಕ್ಕೆ ಬೇವಿನ ಮರ ತಂಪು' ಬಿಸಿಲ ಧಗೆಯಿಂದ ಬಳಲಿದ ಒಕ್ಕಲಿಗರು, ಬೇವಿನ ಮರದ ನೆಳಲನ್ನು ಸೇರಿ, ತತ್ರಾಣಿಯ ತನಿನೀರನ್ನು ಕುಡಿದು, ತಣಿವನ್ನು ಅನುಭವಿಸುತ್ತಿರುವರು. ಚೈತ್ರಮಾಸದಲ್ಲಿ ಪಂಚಮದಿಂಚರವನ್ನು ಹರಿಸಿದ ಪರಪುಟ್ಟ ಹಕ್ಕಿಗಳು, ಇದೀಗ ಹೆಚ್ಚಾಗಿ ಮೌನದ ಅಭ್ಯಾಸವನ್ನು ನಡೆಸಿದಂತಿರುವುವು. ಬಲಿತ ಕಾಯಿಗಳಿಂದ ತುಂಬಿದ ಮಾಮರಗಳು, ಪಾಡುಗಾಯಿಗಳಲ್ಲಿ ಜೇನಸವಿಯನ್ನು ತುಂಬುತ್ತಿರುವವು. ಸವಿಗಾರ ಗಿಣಿಗಳು ಪಾಡ ಸವಿಯನ್ನು ಸವಿಯುತ್ತ, ಮರದಿಂದ ಮರಕ್ಕೆ ಅಲೆಯುತ್ತಿರುವುವು. ನೇರಿಲಮರಗಳು ಚೆಂಗಾಯಿಗಳಿಂದಕೂಡಿ, ಪರಿಪಕ್ವ ರಸಕ್ಕಾಗಿ ಕಾಲಪುರಷನಲ್ಲಿ, ದುಂಬಿಗಳ ಝೇಂಕಾರದೊಂದಿಗೆ ಮೊರೆಯಿಡುತ್ತಿರುವುವು. ಬೇಸಗೆಯ ನೇಸರು ತನ್ನ ಬಿಸುಗದಿರುಗಳನ್ನು ಹರಡುತ್ತಿದ್ದರೂ, ಕಾಡೆಲ್ಲವೂ ತಳಿರು-ಹಸುರುಗಳಿಂದ ತುಂಬಿರುವುದು. ವೈಶಾಖಕ್ಕೆ ವಸಂತರಾಜನ ಸಹಕಾರವಿರುವುದಲ್ಲವೆ? ಭೂಮಿತಾಯಿ ಮಿಕ್ಕ ಯಾವ ಬೆಳೆಗಳಿಗೆ ಎಡೆಗೊಟ್ಟಿರದೆ ಹೋದರೂ, ವಸಂತರಾಜನ ಮನವೊಲಿಸಲು, ಆತನ ಮಿತ್ರನಾದ ಕಬ್ಬುವಿಲ್ಲ ಕಾಮದೇವನಿಗಾಗಿ, ಅನೇಕ ಕಬ್ಬಿಣ ತೋಟಗಳನ್ನು ಅಣಿಗೊಳಿಸಿರುವಳು. ಆದರೆ ಆ ಸಸಿಕಬ್ಬುಗಳಿಂದ ಕಾಮದೇವನಿಗೆ ಎಂತಹ ಪ್ರಯೋಜನ? ವನೋಪವನಗಳಲ್ಲಿ ಹಸುರು ಸೀರೆಯ ಮೇಲೆ ಮೊಸರನ್ನು ಚೆಲ್ಲಿದಂತೆ ಅರಳಿದ ದುಂಡುಮಲ್ಲಿಗೆ-ಚಂಡುಮಲ್ಲಿಗೆಗಳು, ಕಾಮರಾಯನ ಹೂಬಾಣಗಳಿಗೆ ತುಂಬ ನೆರವನ್ನು ನೀಡುತ್ತಿರುವುವು.

**ಧರ್ಮಸಾಧನೆಗೆ ಯೋಗ್ಯಕಾಲ**

ಧರ್ಮಸಾಧನೆ ಮಾಡಬೇಕೆನ್ನುವವರಿಗೆ ವೈಶಾಖಮಾಸದ ಒಂದೊಂದು ದಿನವೂ ಯೋಗ್ಯದಿನವೆಂದು ನಮ್ಮ ಪುರಾಣಗಳು ಹೇಳಿರುವುವು. ಸಜ್ಜನರಿಗೆ ಸುಖ-ಸಂತೃಪ್ತಿಗಳನ್ನು ಒದಗಿಸುವಂತಹ ಕಾರ್ಯಕ್ಕೆ ಸುಮೂಹೂರ್ತ ಸುಲಗ್ನಗಳನ್ನು ನೋಡಬೇಕೇ? ಅದಕ್ಕೆ ವೈಶಾಖಮಾಸ ಯೋಗ್ಯಕಾಲ. ಜಲದಾನ, ಫಲಪುಷ್ಪದಾನ, ಶೈತ್ಯೋಪಕರಣದಾನ, ಪಾನಕದಾನ, ನೀರ್ಮಜ್ಜಿಗೆಯ ದಾನ ಇವೆಲ್ಲ ಸಮಾಜಶಾಂತಿಗಾಗಿ ಈ ಮಾಸದಲ್ಲಿ ನಿತ್ಯವೂ ನಡೆಯಬೇಕು. ಉಳ್ಳವರು ಇಲ್ಲದವರಿಗೆ ನೀಡುವುದರಲ್ಲಿಯೇ ಇಹ-ಪರಗಳ ಸಾರ್ಥಕತೆಯಿದೆ.

ವೈಶಾಖಶುದ್ಧ ತೃತೀಯೆಯೆಂದರೆ ಅಕ್ಷಯತೃತೀಯ; ಮೂರುವರೆ ಶುಭಮುಹೂರ್ತದ ದಿನಗಳಲ್ಲಿ ಇದು ಮೇಲ್ಮೆಯನ್ನು ಪಡೆದ ದಿನ. ತ್ರೇತಾಯುಗಕ್ಕೆ ಇದು ಆರಂಭದ ದಿನವೆಂಬ ನಂಬುಗೆ ನಮ್ಮಲ್ಲಿದೆ. ಅದರಂತೆಯೇ ಇದು ಕಲ್ಪಾದಿಯ ದಿನವೂ ಅಹುದು. ಅಕ್ಷಯತೃತೀಯೆಯಂದು ಮಾಡಿದ ಅಲ್ಪ ಧರ್ಮಕಾರ್ಯವೂ ಅಕ್ಷಯಫಲಗಳನ್ನು ನೀಡುವುದೆಂದು ನಮ್ಮ ಧರ್ಮಗ್ರಂಥಗಳು ಹೇಳಿರುವುವು. ನಮ್ಮ ನಾಡಿಗರಿಗೆ ಇದೊಂದು ದೊಡ್ಡ ಹಬ್ಬ. ಹೊಸದಾಗಿ ವ್ಯಾಪಾರ-ವ್ಯವಹಾರಗಳನ್ನು ಪ್ರಾರಂಭಿಸಬೇಕೆನ್ನುವವರು, ಅಕ್ಷಯತೃತೀಯೆಯ ಶುಭದಿನವನ್ನು ಆಯ್ದುಕೊಳ್ಳುವರು. ಚೈತ್ರಮಾಸದಲ್ಲಿ ಪೂಜೆಗೊಳ್ಳುತ್ತ ಬಂದಿದ್ದ ದೋಲಾಗೌರಿಯ ಪೂಜೆಗೆ ಇಂದು ಕೊನೆಯ ದಿನ. ಮನೆಮನೆಯಲ್ಲಿಯೂ ಇಂದು ಹಬ್ಬದ ಆನಂದೋತ್ಸಾಹಗಳು ತಾಂಡವವಾಡುತ್ತಿರುವುವು. ಸುಮಂಗಲೆಯರ ಇಂದಿನ ಸಡಗರ-ಸಂಭ್ರಮಗಳ ಸೊಗಸನ್ನು ನೋಡಿಯೆ ಅನುಭವಿಸಬೇಕು. ಅಪೂರ್ವ ವಸ್ತ್ರಾಭರಣಗಳಿಂದ ಅಲಂಕೃತರಾದ ಆ ರಮಣಿಯರು, ಸಾಲುಸಾಲುಗೊಂಡು ಬೀದಿ-ಬೀದಿಗಳಲ್ಲಿಯೂ ನಲಿಯುತ್ತಿರುವರು. ಪ್ರತಿಯೊಬ್ಬರ ಮುಖದಲ್ಲಿಯೂ ಸಂತೃಪ್ತಿ ತುಂಬಿದ ಸಿರಿನಗೆ! ವಿದೇಶಿಯರಾರಾದರೂ ಬಂದು ಅಂದಿನ ಈ ನೋಟವನ್ನು ನೋಡಿದರೆ, ಅವರು ಕನ್ನಡ ನಾರಿಯರ ಈ ಸಂತೋಷಲೀಲೆ, ಸ್ವರ್ಗಲೋಕದುದೆಂದು ಹಿಂದೆ ಭಾವಿಸಬಹುದಾಗಿತ್ತು; ಆದರೆ ಇಂದಿನ ಅಕ್ಕಿ-ಬೇಳೆಗಳಿಗಾಗಿ ಹುಣಿಸೆ-ಮೆಣಸುಗಳಿಗಾಗಿ ಬಾಯ್‌ಬಿಡುವ ಈ ಕಾಲದಲ್ಲಿ ಹಿಂದಿನ ಅಕ್ಷಯತೃತೀಯೆಯಂತಹ ಸುಂದರ ದೃಶ್ಯ ಹೇಗೆ ಸಿಕ್ಕಬೇಕು? ಈ ಕೊರತೆಗೆ ನಮ್ಮೆಲ್ಲರ-ಪುರಾತನ ಸಂಸ್ಕೃತಿಯ ಸಾಮೂಹಿಕ ಉಪೇಕ್ಷೆಯೇ ಕಾರಣವೆಂದು ಹೇಳಬಹುದು.

**ಮೂರು ಅವತಾರಗಳು**

ಶ್ರೀಹರಿಯ ಹತ್ತು ಅವತಾರಗಳಲ್ಲಿ ಮೂರು ಅವತಾರಗಳಿಗೆ ಈ ವೈಶಾಖಮಾಸವೆ ಎಡೆಯನ್ನು ಕಲ್ಪಿಸಿಕೊಟ್ಟಿದೆ. ಅಕ್ಷಯತೃತೀಯೆಯಂದೇ

ಶ್ರೀಪರಶುರಾಮಜಯಂತಿ. ದುಷ್ಟ ಕ್ಷತ್ರಿಯರ ಕೈಯಿಂದ ಲೋಕದ ಜನರನ್ನು ಉಳುಹಲೆಂದು, ಗಂಡುಗೊಡಲಿಯನ್ನು ಹಿಡಿದು ಅವತರಿಸಿ, ಇಪ್ಪತ್ತೊಂದು ಸಲ ದುಷ್ಟ ಕ್ಷತ್ರಿಯರನ್ನು ಸವರಿ, ಭೂಮಿಯನ್ನು ಉದ್ಧರಿಸಿದ ತ್ರೇತಾಯುಗದ ವೀರಾವತಾರಿಯೀತ. ವೈಶಾಖಮಾಸವನ್ನೇ ಈ ಅವತಾರಕ್ಕಾಗಿ ಆಯ್ದುಕೊಂಡುದು, ಇದರ ಮಹತ್ತ್ವವನ್ನು ಹೆಚ್ಚಿಸಿರುವುದು.

ಶುದ್ಧ ತ್ರಯೋದಶಿಯಂದು ಶ್ರೀನೃಸಿಂಹಜಯಂತಿ ಸತ್ಯಪಕ್ಷಪಾತಿ ಯಾದ ಬಾಲಪ್ರಹ್ಲಾದನನ್ನು ಸಲಹಲು, ವಿಕೃತರೂಪದಿಂದ ಅವತರಿಸಿಬಂದು, ಅಸನ್ಮಾರ್ಗಿಯಾದ ಹಿರಣ್ಯಕಶಿಪುವನ್ನು ಸೀಳಿದ ದೇವನ ಉಗ್ರಾವತಾರವಿದು. ಕನ್ನಡ ನಾಡಿನಲ್ಲಿ ನೃಸಿಂಹ ಉಪಾಸಕರು ಹೆಚ್ಚು; ಎಂತಲೇ ನೃಸಿಂಹ ಕ್ಷೇತ್ರಗಳೂ ಇಲ್ಲಿ ಹೆಚ್ಚು. ಅಲ್ಲದೆ ಪುರ–ನಗರಗಳಲ್ಲಿ ನೃಸಿಂಹ ದೇವಸ್ಥಾನಗಳು ಇದ್ದೇ ಇರುವುವು. ಎಲ್ಲ ಕಡೆಗೂ ನೃಸಿಂಹ ಜಯಂತ್ಯುತ್ಸವವು ವಿಜೃಂಭಣೆಯಿಂದ ಜರುಗುವುದು. ಕೃತಯುಗದ ಶ್ರೀನೃಸಿಂಹನ ಉಗ್ರಾವತಾರ ವೈಶಾಖಮಾಸದಲ್ಲಿ ಆಗಿರುವಂತೆಯೇ, ದ್ವಾಪರದಲ್ಲಿ ಜ್ಞಾನಾವತಾರಿ ಶ್ರೀವೇದವ್ಯಾಸರು ಅಭಿವ್ಯಕ್ತರಾದುದೂ ಇದೇ ಮಾಸದ ತ್ರಯೋದಶೀ ತಿಥಿಯಂದೇ!

ಸಮುದ್ರಮಥನದ ಕಥೆಯನ್ನು ನಮ್ಮಲ್ಲಿ ಹಲವರು ಅರಿತಿರಬಹುದು. ಆದರೆ ಮಂಥನದಂಡವಾದ ಮಂದರಪರ್ವತಕ್ಕೆ ಆಧಾರವಾಗಿ ನಿಂತು, ಹದಿನಾಲ್ಕು ರತ್ನಗಳು ಹೊರಬರಲು ಕಾರಣವಾದ ಕೂರ್ಮಾವತಾರದ ಜಯಂತಿಯು ವೈಶಾಖಮಾಸದಲ್ಲಿಯೇ ಎಂಬುದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ವೈಶಾಖ ಶುದ್ಧ ಚತುರ್ದಶಿಯೇ ಕೂರ್ಮಜಯಂತಿಯ ದಿನವಾಗಿದೆ. ಐತಿಹಾಸಿಕ ಕಾಲವೂ ಬೇರೆ ಬೇರೆ ಸತ್ಪುರುಷ ಜನನದ ಮೂಲಕ, ವೈಶಾಖಮಾಸದ ಮಹತಿಯನ್ನು ಹೆಚ್ಚಿಸಿರುವುದು. ವೈಶಾಖ ಪೌರ್ಣಿಮೆಯು, ದಯಾಧರ್ಮ ಸಂಸ್ಥಾಪಕನಾದ ಗೌತಮಬುದ್ಧನ ಜಯಂತಿಯ ದಿನ. ವೈಶಾಖಶುಲ್ಕ ಪಂಚಮಿಯಂದು ಅದ್ವೈತ ಮತಸ್ಥಾಪಕರಾದ ಶ್ರೀಮದಾದ್ಯ ಶಂಕರಾಚಾರ್ಯರು ಇಳೆಗಿಳಿದರು. ಶುಕ್ಲಚತುರ್ಥಿಯು ವಿಶಿಷ್ಟಾದ್ವೈತ ಮತೋಪದೇಶಕರಾದ ಶ್ರೀರಾಮಾನುಜಾಚಾರ್ಯರಿಗೆ ಜನ್ಮವನ್ನು ಕೊಟ್ಟ ಶುಭದಿನ. ವೈಶಾಖ ಶುದ್ಧ ತೃತೀಯೆಯು ಶಿವಭಕ್ತಿಭಂಡಾರಿಗಳಾದ ಶ್ರೀ ಬಸವಣ್ಣನವರನ್ನು ಧರೆಗೆ ಕರೆದುತಂದ ಉತ್ಸವದಿನ. ಶುದ್ಧ ದ್ವಿತೀಯೆಯು ಹಿಂದೂಪದ ಪಾದಶಾಹಿಯನ್ನು ಸ್ಥಾಪಿಸಿದ ಶಿವಾಜಿ ರಾಜನಿಗೆ ಜನ್ಮವಿತ್ತ ವೀರೋದಯ ದಿನ. ಪವಿತ್ರ ತೀರ್ಥಮಾತೆಯಾದ ಗಂಗಾನದಿಯ ಉತ್ಪತ್ತಿ ವೈಶಾಖ ಶುಕ್ಲ ಸಪ್ತಮಿಯಂದು.



**ಅಗೆಯ ಹುಣ್ಣಿಮೆ**

ಕನ್ನಡ ಜನಪದದಲ್ಲಿ ವೈಶಾಖ ಪೌರ್ಣಿಮೆಗೆ 'ಅಗೆಯ ಹುಣ್ಣಿಮೆ' ಎಂದು ಹೆಸರಿದೆ. ಈ ಹೆಸರು ಕನ್ನಡಿಗರ ಹಳೆಯ ಕಾಲದ ಜೀವನ ಸಂಸ್ಕೃತಿಗಳನ್ನು ನೆನಪಿಗೆ ತಂದುಕೊಡುವಂತಹದ್ದಾಗಿದೆ. ಹಿಂದಿನ ಕಾಲದಲ್ಲಿ ಕಾಲ ಕಾಲಕ್ಕೆ ಸಮೃದ್ಧವಾದ ಮಳೆಯು ಸುರಿಯುತ್ತಿದ್ದಿತು. ಮಳೆಗಾಲದ ಬಗೆಗೆ ಜನರಲ್ಲಿ ಸಂಶಯಭಾಗವೇ ಇರುತ್ತಿರಲಿಲ್ಲ. ಆದುದರಿಂದ ಬೀಜಗಳನ್ನು ಬಿತ್ತಿ ಬೆಳೆ ತೆಗೆದುಕೊಳ್ಳುವುದಕ್ಕಿಂತ, ಯೋಗ್ಯ 'ತತಿ'ಯಲ್ಲಿ ಅಗೆಗಳನ್ನು ನೆಟ್ಟು ಬೆಳೆ ಪಡೆಯುವುದು ಸುಲಭವೆನಿಸುತ್ತಿತ್ತು; ಹುಲುಸಾದ ಬೆಳೆಯೂ ಬರುತ್ತಿತ್ತು. ಅದಕ್ಕೆ ಬೇಕಾಗುವ ಅಗೆಗಳನ್ನು ಅಣಿಗೊಳಿಸಿಕೊಳ್ಳುವ ಕಾರ್ಯವನ್ನು ವೈಶಾಖಶುದ್ಧ ಹುಣ್ಣಿಮೆಯಿಂದಲೇ ಪ್ರಾರಂಭಿಸುತ್ತಲಿದ್ದರು. ಅಂದು ಗ್ರಾಮದೇವತೆ–ಕುಲದೇವತೆಗಳಿಗೆ ವಿಶಿಷ್ಟ ಪೂಜೆ–ಹರಕೆಗಳನ್ನು ಸಲ್ಲಿಸಿ, ಅಗೆಗಳಿಗಾಗಿ ಬೀಜಗನ್ನು ಬಿತ್ತುತ್ತಿದ್ದರು. ಒಕ್ಕಲಿಗರ ಅಗೆಯ ಹುಣ್ಣಿಮೆಯ ಪೂಜೆ–ಹರಕೆಗಳನ್ನು ಸಲ್ಲಿಸುವ ಈ ಸಂಪ್ರದಾಯವು, ಅನೇಕ ಗ್ರಾಮಗಳಲ್ಲಿ ಜಾತ್ರೆಗಳನ್ನು ಸೃಷ್ಟಿಸಿ ಕಾಯ್ದುಕೊಂಡು ಬಂದಿದೆ. ಕೆಲ ಕೆಲವು ಗ್ರಾಮಗಳಲ್ಲಿ ಗ್ರಾಮದೇವತೆಯ ಮಂದಿರದೆದುರು ಅಂಗಳದಲ್ಲಿ ಅಗಲವಾದ ಅಗ್ನಿಕುಂಡವನ್ನು ನಿರ್ಮಿಸಿ, ಬೇಡಿಕೊಂಡ ಭಕ್ತರು ಆ ಕುಂಡದಲ್ಲಿ ಬರಿಗಾಲಿನಿಂದ ಹಾಯ್ದುಹೋಗುವ ಪದ್ಧತಿಯೂ ಇರುವುದು. 'ಅಗಿಹಾಯುವುದು' ಎಂದು ಈ ಪದ್ಧತಿಗೆ ಹೆಸರಿದೆ. ಈ ವಿಶಿಷ್ಟ ಪದ್ಧತಿಯ ಕಾರಣದಿಂದಲೇ ವೈಶಾಖ ಹುಣ್ಣಿಮೆಗೆ 'ಅಗಿ ಹುಣ್ಣಿವೆ' ಎಂದು ಹೆಸರು ಬಂದಿದೆ ಎಂದು ಕೆಲವರು ಭಾವಿಸುವರು; ಆದರೆ ಅವರ ಈ ಭಾವನೆ ಹುರುಳಿಲ್ಲದುದೆಂದು ಹೇಳುವಂತಿದೆ; ಏಕೆಂದರೆ ಅಗಿ ಹಾಯುವುದು ಸಾರ್ವತ್ರಿಕ ರೂಢಿಯಲ್ಲ; ಅಗೆ ಬೆಳೆಯಿಸುವುದು ಹಿಂದೆ ಒಕ್ಕಲಿಗರೆಲ್ಲರ ಅವಶ್ಯಕ ಕರ್ತವ್ಯವಾಗಿದ್ದಿತು. ಆದುದರಿಂದಲೇ ವೈಶಾಖಪೌರ್ಣಿಮೆ 'ಅಗೆಯ ಹುಣ್ಣಿಮೆ'ಯೇ ಹೊರತು 'ಅಗಿಯ ಹುಣ್ಣಿಮೆ'ಯಲ್ಲ. ಜಾನಪದರು ಏಕಾರಾಂತ ಪದಗಳನ್ನು ಇಕಾರಾಂತವಾಗಿ ಬಳಸುವುದು ಸರ್ವಶ್ರುತವಾದ ಸಂಗತಿ. ಉದಾ: ತಂಬಿಗೆ=ತಂಬಿಗಿ; ಬಿಂದಿಗೆ=ಬಿಂದಿಗಿ; ಹಲಸಿಗೆ=ಹಲಸಿಗಿ–ಇತ್ಯಾದಿ.

ವೈಶಾಖ ಅಮಾವಾಸ್ಯೆಯೂ ಕನ್ನಡ ಜಾನಪದ ಸಂಸ್ಕೃತಿಯ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾದುದಾಗಿದೆ. ನಾಗರಿಕ ಪ್ರಪಂಚದಲ್ಲಿ ಇದಕ್ಕೆ 'ಭಾವುಕಾ ಅಮಾವಾಸ್ಯೆ' ಎಂದು ಹೆಸರಿದ್ದರೂ, ಜಾನಪದರು ಇದನ್ನು 'ಬಾದಮೀ ಅಮಾಸಿ' ಎಂದು ಕರೆಯುತ್ತಾರೆ. ಹೀಗೆಂದರೆ ಏನು?

**ಬಾದಮೀ ಅಮಾಸೆ**

ಬಾದಮೀ ಅಮಾಸೆಯ ಸಾಂಪ್ರದಾಯಿಕ ಪೂಜೆ–ಪುರಸ್ಕಾರಗಳು, ಈಗಲೂ ಉತ್ತರ ಕರ್ನಾಟಕದ ಕೆಲವೊಂದು ನಾಗರಿಕ ಮನೆತನಗಳಲ್ಲಿ ರೂಢಿಯಲ್ಲಿವೆ. ಈ ಪೂಜೆ ಜಾನಪದ ಭಾವುಕತೆಯಿಂದ ಎದ್ದುದಾದರೂ, ನಮ್ಮ ಒಕ್ಕಲಿಗರ ಮನೆತನಗಳಲ್ಲಿ ಈ ಬಾದಮೀ ಪೂಜೆಯ ಕುಲಪಂಪರೆಯು ಯಾವಾಗಲೋ ಲುಪ್ತವಾಗಿದೆ. 'ಬಾದಮೀ' ಎಂದರೇನೆಂದು ಕೇಳಿದರೆ, ಸಮಂಜಸವಾಗಿ ಅದರ ಅರ್ಥವನ್ನು ಬಿತ್ತರಿಸುವ ಒಕ್ಕಲಿಗರು ಈಗ ಯಾರೂ ಇಲ್ಲವೆಂದು ಹೇಳುವುದು ಅತಿಶಯೋಕ್ತಿಯ ಮಾತಲ್ಲ. ಇಷ್ಟೇ ಅಲ್ಲ, ಬಾದಮೀ ಪೂಜೆಯ ಸಂಪ್ರದಾಯವನ್ನು ನಡೆಯಿಸಿಕೊಂಡು ಬಂದಿರುವ ನಾಗರಿಕರೂ, ತಾವು ಮಾಡುವ ಪೂಜೆಯ ದೈವತ ಯಾವುದೆಂಬುದನ್ನು ಹೇಳಲಾರರು.

ವೈಶಾಖ ಅಮಾವಾಸ್ಯೆಯಂದು ನಡೆಯುವ ಸಾಂಪ್ರದಾಯಿಕ ಬಾದಮಿಯ ಪೂಜೆಯೆಂದರೆ, ಈಗ ಉಳಿದುಕೊಂಡಿರುವುದು ಇಷ್ಟೆ; ಮನೆಯಲ್ಲಿ ಹೋಳಿಗೆ–ಪಾಯಸದ ಹೆಚ್ಚಿನ ಅಡಿಗೆಯೆನೋ ಸರಿಯೇ ಸರಿ! ಅಡಿಗೆಯ ಮನೆಯ ಒಂದು ಕಂಬದ ಬಳಿಯಲ್ಲಿ ಚಿಕ್ಕದೊಂದು ಹಂದರ ಹಾಕಿ, ಅದರ ಮೇಲೆ ಬೇವಿನ ಎಸಳುಗಳನ್ನು ದಟ್ಟವಾಗಿಹೊದ್ದಿಸಲಾಗುವುದು. ಹಂದರದೊಳಗೆ ಇರಿಸಿದ ಪೂಜಾಪೀಠದ ಮೇಲೆ, ಸುಣ್ಣ–ಬಣ್ಣಗಳ ಪಟ್ಟಿಗಳಿಂದ ಅಲಂಕೃತವಾದ ಏಳು ಬೆನಕಗಳನ್ನು ಸಾಲಾಗಿ ಇರಿಸಲಾಗುವುದು. ಆ ಬೆನಕಗಳನ್ನು ವಿಧ್ಯುಕ್ತವಾಗಿ ಪೂಜಿಸಿ, ಧೂಪ–ದೀಪಗಳನ್ನು ಅರ್ಪಿಸಿ, ಪ್ರತ್ಯೇಕ ಎಡೆ ಬಡಿಸಿ ಬಾದಾಮಿಗೆ ನೈವೇದ್ಯ ತೋರಿಸಲಾಗುವುದು. ನೈವೇದ್ಯದ ಹೋಳಿಗೆಯನ್ನು ಆಮೇಲೆ ಹಂದರದ ಮೇಲೆ ಹೊದಿಸಲಾಗುವುದು. ಮರುದಿವಸ ಈ ದೇವತೆಯ ವಿಸರ್ಜನೆಯಾಗುವುದು.

ಬೇವಿನ ಹಂದರ, ಬೆನಕಗಳ ಪೂಜೆ, ಹೋಳಿಗೆಯನ್ನು ಹಂದರದ ಮೇಲೆ ಹೊದಿಸುವುದು–ಇವೆಲ್ಲ ಪದ್ಧತಿಗಳನ್ನು ನೋಡಿದರೆ, ಬಾದಮಿಯ ಪೂಜಾಪರಂಪರೆ, ಅವೈದಿಕವೆಂದು ತೋರುವುದು. ಆದುದರಿಂದ ಈ ಪೂಜೆ, ಪ್ರಾದೇಶಿಕ–ಜಾನಪದ–ನಡೆವಳಿಯಿಂದ ಪ್ರಚಾರದಲ್ಲಿ ಬಂದುದೆಂದು ಭಾವಿಸುವಂತಿದೆ. ಈ ಭಾವನೆ ಸತ್ಯವೆನಿಸುವುದಕ್ಕೆ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಲಿಖಿತ ಪ್ರಮಾಣಗಳೂ ದೊರೆಯುತ್ತಿವೆ.

**ಜಾನಪದ ದೇವತೆ**

ಶಿಲಾಶಾಸನಗಳಲ್ಲಿ ದತ್ತಿಬಿಟ್ಟ ಭೂಮಿಯ ಮೇರೆಗಳನ್ನು ಸೂಚಿಸಬೇಕಾದಾಗ



'ಬಾದುಮೆ' 'ಬಾದುಮ್ಮೆ' 'ಬಾದುಂಬೆ' ಎಂಬ ಪದಗಳ ಬಳಕೆಯಾಗಿರುತ್ತದೆ. ಅಲ್ಲಿ ಈ ಪದಗಳಿಗೆ "ಸೀಮಾಸೂಚಕ ಅಂಕಿತದಿಂದ ಕೂಡಿದ ಕಲ್ಲು" ಎಂಬ ಅರ್ಥದ ಬೋಧೆಯಾಗುವುದು. ಶ್ರೀಬಸವಣ್ಣನವರ ವಚನಗಳಲ್ಲಿಯೂ ಬಾದುಮೆ ಎಂಬ ಪದಪ್ರಯೋಗವಿದೆ. ಅಲ್ಲಿ ಅದು ಪ್ರತಿಮೆ, ಗೊಂಬೆ ಎಂಬ ಅರ್ಥವನ್ನು ಬೋಧಿಸುವುದು. ಬ್ರಹ್ಮಶಿವ ಎಂಬ ಹೆಸರಿನ ಹಳಗನ್ನಡ ಜೈನಕವಿ, ತನ್ನ "ಸಮಯಪರೀಕ್ಷೆ" ಎಂಬ ಪದ್ಯಗ್ರಂಥದಲ್ಲಿ ಜೈನೇತರರು ಉಪಾಸಿಸುವ ಕೆಲವು ಜಾನಪದ ದೇವತೆಗಳನ್ನು ಕುರಿತು ವಿಡಂಬನೆಯ ಮಾತುಗಳನ್ನು ಆಡಿದ್ದಾನೆ. ಆ ದೇವತೆಗಳಲ್ಲಿ ಬಳರಿ, ಮಾಳಚಿ, ಬಾದುಂಬೆ ಎಂಬ ಹೆಸರಿನ ದೇವತೆಗಳೂ ಇವೆ. ಹೊಲಗಳ ಬೆಳೆ ಹುಲುಸಾಗಿ ಬರಬೇಕೆಂದು ಕುರುಡುನಂಬುಗೆಯಿಂದ, ಬೆನಕ–ಬಾದುಂಬೆಗಳನ್ನು ಪೂಜಿಸಿ ದಣಿಯುವರೆಂದೂ ಈ ಕವಿ ಅಣಕವಾಡಿದ್ದಾನೆ. ಈ ಮಾತನ್ನು ಪ್ರಮಾಣವಾಗಿ ಹಿಡಿದರೆ "ಬಾದುಂಬೆ" ಎಂಬುದು ಜಾನಪದ ದೇವತೆಯೆಂಬುದು ಸ್ಪಷ್ಟವಾಗಿ ತೋರುವುದು. ಶಿಲಾಶಾಸನಗಳಲ್ಲಿ ಬರುವ ಬಾದುಮೆ–ಬಾದುಂಬೆಗಳೂ ಸೀಮಾಸೂಚಕ ದೇವತಾ ವಿಗ್ರಹವೆಂದೇ ಕಂಡುಬರುವುದು. ಒಕ್ಕಲಿಗರು ಭಾವುಕತನದಿಂದ, ಬೆಳೆಯಕಾಪು–ಹುಲುಸುಗಳಿಗಾಗಿ ಸೀಮೆಯ ದೇವತೆಗಳಾದ ಬಾದುಂಬೆಗಳನ್ನು, ವೈಶಾಖ ಅಮಾವಾಸ್ಯೆಯಂದು ಪೂಜಿಸುವ ಪದ್ಧತಿಯನ್ನು ಇಟ್ಟುಕೊಂಡಿರಬಹುದಾಗಿದೆ. ಆ ಪದ್ಧತಿ, ಕರಷಿಜೀವಿಗಳಾದ ನಾಗರಿಕ ಮನೆತನ ಗಳಲ್ಲಿಯೂ ಸೇರಿ ಇದುವರೆಗೆ ಉಳಿದುಕೊಂಡು ಬಂದಿದೆ. ಹಿಂದಿನ ಕಾಲದ 'ಬಾದುಂಬೆ'ಯೇ ಬಾದುಮೆಯಾಗಿ 'ಬಾದಮಿ' ಎಂದು ಅಪಭ್ರಂಶರೂಪವನ್ನು ತಾಳಿದಂತಿದೆ. ಬಾದಮೀಪೂಜೆಯ ಪರಂಪರೆಯು ಬಯಲುಸೀಮೆಯ ಕನ್ನಡಿಗರ ಮನೆತನಗಳಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ; ಆದರೆ ಬಾದಮೀ ಅಮಾಸೆ ಎಂಬ ಹೆಸರು ಸಾರ್ವತ್ರಿಕವಾಗಿದೆ. ಜ್ಯೇಷ್ಠ ಆಷಾಢ ಮಾಸಗಳಲ್ಲಿ ಕನ್ನಡ ಒಕ್ಕಲಿಗರು, ತಮ್ಮ ವ್ಯವಸಾಯದ ಸುರಕ್ಷಿತತೆ –ಅಭ್ಯುದಯಗಳಿಗಾಗಿ ಮಾಡುವ ಬೇರೆ ಬೇರೆ ಪ್ರಾಕೃತಿಕ ದೈವತಗಳ ಪೂಜೆಗಳನ್ನು ಲೆಕ್ಕಕ್ಕೆ ತಂದು ನೋಡಿದರೆ, ವೈಶಾಖದಲ್ಲಿ ಮೊತ್ತಮೊದಲು ಅವರು, ತಮ್ಮ ಹೊಲಗಳ ಸೀಮಾದೈವತದ ಪೂಜೆಯನ್ನು ಮಾಡುವುದು ಸ್ವಾಭಾವಿಕವೇ ಎನಿಸುತ್ತದೆ. ಕಾಲ ಕಳೆಯುತ್ತ ಬಂದಂತೆಲ್ಲ ಹೊಲಗಳ ಸೀಮೆಗಳು ಮಾರ್ಪಟ್ಟು, ಅಂದಿನ ಬಾದುಂಬೆಯ ಪ್ರತಿಮೆಗಳು ಕಣ್ಮರೆಯಾಗಿರಬಹುದಾಗಿದೆ.

ವೈಶಾಖಮಾಸದ ಮಹತಿಯು, ಇಲ್ಲಿ ನಾನು ಹೇಳಿರುವ ಮಾತುಗಳಿಂದ, ಜನರ ಮನದರಿಕೆಗೆ ತಟ್ಟುವುದೆಂದು ನಾನು ಭಾವಿಸಿದ್ದೇನೆ.

# ೩. ಜಾನಪದ ಸಂಪ್ರದಾಯ ಸನ್ನಿವಿಷ್ಟ ಜ್ಯೇಷ್ಠಮಾಸ

ಚಾಂದ್ರವತ್ಸರದಲ್ಲಿ ಜ್ಯೇಷ್ಠವು ಮೂರನೆಯ ತಿಂಗಳು ಸೌರವತ್ಸರದ ಮೂರನೆಯ ತಿಂಗಳಾದ ಮಿಥುನಮಾಸವು. ಇದೇ ತಿಂಗಳಲ್ಲಿ ಮಿಥುನ ಸಂಕ್ರಮಣದ ದಿನದಿಂದ ಪ್ರಾರಂಭವಾಗುತ್ತದೆ. ಜ್ಯೇಷ್ಠಾ ನಕ್ಷತ್ರವು ಈ ತಿಂಗಳಲ್ಲಿ ರಾತ್ರಿಯನ್ನು ನಡೆಯಿಸುವುದು. ಪರಂಪರೆಯವರ ಎಣಿಕೆಯಂತೆ ಜ್ಯೇಷ್ಠಮಾಸವು ಗ್ರೀಷ್ಮಋತುವಿನ ಪೂರ್ವಭಾಗವಾಗಿರುವುದು. ಗ್ರೀಷ್ಮಕಾಲವೆಂದರೆ ಬಿರುಬೇಸಗೆಯ ದಿನಗಳೆಂಬುದು ನಮ್ಮ ಪ್ರಾಚೀನರ ತಿಳಿವಳಿಕೆ. ಆದರೆ ಇಂದಿನ ವಾಸ್ತವ ಪರಿಸ್ಥಿತಿಯನ್ನು ನೋಡಿದರೆ, ಮಿಥುನ ಸಂಕ್ರಮಣದೊಂದಿಗೆ ಮುಂಗಾರುಮಳೆಗಾಲ ಪ್ರಾರಂಭವಾಗಿ, ಗ್ರೀಷ್ಮದ ಬಿರುಬಿಸಿಲನ್ನು ತಂಪುಗೊಳಿಸುವುದು. ಎಂತಲೇ ತುಳು ಭಾಷೆಯಲ್ಲಿ ಜ್ಯೇಷ್ಠಮಾಸವನ್ನು 'ಕಾರ್‌ತಿಲಾ' ಎಂದರೆ ಮಳೆಯ ತಿಂಗಳು ಎಂದು ಹೇಳುವರು. ನಮ್ಮ ಕನ್ನಡ ಕವಿಗಳು 'ಸಮಯ'ವನ್ನು ನಂಬಿ ಮಾಡಿದ ಗ್ರೀಷ್ಮಕಾಲದ ಪ್ರಖರಸೂರ್ಯನ ತೀಕ್ಷ್ಣತಾಪದ ಬಣ್ಣನೆಯನ್ನು ಜ್ಯೇಷ್ಠಮಾಸದಲ್ಲಿ ನಾವಿಂದು ಹೆಚ್ಚಾಗಿ ಕಾಣಲಾರೆವು. ಮುಂಗಾರು ಮಳೆಗಳು ತಮ್ಮ ಕಾಲೋಚಿತ ಕರ್ತವ್ಯವನ್ನು ಮಾಡದಿದ್ದಾಗ ಮಾತ್ರ, ನಮ್ಮ ಕವಿಗಳು ಬಣ್ಣಿಸಿದಂತಹ ಗ್ರೀಷ್ಮತಾಪವನ್ನು ನಾವು ಅನುಭವಿಸಬೇಕಾಗುವುದು.

ಜ್ಯೇಷ್ಠಮಾಸದಲ್ಲಿ ಬರುವ ರೋಹಿಣಿಮಳೆಯ ನಕ್ಷತ್ರವು, ತನ್ನ ಸ್ವಭಾವದಂತೆ ಆಗಸದಲ್ಲಿ ಮೋಡಗಳ ಮಂಟಪವನ್ನು ಕಟ್ಟಿದರೆ, ಮೃಗಶಿರಾ ಆರ್ದ್ರಾ ಮಳೆಗಳು ಪಡುಗಡಲಿನಿಂದ ಜಡೆಯ ಮೋಡಗಳನ್ನು ಎಳೆದುತಂದು ತನಿಮಳೆಯನ್ನು ಕರೆಯತೊಡಗಿದರೆ, ಗ್ರೀಷ್ಮರಾಜನ ಬಿಸಿಯಾಡಳಿತ ತಡೆದುನಿಲ್ಲುವುದಕ್ಕೆ ಎಡೆ ದೊರೆತೀತೇ? ದೊರೆಯಲಾರದೆಂತಲೇ ಕವಿ ಸಮಯದ ಗ್ರೀಷ್ಮಕಾಲ ಇಂದಿನ ನಮಗೆ, ಕಲ್ಪನಾಲೋಕದುದೆಂದೇ ಕಾಣುತ್ತದೆ.

ಕನ್ನಡನಾಡಿನ ಮಲೆನಾಡಿನ ಒಕ್ಕಲಿಗರು, ಮೃಗಪಂಚಕದ ಬರಲಿರುವ ಜಡಿಮಳೆಗಳನ್ನು ನಂಬಿ, ರೋಹಿಣೀ ಮಳೆಯ ದಿನಗಳಲ್ಲಿಯೆ ಬತ್ತದ ಬಿತ್ತಿಗೆಯ ಕೆಲಸ ಮಾಡುವುದುಂಟು. ರೋಹಿಣಿಯು ತಮ್ಮ ಅಡ್ಡಮಳೆಯ ಸೆಳಕುಗಳಿಂದ ಬೆಳುವಲದ ಹೊಲಗಳ ಮಣ್ಣನ್ನು ನೆನೆಸಿದರೆ, ಆ ನಾಡಿನಲ್ಲಿಯೂ ಮುಂಗಾರು



ಧಾನ್ಯಗಳ ಬಿತ್ತಿಗೆ ನಡೆಯುವುದು. 'ರೋಣಿಮಳೆಯಾದರೆ, ಓಣಿತುಂಬಾ ಕಾಳು!' ಎಂಬುದಾಗಿ ಬೆಳುವಲ ಒಕ್ಕಲಿಗರಲ್ಲಿ ಒಂದು ಗಾದೆ ಪ್ರಚಾರದಲ್ಲಿದೆ. ಈ ಗಾದೆಯ ಮಾತು ಕೇವಲ ಭಾವುಕರ ಕಲ್ಪನೆಯದಲ್ಲ; ಹಲವು ಕಾಲದ ಹಲವು ಜನರ ಅನುಭವದಿಂದ ಸಿದ್ಧವಾದ ಪ್ರತ್ಯಕ್ಷ ಪ್ರಮಾಣಿಕ ಲೋಕವಾಣಿ. ಇಂತಹದೇ ಇನ್ನೊಂದು ಗಾದೆಯೆಂದರೆ; 'ಮಿರಗನ ಮಳಿ ಮಿಂಚಬಾರದು; ಆದರೀ ಮಳಿ ಗದ್ದರಿಸಬಾರದು' ಎಂದು! ಜಡಿಮಳೆಗಳನ್ನೇ ಸುರಿಸಬೇಕಾದ ಮೃಗಾ ಆದ್ರಾ! ಮಳೆಗಳು ಮಿಂಚಿದರೆ ಗುಡುಗಿದರೆ ತಮ್ಮ ಶಕ್ತಿಯನ್ನು ಕಳೆದುಕೊಳ್ಳುವುವೆಂದು ನಮ್ಮ ಜನರ ನಂಬುಗೆ.

**ಕೂರಿಗೆದೇವಿಯ ಪೂಜೆ**

ಬೇಸಗೆಯ ಉಳುಮೆಯನ್ನು ಮುಗಿಸಿ ಒಕ್ಕಲಿಗರು, ಬಿತ್ತಿಗೆಗಾಗಿ ಭೂಮಿಯನ್ನು ಹದಗೊಳಿಸಿ ಇಟ್ಟಿರುವರು. ಜ್ಯೇಷ್ಠದಲ್ಲಿ ಹದಮಳೆಗಳು ಬಿದ್ದೊಡನೆಯೆ ಅವರು ತಮ್ಮ ಕೂರಿಗೆದೇವಿಯ ಪೂಜೆಯನ್ನು ಮಾಡುವರು. ಬಿತ್ತುವುದಕ್ಕೆ ಮುಖ್ಯ ಉಪಕರಣವಾದ ಕೂರಿಗೆಯನ್ನು ಸೀರೆ–ಕುಪ್ಪಸ–ಆಭರಣಗಳಿಂದ ಸಿಂಗರಿಸಿ, ಪ್ರತಿಯೊಬ್ಬ ಒಕ್ಕಲಿಗನ ಮನೆಯಲ್ಲಿಯೂ ವಿಧ್ಯುಕ್ತವಾಗಿ ಕೂರಿಗೆಯ ಪೂಜೆ ನಡೆಯುವುದು. ಅದಾಗದೆ ಯಾರೂ ಕೂರಿಗೆಯನ್ನು ಹೊಲದಲ್ಲಿ ಸಾಗಿಸುವಂತಿಲ್ಲ. ಕೂರಿಗೆಪೂಜೆಯ ದಿನವೇ ರೈತ ತನ್ನ ಹೊಲದಲ್ಲಿ ಬಿತ್ತುವ ಮುಹೂರ್ತವನ್ನು ಮಾಡುತ್ತಾನೆ. ಆ ಮೇಲೆ ಅವನು ಬೇಕಾದುದು ಬೇಕಾದಲ್ಲಿ ತನ್ನ ಬಿತ್ತಿಗೆಯ ಕೆಲಸವನ್ನು ಮಾಡಬಹುದು. ಕೂರಿಗೆಯ ಪೂಜೆಯ ದಿನವೆಂದರೆ, ಒಕ್ಕಲಿಗನಿಗೊಂದು ಹಬ್ಬದ ಸಂಭ್ರಮದ ದಿನ! ಅಂದು ಮನೆಯಲ್ಲಿ ಅಂಬಲಿ–ಕಿಚಡಿಗಳ ಅಡಿಗೆ; ಆಪ್ತ–ಮಿತ್ರರೆಲ್ಲರಿಗೂ ಅಂದು ಔತಣದೂಟ.

ಜ್ಯೇಷ್ಠಶುದ್ಧ ಪೌರ್ಣಿಮೆಯು 'ಕಾರಹುಣ್ಣಿಮೆ' ಎಂಬ ಹೆಸರಿನಿಂದ ನಮ್ಮ ನಾಡಿನಲ್ಲಿ ಪ್ರಸಿದ್ಧವಾಗಿದೆ. ಬಯಲುನಾಡಿನ ರೈತರಿಗಂತೂ ಕಾರಹುಣ್ಣಿಮೆಯು ದೊಡ್ಡ ಹಬ್ಬ. 'ಕಾರ್' ಎಂದರೆ ಮಳೆ. ಮಳೆಗಾಲದ ಆರಂಭದ ಹುಣ್ಣಿಮೆಯೆಂದೇ ಇದಕ್ಕೆ 'ಕಾರಹುಣ್ಣಿಮೆ' ಎಂಬ ಹೆಸರು ಬಂದಿದೆ. ಹೊಲದಲ್ಲಿ ದುಡಿಯುವ ಎತ್ತುಗಳನ್ನು, ದೇವರೆಂಬ ಭಾವನೆಯಿಂದ ಪ್ರತ್ಯಕ್ಷವಾಗಿ ಪೂಜಿಸುವುದು ಈ ಹಬ್ಬದಲ್ಲಿಯ ಮುಖ್ಯ ಕಾರ್ಯಕ್ರಮ. ಈ ಕಾರ್ಯಕ್ರಮವು ಹುಣ್ಣಿಮೆಯ ಮೊದಲ ದಿನದಿಂದಲೇ ಪ್ರಾರಂಭವಾಗುವುದು.

ಈ ಹುಣ್ಣಿಮೆಯ ಮೊದಲದಿನಕ್ಕೆ 'ಹೊನ್ನುಗ್ಗಿ' ಎಂದು ಹೆಸರಿದೆ. ಅಂದು

ದುಡಿಯುವ ಎತ್ತುಗಳ ದುಡಿಮೆಗೆ ಬಿಡುವು. ಒಕ್ಕಲಿಗರೆಲ್ಲರೂ ತಮ್ಮ ತಮ್ಮ ಎತ್ತು-ಹೋರಿಗಳ ಮೈಯನ್ನು ಹಸನಾಗಿ ತೊಳೆದು, ಕೋಡುಗಳನ್ನು ಕೆಂಬಣ್ಣದಿಂದ ಅಂದಗೊಳಿಸುವರು. ಮೈಮೇಲೆಯೂ ಬೇರೆಬೇರೆ ಬಣ್ಣಗಳಿಂದ ಮುದ್ರೆಯೊತ್ತುವರು. ಹಕ್ಕೆಗಳಲ್ಲಿ ಗುಗ್ಗುಳದ ಧೂಪವನ್ನು ಹಾಕಿ, ಸುಮಂಗಲೆಯರಿಂದ ಎತ್ತುಗಳಿಗೆ ಆರತಿಯನ್ನು ಬೆಳಗಿಸುವರು. ನೈವೇದ್ಯವೆಂದು ಅಂಬಲಿ-ಕಿಚ್ಚಡಿಗಳನ್ನು ಪ್ರತಿಯೊಂದು ಎತ್ತಿಗೂ ತಿನಿಸುವರು. ನೈವೇದ್ಯಶೇಷವನ್ನು ಮನೆಯವರೆಲ್ಲರೂ ಉಣ್ಣುವರು.

**ಕಾರಹುಣ್ಣಿವೆ**

ಮರುದಿನ ಕಾರಹುಣ್ಣಿವೆ ಸಂಸ್ಕೃತ ಭಾಷೆಯಲ್ಲಿ ಇದಕ್ಕೆ ಆನಡ್ವಾಹ ಪೌರ್ಣಿಮೆ (ಎತ್ತಿನ ಹುಣಿಮೆ) ಎಂದು ಹೆಸರಿದೆ. ಒಕ್ಕಲಿಗರಲ್ಲದ ನಾಗರಿಕರಲ್ಲಿಯೂ ಕಾರಹುಣ್ಣಿಮೆಯ ದಿನದ ಎತ್ತಿನ ಪೂಜೆಯ ಸಂಪ್ರದಾಯವಿದೆ. ಆದರೆ ಒಕ್ಕಲಿಗರಂತೆ ಪ್ರತ್ಯಕ್ಷ ಎತ್ತುಗಳ ಪೂಜೆಯನ್ನು ಮಾಡದೆ, ಮಣ್ಣಿನಿಂದ ಮಾಡಿದ ಜೋಡೆತ್ತುಗಳನ್ನು ಅವರು ಪೂಜಿಸುತ್ತಾರೆ. ಕರಿಗಡುಬು-ಕೋಡಬಳೆಗಳ ನೈವೇದ್ಯವನ್ನು ಮಾಡಿ ಹಬ್ಬದ ಸವಿಯೂಟವನ್ನು ಹೊಡೆಯುತ್ತಾರೆ.

ಇನ್ನು ಒಕ್ಕಲಿಗರ ಕಾರಹುಣ್ಣಿಮೆಯಂದರೆ ಅದೊಂದು ನಮ್ಮ ಜಾನಪದ ಸಂಪ್ರದಾಯದ ಸ್ಮಾರಕವಾಗಿರುವುದು. ಅಂದು ಅವರು ತಮ್ಮ ಬಸವಣ್ಣಗಳನ್ನು ದೇವರೆಂದೇ ಬಗೆದು ಪೂಜಿಸುವರು. ಹುಗ್ಗಿ-ಹೋಳಿಗೆಗಳ ನೈವೇದ್ಯವನ್ನು ಸಲ್ಲಿಸಿ, ತಾವೂ ಹಬ್ಬದೂಟದ ಸವಿಯನ್ನು ಅನುಭವಿಸುವರು. ಕಾರಹುಣ್ಣಿಮೆಯಂದು, ಪ್ರತಿಯೊಂದು ಹಳ್ಳಿಯಲ್ಲಿಯೂ ನಡೆಯುವ ಸಾರ್ವಜನಿಕ ಕಾರ್ಯಕ್ರಮವೆಂದರೆ, ಊರ ಕರಿಯನ್ನು ಹರಿಯುವುದು. ಇದೊಂದು ವಿಜೃಂಭಣೆಯ ಉತ್ಸವ ಹಳ್ಳಿಗಳಲ್ಲಿ.

ಹೋಳಿಯ ಹುಣ್ಣಿಮೆಯ ಮರುದಿನ ಕಾಮನ ಬೂದಿಯಿಂದ ಊರ ಸುತ್ತಲೂ ಕರಿಯನ್ನು ಕಟ್ಟುವ ಸಂಪ್ರದಾಯ ನಮ್ಮ ನಾಡಿನಲ್ಲಿದೆ.

ಹೋಳಿಹುಣ್ಣಿವೆಗೆ ಒಕ್ಕಲಿಗರ ಸುಗ್ಗಿಯೆಲ್ಲ ಮುಗಿದು, ಧಾನ್ಯಲಕ್ಷ್ಮಿ ಒಕ್ಕಲಿಗರ ಮನೆ-ಮನೆಗಳಲ್ಲಿ ಸೇರಿ ಕುಳಿತಿರುವಳು. ಊರಲ್ಲಿರುವ ಈ ಧಾನ್ಯಾದಿಗಳಿಗೆ ಯಾವುದೇ ಬಗೆಯ ಭೀತಿ-ಉಪದ್ರವಗಳು ತಗಲಕೂಡದೆಂಬ ಭಾವನೆಯಿಂದ, ಅಂದು ಒಕ್ಕಲಿಗರು ಕಾಮನ ಬೂದಿ (ಕರಿ)ಯಿಂದ ಊರ ಸುತ್ತಲೂ ಕರಿಯನ್ನು ಕಟ್ಟಿರುವರು. ಈ ಕ್ರಿಯೆಗೆ ಸಂಸ್ಕೃತಭಾಷೆಯಲ್ಲಿ 'ರಕ್ಷಾಬಂಧನಕ್ರಿಯೆ' ಎಂದು



ಹೇಳುವರು. 'ರಕ್ಷಾ' ಎಂದರೆ ಬೂದಿ-ಕರಿ!

ಬೇಸಗೆಯಲ್ಲಿ ಊರ ಮನೆಗಳಲ್ಲಿ ಕೂಡಿಟ್ಟ ಧಾನ್ಯಗಳನ್ನೇ ಮಳೆಗಾಲದಲ್ಲಿ ಮತ್ತೆ ಬಿತ್ತುವ ಬೀಜಗಳನ್ನಾಗಿ ಹೊರಗೆ ಹೊಲಗಳಿಗೆ ಸಾಗಿಸಬೇಕಲ್ಲವೆ? ಅದಕ್ಕಾಗಿಯೆ ಹೋಳಿಹಬ್ಬದ ಮರುದಿನ ಕಟ್ಟಿದ ಕರಿಯನ್ನು, ಕಾರಹುಣ್ಣಿಮೆಯಂದು ಹರಿಯಬೇಕಾಗುವುದು. ಅಂದು ಕರಿಹರಿದ ಹೊರತು, ಮನೆಯಲ್ಲಿಯ ಕಾಳುಗಳನ್ನು ಯಾರೂ ಊರಹೊರಗೆ ಸಾಗಿಸಕೂಡದೆಂಬ ಸಾಮಾಜಿಕ ನಿರ್ಬಂಧವಿದ್ದಿತಾಗ. ಎಂತಲೆ ಕಾರಹುಣ್ಣಿಮೆಯಾಗದೆ ಯಾವ ಒಕ್ಕಲಿಗನೂ ಬಿತ್ತಿಗೆಯ ಕೆಲಸ ಪ್ರಾರಂಭಿಸುವುದಕ್ಕೆ ಒಪ್ಪಿಗೆಯಿರಲಿಲ್ಲ. ಹೊಸ ವರ್ಷದ ಅನ್ನಸಾಧನಕಾರ್ಯಕ್ಕೆ ನಾಂದಿಯನ್ನು ಹೇಳುವ ಕಾರಹುಣ್ಣಿಮೆ, ನಮ್ಮ ಒಕ್ಕಲಿಗರಿಗೊಂದು ಮಹತ್ತ್ವದ ಹಬ್ಬದ ದಿನವಾಗಿ ಪರಿಣಮಿಸಿರುವುದು.

**ಕರಿ ಹರಿಯುವುದು**

ನಮ್ಮ ಹಳ್ಳಿಗರು ಕರಿ ಹರಿಯುವ ಕಾರ್ಯಕ್ರಮವನ್ನು ವಿಶಿಷ್ಟ ಸಂಕೇತರೂಪದಲ್ಲಿ ನಡೆಸುತ್ತಾರೆ. ಬೇವಿನ ಚಿಕ್ಕಚಿಕ್ಕ ತೊಂಗಲುಗಳನ್ನು ಮೆದೆಯ ನುಲಿಗೆ ಕಟ್ಟಿ, ಉದ್ದವಾದ ಒಂದು ತೋರಣವನ್ನು ಮಾಡಿರುತ್ತಾರೆ. ಅದನ್ನು ಊರ ಅಗಸೆಯ ಬಾಗಿಲಲ್ಲಿ ಅಡ್ಡವಾಗಿ ಎತ್ತುಗಳ ಎತ್ತರಕ್ಕೆ ಸರಿಯಾಗಿ ನೋಡಿಕಟ್ಟುವರು. ಕರಿ ಹರಿಯಲು ಗೊತ್ತುಮಾಡಿದ ಒಂದು ಕರಿಯ ಎತ್ತನ್ನೂ ಒಂದು ಬಿಳಿಯ ಎತ್ತನ್ನೂ ವಾದ್ಯವೈಭವಗಳೊಂದಿಗೆ ಮೆರವಣಿಗೆಯಲ್ಲಿ ತಂದು, ಅಗಸೆಯ ಬಳಿಯಲ್ಲಿ ನಿಲ್ಲಿಸುವರು. ಬಳಿಕ ಎರಡೂ ಎತ್ತುಗಳನ್ನೂ ಭರದಿಂದ ಓಡಿಸಿ, ಕಟ್ಟಿದ ತೋರಣವನ್ನು ಹರಿದು ಅವು ಮುಂದೆ ಓಡುವಂತೆ ನೋಡಿಕೊಳ್ಳುವರು. ಇದೇ ಕರಿಹರಿಯುವದರ ಸಂಕೇತ. ಆಗ ಕರಿಯ ಎತ್ತು ಓಡಿ ಮುಂದಾದರೆ ಮುಂಗಾರು ಬೆಳೆ ಚೆನ್ನಾಗಿ ಬರುವುದೆಂದೂ, ಬಿಳಿಯ ಎತ್ತು ಓಡಿ ಮುಂದಾದರೆ, ಹಿಂಗಾರಿ ಬೆಳೆ ಚೆನ್ನಾಗಿ ಬರುವುದೆಂದೂ ಒಕ್ಕಲಿಗರು ಭಾವಿಸುವರು. ಒಮ್ಮೊಮ್ಮೆ ಅವರ ಈ ಭಾವನೆ ಸಾರ್ಥಕವೆನಿಸುವುದೂ ಉಂಟು. ಕರಿ ಹರಿಯುವ ಎತ್ತುಗಳನ್ನು ಯಾರ ಯಾರ ಮನೆಯಿಂದ ತರಬೇಕೆಂಬುದಕ್ಕೆ ಹಳ್ಳಿಗರಲ್ಲಿ ಪರಂಪರೆಯ ನಿಯಮಗಳಿವೆ. ಕಾರಣಾಂತರದಿಂದ ಈ ಬಗೆಯ ನಿಯಮವನ್ನು ಮೀರಿ ನಡೆದಲ್ಲೆಲ್ಲ ಸಾರ್ವಜನಿಕ ಜೀವನದಲ್ಲಿ ವಿರಸಪ್ರಸಂಗ ತಲೆದೋರುವುದೂ ಉಂಟು. ಕೆಲವೊಂದು ಹಳ್ಳಿಗಳಲ್ಲಿ ಈ ಬಗೆಯ ಪ್ರಕರಣಗಳು ನ್ಯಾಯಾಲಯಗಳಿಗೆ ಹೋದ ಉದಾಹರಣೆಗಳೂ ಇವೆ.

ಹುಣ್ಣಿಮೆಯಂತೆಯೇ ಜ್ಯೇಷ್ಠ ವದ್ಯ ಅಮಾವಾಸ್ಯೆಯೂ ಎತ್ತುಗಳ

ಪೂಜೆಗಾಗಿಯೆ ಪ್ರಸಿದ್ಧವಿದೆ. ಆದರೆ ಈ 'ಮಣ್ಣೆತ್ತಿನ ಅಮಾವಾಸ್ಯೆ'ಯಂದು, ಒಕ್ಕಲಿಗರು ತಮ್ಮ ದುಡಿಯುವ ಎತ್ತುಗಳನ್ನು ಪ್ರತ್ಯಕ್ಷವಾಗಿ ಪೂಜಿಸುವುದಿಲ್ಲ. ನಾಗರಿಕರು ಮಾತ್ರ ಅಂದು ಮಣ್ಣಿನಿಂದ ಮಾಡಿದ ಜೋಡೆತ್ತುಗಳನ್ನು, ಮನೆಯಲ್ಲಿ ಹಬ್ಬಮಾಡಿ ಪೂಜಿಸುತ್ತಾರೆ. ಪಂಚಾಂಗಗಳಲ್ಲಿ ಇದನ್ನು 'ಮೃತ್ತಿಕಾವೃಷಭಪೂಜಾ' ಎಂದು ಸಂಸ್ಕೃತದಲ್ಲಿ ಬರೆದಿರುವುದಾದರೂ, ಈ ಮಣ್ಣೆತ್ತಿನ ಪೂಜೆ ಜಾನಪದ ಸಂಪ್ರದಾಯವೇ ಹೊರತು, ಇದಕ್ಕೆ ಪೌರಾಣಿಕೆ ಪ್ರಮಾಣಗಳಾವುವೂ ಸಿಕ್ಕುವುದಿಲ್ಲ.

ಇದುವರೆಗೆ ಜ್ಯೇಷ್ಠಮಾಸದೊಂದಿಗೆ ಸಂಬಂಧಿಸಿರುವ ಜಾನಪದ ಸಂಸ್ಕೃತಿ–ಸಂಪ್ರದಾಯಗಳನ್ನು ಕುರಿತೇ ವಿವರಿಸಿದುದಾಯಿತು. ಇನ್ನು ಪೌರಾಣಿಕ ಸಂಸ್ಕೃತಿಯ ಸಂಬಂಧ ಜ್ಯೇಷ್ಠಮಾಸದ ಯಾವಯಾವ ದಿನಗಳಿಗೆ ಬರುವುದೆಂಬುದರ ಬಗೆಗೆ ವಿಚಾರಮಾಡೋಣ.

**ಭಾಗೀರಥಿಯ ಜಯಂತಿ**

ಜ್ಯೇಷ್ಠಶುದ್ಧ ದಶಮಿಯು ಭಾಗೀರಥಿಯ ಜಯಂತಿ ದಿನವಾಗಿದ್ದು 'ದಶಾಹರ' ಎಂಬ ಹೆಸರಿನಿಂದ ಇದು, ಸಾಂಪ್ರದಾಯಿಕ ಸಮಾಜದಲ್ಲಿ ಸುಪರಿಚಿತವಾಗಿರುವುದು. ಕೆಲಕೆಲವು ಮನೆತನಗಳಲ್ಲಿ ಜ್ಯೇಷ್ಠಶುದ್ಧ ಪ್ರತಿಪದೆಯಿಂದ ದಶಮಿಯವರೆಗೆ ಭಾಗೀರಥಿದೇವಿಯ ನವರಾತ್ರೋತ್ಸವವು ನಡೆಯುವುದು. ತ್ರೇತಾಯುಗದಲ್ಲಿ ಸೂರ್ಯವಂಶದ ದೊರೆ ಭಗೀರಥನು, ಪತಿತರಾದ ತನ್ನ ಪೂರ್ವಜರ ಉದ್ಧಾರಕ್ಕಾಗಿ, ತಪಸ್ಸುಮಾಡಿ ಸ್ವರ್ಗದ ಗಂಗೆಯನ್ನು ಭೂಮಿಗೆ ಕರೆದುತಂದ ಕಥೆಯು ರಾಮಾಣಯ, ಮಹಾಭಾರತ ಮೊದಲಾದ ಪುರಾಣಗ್ರಂಥಗಳಲ್ಲಿ ಬಂದಿರುವುದು. ಭಗೀರಥರಾಜನ ಪ್ರಯತ್ನದಿಂದ ಭೂಮಿಗಿಳಿದ ಸ್ವರ್ಗಂಗೆಯು, ಭಾಗೀರಥಿಯೆಂಬ ಹೆಸರನ್ನು ಪಡೆದು, ಲೋಕಪಾವನವಾದ ಮಹಾನದಿಯಾಗಿ, ಉತ್ತರಭಾರತದಲ್ಲಿ ಪ್ರವಹಿಸುತ್ತಿದ್ದಾಳೆ. ಸನಾತನ ಧರ್ಮೀಯರಿಗೆಲ್ಲ ಭಾಗೀರಥಿಯೆಂದರೆ, ಪವಿತ್ರ ತೀರ್ಥದೈವತವೆಂದು ನಂಬಿಕೆಯಿದೆ. ಆದುದರಿಂದಲೇ ಭಗೀರಥನು ಸ್ವರ್ಗಂಗೆಯನ್ನು ಭೂಮಿಗೆ ಇಳುಹಿದ ದಿನವನ್ನು, ಭಾಗೀರಥಿಯ ಜಯಂತಿಯೆಂದು ಅದನ್ನು ಪರಿಗಣಿಸಲಾಗುವುದು. ದಶಾಹರದಂದು ಭಾಗೀರಥಿಯ ಪೂಜೆ, ಪ್ರಾರ್ಥನೆ, ಉಪವಾಸ, ಪಾರಣೆಗಳನ್ನು ಭಾವುಕರೆಲ್ಲರೂ ಆಚರಿಸುವರು, ಸುಮಂಗಲೆಯರಿಗಂತೂ ಪೂಜೆ–ದಾನಧರ್ಮಗಳಿಗಾಗಿ ದೊಡ್ಡ ಹಬ್ಬವಿದು.

**ವಟಸಾವಿತ್ರಿಯ ಪೂಜೆ**

ಜ್ಯೇಷ್ಠಶುದ್ಧ ಚತುರ್ಥಿಯು ಉಮಾದೇವಿ ಅವತರಿಸಿದ ದಿನವು. ಅಂದು



ಕೆಲವು ಮನೆತನಗಳಲ್ಲಿ ಉಮಾದೇವಿಯಪೂಜೆ–ಸಮಾರಾಧನೆಗಳು ನಡೆಯುತ್ತವೆ. ಜ್ಯೇಷ್ಠಶದ್ಧ ಪೌರ್ಣಿಮೆಗೆ ಪೌರಾಣಿಕಮಹತ್ತ್ವವೂ ಇದೆ. ಅಂದು ನಮ್ಮ ನಾಡಿನ ಸನಾತನ ಕುಟುಂಬಗಳಲ್ಲಿಯ ಸುಮಂಗಳೆಯರು 'ವಟಸಾವಿತ್ರಿಯ' ಪೂಜೆ–ವ್ರತಗಳನ್ನು ಮಾಡುವರು. ವಟಸಾವಿತ್ರಿದೇವಿಯ ಪ್ರತೀಕವೆಂದು ಆ ದಿನ ಆಲದಮರವನ್ನು ಪೂಜಿಸುವ ಪದ್ಧತಿಯೂ ಇದೆ. ಈ ಸಾವಿತ್ರಿ ವೈದಿಕದೇವತೆಯಲ್ಲ. ಪುರಾಣದಲ್ಲಿ ಕಂಡುಬರುವ ಒಬ್ಬ ಪತಿವ್ರತೆಯಾದ ಮಹಿಳೆ. ಮದ್ರದೇಶದ ರಾಜಕನ್ಯೆಯಾದ ಸಾವಿತ್ರಿಯು, ಅಲ್ಪಾಯುವೂ ದೇಶಭ್ರಷ್ಟ ರಾಜಪುತ್ರನೂ ಎಂದು ಮೊದಲೇ ಗೊತ್ತಾದರೂ, ಮನವಾರೆ ಮೆಚ್ಚಿ ತಾನು ವರಿಸಿದ ಸತ್ಯವಾನನನ್ನು ಮದುವೆ ಮಾಡಿಕೊಳ್ಳುತ್ತಾಳೆ. ತಾಯಿ–ತಂದೆಗಳು ಬೇಡವೆಂದು ಎಷ್ಟೊಂದು ಅಂಗಲಾಚಿದರೂ ಆಕೆ ತನ್ನ ದೃಢನಿಶ್ಚಯದಿಂದ ಚ್ಯುತಳಾಗುವುದಿಲ್ಲ. ಮದುವೆಯಾದ ಮೇಲೆ ವನವಾಸಿನಿಯಾಗಿ, ಸತೀಧರ್ಮವನ್ನು ಊಣಯವಿಲ್ಲದಂತೆ ಪಾಲಿಸುತ್ತಾಳೆ. ಕೊನೆಗೆ ಸಾವಿತ್ರಿ ತನ್ನ ಪತಿನಿಷ್ಠೆಯನ್ನು ಪರೀಕ್ಷೆಗೆ ಹಚ್ಚಿ ಗಂಡನ ಜೀವವನ್ನು ಕೊಂಡೊಯ್ದ ಯಮನನ್ನು ಬೆಂಬತ್ತಿಹೋಗಿ, ಪತಿಯ ಪ್ರಾಣಗಳನ್ನು ಮರಳಿ ಪಡೆಯುತ್ತಾಳೆ; ಹುಟ್ಟಿದ ಮನೆ ಕೊಟ್ಟ ಮನೆಗಳೆರಡರ ಉದ್ಧಾರಕ್ಕೂ ಕಾರಣಳಾಗುತ್ತಾಳೆ. ಭಾರತ ನಾರಿಯರ ಆದರ್ಶದ ಪ್ರತೀಕವಾಗಿದ್ದಾಳೆ ಈ ಪುರಾಣಕಾಲದ ಮಾನವಿ! ಎಂತಲೇ ಜ್ಯೇಷ್ಠಶುದ್ಧ ಪೌರ್ಣಿಮೆಯು 'ವಟಸಾವಿತ್ರೀ ಪೌರ್ಣಿಮೆ'ಯಾಗಿ ನಿಂತಿದೆ. ಭಾರತದ ನಾರೀವೃಂದವೆಲ್ಲವೂ ಸಾವಿತ್ರಿಯನ್ನು ಭಕ್ತಿಯಿಂದ ಪೂಜಿಸಿ, ತನ್ನ ಗೌರವವನ್ನು ಮೊದಲಿನಿಂದಲೂ ಸಲ್ಲಿಸುತ್ತ ಬಂದಿರುವುದು. ಜ್ಯೇಷ್ಠವದ್ಯ ಏಕಾದಶಿಯು ನಮ್ಮ ಸಾಂಪ್ರದಾಯಿಕ ಸಮಾಜದಲ್ಲಿ 'ಸರಿಬರುವ ಏಕಾದಶಿ' 'ಡಂಗುರದ ಏಕಾದಶಿ' ಎಂಬ ಹೆಸರಿನಿಂದ ಸುಪರಿಚಿತವಾಗಿದೆ. ಬರಲಿರುವ ಚಾತುರ್ಮಾಸದಲ್ಲಿ ಏಕಾದಶಿಯ ವ್ರತವನ್ನು ಮಾಡುವವರಿಗೆ, ಇದು ಮುನ್ನೆಚ್ಚರಿಕೆಯನ್ನು ಕೊಡುವುದೆಂಬ ನಂಬುಗೆ ನಮ್ಮ ನಾಡಿಗರಲ್ಲಿದೆ. ಚಾತುರ್ಮಾಸದಲ್ಲಿ ಏಕಾದಶಿಯ ವ್ರತವನ್ನು ನಡೆಯಿಸಬೇಕೆನ್ನುವ ಭಾವುಕರು, ಈ ಡಂಗುರದ ಏಕಾದಶಿಯಿಂದಲೇ ವ್ರತವನ್ನು ಪ್ರಾರಂಭಿಸುತ್ತಾರೆ.

ಐತಿಹಾಸಿಕ ದೃಷ್ಟಿಯಿಂದ ನೋಡಿದರೆ, ನಮ್ಮ ನಾಡಿನ ಒಬ್ಬ ಮಹಾಪುರುಷರ ಪುಣ್ಯತಿಥಿಯು ಜ್ಯೇಷ್ಠಮಾಸದಲ್ಲಿದ್ದುದು ಕಾಣುವುದು. ವಿಜಯನಗರ ಸಾಮ್ರಾಜ್ಯಕ್ಕೆ ಮೂಲಕಾರಣರಾಗಿ, 'ಕರ್ನಾಟಕರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದನ್ನು ಹೊಗಳಿಸಿಕೊಂಡಿರುವ ಶ್ರೀ ವಿದ್ಯಾರಣ್ಯರ ಪುಣ್ಯತಿಥಿಯನ್ನು ರಾಷ್ಟ್ರೀಯ ಭಾವನೆಯಿಂದ ಆಚರಿಸುವ ಸಂಪ್ರದಾಯವು

ನಮ್ಮ ನಾಡಿನಲ್ಲಿ ಇತ್ತೀಚೆಗೆ ಬೆಳೆದುಬಂದಿದೆ.

ಶುಭಕಾರ್ಯಗಳಿಗೆ ಜ್ಯೇಷ್ಠಮಾಸವು ಸುಯೋಗ್ಯವಾದುದು. ಎಂತಲೇ ಈ ಮಾಸ ಅನೇಕ ನವವಧೂ–ವರರ ಕೈ–ಕೈಗಳನ್ನು ಹಿಡಿಸಿ, ಮಂಗಲ ಸೂತ್ರವನ್ನು ಬಂಧಿಸುತ್ತದೆ. ಅದೆಷ್ಟು ಜನ ಪ್ರಣಯಿ–ಪ್ರಣಯಿನಿಗಳು ಈ ಮಾಸವನ್ನು ಕೊಂಡಾಡಿ ಕೊನೆಯುವರೋ!

* * *



## ೪. ಅನ್ನದೇವಿಯ ಆರಾಧನಾಕಾಲ ಆಷಾಢಮಾಸ

ಚಾಂದ್ರವತ್ಸರದಲ್ಲಿ ಆಷಾಢವು ನಾಲ್ಕನೆಯ ತಿಂಗಳು. ಪೂರ್ವಾಷಾಢ–ಉತ್ತರಾಷಾಢಾ ನಕ್ಷತ್ರಗಳು ಈ ತಿಂಗಳಲ್ಲಿ ರಾತ್ರಿಯನ್ನು ನಡೆಯಿಸುವುವಾದುದರಿಂದಲೇ, ಈ ನಾಲ್ಕನೆಯ ಚಾಂದ್ರಮಾಸಕ್ಕೆ ಆಷಾಢಮಾಸವೆಂದು ಹೆಸರುಬಂದಿದೆ. ಸೌರವತ್ಸದ ಕರ್ಕಮಾಸಾರಂಭವು ಈ ತಿಂಗಳಲ್ಲಿಯೆ ಆಗುತ್ತಿರುವುದು. ಕರ್ಕಮಾಸಾರಂಭದ ದಿನವು 'ಕರ್ಕಸಂಕ್ರಮಣ' ಎಂಬ ಹೆಸರಿನಿಂದ ವಿಶಿಷ್ಟ ಪರ್ವದಿನವಾಗಿ ಸನಾತನ ಸಂಪ್ರದಾಯದವರಿಂದ ಆಚರಿಸಿಕೊಳ್ಳುತ್ತದೆ. ಮಕರ ಸಂಕ್ರಮಣವು ಸೂರ್ಯನ ಉತ್ತರಾಯಣ ಕಾಲದ ಪ್ರಾರಂಭದಿನವಾಗಿರುವಂತೆ, ಕರ್ಕಸಂಕ್ರಮಣವು ದಕ್ಷಿಣಾಯನ ಕಾಲದ ಪ್ರಾರಂಭ ದಿನವಾಗಿದೆ. ಆದುದರಿಂದ ಅಂದು ದಕ್ಷಿಣಾಯನ ಪರ್ವಕಾಲ ಪಾಲನೆಗಾಗಿ ಸಾಂಪ್ರಸದಾಯಿಕರು, ಸರ್ವಸ್ನಾನ ಪೂಜೆ ಪ್ರಸಾದಗಳನ್ನು ವಿಶಿಷ್ಟರೀತಿಯಲ್ಲಿ ನಡೆಯಿಸುವುದುಂಟು.

**ಪುಣ್ಯನದೀ ತಪತೀ**

ಆಷಾಢಮಾಸದಲ್ಲಿಯೂ ನಿತ್ಯಪ್ರಾತಃಸ್ನಾನವನ್ನು ವಿಧಿಸಲಾಗಿದೆ. ಸ್ಕಾಂದಪುರಾಣದಲ್ಲಿ ನಿರೂಪಿತವಾಗಿರುವ 'ಆಷಾಢಮಾಸ ಮಾಹಾತ್ಮ್ಯ'ದಲ್ಲಿ ತಪತೀ (ತಾಪೀ) ನದಿಯ ಸ್ನಾನವು ವಿಶಿಷ್ಟ ಪುಣ್ಯಕಾರಿಯೆಂದು, ಅನೇಕ ಪುರಾಣಕಥೆಗಳೊಂದಿಗೆ ವಿವರಿಸಲಾಗಿದೆ. ಆಷಾಢಮಾಸದಲ್ಲಿ ಎಲ್ಲ ನದೀನಾರಿಯರೂ ರಜಸ್ವಲಾದೋಷಪೂರಿತರಾಗಿರುವರೆಂದೂ, ಸೂರ್ಯಪುತ್ರಿಯಾದ ತಪತೀನದಿಯು ಮಾತ್ರ ಈ ದೋಷದಿಂದ ದೂರಳಾದವಳೆಂದೂ ಸ್ಕಾಂದಪುರಾಣವು ತುಂಬ ಅಧಿಕಾರವಾಣಿಯಿಂದ ಹೇಳಿರುತ್ತದೆ. ತಪತೀನದಿಯ ಜನ್ಮವು ಆಷಾಢಮಾಸದಲ್ಲಿ! ಸೂರ್ಯಪುತ್ರಿ ತಪತಿಯ ಕಥೆಯು, ಮಹಾಭಾರತದ ಆದಿಪರ್ವದಲ್ಲಿ ಬರುವುದು. ಚಂದ್ರವಂಶದ ಸಂವರಣರಾಜನನ್ನು ಈ ತಪತೀದೇವಿ ಮೆಚ್ಚಿ ಮದುವೆಮಾಡಿಕೊಳ್ಳುವಳು. ಕೌರವವಂಶದ ಆರಂಭ ಪುರುಷ ಕುರುರಾಜನು, ಈ ತಪತೀ–ಸಂವರಣರ ಸಾಕ್ಷಾತ್‌ಪುತ್ರ. ಕುರುಮಾತೆ ತಪತಿಯೇ ಲೋಕಕಲ್ಯಾಣದ

ಅಪೇಕ್ಷೆಯಿಂದ ಪವಿತ್ರನದಿಯಾಗಿ ಗುರ್ಜರ ಭೂಪ್ರದೇಶದಲ್ಲಿ ಹರಿದು, ಸಾಗರರಾಜನನ್ನು ಸೇರುತ್ತಾಳೆ. ಪುರಾಣಕಾಲದ "ತಪತೀ" ಎಂಬ ಹೆಸರು, ಬರುಬರುತ್ತ ''ತಾಪೀ'' ಎಂಬ ಹೆಸರಿನಿಂದ ಹುದುಗಿಸಿಕೊಂಡಿದೆ. ಆಷಾಢಸ್ನಾನಕ್ಕಾಗಿ ತಾಪೀನದಿಯ ಯಾತ್ರೆಯನ್ನು ಕೈಕೊಳ್ಳುವ ಶ್ರದ್ಧಾವಂತರು ಭಾರತದೇಶದಲ್ಲಿ ಅನೇಕ ಜನರಿರಬಹುದು.

ಕೃಚ್ಛ್ರ, ಚಾಂದ್ರಾಯಣ ಮೊದಲಾದ ದೇಹದಂಡನೋದ್ದೇಶದ ಕಠಿಣವ್ರತಗಳಿಗೂ ವಿವಿಧ ದೇವ–ದೇವತೆಗಳ ಪೂಜೆಗಳಿಗೂ ಕಾದಿಟ್ಟ ಕಾಲದಂತಿರುವ "ಚಾತುರ್ಮಾಸ" "ಪ್ರಾರಂಭವಾಗುವುದು ಆಷಾಢಶುದ್ಧ ಏಕಾದಶಿಯಿಂದಲೇ" ಇದಕ್ಕೆ "ಶಯನೀ ಏಕಾದಶಿ" ಎಂದು ಹೆಸರಿದೆ. ಇಂದಿನಿಂದ ಮೊದಲುಮಾಡಿ ನಾಲ್ಕುತಿಂಗಳ ಕಾಲ, ಪರಮಾತ್ಮನು ಮಲಗಿನಿದ್ರಿಸುವನೆಂಬ ಶ್ರದ್ಧೆ ಪುರಾಣಸಂಪ್ರದಾಯಿಗಳಲ್ಲಿದೆ, ಮರುದಿನ ದ್ವಾದಶಿಯಿಂದಲೂ "ಶಾಕವ್ರತ" ಪ್ರಾರಂಭವಾಗುವುದು; ಇಂದಿನಿಂದ ಮುಂದೆ ಒಂದು ತಿಂಗಳವರೆಗೆ ಎಲ್ಲ ಬಗೆಯ ಶಾಕಗಳೂ–ಪಲ್ಲೆಯ ಕಾಯಿಗಳೂ ಮಸಾಲೆಯ ಪದಾರ್ಥಗಳೂ ನಿಷಿದ್ಧವಾಗಿರುವುವು. ವ್ರತ ಮಾಡುವವರೆಲ್ಲರೂ ಸಪ್ಪನೆಯ ಪದಾರ್ಥಗಳನ್ನೇ ಊಟಕ್ಕೆ ಸ್ವೀಕರಿಸಬೇಕಾಗುವುದು.

ಚಾತುರ್ಮಾಸದಲ್ಲಿ ಈರುಳ್ಳಿಯನ್ನು ತಿನ್ನಲಿಕ್ಕೆ ಸಾಧ್ಯವಾಗದೆಂದು, ಕರ್ನಾಟಕದ ಉತ್ತರಗಡಿಯ ಕೆಲವು ಸಂಪ್ರದಾಯವಂತರ ಮನೆತನಗಳಲ್ಲಿ, ಆಷಾಢಶುದ್ಧ ನವಮಿಯ ದಿನ ಈರುಳ್ಳಿಯನ್ನು ಬೆರಸಿದ ವಿವಿಧ ಪ್ರಕಾರದ ಅಡಿಗೆಗಳನ್ನು ಮಾಡಿ, ಅದನ್ನೇ ಮನಃಪೂರ್ತಿಯಾಗಿ ಊಟಮಾಡಲಾಗುವುದು. ಈ "ಕಾಂದೇನವಮಿ"ಯ ರೂಢಿಯು ಮಹಾರಾಷ್ಟ್ರದಿಂದ ಬಂದುದಾಗಿದೆ. ದಕ್ಷಿಣಕ್ಕೆ ಬಂದಂತೆಲ್ಲ ಈರುಳ್ಳಿಯ ಪಕ್ವಾನ್ನದ ಹಬ್ಬವು ಕಣ್ಮರೆಯಾದಂತೆ ಕಾಣುವುದು; ಆದರೂ ಈ ನಾಡಿನಲ್ಲಿ ವಾಸಿಸುವ ಮಹಾರಾಷ್ಟ್ರೀಯ ಕುಟುಂಬಗಳಲ್ಲಿ ಈ "ಕಾಂದೇನವಮಿ" ತನ್ನ ಮುಖ ತೋರಿಸುತ್ತಿರುವುದು.

ಪಂಢರಪುರದ ವಿಟ್ಠಲದೇವರ ಭಕ್ತಪರಂಪರೆಗೆ ಆಷಾಢಶುದ್ಧ ಏಕಾದಶಿಯು ತುಂಬ ಮಹತ್ತ್ವದ ದಿನ. ಪಂಢರಪುರದಲ್ಲಿ ಆಗ ಆಷಾಢೀ ಜಾತ್ರೆ ಕೂಡಿರುವುದು. ನಮ್ಮ ನಾಡಿನಲ್ಲಿರುವ "ವಾರಕರಿ" ಸಂಪ್ರದಾಯದ ವಿಟ್ಠಲಭಕ್ತರು, ಪಂಢಪುರದ ಯಾತ್ರೆಯನ್ನು ಕೈಕೊಳ್ಳುವರು. ಯತ್ರೆಮಾಡಲು ಸಾಧ್ಯವಿಲ್ಲದವರು ತಮ್ಮೂರ ವಿಟ್ಠಲಮಂದಿರದಲ್ಲಿ ಮಂದಿರವಿಲ್ಲದಿದ್ದರೆ ತಮ್ಮತಮ್ಮ ಮನೆಗಳಲ್ಲಿಯೇ ಶ್ರೀವಿಟ್ಠಲನ ಭಜನೆ ಪೂಜೆಗಳನ್ನು ನಡೆಸುವರು. ಶ್ರೀವಿಟ್ಠಲನು ಕುಲದೈವತವಾಗಿರುವ ಹಲವಾರು



ಮನೆತನಗಳಲ್ಲಿ ಶ್ರೀವಿಟ್ಠಲನ ನವರಾತ್ರೋತ್ಸವವು ನಡೆಯುವುದು. ಈ ಆಷಾಢೋತ್ಸವದ ಕೊನೆಯ ಭಾಗವಾಗಿ "ಗೋಪಾಳಕಾಲುವೆ"ಯ ಕಾರ್ಯಕ್ರಮ ನಡೆಯುವುದು. ಉತ್ಸವಮಂಟಪದ ಮಧ್ಯೆ, ಮೇಲೆ ಕಟ್ಟಿದ ನೆಲುವಿನ ಮೇಲೆ ಮೊಸರ ಗಡಿಗೆಯನ್ನಿಟ್ಟು, ಕಡಗೋಲಿನಿಂದ ಅದನ್ನು ಒಡೆಯಲಾಗುವುದು. ಇದು ಶ್ರೀಕೃಷ್ಣನು ಗೋಕುಲದಲ್ಲಿದ್ದಾಗ ಆಡಿದ ಬಾಲಲೀಲೆಯ ಆಟದ ದ್ಯೋತಕವಾಗಿರುವುದು. ವಿಟ್ಠಲನೆಂದರೆ ಶ್ರೀಕೃಷ್ಣಾವತಾರದ ಒಂದು ಲೀಲಾಮೂರ್ತಿಯೆ ಅಲ್ಲವೆ? ಎಂತಲೇ ವಿಟ್ಠಲಭಕ್ತರಾದ ಸಂತರೂ ಹರಿದಾಸರೂ ವಿಟ್ಠಲನ ಲೀಲೆಗಳನ್ನಾಗಿ ಶ್ರೀಕೃಷ್ಣನ ಲೀಲಾಮಾಲೆಗಳನ್ನೇ ಹಾಡಿಹೊಗಳಿದ್ದಾರೆ.

**ಕಡಲೆಗಡಬ ಹುಣ್ಣಿಮೆ**

ಆಷಾಢಶುದ್ಧ ಪೌರ್ಣಿಮೆಯನ್ನು "ಕಡಲೆಗಡಬ ಹುಣ್ಣಿಮೆ" ಎಂಬ ಹೆಸರಿನಿಂದ ಕರೆಯುವುದು ಉತ್ತರ ಕರ್ನಾಟಕದಲ್ಲೆಲ್ಲ ರೂಢವಾಗಿದೆ. ಸಂಶೋಧಕಬುದ್ಧಿಯಿಂದ ನೋಡುವವರಿಗೆ, ಕಡಲೆಯ ಕಡುಬಿಗೂ ಈ ಹುಣ್ಣಿವೆಗೂ ಯಾವುದೇ ಬಗೆಯ, ಹತ್ತಿರದ ಸಂಬಂಧವಿದ್ದಂತೆ ತೋರುವುದಿಲ್ಲ. ಯಾರ ಮನೆಯಲ್ಲಿಯೂ ಇಂದು ಕಡಲೆಯ ಕಡುಬನ್ನು ಮಾಡುವ ಸಂಪ್ರದಾಯವಿದ್ದಂತಿಲ್ಲ. ಆದುದರಿಂದ "ಕಡಲೆಗಡುಬಿನ ಹುಣ್ಣಿಮೆ" ಎಂಬುದು ಇನ್ನಾವುದೋ ನಾಮಪದದ ಅಪಭ್ರಂಶ ರೂಪವಿರಬಹುದೆಂದು ತೋರುವುದು. ಹಾಗಿದ್ದರೆ ಇದು ಯಾವುದರ ಅಪಭ್ರಂಶ ರೂಪ?

ತುಳು ಭಾಷೆಯಲ್ಲಿ ಈ ತಿಂಗಳಿಗೆ "ಕೋಡಿತಿಲ್" ಎಂದು ಹೆಸರಿದೆ. ಕಾರ್‌ತಿಲ್ ಎಂದು ಜ್ಯೇಷ್ಠಮಾಸಕ್ಕೆ ಹೆಸರಿರುವಂತೆ! ಈ "ಕೋಡಿತಿಲ್" ಎಂಬುದೂ ನೀರಿನಪ್ರವಾಹ ಸೂಚಕವಾಗಿರುವುದು. ತುಳು ಭಾಷೆಯಲ್ಲಿ ಹೇಳಬೇಕೆಂದರೆ, ಈ ಹುಣ್ಣಿಮೆಯನ್ನು "ಕೋಡಿಹುಣ್ಣಿಮೆ" ಎಂದು ಹೇಳಬಹುದು. ಮಳೆಗಾಲದಲ್ಲಿ ಪ್ರವಹಿಸುವ ನೀರು, ಹೊಳೆಗಳ ಮೂಲಕ ಹರಿದುಹೋಗಿ ಕಡಲನ್ನು ಕೂಡಿ, ಅದಕ್ಕೆ ಕೋಡಿಗಳು ಒಡೆದಂತೆ ಕಾಣುವುದು. ಈ ನೈಸರ್ಗಿಕ ಕಾರ್ಯವು ಆಷಾಢಪೌರ್ಣಿಮೆಯ ಸುಮಾರಿಗೇ ನಡೆಯುವುದರಿಂದ, ಈ ಪೌರ್ಣಿಮೆಗೆ "ಕಡಲಕೋಡಿ ಹುಣ್ಣಿಮೆ" ಎಂದು ಸಾರ್ಥನಾಮ ಬಿದ್ದಿರಬಹುದು. ಅದು ಜನರ ಬಾಯಲ್ಲಿ ವಿಕೃತಿಹೊಂದಿ 'ಕಡಲೆಗಡಬಿನ ಹುಣ್ಣಿಮೆ'ಯೆಂದಾಗಿರಬಹುದು. ಪೀಠಾಧಿಪತಿಗಳಾದ ಸಂನ್ಯಾಸಿಗಳು, ಚಾತುರ್ಮಾಸಕ್ಕಾಗಿ ಒಂದು ಎಡೆಯನ್ನು ಹಿಡಿದು ನಿಯಮಕ್ಕೆ ಕುಳಿತುಕೊಳ್ಳುವುದು ಇದೇ ಹುಣ್ಣಿಮೆಯಿಂದಲೇ.

ರೂಢಿಯ ತಿಳಿವಳಿಕೆಯಂತೆ ಆಷಾಢಮಾಸವು ಗ್ರೀಷ್ಮಋತುವಿನ ಉತ್ತರಾರ್ಧವೆನಿಸಿಕೊಳ್ಳುವುದು; ಆದರೆ ಕನ್ನಡ ನಾಡಿನ ಆಷಾಢಮಾಸದಲ್ಲಿ ಗ್ರೀಷ್ಮದ ಬಿರುಬಿಸಿಲಿನ ಮುಖವೇ ಇರುವುದಿಲ್ಲ. ಆಗಸವೆಲ್ಲ ಜಡಿಮೋಡಗಳ ತೆರೆಯಿಂದ ಆಚ್ಛಾದಿತವಾಗಿರುವುದು. ಪಶ್ಚಿಮದ ತಂಗಾಳಿ ಸುಯ್ಯೆಂದು ಬೀಸುತ್ತಿರುವುದು. ಒಂದೊಂದು ದಿನ ಸೂರ್ಯನ ದರ್ಶನಕ್ಕೂ ಆಸ್ಪದವಿರುವುದಿಲ್ಲ. ಕವಿಕುಲಗುರುವಾದ ಕಾಳಿದಾಸನು, ತಾನು ನಿರ್ಮಿಸಿದ ಯಕ್ಷನ ಪಾತ್ರಕ್ಕೆ, ಆಷಾಢದ ನಿಸರ್ಗಾಭ್ಯಾಸಿಯಾದ ಕವಿ ಕಾಳಿದಾಸನೂ ಆಷಾಢಮಾಸದಲ್ಲಿಯೇ ಮೇಘವನ್ನು ಕಂಡು ಬಣ್ಣಿಸಿರುವನೆಂದಮೇಲೆ, ಈ ಮಾಸವು ಗ್ರೀಷ್ಮಋತುವಿನ ಭಾಗವೆಂದು, ಪ್ರತ್ಯಕ್ಷಪ್ರಮಾಣವನ್ನು ಕಾಣುವ ನಾವು ಹೇಗೆ ಒಪ್ಪಬೇಕು?

**ಅನ್ನದೇವತೆಯ ಆರಾಧನೆ**

ಅಲ್ಲದೆ 'ಆಷಾಢದ ಮಳಿಗಾಳಿ ಬೀಸಿಬೀಸಿ ಬಡಿಯುವಾಗ, ಹೇಸಿ ನನ್ನ ಜೀವ ಹೆಣ್ಣಾಗಿ ಆದರೂ ಹುಟ್ಟಬಾರದಿತ್ತೇ?' ಎಂಬುದು ನಮ್ಮ ಜನಪದದ ಅನುಭವವಾಣಿ! ಆಷಾಢಮಾಸದ ಮಳೆ-ತಂಗಾಳಿಗಳಲ್ಲಿ ನಮ್ಮ ಒಕ್ಕಲಿಗ, ಬೆಳಗಿನಿಂದ ಸಂಜೆಯವರೆಗೂ ಹೊಲದಲ್ಲಿ, ಬಿತ್ತಿಗೆ ಬೆಳೆಸಾಲುಗಳಿಗಾಗಿ, ಆ ಋತುಮಾನದ ಕಷ್ಟ-ಕ್ಲೇಶಗಳನ್ನು ಸಹಿಸುತ್ತ ದುಡಿಯಬೇಕಾಗುವುದು. ಮೇಲೆ ಹೇಳಿದ ನಾಡನುಡಿ, ಅಂತಹ ದುಡಿಮೆಗಾರ ಒಕ್ಕಲಿಗರ ತಾಳ್ಮೆಯ ಗಡಿಯನ್ನು ದಾಟಿ ಹೊರಟ ಬಿಸುಸುಯಿಲ ನುಡಿಯಾಗಿದೆ. ಅಷಾಢದಲ್ಲಿ ಒಕ್ಕಲಿತಿಯರಿಗೆ ಹೊಲದಲ್ಲಿ ಹೆಚ್ಚಿನ ಕೆಲಸ-ಕಜ್ಜಗಳಿರುವುದಿಲ್ಲ. ಆಗ ಅವರು ಮನೆಯಲ್ಲಿ ಒಲೆಯ ಮುಂದೆ ಕುಳಿತು ಚಳಿಯನ್ನು ಕಾಯಿಸುತ್ತ, ಬಿಸಿಬಿಸಿ ಗುಗ್ಗರಿ-ಹುಗ್ಗಿಗಳನ್ನು ಬಾಯಾಡಿಸುತ್ತಿರುವರು. ಹೊಲದಲ್ಲಿ ದುಡಿಯುವ ಒಕ್ಕಲಿಗರು, ಕರುಳನ್ನು ಕೊರೆಯುವ ಚಳಿಗಾಳಿಯನ್ನು ನಿವಾರಿಸುವುದಕ್ಕೆ ಮಾರ್ಗಕಾಣದೆ, ಗಡಗಡ ನಡುಗುತ್ತಿರುವರು. ಆಷಾಢದಲ್ಲಿಯ ಹಗಲುಗಳು ೧೩ ತಾಸಿನವು. ಅಷ್ಟುಕಾಲವೂ ಅವನು ಚಳಿ-ಮಳೆಗಳಲ್ಲಿ ಕೆಲಸ ಮಾಡುತ್ತಿರಲೇಬೇಕು. ಈ ಕೆಲಸವೆಂದರೆ ಅನ್ನದೇವತೆಯ ಆರಾಧನಾಕಾರ್ಯ. ಆಕೆಯ ಅನುಗ್ರಹದಿಂದಲೇ ಒಕ್ಕಲಿಗ ತಾನೂ ಬಾಳುವನು; ಬೇರೆಯವರನ್ನೂ ಬಾಳಿಸುವನು. ಎಂತಲೇ ಆಷಾಢಮಾಸವನ್ನು ಅನ್ನದೇತೆಯ ಆರಾಧನಾಕಾಲವೆಂದು ಹೇಳಿರುವುದು ಸಂಪೂರ್ಣ ಸತ್ಯವಾಗಿದೆ.

ಆಷಾಢಮಾಸದ ಮಳೆಗಾಲವೆಂಬುದು ಅಸಾಧಾರಣವಾದುದು. ಈ ತಿಂಗಳಲ್ಲಿ ಮಳೆ ಸುರಿಸುವ ಪುನರ್ವಸು-ಪುಷ್ಯ ನಕ್ಷತ್ರಗಳು, 'ಮಲೆನಾಡಿನ



ರೈತರಿಗೆ ಭಾಷೆ ಕೊಟ್ಟ ಮಳೆಗಳು' ಎಂಬ ಲೋಕೋಕ್ತಿಯನ್ನು ಸತ್ಯ ಮಾಡುತ್ತಿರುವುವು. ಬೇಸಗೆಯಲ್ಲಿ ಬತ್ತಿಹೋದ ನದಿಗಳು ಒಡಲು ತುಂಬಿ ಹರಿದು, ಹಿರಿನೆರೆಗಳನ್ನು ಹೊಂದುವುದು ಈ ಮಳೆಗಳ ನೆರವಿನಿಂದಲೇ! ಮಲೆನಾಡಿಗರ ಅನ್ನಧಾನ್ಯದ ಬೆಳೆಯ ಆಗು-ಹೋಗುಗಳು, ಇವೆರಡು ಮಳೆಯ ಆಗು-ಹೋಗುಗಳನ್ನೇ ಅವಲಂಬಿಸಿರುತ್ತವೆ. ಉತ್ತರಕರ್ನಾಟಕದ ಒಕ್ಕಲಿಗರು, ಈ ಮಳೆಗಳನ್ನು 'ಹಿರಿ ಪಿಸ್ಯಾ' 'ಚಿಕ್ಕ ಪಿಸ್ಯಾ' ಎಂಬ ಅಪಭ್ರಂಶನಾಮಗಳಿಂದ ಕರೆಯುವರು. 'ಗಾಳಿ ಪಿಶಾ' 'ಹೆಗ್ಗಣ ಪಿಶಾ' ಎಂಬ ಹೆಸರಿನಿಂದ ಕರೆಯುವವರೂ ಅನೇಕ ಜನರಿದ್ದಾರೆ.

ಆಷಾಢಮಾಸಕ್ಕೆ ಸಂಬಂಧಿಸಿದ ಗಾದೆಯ ಮತುಗಳು, ನಮ್ಮ ನಾಡಿನಲ್ಲಿ ಸಾಕಷ್ಟು ಇವೆ. ಎಲ್ಲವನ್ನೂ ಹೇಳಲಿಕ್ಕೆ ಎಡೆಯೆಲ್ಲಿ? 'ಒಟ್ಟಿದ ಬಣವಿ, ಹಾಕಿದ ಹಗೆ,' ಬಟ್ಟಬರಿದಾಗಿಸೋದು ಆಷಾಢತಿಂಗಳು ಎಂಬುದೊಂದು ಗಾದೆ! ನಿಡುವಗಲಲ್ಲಿ ಎಡೆಬಿಡದೆ ದುಡಿಯುವ ಒಕ್ಕಲಿಗರಿಗೂ ಅವರ ದನಗಳಿಗೂ ಈಗ ಹಸಿವು ಹೆಚ್ಚೆಂಬ ಅನುಭವವನ್ನು ಈ ಗಾದೆ ವ್ಯಕ್ತಪಡಿಸುತ್ತದೆ. 'ಯಾಕ ಅಳತೀ ಹೊಲಿಯಾ ಅಂದರೆ, ಮುಂದ ಬರುವ ಆಷಾಡಕ್ಕಾಗಿ ಎಂದ!' ಎಂಬುದಾಗಿ ಇನ್ನೊಂದು ಗಾದೆಯಿದೆ. ಹಳೆಯ ಸಾಮಾಜಿಕ ಪದ್ಧತಿಯಲ್ಲಿ ಹೊಲೆಯನ ಬಾಳು ಒಕ್ಕಲಿಗನನ್ನೇ ಅವಲಂಬಿಸಿ ಇರುತ್ತಿದ್ದಿತು. ಆಷಾಢದಲ್ಲಿ ಒಕ್ಕಲಿಗನಲ್ಲಿಯ ಕಾಳು-ಕಡಿಗಳೇ ತೀರಿ ಹೋದಾಗ, ಹೊಲೆಯನಿಗೆ ಅವು ಎಲ್ಲಿಂದ ದೊರೆಯಬೇಕು? 'ಹೊಲೆಯನ ಸುಗ್ಗಿ ಒಲೆಯಮೇಲೆ' ಎಂಬ ಗಾದೆ, ಸಂಗ್ರಹರಹಿತವಾದ ಆತನ ಜೀವನದ ರೀತಿಯನ್ನು ಚಿತ್ರಿಸುವುದು. 'ಮೂರು ಆಷಾಢ ಗೆದ್ದ ಕೋಣಗರುವಿಗೆ ಪೂರಾ ಆಯುಸ್ಸು' ಎಂಬ ಮತ್ತೊಂದು ಅನುಭವವಾಣಿಯಿದೆ. ಆಷಾಢದ ತಂಪುಗಾಳಿಗೆ, ಕೋಣಗರುವಿಗೆ ತಲೆ ಬಾತು ಅಸ್ವಾಸ್ಥ್ಯ ತಲೆದೋರುವುದು ಪ್ರತ್ಯಕ್ಷಪ್ರಮಾಣಿತ ವಿಷಯವಾಗಿದೆ. ಎಳೆಯ ಕೋಣಗರುಗಳು ಆಷಾಢದಲ್ಲಿ ಸಾಯುವುದೇ ಹೆಚ್ಚಾಗಿರುವುದು! 'ಅತ್ತೀ ಮನಿಯ ಸೊಸೆ ಆಷಾಢತಿಂಗಳಾ ಕಳೆದ್ಹಾಂಗ' ಎಂಬುದೊಂದು ಜಾನಪದ ಪಡೆನುಡಿಯಿದೆ. ನಾಗರಪಂಚಮಿಗಾಗಿ ತನ್ನನ್ನು ಅಣ್ಣ ಕರೆಯುವ ದಿನ ಎಂದು ಬಂದೀತೋ ಎಂಬ ಆತುರ-ಕಾತರಗಳಲ್ಲಿ ಆ ಸೊಸೆ, ದಿನಗಳಲ್ಲಿ ಹೇಗೋ ನೂಕುತ್ತಿರುವ ವಿಷಯವನ್ನು ಈ ನಡೆನುಡಿ ಚಿತ್ರಿಸುವುದು.

**ಗುಳ್ಳವ್ವ**

ಆಷಾಢದ ಪ್ರತಿಯೊಂದು ಮಂಗಳವಾರವನ್ನೂ ನಮ್ಮ ಜಾನಪದರು

'ಗುಳ್ಳವ್ವನ (ಗುಳಕವ್ವ)' ಹಬ್ಬವನ್ನಾಗಿ ಆಚರಿಸುವರು. ಈ ಹಬ್ಬದ ವಿಜೃಂಭಣೆಯನ್ನು ಪಟ್ಟಣಗಳಿಗಿಂತ ನಮ್ಮ ನಾಡಿನ ಹಳ್ಳಿಗಳಲ್ಲಿ ನೋಡಬೇಕು. 'ಗುಳ್ಳವ್ವ' ಎಂಬುದು ನಮ್ಮ ಜಾನಪದರ ಮುಗ್ಧಭಾವನೆಯಲ್ಲಿ ಉದಯಹೊಂದಿದ ದೇವತೆಯೇ ಹೊರತು, ಇದಕ್ಕೆ ಪುರಾಣಗಳಲ್ಲಿ ಆಧಾರ ಪ್ರಮಾಣಗಳಾವುವೂ ದೊರೆಯುವುದಿಲ್ಲ. ವೃದ್ಧೋಕ್ತಿಯಂತೆ ಇದೊಂದು ಬಗೆಯ ನೆಲದಾಯಿಯ ಪೂಜೆಯಗಿದೆ. ಅನ್ನಧಾನ್ಯಗಳನ್ನು ನಿರ್ಮಿಸಕೊಡಬಲ್ಲ ನೆಲದಾಯಿಯು ಒಕ್ಕಲಿಗರಿಗೆ ಒಂದು ದೇವತೆಯೇ ಸರಿ! ಆ ದೇವತೆಯನ್ನು ಪ್ರತಿನಿಧಿಸುವಂತಹ ನೆಲದ ಮಣ್ಣೇ ಇಲ್ಲಿ 'ಗುಳ್ಳವ್ವ' ಎಂಬ ಹೆಸರಿನ ದೇವತೆಯಾಗಿ ಪೂಜೆಗೊಳ್ಳುವುದು.

ಆಷಾಢದ ಪ್ರತಿಯೊಂದು ಮಂಗಳವಾರದಂದು, ಹೆಣ್ಣುಮಕ್ಕಳು ಗುಂಪು–ಗುಂಪಾಗಿ ಹೋಗಿ, ಹೊಲದಲ್ಲಿಯ ಜಿಗುಟು ಮಣ್ಣನ್ನು ಅಗಿದುತಂದು, ನೀರಿದ್ದೆಡೆಗಳಲ್ಲಿ ಅದನ್ನು ನೆನೆಯಿಸಿ, ಕಿಮುಚಿ ಹದದ ಅರಲನ್ನು ಮಾಡಿ, ಗುಳ್ಳವ್ವನ ಹಾಡುಗಳನ್ನು ಹೇಳುತ್ತ ಮನೆಗೆ ತರುವ ಈ ನೋಟವು ಚಿತ್ತಾಕರ್ಷಕವಾಗಿರುವುದು. ಹಳ್ಳಿಗರ ಮನೆ–ಮನೆಗಳಲ್ಲಿಯೂ ಗುಳ್ಳವ್ವನ ಪೂಜೆ–ಪ್ರಸಾದಗಳು ನಡೆದೇ ನಡೆಯುವುವು; ಆದರೆ ಬೀದಿ–ಬೀದಿಗಳಲ್ಲಿ ಈ ಪೂಜೆ ಸಾಮಾಜಿಕ ರೀತಿಯಲ್ಲಿ ನಡೆಯುತ್ತಿರುವುದು ವಿಶೇಷ ಮಹತ್ತ್ವದ್ದಾಗಿರುವುದು. ಆಷಾಢಮಾಸದ ಈ ಗುಳ್ಳವ್ವನ ಪೂಜೆ, ಪ್ರತಿವರ್ಷವೂ ಹಳ್ಳಿಯ ಜನರಲ್ಲಿ ಪರಸ್ಪರ ವಿಷಯಕವಾದ ದ್ವೇಷ–ಮತ್ಸರಗಳ ದೋಷಗಳನ್ನು ಹೊಡೆದುಹಾಕಿ, ಸ್ನೇಹ–ಪ್ರೀತಿಗಳನ್ನು ಬಿತ್ತಿಬೆಳೆಸುವುದು.

ಬೀದಿಯ ಸಾರ್ವಜನಿಕ ಗುಳ್ಳವ್ವನ ಪೂಜೆಯಲ್ಲಿ ಆ ಬೀದಿಯ ಪ್ರತಿಯೊಂದು ಮನೆಯ ಹೆಣ್ಣುಮಕ್ಕಳೂ ಭಾಗವಹಿಸುವರು. ಹಿರಿಯ ಹೆಣ್ಣುಮಕ್ಕಳೂ ಗಂಡುಸರೂ ಅವರ ಪೂಜಾಕಾರ್ಯಕ್ರಮಕ್ಕೆ ಅವಶ್ಯಕವಾದ ನೆರವನ್ನು ನೀಡುವರು. ಮೊದಮೊದಲು ಮಣ್ಣಿನ ಮುದ್ದೆಯನ್ನೇ ಇರಿಸಿ ಪೂಜಿಸುತ್ತಿರಬಹುದು; ಎಂತಲೇ ಆಕಾರರಹಿತವಾದ ಆ ಮಣ್ಣುಮುದ್ದೆಯನ್ನು 'ಗುಳ್ಳವ್ವ' ಎಂದು ಕರೆದಿರಬಹುದು. ಕುಂಬಾರರು ಮಾಡಕೊಡುತ್ತಿದ್ದ ತಿಗರಿಯ ಗುಳ್ಳವ್ವಗಳು, ಈಗಲೂ ರೂಪ ರಹಿತವಾಗಿಯೇ ಇರುತ್ತವೆ. ಬರುಬರುತ್ತ ನಮ್ಮ ಜಾನಪದ ಕಲಾಭಿರುಚಿಯು, ಗುಳ್ಳವ್ವನನ್ನು ಸಾಕಾರಗೊಳಿಸಿರುವುದೆಂದು ಕಾಣುತ್ತದೆ. ಬೀದಿಯ ಗುಳ್ಳವ್ವನೆಂದರೆ ಏಳು, ಒಂಬತ್ತು ನೆಲೆಯ ಗೋಪುರಾಕೃತಿಯಲ್ಲಿರುವುದು. ಪ್ರತಿಯೊಂದು ನೆಲೆಯೂ ಆಕಾರದ ಔಚಿತ್ಯದಂತೆ ಸಾಲುಬಾಗಿಲುಗಳಿಂದ ಕೂಡಿರುವುದು; ಮೇಲು ನೆಲೆಯ ಒಂದೇ ಬಾಗಿಲ್ವಾಡವು ಶಿಖರದ ರೂಪವನ್ನು ಪಡೆದಿರುವುದು. ಆ ಬಾಗಿಲ್ವಾಡದಲ್ಲಿ



ಮಣ್ಣಿನಿಂದ ಮಾಡಿದ ಬಸವಣ್ಣನ (ಎತ್ತು) ಮೂರ್ತಿಯನ್ನು ಇರಿಸಿರುವರು. ಗೋಪುರದ ಮುಂಬದಿಯ ಮಣ್ಣಿನ ಭಾಗದ ಮೇಲೆಲ್ಲ ಗುಲಗಂಜಿ, ಕುಸುಬೆ, ಬೇಳೆ–ಇವುಗಳನ್ನು ಚುಚ್ಚಿ, ಬಗೆಬಗೆಯ ಸುಳಿವು–ಬಳ್ಳಿಗಳನ್ನು ರಚಿಸಿ ಗುಳ್ಳವ್ವನನ್ನು ಸಿಂಗರಿಸುವರು. ಕಾಡಿನ ಬಣ್ಣ ಬಣ್ಣದ ಹೂಗಳೂ ಈ ಕಲಾರಚನೆಯಲ್ಲಿ ಭಾಗವಹಿಸಿರುವುವು. ತಳಿರುತೋರಣಗಳಿಂದ ಗುಳ್ಳವ್ವನ ಮಂಟಪ ಅಲಂಕೃತವಾಗಿರುವುದು.

ರಾತ್ರಿಯಲ್ಲಿ ಹುಡುಗಿಯರೆಲ್ಲರೂ ತಮ್ಮ ಬೀದಿಯ ಗುಳ್ಳವ್ವನನ್ನು ಪೂಜಿಸಿ ಪ್ರತ್ಯೇಕ ಪ್ರತ್ಯೇಕವಾಗಿ ಆರತಿಯನ್ನು ಬೆಳಗಿ, ಅವೇ ಅರತಿಗಳನ್ನು ಹಿಡಿದುಕೊಂಡು ಗುಳ್ಳವ್ವನ ಹಾಡುಗಳನ್ನು ಹೇಳುತ್ತ, ಬೇರೆ ಬೀದಿಗಳ ಗುಳ್ಳವ್ವಗಳನ್ನು ಸಂದರ್ಶಿಸಿ, ಅವುಗಳಿಗೂ ಆರತಿಯನ್ನು ಬೆಳಗಿ ಬರುವರು. ಅಂದು, ಹುಡುಗಿಯರೆಲ್ಲರೂ ತಮ್ಮತಮ್ಮ ಮನೆಯಿಂದ ತಿಂಡಿ–ತಿನಿಸುಗಳನ್ನು ತಂದು ಗುಳ್ಳವ್ವನನ್ನು ಇಕ್ಕಿದ ಮನೆಯಲ್ಲಿಯೇ ಪಂಕ್ತಿಭೋಜನ ಮಾಡುವರು. ಅಂದು ಅವರಿಗೆ ಬೆಳತನಕ ಜಾಗರಣೆ, ಹಾಡು, ಕಥೆ, ಆಟ, ಪಾಟಗಳಲ್ಲಿ ಇರುಳನ್ನು ಕಳೆಯುವರು. ಗುಳ್ಳವ್ವನಿಗೆ ಸಂಬಂಧಿಸಿದ ಜಾನಪದ ಸಾಹಿತ್ಯ ಸಾಕಷ್ಟಿದೆ. ಅರತಿಯ ಹಾಡುಗಳೂ ಇರುವುವು. ಗುಳ್ಳವ್ವನ ಮುಂದೆ ಕೂಡಿಸಿದ 'ಗೊಗ್ಗವ್ವ' ಎಂಬ ಹೆಸರಿನ ವಿದೂಷಕಮೂರ್ತಿಯನ್ನು ಕುಟ್ಟುವ ವಿನೋದ ಕಾರ್ಯಕ್ರಮವೂ ಅಂದಿನ ರಾತ್ರಿ ನಡೆಯುವುದು. 'ಸುವ್ವಿ ಸುವ್ವಿ ಸುವ್ವಾಲೆ' ಎಂಬ ಪಲ್ಲವಿಯೊಂದಿಗೆ ಹಾಡುವ ಆಗಿನ ಹಾಡುಗಳು, ಮುಗ್ಧ ಹಾಸ್ಯಭಾವದಿಂದ ಕೂಡಿರುವುವು. ಮರುದಿನ ಗುಳ್ಳವ್ವನ ವಿಸರ್ಜನೆಯ ಕಾಲದ ಬನದೂಟದ ಕಾರ್ಯಕ್ರಮವೂ ಹಳ್ಳಿಗರಿಗೆ ಒಂದು ಮನೋರಂಜನೆಯ ದೃಶ್ಯವಾಗಿರುವುದು. ಗುಳ್ಳವ್ವನ ಪೂಜೆಯ ವಿಜೃಂಭಣೆ, ಕನ್ನಡದ ಬಯಲುನಾಡಿನಲ್ಲಿ ವಿಶೇಷವಾಗಿರುತ್ತದೆ.

**ಜಯತೀರ್ಥರು**

ಆಷಾಢವದ್ಯ ಪಂಚಮಿಯಂದು, ಮಾಧ್ವ ಗುರುಪರಂಪರೆಯಲ್ಲಿ ಟೀಕಾಚಾರ್ಯರೆಂದು ಹೆಸರನ್ನು ಪಡೆದ ಶ್ರೀಜಯತೀರ್ಥ ಶ್ರೀಪಾದಂಗಳವರ ಪುಣ್ಯದಿನ. ಕಲಬುರ್ಗಿ ಜಿಲ್ಲೆಯ ಮಳಖೇಡದಲ್ಲಿ ಇರುವ ಇವರ ವೃಂದಾವನದೆಡೆಯಲ್ಲಿ ಮೂರು ದಿನಗಳವರೆಗೆ ಪುಣ್ಯದಿನದ ಮಹೋತ್ಸವವು ವಿಶೇಷ ವೈಭವದಿಂದ ನಡೆಯುವುದು. ಉತ್ತರಾದಿಮಠದ ಶ್ರೀಗಳವರೇ, ಈ ಉತ್ಸವಕಾರ್ಯವು ವಿಧ್ಯುಕ್ತವಾಗಿ ನಡೆಯುವಂತೆ ಏರ್ಪಾಡನ್ನು ಮಾಡಿರುವರು.

ಆಷಾಢವದ್ಯ ಅಮಾವಾಸ್ಯೆಯು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ 'ಭೀಮನಮಾವಾಸ್ಯೆ' ಎಂಬ ಹೆಸರಿನಿಂದ ಕರೆಯಿಸಿಕೊಳ್ಳುವುದು. ಇದೊಂದು ಶಿವ-ಪಾರ್ವತೀ ಪೂಜೆಯ ವ್ರತವಾಗಿದೆ. ಪೌರಾಣಿಕ ಕಥೆಯೂ ಒಂದು ಈ ವ್ರತಕ್ಕೆ ಸಂಬಂಧಿಸಿದುದುಂಟು. ಉತ್ತರಕರ್ನಾಟಕದಲ್ಲಿ ಮಾತ್ರ ಈ ಅಮಾವಾಸ್ಯೆಗೆ 'ದಿವಸೀ ಅಮಾಸಿ' ಎಂದು ಜನ ಹೇಳುವರು. ಸಂಪ್ರದಾಯವಂತರ ಮನೆತನದಲ್ಲಿ ಎಲ್ಲ ಕುಮಾರಿಯರೂ ಮಂಗಲವತಿಯರೂ ಇಂದು ದೀಪಸ್ತಂಭವನ್ನು, ದೇವಿಯೆಂದು ಜಗುಲಿಯ ಮೇಲಿರಿಸಿ ಪೂಜಿಸುವರು; ಬಿರ್ದುಣಿಸಿನ ನೈವೇದ್ಯ ಸಲ್ಲಿಸಿ ಹಬ್ಬ ಮಾಡುವರು.

ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳು, ಒಂಬತ್ತು ವರ್ಷಗಳವರೆಗೆ ದಿವಸಿಯ ವ್ರತ-ಪೂಜೆಗಳನ್ನು ಮಾಡಲೇಬೇಕೆಂಬ ನಿಯಮ ಉತ್ತರ ಕರ್ನಾಟಕದ ಅನೇಕ ಮನೆತನಗಳಲ್ಲಿ ರೂಢವಾಗಿದೆ. ಈ ದಿವಸೀಗೌರಿಯ ಪೂಜೆ-ಕಥೆಗಳೂ ಪುರಾಣೋಕ್ತವಾಗಿವೆ. ಇದೂ ಶಿವ-ಪಾರ್ವತಿಯರ ಉಪಾಸನೆಗೆ ಸಂಬಂಧಿಸಿದ ವ್ರತವೇ! ಸಂಪ್ರದಾಯಪಾಲನೆಗಾಗಿ, ಸತ್ತ ರಾಜಪುತ್ರನೊಂದಿಗೆ ಕನ್ಯೆಯೊಬ್ಬಳ ಲಗ್ನವಾದಂತೆಯೂ, ಆ ಕನ್ಯೆ ಪತಿಯ ಶವದೊಂದಿಗೆ ಇರುಳೆಲ್ಲವೂ ಮಸಣದಲ್ಲಿದ್ದು ದುಃಖಪಟ್ಟಂತೆಯೂ ಮುಂದೆ ಅವಳು ದಿವಸೀಗೌರಿಯ ಪೂಜೆಯನ್ನು ಮಾಡಿ, ಆಕೆಯ ಅನುಗ್ರಹದಿಂದ ಸತ್ತ ಪತಿಯನ್ನು ಬದುಕಿಸಿ ಸುಖದ ಬಾಳನ್ನು ನಡೆಸಿದಂತೆಯೂ ದಿವಸೀ ವ್ರತದ ಕಥೆಯಿದೆ. ದಿವಸಿಯ ಪೂಜೆ-ನೈವೇದ್ಯಗಳಿಗಾಗಿಯೂ ವಿಶಿಷ್ಟ ವಿಧಿಗಳಿವೆ. ವ್ರತಮಾಡಿದ ಮೊದಲಗಿತ್ತಿಯರೆಲ್ಲರೂ ದಿವಸೀಗೌರಿಯ ಹಂಗನೂಲನ್ನು ಕೊರಳಲ್ಲಿ ಧರಿಸುವರು.

ಆಷಾಢಮಾಸದ ಕೊನೆಯ ದಿನಗಳಲ್ಲಿ ಬರಲಿರುವ ನಾಗರಪಂಚಮಿಯ ಪೂರ್ವಸಿದ್ಧತೆಗಳು ಮನೆ-ಮನೆಯಲ್ಲಿಯೂ ನಡೆದಿರುತ್ತವೆ. ಆಗ ಪ್ರತಿಯೊಂದು ಮನೆಯಲ್ಲಿಯೂ ಅರಳು-ಹುರಿಗಡಲೆ ಹುರಿಯುವ ಸಪ್ಪಳ ಕೇಳಿಸುತ್ತಿರುವುದು. ತಂಬಿಟ್ಟಿನುಂಡೆಯ ಸೊವಡುಗಂಪು ಎಲ್ಲರ ಮೂಗುಗಳನ್ನೂ ಅರಳಿಸುತ್ತಿರುವುದು. ಅತ್ತೆಮನೆಯಿಂದ ಎಲ್ಲೆಡೆಯಲ್ಲಿಯೂ ಕಾಣುತ್ತಿರುವುವು. ಇದೀಗ ಆಷಾಢಮಾಸದ ದೊಡ್ಡಿತೆಯು!

* * *



# ೫. ಶ್ರೀ ಶಿವ-ಶಕ್ತಿ ಪೂಜಾವ್ರತ ಸಮಾಕೀರ್ಣ ಶ್ರಾವಣಮಾಸ

ವರ್ಷದ ಹನ್ನೆರಡು ತಿಂಗಳುಗಳಲ್ಲಿ ಶ್ರಾವಣಮಾಸದ ಗರಿಮೆಯೇ ಅದೊಂದು ಬೇರೆ ಬಗೆಯದಾಗಿದೆ. ತಿಂಗಳ ಮೂವತ್ತು ದಿನಗಳೂ ಒಂದಿಲ್ಲೊಂದು ಬಗೆಯ ಪೂಜೆ-ವ್ರತಗಳ ಪರ್ವದಿನಗಳೇ ಆಗಿರುವುವು. ಪ್ರತಿವಾರದ ಏಳು ದಿನಗಳಲ್ಲಿಯು ಒಂದೊಂದು ದಿನವೂ ಒಂದೊಂದು ದೈವತದ ಪೂಜಾದಿನವಾಗಿರುವುದು. ಶುಕ್ಲಪ್ರತಿಪದಾ ತಿಥಿಯಿಂದ ಅಮಾವಾಸ್ಯೆಯವರೆಗಿನ ಪ್ರತಿಯೊಂದು ತಿಥಿಯೂ ದೇವ-ದೇವತೆಗಳ ಉಪಾಸನಾ ದಿನವಾಗಿರುವುದು. ಸಂಪ್ರದಾಯವನ್ನು ನಡೆಯಿಸಿಕೊಂಡು ಹೋಗಬೇಕೆನ್ನುವವರಿಗೆ ನಿತ್ಯೋತ್ಸವ, ನಿತ್ಯಸಮಾರಾಧನೆ! ಇಂದಿನ ಅನ್ನಾಭಾವದ ಕಾಲದಲ್ಲಿ ಶ್ರಾವಣಮಾಸ ಏತಕ್ಕಾಗಿ ಬಂದಿತೋ ಎಂಬ ಕಳವಳದ ಬಿಸಿಯುಸಿರು, ಪ್ರತಿಯೊಂದು ಸಾಂಪ್ರದಾಯಿಕ ಕುಟುಂಬದ ವಾತಾವರಣವನ್ನು ಬಿಸಿಗೊಳಿಸುತ್ತಿರಬಹುದು.

ಚಾಂದ್ರವತ್ಸರದಲ್ಲಿ ಶ್ರಾವಣವು ಐದನೆಯ ತಿಂಗಳು. ಶ್ರವಣಾ ನಕ್ಷತ್ರ-ಪೌರ್ಣಿಮೆಗಳ ಹತ್ತಿರದ ಸಂಬಂಧದ ಮೂಲಕ, ಶ್ರಾವಣಮಾಸವೆಂದು ಇದಕ್ಕೆ ಹೆಸರುಬಂದಿದೆ. ಸೌರಮಾನದ ಸಿಂಹಮಾಸವು ಇದೇ ತಿಂಗಳಲ್ಲಿ ಪ್ರಾರಂಭವಾಗುವುದು. ಪಂಚಾಂಗ ಜ್ಯೋತಿಷಿಗಳ ಲೆಕ್ಕದಂತೆ ಈ ಮಾಸ ವರ್ಷಾಋತುವಿನ ಪೂರ್ವಾರ್ಧ. ಮೃಗಪಂಚಕದ ಜಡಿಮಳೆಯ ಏರಿಕೆಯ ಕಾಲದಲ್ಲಿಯೆ ಈ ತಿಂಗಳು ಅವತರಿಸುವುದು. ಎಂತಲೇ 'ಶ್ರಾವಮಾಸದ ಮಳಿ' ಎಂಬ ಮಳೆಯ ಅತಿಶಯತೆಯನ್ನು ಸೂಚಿಸುವ ಜಾನಪದ ನುಡಿಗಟ್ಟು ರೂಪುಗೊಂಡಿದೆ ನಮ್ಮ ನಾಡಿನಲ್ಲಿ.

ವರುಣದೇವನ ಪೂರ್ಣಾನುಗ್ರಹಕ್ಕೆ ಪಾತ್ರನಾದ ಶ್ರಾವಣರಾಜನು, ತಾಯಿ ಭೂದೇವಿಯನ್ನು ವಿವಿಧ ರೀತಿಯಿಂದ ಶೃಂಗರಿಸಿ ಸಂತೋಷದಿಂದ ನಲಿಯುತ್ತಿರುವನು. ಗ್ರೀಷ್ಮಕಾಲದ ಬರುದೊರೆಗಳೆಲ್ಲ ಈಗ ತುಂಬುಹೊಳೆಗಳಾಗಿ, ಇತ್ತಡಿಯ ಹೊಲ-ನೆಲಗಳನ್ನು ತನಿನೀರಿನಿಂದ ತಣಿಸುತ್ತ ಉಲ್ಲಾಸದಿಂದ ಸಾಗಿರುವುವು. ಕೆರೆ-ಕೊಳಗಳು ಮಂಡೂಕಾಚಾರ್ಯರ ಉತ್ಸಾಹಸೂಕ್ತದ

ಉಲುಹಿನಿಂದ ಜನರಲ್ಲಿ ಶುಭಭವಿಷ್ಯದ ಆಶೆಯನ್ನು ಪ್ರಚೋದಿಸುತ್ತಿರುವುವು. ಕಾಡು, ಮೇಡು, ಗುಡ್ಡ, ಬೆಟ್ಟ-ನೋಡಿದಲ್ಲೆಲ್ಲ ಹಸುರು, ಹಸುರು, ಹಸುರು! ಬತ್ತದ ಗದ್ದೆಗಳಲ್ಲಿ ಮೇಲಕ್ಕೆದ್ದ ಕನ್ನೆಬೆಳೆಗಳು ಗಳಿಗೆ ಗಳಿಗೆಗೂ ತಮ್ಮ ಬೆಳೆವಣಿಗೆಯ ತೀವ್ರತೆಯನ್ನು ತೋರಿಸುತ್ತಿರುವುವು. ಒಕ್ಕಲುಮಕ್ಕಳು ಅನ್ನದೇವತೆಯ ಪ್ರಸನ್ನತೆಯನ್ನು ಪಡೆಯಲು ವ್ರತಬದ್ಧರಾಗಿರುವರೇನೋ ಎಂಬಂತೆ, ನೀರುತುಂಬಿದ ಗದ್ದೆಗಳಲ್ಲಿಯೆ ಕೆಸರಿನಲ್ಲಿಯೆ ಕುಳಿತು, ಗದ್ದೆಗಳಲ್ಲಿಯ ಕಸ-ಕಳೆಗಳನ್ನು ತೆಗೆಯುತ್ತಿರುವರು. ಮೇಲೆ ಸುರಿಯುವ ಮಳೆ, ಕೆಳಗೆ ಮಂಜಿನ ತಂಪನ್ನು ಮೀರಿಸುವ ಕೆಸರು! ಆದರೂ ಉತ್ಸಾಹದಿಂದ ಅವರು, ಜೀವನದ ಆಶೆ-ಆಕಾಂಕ್ಷೆಗಳು ತುಂಬಿದ ಹಾಡುಗಳನ್ನು ಹೇಳುತ್ತ ತಮ್ಮ ಕರ್ತವ್ಯವನ್ನು ನಡೆಸಿರುವರು.

ಬೆಳುವಲುನಾಡಿನ ಭೂದೇವಿಯ ಸೊಬಗನ್ನು ಈಗ ನೋಡಬೇಕು. ಮುಂಗಾರುಜೋಳದ ಸಸಿಗಳು ಮೇಲಕ್ಕೆದ್ದು ತಮ್ಮ ಸಾಲುಗಳಿಂದ ಹೊಲಗಳ ನೆಲದ ಮೇಲೆ ಕಣ್ಣುಸೆಳೆಯುವ ಚಿತ್ರಗಳನ್ನು ಬರೆದಿರುವುವು. ಆಶ್ಲೇಷಾಮಳೆಯ ಹದಗಾಲದಲ್ಲಿ ಹತ್ತಿಯನ್ನು ಬಿತ್ತಲೆಂದು ಹಸನುಮಾಡಿಟ್ಟ ಹೊಲಗಳು, ಗರ್ಭಾಧಾನಕ್ಕೆ ಸಿದ್ಧರಾದ ಮೊದಲುಗಿತ್ತಿಯರನ್ನು ನೆನಪಿಗೆ ತಂದುಕೊಡುತ್ತಿರುವುವು. ಒಕ್ಕಲಿಗರು ಬಿತ್ತುವ ಬೀಜ-ಉಪಕರಣಗಳನ್ನು ಸಜ್ಜುಗೊಳಿಸಿ ಇರಿಸಿರುವರು. ಹತ್ತಿದ ಮಳೆಯು ಸ್ವಲ್ಪ ಹೊರಪಾಯಿತೋ, ಹೊಲ-ಹೊಲಗಳಲ್ಲಿ ಕೂರಿಗೆ ಬೆಳೆಸಾಲುಕುಂಟೆಗಳ ಹರಿದಾಟವೇ ಹರಿದಾಟ! ಹಬ್ಬದೂಟ ಉಂಡು ಸುಖವಾಗಿ ಪವಡಿಸಬೇಕೆನ್ನುವವರಿಗೆ ಶ್ರಾವಣಮಾಸವು ತುಂಬ ಅನುಕೂಲಕಾಲ; ಆದರೆ ಒಕ್ಕಲಿಗನು ಈಗ ಚಳಿ-ಮಳೆಗಳನ್ನು ಗಣಿಸದೆ ದುಡಿಯದೆ ಹೋದರೆ, ಮುಂದಿನ ಶ್ರಾವಣಮಾಸದಲ್ಲಿ ಹಬ್ಬದೂಟ ಮಿಕ್ಕವರಿಗೆಲ್ಲ ಹೇಗೆ ಸಿಕ್ಕಬೇಕು? ಒಕ್ಕಲಿಗನ ಕೈ ಕೆಸರಾದರೆಯೆ ಮಿಕ್ಕವರಿಗೆಲ್ಲ ಮೊಸರನ್ನ ದೊರೆಯುವುದು.

ಹೂದೋಟದ ಸಿರಿಗೆ ಶ್ರಾವಣಮಾಸವು ವಿಶಿಷ್ಟತರದ ಸೊಬಗನ್ನು ಒದಗಿಸಿರುವುದು. ನಸುಕಿನ ಮೊದಲೇ ಅರಳಿಸಿ, ಮುಂಜಾವದ ನೇಸರಿಗೆ ಹೂಗಳ ಅರ್ಘ್ಯಗಳನ್ನು ನೀಡುವ ಪಾರಿಜಾತ ಗಿಡಗಳಡಿಯಲ್ಲಿ, ಹವಳದ ದೇಟಿನ ಬಿಳಿಯ ಹೂಗಳು, ತಮ್ಮ ಸಾತ್ತ್ವಿಕ ಸೌರಭ್ಯವನ್ನು ಸುತ್ತಲೂ ಹರಡುತ್ತ, ರಾಶಿರಾಶಿಯಾಗಿ ಬಿದ್ದು ನೆಲವನ್ನು ಮುಚ್ಚಿರುವುವು. ವಿವಿಧಾಕಾರದ ಹಂದರಗಳ ಮೇಲೆ ಹಬ್ಬಿಸಿದ ಜಾತಿಲತೆಗಳು (ಶ್ರಾವಣಮಲ್ಲಿಗೆ), ಅರಳಿದ ಅಸಂಖ್ಯ ಹೂಗಳಿಂದ ತಮ್ಮ ಹಸಿರುಡಿಗೆಗಳ ಮೇಲೆ ಕಸೀದೆಗಳನ್ನು ಹೆಣೆದುಕೊಂಡಿರುವುವು. ಗುಲಾಬಿಯ



ಗಿಡಗಳು ಸುಂದರ ಸುಮನಗಳಿಂದ, ತಮ್ಮ ಮೈಯ ಮುಳ್ಳುಗಳನ್ನೆಲ್ಲ ಮುಚ್ಚಿಕೊಂಡಿರುವುವು. ಬಣ್ಣಬಣ್ಣದ ದಾಸಿವಾಳ, ನಂದಿಬಟ್ಟಲ, ಗುಲ್‌ಬಾಸರ್, ಗೌರಿಯ ಹೂಗಳು ಅರಳಿ ನಗುತ್ತಿರುವುವು. ಕೊಳಗಳಲ್ಲಿ ಬೇರೆ ಬೇರೆ ಬಣ್ಣದ ತಾವರೆಗಳೂ ನೈದಿಲೆಗಳೂ ಬಾಯ್ದೆರೆದು ನಿಂತಿರುವುವು. ಸಂಪಿಗೆಯ ಮರ ತನ್ನ ಸುಗಂಧ ಕುಸುಮಗಳನ್ನು ಅರಳಿಸಿ, ತಮ್ಮ ಹಸುರೆಲೆಗಳಲ್ಲಿ ಬಚ್ಚಿಟ್ಟಿರುವುದು. ಕೇದಗಿಯ ಮರಗಳು ದೂರದಿಂದಲೇ ತಮ್ಮ ಗರಿಹೂಗಳ ಪರಿಮಳವನ್ನು ಹರಡುತ್ತಿರುವುವು. ವಸಂತದ ವನಸೌಂದರ್ಯ ಒಂದು ಬಗೆಯದಾದರೆ, ಶ್ರಾವಣದ ಬನದ ಬೆಡಗು ಇನ್ನೊಂದು ಬಗೆಯದು!

ಸೃಷ್ಟಿದೇವಿ ಇಂತಹ ಸೌಂದರ್ಯದ ಹಿನ್ನೆಲೆಯನ್ನು ನಿರ್ಮಿಸಿದುದರಿಂದಲೇ ಇರಬಹುದು; ಇಲ್ಲಿಯ ಜನರಿಗೆ ತಮ್ಮ ಇಷ್ಟದೈವತ, ಕುಲದೈವತ, ಗ್ರಾಮದೇವತೆಗಳನ್ನು ಈ ಕಾಲದಲ್ಲಿ ವಿಶೇಷ ರೀತಿಯಿಂದ ಉಪಾಸಿಸಬೇಕೆಂಬ ಬಯಕೆ ತಲೆದೋರುತ್ತ ಬಂದಿದೆ. ಎಂತಲೇ ಶ್ರಾವಣಮಾಸದಲ್ಲಿ ಎಷ್ಟೊಂದು ವ್ರತ-ಪೂಜೆಗಳು! ಎಷ್ಟೊಂದು ದೇವ-ದೇವಿಯರ ಉಪಾಸನೆಗಳು! ಎಷ್ಟೊಂದು ಜಪ-ತಪ-ಹೋಮ-ನೇಮಗಳು! ವೇದಕಾಲದಿಂದ ಮೊದಲುಮಾಡಿ, ಇದುವರೆಗಿನ ಭಾರತೀಯ ಸಂಸ್ಕೃತಿಯ ಮಾರ್ಗಕ್ರಮಣದ ರೀತಿ ನಡೆವಳಿಗಳನ್ನೆಲ್ಲ ನಾವು ಈ ತಿಂಗಳ ವ್ರತ-ಪೂಜಾ ಪರಂಪರೆಗಳಲ್ಲಿ ಕಂಡುಕೊಳ್ಳಬಹುದು.

ಈ ತಿಂಗಳಲ್ಲಿ ಬರುವ ಶ್ರವಣಾನಕ್ಷತ್ರದ ದಿನದಂದು ಅಥವಾ ಶುಕ್ಲ ಪಂಚಮಿಯಂದು, ಋಗ್ವೇದಿಗಳು ಉಪಾಕರ್ಮ ಹೋಮವನ್ನು ನಡೆಯಿಸಿ, ನೂತನ ಯಜ್ಞೋಪವೀತವನ್ನು ಧಾರಣಮಾಡುವರು. ಹುಣ್ಣಿಮೆಯ ದಿನದಂದು ಯಜುರ್ವೇದಿಗಳೂ ಅಥರ್ವೇದಿಗಳೂ ಈ ಉಪಾಕರ್ಮ ಹೋಮಗಳನ್ನು ತಮ್ಮತಮ್ಮ ಸಂಪ್ರದಾಯದಂತೆ ನಡೆಯಿಸುವರು. ಈ ಉಪಾಕರ್ಮ ಅಥವಾ ಶ್ರಾವಣಿಯ ಪದ್ಧತಿ ವೈದಿಕ ಕಾಲದಿಂದಲೂ ನಡೆದುಕೊಂಡು ಬಂದಿದೆ. ಶ್ರಾವಣ ಪೌರ್ಣಿಮೆಯವರೆಗಿನ ನಾಲ್ಕು ತಿಂಗಳ ಕಾಲ, ಅಂದಿನವರಿಗೆ ತಮ್ಮ ಲೌಕಿಕ ವ್ಯವಹಾರದಿಂದ ಬಿಡುವು ದೊರೆಯುತ್ತಿದ್ದಿತು. ಆ ಬಿಡುವನ್ನು ಅವರು ತಮ್ಮ ವೇದಗಳ ಅಧ್ಯಯನಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಶ್ರಾವಣಿಯ ದಿನದಂದು ಉಪಾಕರ್ಮ ಹೋಮವನ್ನು ಮಾಡಿ ಮುಗಿಸಿ, ಆ ವರ್ಷದ ಅಧ್ಯಯನವನ್ನು ಪ್ರಾರಂಭಿಸುತ್ತಿದ್ದರು; ಮಾರ್ಗಶೀರ್ಷ ಮಾಸದಲ್ಲಿ ಮತ್ತೆ ಲೌಕಿಕಕಾರ್ಯಗಳಿಗೆ ತೊಡಗಬೇಕಾಗುತ್ತಿದ್ದಿತಾದುದರಿಂದ, ಈಗ ಉತ್ಸರ್ಜನ ಹೋಮವನ್ನು ಮಾಡಿ, ಅಧ್ಯಯನಕಾರ್ಯವನ್ನು ನಿಲ್ಲಿಸುತ್ತಿದ್ದರು. ಒಂದು ಮೋಜಿನ ಸಂಗತಿಯೆಂದರೆ,

ಅಂದಿನವರು ಮಾರ್ಗಶೀರ್ಷಮಾಸದಲ್ಲಿ ಜರುಗಿಸುತ್ತಲಿದ್ದ ಉತ್ಸರ್ಜನಹೋಮ, ಬರುಬರುತ್ತ ಅನುಕೂಲಸಿಂಧುವನ್ನು ಅನುಸರಿಸಿ ಶ್ರಾವಣಿಯ ದಿನದಂದೇ ನಡೆಯುತ್ತ ಬಂದಿದೆ. ಅಂದು ಮೊದಲು ಉತ್ಸರ್ಜನಹೋಮದ ನಿಯಮವನ್ನು ಮುಗಿಸಿ, ಅಮೇಲೆ ಉಪಾಕರ್ಮದ ಸಂಪ್ರದಾಯಗಳನ್ನೆಲ್ಲ ನಡೆಯಿಸಲಾಗುವುದು. ಇಂದು ಉಪಾಕರ್ಮ–ಉತ್ಸರ್ಜನವೆಂಬುವು ಹೆಸರಿಗೆ ಮಾತ್ರ ಉಳಿದಿವೆ. ವೇದಾಧ್ಯಯನ ಪದ್ಧತಿಯನ್ನು ಗುರುತಿಸಲು ಬರುವಂತಹ ಒಂದು ಸಾಧನವಾಗಿ ಇಂದಿಂದು ಉಳಿದುಕೊಂಡಿದೆ ಇಷ್ಟೆ!

ಶ್ರಾವಣಮಾಸದ ಪ್ರತಿಯೊಂದು ರವಿವಾರವೂ ಸೂರ್ಯವ್ರತದ ದಿನವಾಗಿರುವುದು. ಅಂದು ವ್ರತಿಯು ಸಂಪೂರ್ಣ ಮೌನಿಯಾಗಿದ್ದು, ಬೆಳಗಿನ ಸೂರ್ಯನನ್ನು ಪೂಜಿಸಬೇಕು. ಶ್ರಾವಣಸೋಮವಾರವು ಶಿವೋಪಾಸಕರ ವ್ರತದಿನವಾಗಿರುವುದು. ಅಂದು ವ್ರತಿಯು, ಪ್ರದೋಷಕಾಲದವರೆಗೂ ಉಪವಾಸಿಯಾಗಿದ್ದು, ಜಪ–ತಪಗಳಿಂದ ಶಿವನನ್ನು ಉಪಾಸಿಸಬೇಕು. ಬಳಿಕ ವಿಧ್ಯುಕ್ತವಾಗಿ ಶಿವಪೂಜೆಯನ್ನು ಮಾಡಿ, ನೈವೇದ್ಯದನ್ನವನ್ನು ಅವನು ಊಟಮಾಡಬೇಕು. ಮಂಗಳವಾರವು ಮಂಗಲಾಗೌರಿಯ ವ್ರತದಿನವಾಗಿರುವುದು. ಈ ವ್ರತವು ಸುಮಂಗಲೆಯರಿಗೆ ವಿಧಿಸಲ್ಪಟ್ಟಿದೆ. ಹೊಸ ಮದುವಣಿಗಿತ್ತಿಯರು, ಮದುವೆಯಾದ ಮೇಲೆ ಐದುವರ್ಷಗಳವರೆಗೆ ಮಾಡಲೇಬೇಕಾದ ನಿತ್ಯವ್ರತವಿದು. ಸ್ಕಾಂದಪುರಾಣದಲ್ಲಿ ಬಂದಿರುವ ಶ್ರಾವಣಮಾಸ ಮಾಹತ್ಮ್ಯದಲ್ಲಿ ಈ ವ್ರತದ ಮಹತಿಯನ್ನು ವಿವರಿಸಲಾಗಿದೆಯಲ್ಲದೆ, ಈ ವ್ರತಕ್ಕೆ ಸಂಬಂಧಿಸಿದ ಭಾವಪೂರ್ಣ ಕಥೆಯನ್ನೂ ಬಿತ್ತರಿಸಲಾಗಿದೆ. ಮಂಗಲಾಗೌರಿಯ ವ್ರತಮಾಡಿದ ಒಬ್ಬ ಪುಣ್ಯವಧುವು, ಅಲ್ಪಾಯುವಾದ ತನ್ನ ಪತಿಯನ್ನು ಬದುಕಿಸಿ, ಸುಖಜೀವಿನಿಯಾದ ಈ ಅದ್ಭುತಪ್ರಸಂಗವನ್ನು ಕಥೆಯು, ರಂಜಕಚಲಚ್ಚಿತ್ರಕ್ಕೆ ಉತ್ತಮವಾದ ಮೂಲವಸ್ತುವನ್ನು ಒದಗಿಸಿಕೊಡುವ ಸತ್ತ್ವವುಳ್ಳುದಾಗಿದೆ.

ಮಂಗಳಗೌರಿಯ ವ್ರತದಲ್ಲಿ ಈಗಲೂ ರೂಢವಾಗಿರುವ 'ಬಾಗಿಣ ಇರಿಸಿಕೊಳ್ಳುವ' ಪರಂಪರೆಯು, ಈ ವ್ರತದ ಕಥಾನಾಯಿಕೆಯು, ತನ್ನ ಪತಿಯನ್ನು ಕಚ್ಚಿ ಕೊಲ್ಲಲು ಮೊದಲರಾತ್ರಿಯಂದು ಶಯನಗೃಹದಲ್ಲಿ ಪ್ರಕಟವಾದ ವಿಷಸರ್ಪವನ್ನು, ತನ್ನ ವ್ರತಪುಣ್ಯದಿಂದ ನಿಷ್ಕ್ರಿಯವನ್ನಾಗಿಸಿ, ಅದನ್ನು ಒಂದು ಪಾತ್ರೆಯಲ್ಲಿ ಸೇರಿಸಿ, ತನ್ನ ಕಂಚುಕದಿಂದ ಅದರ ಬಾಯನ್ನು ಬಿಗಿದುಕಟ್ಟಿದ ಸಂಗತಿಯನ್ನು ಸಾಂಕೇತಿಕವಾಗಿ ತಿಳುಹುತ್ತದೆ. ಮರುದಿನ ವಧುವಿನ ತಾಯಿ ಬಂದು ಬಾಯಿಕಟ್ಟಿದ ಪಾತ್ರೆಯ ಕಂಚುಕವನ್ನು ಬಿಚ್ಚಿ ನೋಡಿದಾಗ, ಹಾವು



ರತ್ನಹಾರವಾಗಿದ್ದುದು ಕಂಡಿತಂತೆ. ತಾಯಿ ಅದನ್ನು ಮಗಳ ಕೊರಳಿಗೆ ಹಾಕಿದಳಂತೆ. ಬಾಗಿಣದ ಕಾಲದ ನಡೆವಳಿಯಲ್ಲಿ ಇವೆಲ್ಲ ಮಾತುಗಳೂ ಸಂಕೇತರೂಪದಿಂದ ವ್ಯಕ್ತವಾಗುವುವು.

ಶ್ರಾವಣದ ಬುಧವಾರ–ಗುರುವಾರಗಳಂದು ಕುಟುಂಬದ ಯಜಮಾನನು, ಕ್ರಮವಾಗಿ ಬುಧ–ಬೃಹಸ್ಪತಿಯರನ್ನು ಪೂಜಿಸಿ ನೈವೇದ್ಯ ಸಲ್ಲಿಸಬೇಕು. ಸಂಪ್ರದಾಯವಂತರ ಮನೆತನಗಳಲ್ಲಿ ಬುಧ–ಬೃಹಸ್ಪತಿಯರ ಚಿತ್ರಪಟದ ಪೂಜೆ ಈಗಲೂ ನಡೆಯುತ್ತದೆ. ಈ ತಿಂಗಳ ಶುಕ್ರವಾರ–ಶನಿವಾರಗಳು "ಸಂಪತ್ ಶುಕ್ರವಾರ" "ಸಂಪತ್ ಶನಿವಾರ" ಎಂದು ಹೆಸರು ಪಡೆದಿರುವುವು ಇವೂ ವ್ರತದಿನಗಳೆ!

ಮೊದಲ ಶುಕ್ರವಾರದಂದು, ಗಡಿಗೆಯ ಗೌರಿಯನ್ನು ಮನೆಯಲ್ಲಿ ಪ್ರತಿಷ್ಠಾಪಿಸಿ, ಪ್ರತಿ ಶುಕ್ರವಾರವೂ ವೈಭವದ ಪೂಜೆ–ನೈವೇದ್ಯಗಳು ನಡೆಯುವುವು. ಈ ಗೌರಿಯ ವ್ರತ–ಪೂಜೆಗಳನ್ನು ಸುಮಂಗಲೆಯರೆಲ್ಲರೂ ಮಾಡಬೇಕೆಂದು ಪುರಾಣೋಕ್ತ ವಿಧಿಯಿದೆ. ಈ ಪೂಜೆಗಾಗಿ ಅಣಿಗೊಳಿಸಿದ ಗಡಿಗೆಯ ಮೇಲುಮೈಗೆಲ್ಲ ಚೆಂಬಣ್ಣವನ್ನು ಲೇಪಿಸಿ, ಅದರ ಮೇಲೆ ತಾಂತ್ರಿಕ ಸಂಪ್ರದಾಯದ ಸಾಂಕೇತಿಕ ಚಿತ್ರಗಳನ್ನು ಹಳದಿಯ ಬಣ್ಣದಿಂದ ಬರೆದಿರುವರು. ಚಿತ್ರಗಳ ರೇಖೆಗಳ ಗುಂಟ, ಸುಣ್ಣದಿಂದ ಬಿಳಿಯ ಚುಕ್ಕಿಗಳನ್ನು ಸಾಲಾಗಿ ಇರಿಸಿ ಅಂದಗೊಳಿಸಿರುವರು. ಮುಚ್ಚಳಕ್ಕೂ ಚೆಂಬಣ್ಣ ತೊಡೆದು, ಅದರ ಮೆಲೆ ಸಾಲಂಕೃತ ಸ್ತ್ರೀಮುಖದ ಚಿತ್ರ ಮೂಡಿಸಿರುವರು. ಈ ಗಡಿಗೆಯ ದೇವಿ "ಗೌರಿ" ಎಂಬ ಹೆಸರಿನಿಂದ ಮಾತ್ರ ಸಾಮಾನ್ಯರಿಗೆ ಪರಿಚಿತಳಾಗಿದ್ದಾಳೆ; ಆದರೆ ಪುರಾಣದಲ್ಲಿ ಈ ಗೌರೀವ್ರತವನ್ನು "ಜೀವಂತಿಕಾದೇವಿ ವ್ರತ" ಎಂದು ನಿರ್ದೇಶಿಸಲಾಗಿದೆ. ಜೀವಂತಿಕಾದೇವಿ ಅಥವಾ "ಜೀವತಿ" ಸಂತಾನಸಂರಕ್ಷಕದೇವತೆ. ಬಾಣಂತಿಯರು ಈ ದೇವತೆಯ ಪೂಜೆಯನ್ನು ಮಾಡುವ ಸಂಪ್ರದಾಯ, ನಮ್ಮ ನಾಡಿನಲ್ಲಿ ಎಲ್ಲರ ಮನೆಗಳಲ್ಲಿಯೂ ಊರ್ಜಿತದಲ್ಲಿದೆ. ಜೀವಂತಿಕೆಗೆ ವಿರೋಧಿಯಾದ ಇನ್ನೊಬ್ಬ ದೇವತೆಯಿದ್ದಾಳೆ. ಅವಳ ಹೆಸರು ಷಷ್ಟಿದೇವಿ! 'ಸೆಟ್ಟೆವ್ವ' ಎಂಬುದು ಷಷ್ಟಿದೇವಿಯ ಅಪಭ್ರಂಶರೂಪ! ಇವಳು ಸಂತಾನ ಮಾರಕಶಕ್ತಿ! ಹುಟ್ಟಿದ ಮಕ್ಕಳನ್ನು ಕೊಲ್ಲುವುದು ಈಕೆಯ ಕೆಲಸ. ನಮ್ಮ ನಾಡಿನ ಬಾಣಂತಿಯರು ಈ ಮಾರಕದೇವತೆಯನ್ನೂ ಪೂಜಿಸುವರು. ಜೀವಂತಿಕೆಯನ್ನು ಪೂಜಿಸಿ ಮೆಚ್ಚಿಸಿದರೆ, ಷಷ್ಟಿದೇತೆಯಿಂದ ಯಾವ ಆಪತ್ತಿಯೂ ಬಾರದೆಂಬ ಶ್ರದ್ಧೆ, ಈ ಗಡಿಗೆಯ ಗೌರಿಯ ಪೂಜಾವ್ರತದಲ್ಲಿ ಅಡಕವಾಗಿದೆ. ಸ್ಕಾಂದಪುರಾಣದಲ್ಲಿರುವ ಈ ವ್ರತದ ಕಥೆಯು, ನಾರಿಯರ ಸಂತಾನಸಂರಕ್ಷಣೆಯ

ಬಯಕೆಗೆ ಸಂವಾದಿಯಾದುದೇ ಆಗಿದೆ.

ವಿಷ್ಣುಪೂಜಕರಲ್ಲಿ ಈ 'ಜೀವಂತಿಕಾದೇವಿ' ವ್ರತವು, ಮೂಲ ಸ್ವರೂಪದಲ್ಲಿಯೆ ಬಂದಿದೆಯಾದರೂ, ಗಡಿಗೆಯ ಗೌರಿ ಇವರಲ್ಲಿ 'ಮಾಸ ಮಹಾಲಕ್ಷ್ಮಿ' ಎಂಬ ಹೆಸರನ್ನು ಯಾವಾಗಲೋ ಪಡೆದಿದ್ದಾಳೆ. ಈ ನಾಮಪರಿವರ್ತನೆಗೆ ಅನುಗುಣವಾದ ಪುರಾಣಪ್ರಮಾಣವಿಲ್ಲದ ಕಥೆಗಳೂ ಹುಟ್ಟಿಕೊಂಡಿವೆ. ಬಡವ ಬ್ರಾಹ್ಮಣನೊಬ್ಬನು ಶ್ರಾವಣ ಗೌರಿಯ ಪೂಜೆಮಾಡಿದ ಐದು ಶುಕ್ರವಾರಗಳ ಹಾಡು–ಕಥೆಗಳು, ವೈಷ್ಣವರ ಸೃಷ್ಟಿಗಳೆಂದು ತೋರುತ್ತವೆ. ಜೀವಂತಿಕಾದೇವಿ ವ್ರತವನ್ನು 'ಪುರಸ್ಕರಿಸುವ ಚೊಚ್ಚಲು ಗಂಡಸು ಮಗ'ನ ಹಾಡು–ಕಥೆಗಳು, ಈ ವ್ರತದ ಸತ್ಯಸ್ವರೂಪಕ್ಕೆ ನಿದರ್ಶಕವಾಗಿವೆಯಲ್ಲದೆ, ಪೌರಾಣಿಕ ಪ್ರಮಾಣವನ್ನೂ ಪಡೆದುವಾಗಿವೆ.

ಶ್ರಾವಣ ಶುಕ್ಲಪಕ್ಷದಲ್ಲಿ ಬರುವ ಎರಡನೆಯ ಶುಕ್ರವಾರವು, ವರಮಹಾಲಕ್ಷ್ಮಿಯ ವ್ರತಕ್ಕೆ ನಿಯಮಿತವಾದುದು. ಭವಿಷ್ಯೋತ್ತರ ಪುರಾಣದಲ್ಲಿ ಈ ವ್ರತದ ವಿಧಿ–ವಿಧಾನಗಳನ್ನೂ ಮಹಾತ್ಮ್ಯದ ಕಥೆಯನ್ನೂ ಹೇಳಲಾಗಿದೆ. ಶಿವನು ಪಾರ್ವತಿಗೆ ವ್ರತದ ಮಹಿಮೆಯನ್ನು ಹೇಳಿರುವನು. ಈ ವ್ರತವನ್ನು ಕೈಕೊಂಡ ಮಂಗಲವತಿಯರು ಮಾತ್ರ, ಪ್ರತಿವರ್ಷ ಇದನ್ನು ಮಾಡಲೇಬೇಕು.

ಶ್ರಾವಣ ಶನಿವಾರದಂದು ಮಾಡಬೇಕಾದ ಬೇರೆಬೇರೆ ಮೂರು ವ್ರತ ಪೂಜೆಗಳುಂಟು. ಶ್ರೀನರಸಿಂಹ, ಶನೈಶ್ಚರ, ಹನುಮಂತ ಇವರೇ ಆ ವ್ರತಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಪೂಜಾಧಿದೇವತೆಗಳಾಗಿರುವರು. ಈ ಮೂರು ಪೂಜೆಗಳಿಗೂ ಸಂಬಂಧಿಸಿದ ಬೇರೆಬೇರೆ ಕಥೆಗಳೂ ರೂಢಿಯಲ್ಲಿವೆ. ಆದರೆ ಅವುಗಳಿಗೆ ಪುರಾಣಪರಂಪರೆಯ ಪ್ರಮಾಣಗಳಿದ್ದಂತಿಲ್ಲ. ಎಲ್ಲ ಕಥೆಗಳ ವಿಷಯವೂ ಮುಗ್ಧಶ್ರದ್ಧೆಯನ್ನು ಪ್ರಚೋದಿಸುವಂತಹವಾಗಿರುವುವು.

ಇದುವರೆಗೆ ವಾರವಿಶಿಷ್ಟ ವ್ರತಪೂಜಾದಿನಗಳನ್ನು ವಿವರಿಸಿ ಆಯಿತು. ಇನ್ನು ಶ್ರಾವಣಮಾಸದಲ್ಲಿ ಬರುವ ತಿಥಿವಿಶಿಷ್ಟ ವ್ರತಪೂಜಾಪರ್ವಗಳನ್ನು ಗಣನೆಮಾಡಿ ನೋಡೋಣ! ನಾಗಚತುರ್ಥಿ–ನಾಗಪಂಚಮಿಯ ಪರ್ವದಿನಗಳು, ನಮ್ಮ ನಾಡಿನಲ್ಲಿ ಸಾರ್ವಜನಿಕ ಹಬ್ಬವಾಗಿ ಪರಿಗಣನೆಗೊಂಡಿವೆ. ಉತ್ತರಕರ್ನಾಟಕದ ಜನಸಾಮಾನ್ಯರಿಗಂತೂ ಇವು ಮಹತ್ತ್ವದ ದಿನಗಳಾಗಿವೆ.

'ಪಂಚಮಿ ಹಬ್ಬs ಉಳಿದಿತವ್ವ ದಿನ ನಾಕ....
ಅಣ್ಣ ಬರಲಿಲ್ಲ ಯಾಕೋ ಕರಿಯಾಕ'

ಎಂದು ತವರಿನ ಕರೆಯ ದಾರಿಯನ್ನೇ ನೋಡುತ್ತ ದಿನಗಳನ್ನು ನೂಕುತ್ತಲಿದ್ದ ಅತ್ತೆಮನೆಯ ಸೊಸೆಯಂದಿರೆಲ್ಲ, ಹಬ್ಬಕ್ಕಾಗಿ ತವರಿಗೆ ಬಂದಿರುವರು. ಮನೆ–



ಮನೆಗಳಲ್ಲಿಯೂ ಪಂಚಮಿಹಬ್ಬದ ಸಿದ್ಧತೆಯ ಸಂಭ್ರಮವೇ ಸಂಭ್ರಮ! ಅರಳು, ಅರಳಿಟ್ಟು, ತಂಬಿಟ್ಟು, ಎಳ್ಳಚಿಗುಳೆ, ಹುರಿಗಡಲೆ ಮೊದಲಾದ ನಾಗಪ್ಪನ ನೈವೇದ್ಯಖಾದ್ಯಗಳು, ಎಲ್ಲರ ಮನೆಯಲ್ಲಿಯೂ ಅಣಿಯಾಗಿರುವುವು. ಚಿಕ್ಕಮಕ್ಕಳು ಕೊಬ್ಬರಿಯ ಬಟ್ಟಲದಿಂದ ಬೊಗರೆಯನ್ನು ಮಾಡಿ ತಿರುಗಿಸುತ್ತಿರುವರು. ಊರ ಬಯಲುಗಳಲ್ಲಿ ತೊಲೆ–ಜೋಕಾಲಿಗಳು ಎದ್ದು ನಿಂತಿರುವುವು. ಮರ–ಮರಗಳಿಗೂ ತೂಗುಯ್ಯಾಲೆಗಳು ಜೋಲಾಡುತ್ತಿರುವುವು. ಚಕ್ರಜೀಕು, ತೊಟ್ಟಿಲಜೀಕುಗಳು ಅಲ್ಲಲ್ಲಿ ತಿರುಗುತ್ತಿರುವುವು. ನಾಗಚತುರ್ಥಿಯ ದಿನ ಸುಮಂಗಲೆಯರೆಲ್ಲರೂ ಎಣ್ಣೆನೀರು ಮಿಂದು, ಹೊಸಹೊಸ ಉಡಿಗೆ–ತೊಡಿಗೆ ಉಟ್ಟು–ತೊಟ್ಟು ಗುಂಪು ಗುಂಪಾಗಿ ಹೋಗಿ ಹುತ್ತದ ನಾಗಪ್ಪನಿಗೆ ಹಾಲೆರೆದು, ಪೂಜೆ–ನೈವೇದ್ಯಗಳನ್ನು ಸಲ್ಲಿಸುವರು. ತಂಬಿಟ್ಟಿನ ಆರತಿಯನ್ನು ಬೆಳಗುವರು. ಅಂದು ಹೆಣ್ಣುಮಕ್ಕಳಿಗೆಲ್ಲ ಜೋಕಾಲಿಯಾಟದ ಉಲ್ಲಾಸವೇ ಉಲ್ಲಾಸ. ಹಬ್ಬದ ದಿನದ ವಿಶಿಷ್ಟ ಅಲಂಕಾರಗಳಿಂದ ಅಂದು ತರುಣಿಯರೆಲ್ಲರೂ ಸಿಂಗರಗೊಂಡು ಸುಳಿದಾಡುತ್ತಿರುವಾಗ, ಹಳ್ಳಿಯ ಬೀದಿಗಳು ತಾವು ಧನ್ಯರಾದೆವೆಂದು ಭಾವಿಸಿ ಹಿಗ್ಗುತ್ತಿರಬಹುದು.

ಮರುದಿನ ನಾಗಪಂಚಮಿ. ಅಂದು ಮನೆ–ಮನೆಯಲ್ಲಿಯೂ ನಾಗಪ್ಪನ ಮಣ್ಣಿನ ಮೂರ್ತಿಯ ಅಥವಾ ಚಿತ್ರಪಟದ ಪೂಜೆ ನಡೆಯುವುದು. ಅಂದು ನಾಗಪ್ಪನಿಗೆ ಕಡುಬು–ಕಿಚ್ಚಡಿಯ ನೈವೇದ್ಯ. ಎಲ್ಲರಿಗೂ ಕಡುಬು ಕಿಚ್ಚಡಿಯ ಊಟ.

ಹೊಸತಾಗಿ ಮದುವೆಯಾದ ಹೆಣ್ಣುಮಕ್ಕಳು ಕೈಕೊಂಡು ನೆರವೇರಿಸಬೇಕಾದ ನಾಗಪೂಜೆಯ ವ್ರತವೂ ಇರುವುದು. ಈ ವ್ರತವನ್ನು ಕುರಿತ ಬೇರೆ ಬೇರೆ ಪರಂಪರೆಯ ಕಥೆಗಳೂ ನಮ್ಮ ನಾಡಿಗರ ಬಾಯಲ್ಲಿವೆ. ಸರ್ಪಕೋಪಕ್ಕೊಳಗಾದ ಒಬ್ಬ ಒಕ್ಕಲಿಗನ ಕುಟುಂಬವನ್ನು, ಅದೇ ಸರ್ಪದ ಅನುಗ್ರಹಕ್ಕೆ ಪಾತ್ರಳಾದ ಆ ಮನೆಯ ಹೆಣ್ಣುಮಗಳೊಬ್ಬಳು, ಸರ್ಪದಂಶದಿಂದ ಮೃತರಾದ ತನ್ನ ತವರ ಬಳಗದವರನ್ನೆಲ್ಲ ಬದುಕಿಸಿ ಉದ್ಧರಿಸಿದ ರಮ್ಯಕಥೆಯು, ನಮ್ಮ ನಾಡಿಗರ ಪಂಚಮಿಯ ಹಬ್ಬದ ಆರಣೆಗೆ ತುಂಬ ಸಂವಾದಿಯಾಗಿದೆ. ಆ ಕಥೆಯಲ್ಲಿಯ ಹೆಣ್ಣುಮಗಳು, ಪಂಚಮಿಯಂದು "ಹೆಚ್ಚಬಾರದು, ಹೆರೆಯಬಾರದು, ಬೀಸಬಾರದು, ಕುಟ್ಟಬಾರದು, ಹುರಿಯಬಾರದು, ಕರಿಯಬಾರದು! "ಎಂದು ಕಥೆಯ ಕೊನೆಯಲ್ಲಿ ಎಲ್ಲರಿಗೂ ವಿಧಿಸುವಳು. ಆ ವಿಧಿಯನ್ನು ಈಗಲೂ ಪಾಲಿಸಲಾಗುತ್ತಿದೆ.

ನಾಗಪಂಚಮಿಯ ಇನ್ನೊಂದು ಕಥೆ, ಉತ್ತರ ಭಾರತದಲ್ಲಿ ತುಂಬ

ಪ್ರಚಾರದಲ್ಲಿದೆ. ಪಾರ್ವತಿಯ ಮಾನಸಪುತ್ರಿಯದ ಮನಸಾ ಎಂಬ ನಾಗದೇವತೆಯು, ಎಲ್ಲರೂ ತನ್ನ ಪೂಜೆಯನ್ನು ಮಾಡಬೇಕೆಂಬ ದುರಾಕಾಂಕ್ಷೆಯಿಂದ, ಶಿವಭಕ್ತನಾದ ಚಾಂದಸೌದಾಗರನನ್ನು ಪರಿಪರಿಯಿಂದ ಕಾಡಿ, ಕೊನೆಗೆ ತಾನೇ ಪರಾಜಿತಳಾದ ಸಂಗತಿಯನ್ನು ಈ ಕಥೆಯು ಬಿತ್ತರಿಸುತ್ತದೆ. ಉತ್ತರಭಾರದ ಹಳ್ಳಿಗರು ಈ ಕಥೆಯನ್ನು ತಮ್ಮ ಬಯಲಾಟಗಳಿಗೂ ಬಳಸಿಕೊಂಡಿರುತ್ತಾರೆ.

ಶುಕ್ಲಷಷ್ಠಿಯಂದು ಸಂಪ್ರದಾಯವಂತ ಮೊದಲುಗಿತ್ತಿಯರು, ಸಿರಿಯಾಳ ಷಷ್ಠಿಯ ಪೂಜಾವ್ರತಗಳನ್ನು ನಡೆಸುತ್ತಾರೆ. ಅಂದು ಅವರು ಬುತ್ತಿ, ಉಪ್ಪಿನಕಾಯಿ, ಕೊಬ್ಬರಿಕಡುಬುಗಳನ್ನು ಮನೆಮನೆಗೂ ಬೀರಿಸಿಬರುತ್ತಾರೆ. ಕೆಲ–ಕೆಲವರ ಮನೆಗಳಲ್ಲಿ ಇಂದು ಸೂಪೌದನವ್ರತವನ್ನು ನಡೆಯಿಸುವ ರೂಢಿಯೂ ಇರುವುದು. ಕಲ್ಕಿಜಯಂತಿದಿನವೂ ಈ ಶುಕ್ಲಷಷ್ಠಿಯೇ!

ಒಕ್ಕಲಿಗರಿಗೆ ನಾಗಪಂಚಮಿಯ ಮರುದಿನದ ಈ ಷಷ್ಠಿಯು 'ವರ್ಷತೊಡಕು' ಎಂಬ ಹೆಸರಿನಿಂದ ಮಹತ್ತ್ವದ ಹಬ್ಬವಾಗಿದೆ. ಅಂದು ತವರಿಗೆ ಬಂದ ಹೆಣ್ಣುಮಕ್ಕಳಿಗೆ ಉಡುಗೊರೆಯ ಸಂದಾಯವಾಗುವುದು. ಆಷಾಢದಲ್ಲಿ ಪೂಜೆಮಾಡಿದ ಮಣ್ಣಿನ ಬಸವಣ್ಣನ ಮೂರ್ತಿಗಳನ್ನು, ಹೊಲಗಳಿಗೆ ಒಯ್ದು ವಿಸರ್ಜಿಸುವ ವಿಶೇಷ ಕಾರ್ಯಕ್ರಮವು ಅಂದೇ ನಡೆಯುವುದು. ಮಲೆನಾಡಿನ ಒಕ್ಕಲಿಗರು, ಭೂದೇವಿಗೆ ಕಟ್ಟಂಬಲಿಯ ನೈವೇದ್ಯ ಸಲ್ಲಿಸಿ, ಬೆಳೆಯ ಹೊಲಗಳಲ್ಲಿ ಚರಗವನ್ನು ಚೆಲ್ಲುವರು. ಯಾವುದೇ ಹೊಸ ಗೆಯ್ಮೆಯನ್ನು ಪ್ರಾರಂಭಿಸಲು ಆ ದಿನವು ಅವರಿಗೆ ಶುಭಮುಹೂರ್ತದಿನವಾಗಿರುವುದು. ಚತುರ್ಥಿಯಿಂದ ಷಷ್ಠಿಯವರೆಗಿನ ಮೂರು ದಿನಗಳೂ ಅವರ ಪಂಚಮಿಯ ಹಬ್ಬದಲ್ಲಿ ಬರುವುವು.

ಶುಕ್ಲ ಸಪ್ತಮಿಯು ಶೀತಗೌರಿಯ ವ್ರತದಿನವಾಗಿರುವುದು. ಇದೂ ಪುರಾಣೋಕ್ತವ್ರತ. ಕೇವಲ ಸುಮಂಗಲೆಯರಿಗಾಗಿ! ಶೀತಲಾದೇವಿಯೆಂದರೆ ಜಲಾಭಿಮಾನಿ ದೇವತೆ ಎಂದು ಹೇಳಬಹುದು. ನೀರಲ್ಲಿ ಮುಳುಗಿ ಸತ್ತ ಮಕ್ಕಳನ್ನು ಮರಳಿಪಡೆಯಲು ಮಾಡಬೇಕಾದ ವ್ರತೋಪಾಸನೆಯಿದು. ಈ ವ್ರತದ ಕಥೆಯಲ್ಲಿ ನೀರುಬೀಳದ ಕೆರೆಗೆ ಬಲಿಯನ್ನಾಗಿ ಅರ್ಪಿಸಿದ ರಾಜಕುಮಾರನ ತಾಯಿ, ಶೀತಲಾದೇವಿಯನ್ನು ಪೂಜಿಸಿ, ತುಂಬಿದ ಕೆರೆಯೊಳಗಿಂದ, ಕಳೆದುಹೋದ ಮಗನನ್ನು ಪಡೆದ ಪವಾಡದ ವಿಷಯ ನಿರೂಪಿತವಾಗಿದೆ. ಈ ವ್ರತವನ್ನು ಕೈಕೊಂಡು ನಡೆಸುವವರು ನಮ್ಮ ನಾಡಿನಲ್ಲಿ ಅಪೂರ್ವ. ಮರುದಿನ ಅಷ್ಟಮಿಯಂದು ದುರ್ಗಾದೇವತೆಗೆ ಪವಿತ್ರಾರೋಪಣ ಪೂಜೆಯನ್ನು ಸಲ್ಲಿಸಬೇಕು. ನವಮಿಯಂದು ಕುಮಾರೀವ್ರತವನೂ ದಶಮಿಯಂದು ಆಶಾದೇವಿವ್ರತವನ್ನೂ ಮಾಡಬೇಕೆಂದು ನಿಯಮವಿದೆ.



ಶುಕ್ಲ ಏಕಾದಶಿಯಂತೂ ನಿತ್ಯವ್ರತ. ಇಂದಿನಿಂದ ಮೊಸರಿನ ವ್ರತವು ಪ್ರಾರಂಭವಾಗುವುದು. ಮುಂದೆ ಒಂದು ತಿಂಗಳವರೆಗೆ ಮೊಸರಿನೂಟ ನಿಷಿದ್ಧ. ಶ್ರಾವಣಪೌರ್ಣಿಮೆಯು ಉಪಾಕರ್ಮದ ದಿನವಂತೂ ಸರಿಯೇ ಸರಿ! ಅಲ್ಲದೆ ಇಂದು ರಕ್ಷಾಬಂಧನದ ನಿಯಮವನ್ನೂ ವಿಧಿಸಲಾಗಿದೆ. ಉತ್ತರಕರ್ನಾಟಕದಲ್ಲಿ ಈ ಹುಣ್ಣಿಮೆಗೆ 'ನೂಲಹುಣ್ಣಿವೆ' ಎಂದು ಹೆಸರು ರೂಢವಾಗಿರುವುದಕ್ಕೆ, ಈ ರಕ್ಷಾಬಂಧನದ ವಿಧಿಯೇ ಕಾರಣವಾಗಿರಬಹುದು. ಸಮುದ್ರ ತೀರದವರಿಗೆ ಈ ಹುಣ್ಣಿಮೆಯು ಮಹತ್ತ್ವದ ಹಬ್ಬವಾಗಿದೆ. ಎಲ್ಲರೂ ಸಮುದ್ರಾಜನಿಗೆ ನಾರಿಕೇಳ ಫಲವನ್ನು ಸಮರ್ಪಿಸಿ, ಸ್ನಾನಮಾಡಿ, ಸಮುದ್ರಪೂಜೆಯನ್ನು ಮಾಡುವರು. ನಾವಿಕರು ಈ ಹುಣ್ಣಿಮೆಯ ಶುಭದಿನದಲ್ಲಿಯೆ ತಮ್ಮ ನೌಕಾಸಂಚಾರವನ್ನು ಪುನರಾರಂಭಿಸುವರು. ಶ್ರೀಹರಿಯ ಹಯಗ್ರೀವತಾರಕ್ಕೆ ಈ ಹುಣ್ಣಿವೆಯೇ ಜಯಂತಿ ದಿನವಾಗಿದೆ.

ವದ್ಯಪ್ರತಿಪದೆಯಿಂದ ತೃತೀಯೆಯ ವರೆಗಿನ ಮೂರುದಿನಗಳು, ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆಯ ದಿನಗಳೆಂದು ನಮ್ಮ ನಾಡಿನಲ್ಲೆಲ್ಲ ಪ್ರಸಿದ್ಧವಾಗಿವೆ. ಶ್ರೀ ಮಂತ್ರಾಲಯ ಕ್ಷೇತ್ರದಲ್ಲಿ ಈ ಆರಾಧನೆಯ ಉತ್ಸವವು ವಿಜೃಂಭಣೆಯಿಂದ ಜರುಗುವುದಲ್ಲದೆ, ಶ್ರೀರಾಯರ ವೃಂದಾವನವು ಎಲ್ಲೆಲ್ಲಿ ಪ್ರತಿಷ್ಠಾಪಿತವಾಗಿದೆಯೋ, ಆ ಆ ಪಳ್ಳಿ–ಪಟ್ಟಣಗಳಲ್ಲೆಲ್ಲ ಈ ಉತ್ಸವವು ನಡೆಯುವುದು. ಶ್ರೀರಾಘವೇಂದ್ರರ ಭಕ್ತರ ಸಂಖ್ಯೆ ಅಪಾರವಾಗಿದೆ; ಜಾತಿ–ಮತಗಳನ್ನೂ ಅದು ಮೀರಿನಿಂತಿದೆ.

ವದ್ಯ ಅಷ್ಟಮಿಯು ಗೋಕುಲಾಷ್ಟಮಿ. ಧರ್ಮಸಂಸ್ಥಾಪನೆಗಾಗಿ ಶ್ರೀಹರಿಯು ಕೃಷ್ಣರೂಪದಿಂದ ಧರೆಗೆ ಅವತರಿಸಿದ ದಿನವಿದು. ಶ್ರೀಹರಿಯ ಉಪಾಸಕರಿಗೆಲ್ಲ ಶ್ರೇಷ್ಠವಾದ ಹಬ್ಬವಿದು. ಮನೆ–ಮನೆಗಳಲ್ಲಿಯೂ ಮಠ ಮಂದಿರಗಳಲ್ಲಿಯೂ ಜನ್ಮಾಷ್ಟಮಿಯ ವ್ರತಪೂಜೆಗಳು ವಿಧ್ಯುಕ್ತವಾಗಿ ಜರುಗುವುವು. ಸಂಪ್ರದಾಯವಂತ ಭಕ್ತರೆಲ್ಲರಿಗೂ ಅಂದು ಉಪವಾಸದಿನ. ಮರುದಿನ ನವಮಿ ಪಾರಣೆಯ ಹಬ್ಬ. ನೈವೇದ್ಯಕ್ಕಾಗಿ ಅಂದು ವಿಧವಿಧದ ಮಧುರ ಖಾದ್ಯಗಳನ್ನ, ಲಡ್ಡುಗೆ ಚಕ್ಕುಲಿಗಳನ್ನೂ ಮಾಡಿರುವರು. ಶ್ರೀಕೃಷ್ಣನ ದೇವಸ್ಥಾನಗಳಲ್ಲಿ ವಿಶೇಷ ಪೂಜೆ–ಸೇವೆಗಳೂ ನಡೆಯುವುವು.

ಶ್ರಾವಣವದ್ಯ ಅಮಾವಾಸ್ಯೆಯು 'ಬೆನಕನ ಅಮಾಸಿ' ಎಂಬ ಹೆಸರಿನಿಂದ

ನಮ್ಮ ನಾಡಿಗರಲ್ಲಿ ಪ್ರಸಿದ್ಧವಿದೆಯಾದರೂ, 'ಪಿಠೋರಿ ಅಮಾವಾಸ್ಯೆ' ಎಂಬ ಇನ್ನೊಂದು ಸಾರ್ಥನಾಮವೂ ಅದಕ್ಕಿದೆ. ಅನೇಕ ಕುಟುಂಬಗಳಲ್ಲಿ ಅಂದು 'ಪಿಠೋರೀವ್ರತ'ವನ್ನು ಆಚರಿಸಲಾಗುವುದು. ಇದೊಂದು ಕಾಮ್ಯವ್ರತ. ಅಕಾಲದಲ್ಲಿ ಮಕ್ಕಳು ಸಾಯಬಾರದೆಂಬ ಕೋರಿಕೆ, ಈ ವ್ರತಾಚರಣೆಗೆ ಮೂಲಕಾರಣವಾಗಿದೆ. ಅರುವತ್ತುನಾಲ್ಕು ಜನ ಯೋಗಿನಿಯರ ಪೂಜೆ ಇದರಲ್ಲಿ ಪ್ರಧಾನಾಂಗವಾಗಿರುವುದು. ಭವಿಷ್ಯೋತ್ತರ ಪ್ರರಾಣದಲ್ಲಿ ಈ ವ್ರತಮಾಹಾತ್ಮ್ಯವು ಹೇಳಲ್ಪಟ್ಟಿದೆ. ಇದಕ್ಕೆ ಸಂಬಂಧಿಸಿದ ಕಥೆಯಲ್ಲಿ, ಹಡೆದ ದಿನವೇ ಮಗುವು ಸತ್ತುಹೋಗುವ ಒಬ್ಬ ದುಃಖಿನೀ ಮಹಿಳೆಯ ಕರುಣಾಕಾಹಿನಿಯನ್ನು ವಿವರಿಸಲಾಗಿದೆ. ಏಳು ಮಕ್ಕಳನ್ನು ಕಳೆದುಕೊಂಡ ಆ ಅಭಾಗಿನಿ ಎಂಟನೆಯ ಮಗುವನ್ನೂ ಹಡೆದ ದಿನವೇ ಕಳೆದುಕೊಳ್ಳುವಳು. ಇದರಿಂದ ರೊಚ್ಚಿಗೆದ್ದ ಆಕೆಯ ಮಾವ, ಕೂಸಿನ ಶವದೊಂದಿಗೆ ಅವಳನ್ನು ಕಾಡಿಗೆ ಅಟ್ಟುವನು. ಭೂತಗಳ ಆಕರವಾದ ಆ ಕಾಡಿನಲ್ಲಿ ಆ ತಾಯಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅದೇ ಕಾಡಿನ ಮಧ್ಯದಲ್ಲಿರುವ ಮಠದ ಮಹಿಳೆಯೊಬ್ಬಳ ಉಪದೇಶದಿಂದ, ಆಕೆ ಅರುವತ್ತುನಾಲ್ಕು ಯೋಗಿನಿಯರ ಮೂರ್ತಿಗಳನ್ನು ಹಿಟ್ಟಿನಿಂದ ಮಾಡಿ, ಪೀಠದಮೇಲೆ ಪ್ರತಿಷ್ಠಾಪಿಸಿ, ಪೀಠೋರಿ ವ್ರತವನ್ನು ಮಾಡುವಳು. ಇದರಿಂದ ಪ್ರೀತರಾದ ಯೋಗಿನಿಯರು, ಸತ್ತ ಕೂಸನ್ನು ಬದುಕಿಸಿದರಲ್ಲದೆ, ಮೊದಲೇ ಸತ್ತುಹೋದ ಏಳು ಮಕ್ಕಳನ್ನೂ ಆ ತಾಯಿಗೆ ಒಪ್ಪಿಸಿಕೊಡುವರು. ಎಂಟು ಮಕ್ಕಳೊಂದಿಗೆ ಮನೆಗೆ ಬಂದ ಸೊಸೆಯನ್ನು ಅತ್ತೆ–ಮಾವಂದಿರು ಆದರಿಂದ ಬರಮಾಡಿಕೊಂಡು, ಎಲ್ಲರೂ ಸುಖದಿಂದ ಇದ್ದರು. ಇದೇ ಈ ವ್ರತಕಥೆಯ ಸಾರಾಂಶ.

ನಮ್ಮ ನಾಡಿನಲ್ಲಿ ಶಿವದೇವಾಲಯಗಳಲ್ಲಿಯೂ ಶೈವಮಠಗಳಲ್ಲಿಯೂ ಶ್ರಾವಣಮಾಸದ ವಿಶಿಷ್ಟ ಪೂಜೆ–ಪುರಸ್ಕಾರಗಳೂ ಸಾಂಸ್ಕೃತಿಕ ಕಾರ್ಯಕಲಾಪಗಳೂ ನಡೆದಿರುವುವು. ಕೆಲಕೆಲವು ಗ್ರಾಮ–ನಗರಗಳಲ್ಲಂತೂ ಚಿಕ್ಕಪುಟ್ಟ ಜಾತ್ರೆಗಳೂ ಜರುಗುವುವು. ನಂದಿಧ್ವಜದ ಮೆರೆವಣಿಗೆಯಿಂದ ಚಿತ್ತಾಕರ್ಷಕವಾದ ಆ ಜಾತ್ರೆಗಳು, ಕರಡಿ, ನಾದಸ್ವರ, ಸಂಬಾಳ, ಕಂಸಾಳ್ ಮೊದಲಾದ ವಾದ್ಯವಾದನದ ರಭಸದಿಂದ ಜನರನ್ನು ಉತ್ಸಾಹದಿಂದ ಕುಣಿದಾಡಿಸುವುವು. ಶ್ರಾವಣದ ಪ್ರತಿಯೊಂದು ಸೋಮವಾರವೂ ಹಳ್ಳಿಗಳಿಗೆ ಉತ್ಸವ ದಿನವಾಗಿರುವುದು. ನಾಗಪಂಚಮಿಯಂತೆ ಶ್ರಾವಣಸೋಮವಾರದಂದೂ ತೊಲೆಜೋಕಾಲಿ, ಮರಜೋಕಾಲಿಗಳು ಅಲ್ಲಿ ಕಾಣುವುವು. ಜಿದ್ದಿಗಾಗಿ ಕಟ್ಟಿದ ನಿಚ್ಚಣಿಕೆಯ ಜೋಕಾಲಿ, ಮಿಂಡನ ಜೋಕಾಲಿಗಳು, ಪ್ರಯತ್ನಶೀಲರಾದ ಅನೇಕ ತರುಣರನ್ನು ನೆಲಕ್ಕೆ ಕೆಡಹಿ, ಮೈಯನ್ನು ನುಗ್ಗುಮಾಡಿ,



ಜನರ ನಗೆಗೆ ಗುರಿಯನ್ನಾಗಿ ಮಾಡುವುವು. ಬೇರೆಬೇರೆ ಬಗೆಯ ಸತ್ತ್ವಪರೀಕ್ಷಕ ಜಿದ್ದಿನಾಟಗಳನ್ನೂ ನಮ್ಮ ನಾಡಿಗರು ಈ ತಿಂಗಳಲ್ಲಿ ನಡೆಸುವರು. ಜಿದ್ದಿನಲ್ಲಿ ಗೆದ್ದ ಬಂಟರ ಮೆರೆವಣಿಗೆಯನ್ನೂ ಮಾಡುವರು. ನವಭಾರತದ ಸ್ವಾತಂತ್ರ್ಯ ದಿನವು ಇದೇ ತಿಂಗಳಲ್ಲಿ ಬರುತ್ತದೆ. ಒಂದೆ ಮಾತಿನಲ್ಲಿ ಹೇಳಬೇಕೆಂದರೆ, ಶ್ರಾವಣಮಾಸವೆಂದರೆ, ನಮ್ಮ ನಾಡಿನ ಹೆಣ್ಣು–ಗಂಡುಗಳೆಲ್ಲ ಹಾರೈಸುವ ಮಾಸ; ಬೇಡುವ ಬಯಸುವ ಮಾಸ!

* * *

## ೬. ಭದ್ರಭವಿಷ್ಯತ್ ಸಂಯೋಜಕ–ಭಾದ್ರಪದಮಾಸ

ಶ್ರಾವಣದಂತೆಯೆ ಭಾದ್ರಪದವೂ, ಸಂಪ್ರದಾಯಸಮೃದ್ಧಿಯ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾದ ಮಾಸವಾಗಿದೆ. ಶ್ರಾವಣವು ದೇವ–ದೇವತಾ ಸಂಬಂಧದ ವ್ರತ–ಪೂಜೆಗಳಿಗೆ ಮಾತ್ರಮೀಸಲಾಗಿದ್ದರೆ, ಭಾದ್ರಪದವು ದೇವ–ದೇವತಾ ವ್ರತ–ಪೂಜೆಗಳಿಗೂ ಪಿತೃದೇವತಾ ಸಂತೃಪ್ತಿಯ ಶ್ರಾದ್ಧ ಕರ್ಮಗಳಿಗೂ ಎಡೆಯನ್ನು ಕಲ್ಪಿಸಕೊಟ್ಟಿದೆ. ಈ ತಿಂಗಳ ಶುಕ್ಲಪಕ್ಷದ ದಿನಗಳೆಲ್ಲವೂ ದೇವಪೂಜೆಗಾಗಿ ಮೀಸಲಾಗಿರುವುವು, ಕೃಷ್ಣಪಕ್ಷದ ದಿನಗಳೆಲ್ಲವ ಪಿತೃಪೂಜೆಗಾಗಿ ಕಾದಿರಿಸಿದುವು. ಈ ತಿಂಗಳಲ್ಲಿಯೂ ಪೂಜೆ–ಪರ್ವಗಳಿಲ್ಲದ ದಿನಗಳು ಅಪೂರ್ವವಾಗಿರುವುವು. ಒಬ್ಬನ ಮನೆಯಲ್ಲಿ ಒಂದು ಬಗೆಯ ವ್ರತ–ಪೂಜೆ ನಡೆದರೆ, ಇನ್ನೊಬ್ಬರ ಮನೆಯಲ್ಲಿ ಮತ್ತೊಂದು ಬಗೆಯ ವ್ರತ–ಪೂಜೆ ನಡೆದಿರುವುವು.

ಭದ್ರವಾದ ಪದಗಳನ್ನೂರುತ್ತ ಭಾದ್ರಪದಮಾಸ, ಶ್ರಾವಣದ ಕೊನೆಯ ರಾತ್ರಿಯ ಕರಿಯ ಪರದೆಯನ್ನು ಮೆಲ್ಲಗೆ ಸರಿಸುತ್ತ ಮಹೀತಳಕ್ಕೆ ಮುಖತೋರಿಸುವುದು. ಹಬ್ಬಗಳ ಸವಿ–ಸಡಗರಗಳಲ್ಲಿಯೆ ಶ್ರಾವಣಮಾಸವನ್ನು ಕಳೆದ ನಮ್ಮ ಜನತೆಗೆ, ಹಬ್ಬಗಳ ಹೊರೆಯನ್ನು ಹೊತ್ತುಕೊಂಡು ಬಂದ ಭಾದ್ರಪದಭೂಪ, ಹೊಸಬನಂತೇನೂ ತೋರುವುದಿಲ್ಲ. ಆದರೆ ನಿಸರ್ಗನಾರಿ, ಶ್ರಾವಣದಿಂದ ಭಾದ್ರಪದವು ಬೇರೆಯೆಂಬುದನ್ನು ಲೋಕಕ್ಕೆ ತಿಳುಹಲು ಅನೇಕ ಹೊಸಹೊಸ ರೂಪ–ಲಕ್ಷಣಗಳನ್ನು ನಿರ್ಮಿಸಿರುವಳು.

ಮೃಗಪಂಚಕದ ಜಡಿಮಳೆ ಶ್ರಾವಣದಲ್ಲಿಯೇ ಕೊನೆಗೊಳ್ಳುವುದರಿಂದ, ಭಾದ್ರಪದಮಾಸದ ಆಕಾಶವು ಮಾಘಾಪಂಚಕದ ಹೊಡೆಮಳೆಯ ಮೋಡಗಳಿಗೆ ಎಡೆಗೊಟ್ಟಿರುವುದು. ತಿಂಗಳುದ್ದಕ್ಕೂ ತೆರೆಮರೆಯಲ್ಲಿ ಅಡಗಿದ ಬೆಳಕಿನೊಡೆಯ ಭಾಸ್ಕರನು, ಆಗಾಗ ತನ್ನ ಮುಖವನ್ನು ಹೊರಕ್ಕೆ ತೋರಿಸಿ, ತನ್ನ ಹೊಂಬಿಸಿಲಿನಿಂದ ಹೊಲ–ನೆಲಗಳನ್ನು ಸಿಂಗರಿಸುತ್ತಿರುವನು. ಸೂರ್ಯನ ಮೆಲುಬಿಸಿಲಿನಿಂದ ಪ್ರಾಣಸತ್ತ್ವವನ್ನು ಹೀರಿಹೀರಿ, ಹೊಲದಲ್ಲಿಯ ಬೆಳೆಗಳು, ತಮ್ಮ ಮೈಯ ಹಸುರನ್ನು ಹೆಚ್ಚಿಸಿಕೊಳ್ಳುತ್ತಿರುವುವು. ಸೂರ್ಯನ ಮುಖದರ್ಶನದಿಂದ ಭೂಮಿತಾಯಿ,



ಇದುವರೆಗಿನ ತನ್ನ ರೊಚ್ಚು–ಕೊಚ್ಚೆಯ ದೇಹಭಾಗಗಳನ್ನು ಸ್ವಚ್ಛಗೊಳಿಸುತ್ತಿರುವಳು. ಮೇರೆ ಮೀರಿ ಹರಿಯುತ್ತಿದ್ದ ಹುಚ್ಚುಹೊಳೆಗಳು, ತಮ್ಮ ತಟಗಳೆರಡರ ನಡುವೆ ತುಂಬುದೊರೆಗಳಾಗಿ ಗಂಭೀರಗತಿಯಲ್ಲಿ ಸಾಗುತ್ತಿರುವುವು. ಪ್ರವಾಹದ ನೀರಿನ ಕದಡು ಕಡಿಮೆಯಾಗುತ್ತಿರುವುದು.

ಬೆಳೆದು ಬಸಿರಿನ ಹರಯಕ್ಕೆ ಬಂದ ಬತ್ತದ ಗದ್ದೆಗಳ ಬೆಳೆಯ ಸಿರಿ, ಭಾದ್ರಪದಮಾಸದಲ್ಲಿ ನಿಂತುನಿಂತು ನೋಡುವಂತಿರುವುದು; ದಿನದಿಂದ ದಿನಕ್ಕೆ ಹೊಸ ಬಗೆಯ ಚೆಲುವು, ಹೊಸಪರಿಯ ಬೆಡಗು! ಸುಯ್ಯೆಂದು ಬೀಸುವ ಗಾಳಿಗೆ ಮೈಯನ್ನು ತೂಗಾಡಿಸುವ ಬತ್ತದ ಗದ್ದೆಗಳು, ನವಜೀವನದಿಂದ ತುಂಬಿ ನಲಿದಾಡುತ್ತಿರುವಂತೆ ಕಾಣುವುವು. ಕಬ್ಬಿನ ತೋಟಗಳಲ್ಲಿಯ ಕಬ್ಬಿನ ಬೆಳಸು, ತನ್ನ ತಿಳಿಹಸುರು ಗರಿಗಳನ್ನು ಅಲ್ಲಾಡಿಸುತ್ತ, 'ತ್ಯಾಗಕ್ಕಾಗಿ ಈ ನೆಲದಲ್ಲಿ ಹುಟ್ಟಿಬಂದಿರುವ ತನ್ನ ಬಾಳು ನಿಜವಾಗಿಯೂ ಧನ್ಯತೆಯಿಂದ ತುಂಬಿದುದು' ಎಂದು ಹಿರಿಹಿರಿ ಹಿಗ್ಗುತ್ತಿರುವುದು. ಅದೋ, ಅಲ್ಲಿ ಅಲಸಂದೆಯ ಹೊಲಗಳನ್ನು ನೋಡಿರಿ! ಹುಟ್ಟಿದ ನೆಲವನ್ನೆಲ್ಲ ಹಸುರುಬಳ್ಳಿಯಿಂದ ಮುಚ್ಚಿದೆ; ಬಳ್ಳಿಗಳ ತುಂಬ ಕಳ್ಳಿಯ ಕುಡಿಗಳಂತಹ ಹಸುರ್ಗಾಯಿಗಳು ನಿಡಿದಾಗಿ ನಿಂತುಕೊಂಡಿವೆ; ಹೊಸತಾಗಿ ಹಡೆದ ಎಳಜೀವಗಳನ್ನು ಸಂರಕ್ಷಿಸಲು ಬಿರುಸಾದ ಹಸುರು ಹೊದಿಕೆಗಳನ್ನು ಅವು ಭದ್ರವಾಗಿ ಹೊದ್ದಿಸಿವೆ.

ಬಯಲುಸೀಮೆಯ ಹೊಲಗಳ ಬೆಡಗೇ ಅದೊಂದು ಹೊಸ ರೀತಿಯದು. ಮುಂಗಾರುಜೋಳದ ಬೆಳೆಗಳು ಹೊಡೆಯ ದಾರಿಯನ್ನು ಕೆಲವು ಕಾಯುತ್ತಿದ್ದರೆ, ಇನ್ನು ಕೆಲವು ಹೊಡೆ ಹೊತ್ತುನಿಂತು, ಸಂತೋಷದಿಂದ ನಮ್ಮ ಹಸುರುಗರಿಗಳನ್ನು ತೊನೆದಾಡಿಸುತ್ತಿರುವುವು. ಅಕ್ಕಡಿಯ ಬಳ್ಳಿಸಾಲುಗಳು ಬೆಳೆದು ಹಬ್ಬಿ, ಜೋಳದ ದಂಟುಗಳ ಆಶ್ರಯವನ್ನು ಅಪೇಕ್ಷಿಸುತ್ತಿರುವುವು. ಹೊಲಗಳ ಸುತ್ತಲೂ ಪಟ್ಟೆಪಟ್ಟೆಯಾಗಿ ಬಿತ್ತಿದ್ದ ಹುಚ್ಚೆಳ್ಳಿನ ಗಿಡಗಳು ಹೀಚುಮೊಗ್ಗೆಗಳನ್ನು ಹೊತ್ತುನಿಂತು, ಹೂಗಳನ್ನು ಅರಳಿಸುವುದಕ್ಕಾಗಿ ಸಾಧನ ನಡೆಸಿರುವುವು. ಜೋಳದ ಹೊಲದಲ್ಲಿಯೆ ತೊಗರಿಯ ಸಾಲುಗಳು, ತನ್ನ ಸ್ವರೂಪದರ್ಶನಕ್ಕೆ ಸರಿಯಾದ ಸಮಯ ಬಂದಿಲ್ಲವೆಂದು ಬೆಳೆ–ಬಳ್ಳಿಗಳ ಹಸುರಿನಲ್ಲಿ ಹುದುಗಿಕೊಂಡೇ ಕಾಲಕಳೆಯುತ್ತಿರುವುವು. ನಿಡಿದಾಗಿ ಬೆಳೆದುನಿಂತ ಎಳ್ಳ ಬೆಳೆಯು, ಗೊನೆಗೊನೆಯಾಗಿ ಬಿಳಿಯ ಹೂಗಳನ್ನರಳಿಸಿ, ಎಲ್ಲರಿಗಿಂತ ಮೊದಲೇ ತಾನು ಫಲವತಿಯಾಗಲಿರುವೆನೆಂಬ ಬಿಂಕದಿಂದ ನಿಂತಿರುವುದು.

ಶ್ರಾವಣವು, ತನ್ನ ಹೂದೋಟದ ಸೌಂದರ್ಯವನ್ನು ಭಾದ್ರಪದಮಾಸಕ್ಕೆ

ಬಳಿವಳಿಯಾಗಿ ಕೊಟ್ಟುಹೋಗಿರುವುದು. ಶ್ರಾವಣವು ತನ್ನ ಕಾಲದ ದೇವ–ದೇವತೆಗಳಿಗೆ ಒದವಿಸುತ್ತಲಿದ್ದ ಪುಷ್ಪ–ಪತ್ರಗಳನ್ನು ಭಾದ್ರಪದವೂ ಒದವಿಸುವ ಉತ್ಸಾಹದಲ್ಲಿರುವುದು; ಇಷ್ಟೇ ಅಲ್ಲ, ತನ್ನ ವಿಶಿಷ್ಟ ಉಪಹಾರವೆಂದು ಸೇವಂತಿಕೆಯ ಗಿಡಗಳಿಗೆ ಹೂಬಿಡುವ ಶಕ್ತಿಯನ್ನು ಸಲ್ಲಿಸಿರುವುದು. ಕೆನ್ನೀಲ, ಸ್ಫಟಿಕ, ಹೊಂಬಣ್ಣಗಳಿಂದ ಕೂಡಿರುವ ಗೊರಟಿಗೆ ಹೂಗಳಿಗೆ ಈ ತಿಂಗಳು ಸುಗ್ಗಿಯ ಕಾಲ. ಕಾಡುಗಳಲ್ಲಿ ತಾವಾಗಿಯೆ ಬೆಳೆದು ಹಬ್ಬಿ ಹರಡಿದ ಸೂಜಿಮಲ್ಲಿಗೆಯ ಬಳ್ಳಿಗಳು, ಕುಸುರು–ಕುಸುರು ಎಸಳುಗಳ ಹೂವಿನ ರಾಶಿಯನ್ನೇ ಅರಳಿಸಿ ನಗಿಸುತ್ತಿರುವುವು. ತಾವರೆಯ ಕೊಳಗಳು ಬಣ್ಣ–ಬಣ್ಣದ ಮೊಗ್ಗೆ ಅರಳುಗಳಿಂದ ತಮ್ಮ ನೀರ್ಮೈಯನ್ನು ಅಲಂಕರಿಸಿರುವುವು.

ಕರಾವಳಿಯ ಕಿರುದೋಟಗಳನ್ನು ಕಂಡಿರುವಿರೇನು? ಅಡಕೆಯ ಮರಗಳು ತಮ್ಮ ಹೊಂಬಣ್ಣದ ಕಾಯ ಸರಗಳನ್ನು ಜೋಲಾಡಿಸುತ್ತಿರುವುವು. ತೆಂಗಿನ ಮರಗಳು ಗೊಂಚಲು–ಗೊಂಚಲು ಕಾಯಿಗಳನ್ನು ಪಡೆದು, ಪರಮಾತ್ಮನಿಗೆ ಅರ್ಪಿಸುವ ತವಕದಲ್ಲಿ ನಿಂತಿರುವುವು. ಎಲೆಬಳ್ಳಿಗಳು, ಕಳೆಗೂಡಿದ ಚಿಗುರೆಲೆಗಳ ಮಾಲೆಗಳನ್ನು ಮಾಡಿ, ಬಳಿಯಲ್ಲಿಯ ಆಶ್ರಯವೃಕ್ಷಗಳ ಮೈಗೆ ಸುತ್ತುತ್ತಿರುವುವು. ತೆಂಗು–ಕಂಗುಗಳ ತೋಟದ ಬೇಲಿಯುದ್ದಕ್ಕೂ ಕೇದಗಿಯ ಗಿಡಗಳ ಸಾಲು; ಭಾದ್ರಪದಮಾಸದಲ್ಲಿ ಎಂದೂ ಇಲ್ಲದಷ್ಟು ಗರಿಹೂಗಳ ಹೊಡೆಗಳನ್ನದು ಹೊರಕ್ಕೆ ಹಾಕಿರುವುದು.

ಚಾಂದ್ರವತ್ಸರದಲ್ಲಿ ಭಾದ್ರಪದಮಾಸವು ಆರನೆಯ ತಿಂಗಳು. ಸೂರ್ಯನು ಸಿಂಹರಾಶಿಯನ್ನು ಬಿಟ್ಟು ಕನ್ಯಾರಾಶಿಗೆ ಬರುವುದರಿಂದ, ಸೌರಮಾಸದ ಕನ್ಯಾಮಾಸವು ಇದೇ ತಿಂಗಳಲ್ಲಿ ಪ್ರಾರಂಭವಾಗುವುದು. ಪೂರ್ವಾಭಾದ್ರಪದಾ ನಕ್ಷತ್ರವು ಈ ತಿಂಗಳಲ್ಲಿ ಪೂರ್ವೋದಯ ಪಶ್ಚಿಮಾಸ್ತಗಳನ್ನು ಹೊಂದಿರುವುದರಿಂದಲೂ, ಪೌರ್ಣಿಮಾಸಂಬಂಧಿಯಾದುದರಿಂದಲೂ, ಚಾಂದ್ರಮಾಸದ ಈ ತಿಂಗಳಿಗೆ 'ಭಾದ್ರಪದ' ಎಂದು ಹೆಸರು ಬಂದಿದೆ. ಪ್ರಾಚೀನ ಸಂಪ್ರದಾಯಿಕರ ನಂಬುಗೆಯಂತೆ, ಈ ಮಾಸದ ನಿಯಾಮಕ ಹೃಷಿಕೇಶರೂಪದ ಶ್ರೀಹರಿಯು! ಭವಿಷ್ಯೋತ್ತರ, ಸ್ಕಾಂದಪುರಾಣಗಳಲ್ಲಿ ಈ ಮಾಸದ ಮಹಾತ್ಮ್ಯಕಥನವು ವಿಸ್ತೃತವಾಗಿ ಕಥಿತವಾಗಿದೆ.

ಈ ಮಾಸದ ಶುಕ್ಲಪಕ್ಷದಲ್ಲಿ ನಾಲ್ಕು ಜಯಂತಿ ದಿನಗಳು ಬರುತ್ತವೆ. ದ್ವಿತೀಯೆಯ ದಿನ, ಅಮೃತಮಥನ ಕಾಲದಲ್ಲಿ ಉದ್ಭವಿಸಿದ ದೇವವೈದ್ಯ ಧನ್ವಂತರಿಯ ಜಯಂತಿ. ತೃತೀಯೆಯು ಲೋಕಕಂಟಕನಾದ ಹಿರಣ್ಯಾ ದೈತ್ಯನನ್ನು



ಸಂಹರಿಸಲು ಶ್ರೀಹರಿಯು ವರಾಹಾವತಾರವನ್ನು ತಾಳಿ ಆವಿರ್ಭವಿಸಿದ ದಿನ. ಕೆಲವೊಂದು ವೈಷ್ಣವಭಕ್ತರ ಮತದಂತೆ, ಶ್ರೀಹರಿಯ ಎಂಟನೆ ಅವತಾರಿಯಾದ ಶ್ರೀಬಲರಾಮದೇವನ ಜಯಂತಿಯೂ ಭಾದ್ರಪದ ಶುಕ್ಲ ತೃತೀಯೆಯ ದಿನವೇ ಆಗುತ್ತದೆ. ಶುಕ್ಲ ದ್ವಾದಶಿಯು, ಬಲಿರಾಜನ ಅಹಂಕಾರ ಭಂಜನೆಗಾಗಿ ಶ್ರೀಹರಿಯು ಕಶ್ಯಪ–ಅದಿತಿದೇವಿಯರ ಗರ್ಭದಿಂದ ಅವತರಿಸಿ ಬಂದ ಶ್ರೀವಾಮನನ ಜಯಂತಿದಿನವಾಗಿದೆ. ಈ ಜಯಂತಿ ದಿನಗಳೆಲ್ಲವೂ ವೈದಿಕ ಸಂಸ್ಕೃತಿಯ ಪ್ರಾಚೀನೇತಿಹಾಸದ ದಿವ್ಯ ಸ್ಮಾರಕದಿನಗಳೇ ಆಗಿವೆ. ಎಂತಲೇ ಅವು ಉತ್ಸವ ದಿನಗಳಾಗಿ ನಡೆದುಕೊಂಡು ಬಂದಿವೆ.

ಭಾದ್ರಪದಮಾಸದಲ್ಲಿ ಬರುವ ಹಸ್ತಾನಕ್ಷತ್ರಯುಕ್ತದಿನವು, ಸಾಮವೇದಿಗಳ ಶ್ರಾವಣಿಗೆ ನಿಯುಕ್ತ ದಿನವಾಗಿದೆ. ಕಾರಣಾಂತರದಿಂದ ಉಚಿತದಿನಗಳಲ್ಲಿ ಶ್ರಾವಣೀಸಂಸ್ಕಾರವು ನಿಂತುಹೋಗಿದ್ದರೆ, ಭಾದ್ರಪದಮಾಸದ ಬೇರೆ ಬೇರೆ ದಿನಗಳಲ್ಲಿ ಅದನ್ನು ನಡೆಯಿಸಬಹುದೆಂದು, ಸಾಂಪ್ರದಾಯಿಕ ಧರ್ಮಶಾಸ್ತ್ರವು ವಿಧಿಸಿರುತ್ತದೆ.

ಪೂಜಾ–ವ್ರತಗಳು ಈ ತಿಂಗಳಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿವೆ. ಶುಕ್ಲ ತೃತೀಯೆಯಂದು, ಹಲವು ಸುಮಂಗಲೆಯರು ಹರಿತಾಲಿಕಾಗೌರಿಯ ವ್ರತವನ್ನು ಆಚರಿಸಿದರೆ, ಇನ್ನು ಕೆಲವು ಜನರು 'ಸೊನ್ನಲಗೌರಿ' ಅಥವಾ 'ಸ್ವರ್ಣಗೌರಿ'ಯ ವ್ರತವನ್ನು ಆಚರಿಸುತ್ತಾರೆ. ಇವೆರಡೂ ಸ್ಕಾಂದಪುರಾಣೋಕ್ತ ವ್ರತಗಳು, ಸರ್ವಮಂಗಲೆಯಾದ ಶ್ರೀಪಾರ್ವತೀ ದೇವಿಯೇ ಈ ವ್ರತಗಳ ಅಧಿದೈವತ. ಹರಿತಾಲಿಕಾಗೌರೀವ್ರತದ ಕಥೆಯಲ್ಲಿ, ಗಿರಿರಾಜನ ಕುಮಾರಿಯಾಗಿ ಹುಟ್ಟಿದ ಪಾರ್ವತಿಯು, ಶಿವೇ ತನಗೆ ಪತಿಯಾಗಬೇಕೆಂದು ಕಠಿಣ ತಪಸ್ಸನ್ನಾಚರಿಸಿ, ಶಿವನನ್ನು ಮೆಚ್ಚಿಸಿ ಪತಿಯನ್ನಾಗಿ ಪಡೆದ ಲಿಂಗಪುರಾಣದ ಕಥಾಭಾವವೇ ಅಡಕವಾಗಿದೆ. ಜನ್ಮಜನ್ಮಾಂತರದಲ್ಲಿಯೂ ತಮಗೆ ಒಳ್ಳೆಯ ಪತಿಯೂ ಸೌಮಾಂಗಲ್ಯವೂ ದೊರೆಯಬೇಕೆಂಬ ಸಂಕಲ್ಪದಿಂದ, ಮಹಿಳೆಯರೆಲ್ಲರೂ ಮಾಡಬೇಕಾದ ನಿತ್ಯವ್ರತವಿದಾಗಿದೆ. ಸ್ವರ್ಣಗೌರಿಯ ವ್ರತವೂ ಸೌಮಾಂಗಲ್ಯಸಿದ್ಧಿಯ ಉದ್ದೇಶದಿಂದಲೇ ವಿಧಿಸಿದುದಾಗಿದೆ. ಸ್ಕಾಂದಪುರಾಣದಲ್ಲಿ ಬಂದಿರುವ ಈ ವ್ರತಕಥೆಯಲ್ಲಿ, ವಿಮಲಾಪುರಿಯ ಚಂದ್ರಪ್ರಭನೆಂಬ ರಾಜನು, ಈ ವ್ರತವನ್ನು ಅಪ್ಸರೆಯರಿಂದ ಪ್ರೇರಿತವಾಗಿ ಆಚರಿಸಿ, ತನ್ನ ಇಬ್ಬರು ಪತ್ನಿಯರಿಗೆ ಈ ವ್ರತವಿಧಾನವನ್ನು ಉಪದೇಶಿಸಿದುದೂ, ಹಿರಿಯ ಹೆಂಡತಿಯು ಗಂಡನ ಉಪದೇಶವನ್ನು ದುರ್ಲಕ್ಷಿಸಿ, ದೈವೀಕ್ಷೋಭಕ್ಕೆ ಗುರಿಯಾಗಿ, ನಾನಾ ಕಷ್ಟ–

ದುಃಖಗಳಲ್ಲಿ ಸಿಲುಕಿ, ಕೊನೆಗೆ ಪಶ್ಚಾತ್ತಾಪವನ್ನು ಹೊಂದಿ ಸ್ವರ್ಣಗೌರಿಯನ್ನು ಪೂಜಿಸಿ, ಆಕೆಯ ಪ್ರಸಾದದಿಂದ ವೈಭವ–ಪದವಿಗಳನ್ನು ಪಡೆದುದೂ ವಿಧಿತವಾಗಿವೆ.

ಮರುದಿನದ ಶುಕ್ಲಚತುರ್ಥಿಯೆಂದರೆ, ನಾಡಿನ ಜನರೆಲ್ಲರಿಗೂ ಸುಪರಿಚಿತವಾದ ಗಣೇಶಚತುರ್ಥಿ. ಇದು ಸಾರ್ವಜನಿಕ ಹಬ್ಬವೆನಿಸಿದರೂ ಸಂಪ್ರದಾಯವಂತಹ ಮನೆಗಳಲ್ಲಿ ಇಂದು ಸಿದ್ಧಿವಿನಾಯಕ ವ್ರತ–ಪೂಜೆಗಳನ್ನು ನಡೆಯಿಸಲಾಗುತ್ತದೆ. ಭಾರತದಲ್ಲಿ ಗಣೇಶನನ್ನು ಆರಾಧಿಸದವರು ಯಾರೂ ಇಲ್ಲ; ಏಕೆಂದರೆ ಇವನು ಸಕಲವಿದ್ಯಾಪ್ರದಾಯಕ, ಮಂಗಲಮೂರ್ತಿ, ಸರ್ವವಿಘ್ನನಾಶಕ! ಭಾಗವತ ಧರ್ಮೀಯರಿಗಂತೂ ಗಣಪತಿಯ ಪೂಜೆಯಲ್ಲಿ ವಿಶೇಷಶ್ರದ್ಧೆ; ಏಕೆಂದರೆ ಶ್ರೀಬಾದರಾಯಣರ ಭಾರತ ಮಹಾಗ್ರಂಥದ ಲಿಪಿಕಾರನಿವ; ಭಾರತದಲ್ಲಿ ಬಂದಿರುವ ಎಲ್ಲ ಧರ್ಮ ಪ್ರಮೇಯಗಳನ್ನೂ ಕೂಲಂಕಷವಾಗಿ ಅರಿತುಕೊಂಡವ; ದೇವ–ದೇವನಿಂದ ಮೊದಲಪೂಜೆಯ ಮಾನವನ್ನು ಪಡೆದವ. ಜೈನ, ಬೌದ್ಧ ಮೊದಲಾದ ವೈದಿಕವಲ್ಲದ ಮತಗಳವರೂ ತಮ್ಮತಮ್ಮ ನಡೆವಳಿಯಂತೆ ಗಣಪತಿಯನ್ನು ಪೂಜಿಸುತ್ತಾರೆ.

ಭಾರತೀಯರ ಐದು ಪ್ರಮುಖ ಉಪಾಸ್ಯದೈವತಗಳಲ್ಲಿ ಗಣಪತಿಯೂ ಒಬ್ಬ. ವಿಷ್ಣು, ಶಿವ, ಸೂರ್ಯದೇವತೆಗಳಂತೆ ಗಣಪತಿಯೂ ಸರ್ವೋತ್ತಮದೇವನೆಂಬ ಉಪಾಸನೆ, ನಮ್ಮ ನಾಡಿನಲ್ಲಿ ಒಂದು ಕಾಲದಲ್ಲಿ ವಿಶೇಷ ಪ್ರಚಾರದಲ್ಲಿದ್ದಿತು. ಗಣಪತಿಯ ಉಪಾಸಕರು 'ಗಾಣಾಪತ್ಯರು' ಎಂದು ಕರೆಯಿಸಿಕೊಳ್ಳುತ್ತಿದ್ದರು. ಹರಿ–ಹರರ ಉಪಾಸನೆಗೆ ವಿಶೇಷ ಪ್ರಾಶಸ್ತ್ಯಯದೊರೆಯುತ್ತ ಹೋದಂತೆಲ್ಲ, ಗಣಪತಿಯು ಗೌಣಸ್ಥಾನಕ್ಕೆ ಇಳಿದು ನಿಂತುಕೊಂಡ; ಆದರೂ, ಯಾವುದೇ ಲೌಕಿಕಕಾರ್ಯದ ಪ್ರಾರಂಭದಲ್ಲಿಯೂ ಧಾರ್ಮಿಕ ಕರ್ಮಪ್ರಾರಂಭದಲ್ಲಿಯೂ ಮೊದಲಪೂಜೆ ಸಲ್ಲಬೇಕಾದುದು ಈ ಮಂಗಲಮೂರ್ತಿಗೆ!

ವಸ್ತುತಃ ಶ್ರೀಸಿದ್ಧಿವಿನಾಯಕನ ಪೂಜೆ ಒಂದೇ ದಿನದ್ದಾದರೂ, ಈಗ ರೂಢವಾಗಿರುವ ಗಣಪತಿಯ ಪೂಜಾವಿಜೃಂಭಣೆ ಅನೇಕ ದಿನಗಳವರೆಗೆ ನಡೆಯುತ್ತದೆ. ಕೆಲವರು ಗಣಪತಿಯನ್ನು ಐದನೆಯ ದಿನವೇ ವಿಸರ್ಜಿಸುವರು; ಅನೇಕ ಮನೆತನಗಳಲ್ಲಿ ಅನಂತಚತುರ್ದಶಿಯಂದು ವಿಸರ್ಜಿಸುವ ಪದ್ಧತಿಯುಂಟು. ಗಣಪತಿಯ ಪೂಜೆಗೂ ಪಟಾಕಿಗಳಿಗೂ ಇರುವ ಸಂಬಂಧ, ಎಂದಿನಿಂದ ಕೂಡಿಬಂದಿದೆಯೆಂಬುದ್ನು ಸಂಶೋಧನೆಮಾಡಿ ಕಂಡುಹಿಡಿಯಬೇಕಾಗಿದೆ.

ಶ್ರೀಗಣಪತಿಯ ಪೂಜಾವ್ರತವೂ ಸ್ಕಾಂದಪುರಾಣದಲ್ಲಿ ಹೇಳಿದುದಾಗಿದೆ.



ಈ ವ್ರತದ ಮಹಾತ್ಮ್ಯವನ್ನು ಸೂತಮಹರ್ಷಿಗಳು, ವನವಾಸದಲ್ಲಿರುವ ಧರ್ಮರಾಜನಿಗೆ ವಿವರಿಸಿರುವರಲ್ಲದೆ, ಸರ್ವಸಂಕಟ ನಿವಾರಕನಾದ ಸಿದ್ಧಿವಿನಾಯಕನ ವ್ರತವನ್ನು ನೀನು ಕೂಡ ಆಚರಿಸಿ, ನಿನ್ನ ಆಪತ್ ಪರಂಪರೆಯಿಂದ ಮುಕ್ತನಾಗು ಎಂದು ಆತನಿಗೆ ಉಪದೇಶಿಸಿರುವರು. ಅವರ ಆಜ್ಞೆಯಂತೆ ಧರ್ಮರಾಯನು ಈ ವ್ರತವನ್ನು ಆಚರಿಸಿ, ವಿಜಯವೈಭವಗಳನ್ನು ಪಡೆದ ಕಥೆಯು ಅದರಲ್ಲಿ ಉಕ್ತವಾಗಿದೆ.

ಗಣಪತಿಯ ವಿಕಟರೂಪವನ್ನು ನೋಡಿ ಉಪಹಾಸಮಾಡಿ, ಆತನಿಂದ ಶಾಪಪಡೆದ ಚಂದ್ರನನ್ನು, ಗಣೇಶಚತುರ್ಥಿಯ ದಿನ ನೋಡಕೂಡದೆಂದೂ, ನೋಡಿದರೆ ಮಿಥ್ಯಾಪವಾದಕ್ಕೆ ಪಾತ್ರರಾಗಬೇಕಾಗುವುದೆಂದೂ ನಮ್ಮ ಜನರಲ್ಲಿ ಪೌರಾಣಿಕಶ್ರದ್ಧೆ ರೂಢವಾಗಿದೆ. ಆದುದರಿಂದ, ಅಂತಹ ಆಪತ್ತಿನಿಂದ ಪಾರಾಗಬೇಕಾದರೆ ಚತುರ್ಥಿಯಂದು 'ಸ್ಯಮಂತಕೋಪಾಖ್ಯಾನ' ಕಥೆಯನ್ನು ಎಲ್ಲರೂ ಶ್ರವಣಮಾಡಬೇಕೆಂದು ಸ್ಕಾಂದಪುರಾಣವು ಹೇಳುತ್ತದೆ. ವಿನಾಕಾರಣವಾಗಿ ತನ್ನ ಮೇಲೆ ಸ್ಯಮಂತಕ ರತ್ನದ ಕಳವಿನ ಅಪವಾದ ಬಂದಾಗ, ಶ್ರೀಕೃಷ್ಣನು, ಕಾಡಿನಲ್ಲಿ ಜಾಂಬವಂತನ ಕೈಸೇರಿದ್ದ ಆ ಮಣಿಯನ್ನು ಕಷ್ಟಪಟ್ಟು, ಯುದ್ಧದಲ್ಲಿ ಹೋರಾಡಿ ಜಾಂಬವಂತನಿಂದ ಪಡೆದು, ಸತ್ರಾಜಿತನಿಗೆ ಅದನ್ನುಮರಳಿ ಒಪ್ಪಿಸಿ, ಅಪವಾದವನ್ನು ಕಳೆದುಕೊಂಡನೆಂಬ ಕಥೆ ಸ್ಯಮಂತಕೋಪಾಖ್ಯಾನದಲ್ಲಿದೆ. ಭಾಗವತಪುರಾಣದಲ್ಲಿ ಬರುವ ಈ ಶ್ರೀಕೃಷ್ಣಮಹಿಮೆಯ ಕಥೆಯನ್ನು, ಸ್ಕಾಂದಪುರಾಣವು ಗಣಪತಿಯ ಪೂಜಾವ್ರತದೊಂದಿಗೆ ಹೇಗೋ ತಳುಕುಹಾಕಿದೆ. ಸ್ಕಾಂದಪುರಾಣದಲ್ಲಿ ಬಂದಿರುವ ಸ್ಯಮಂತಕೋಪಾಖ್ಯಾನದ ಕಥೆಯನ್ನು ಸೂತಪುರಾಣಿಕನು ಧರ್ಮರಾಜನಿಗೆ ಹೇಳಿದ್ದಾನೆ. ಈ ಪುರಾಣದ ಅಭಿಪ್ರಾಯದಂತೆ, ಮಿಥ್ಯಾಪವಾದದಿಂದ ಮಿಡುಕುವ ಶ್ರೀಕೃಷ್ಣ, ನಾರದರ ಉಪದೇಶದಂತೆ ಶ್ರೀಸಿದ್ಧಿ ವಿನಾಯಕನ ವ್ರತವನ್ನು ಮಾಡಿ, ಆತನ ಪ್ರಸಾದದಿಂದ ತನ್ನ ಅಪವಾದವನ್ನು ಕಳೆದುಕೊಳ್ಳುತ್ತಾನೆ. ವೇದದಲ್ಲಿಯೂ ಗಣಪತಿಯ ನಾಮನಿರ್ದೇಶವಿದೆ.

ಮರುದಿನದ ಪಂಚಮಿಯೇ ಋಷಿಪಂಚಮಿ. ಸಂಪ್ರದಾಯವಂತ ಮಹಿಳೆಯರೆಲ್ಲರೂ ಆಚರಿಸಬೇಕಾದ ವ್ರತದಿನವಿದು. ಋತುಸೂತಕವನ್ನು ಪಾಲಿಸಬೇಕೆಂಬುದು ಸನಾತನಧರ್ಮದ ಆದೇಶ. ಜ್ಞಾತಾಜ್ಞಾತವಾಗಿ ಈ ಸೂತಕದ ಪಾಲನೆಯಲ್ಲಿ ತಪ್ಪಿನಡೆದ ದೋಷಪರಿಹಾರಾರ್ಥವಾಗಿ 'ಅರುಂಧತೀಸಹಿತ ಸಪ್ತರ್ಷಿಗಳ' ಪೂಜೆಯು ಈ ವ್ರತದಲ್ಲಿ ಪ್ರಧಾನವಾಗಿರುವುದು. ಬ್ರಹ್ಮಾಂಡಪುರಾಣದ ಹೇಮಾದ್ರಿಖಂಡದಲ್ಲಿ ಈ ವ್ರತಾಚರಣೆಯ ವಿಧಿ–ವಿಧಾನಗಳೂ, ವಿಸ್ತಾರವಾದ

ಕಥೆಯೂ ಹೇಳಲ್ಪಟ್ಟಿವೆ. ಈ ಕಥೆಯು, ಶ್ರೀಕೃಷ್ಣನು ಧರ್ಮರಾಜನಿಗೆ ಹೇಳಿದುದಾಗಿದೆ. ರಜಸ್ವಲೆಯ ಮೈಲಿಗೆಯನ್ನು ಗಣಿಸದ ಪಾತಕವು, ಜನ್ಮಜನ್ಮಾಂತರದಲ್ಲಿಯೂ ಹೇಗೆ ಬಾಧೆಕೊಡುವುದೆಂಬುದನ್ನು ಕುರಿತು ಹೇಳಿದ ಇದರಲ್ಲಿಯ ಸಂಗತಿಗಳು, ಮೈಮೇಲೆ ಮುಳ್ಳುತರಿಸುವಂತಹವಾಗಿವೆ. ಕುತೂಹಲಿಗಳು ಈ ವ್ರತಕಥೆಯನ್ನು ಪೂರ್ಣವಾಗಿ ಓದಿನೋಡಬೇಕು.

ಮುಂದೆ ಮರುದಿನವೇ ಸೂರ್ಯಷಷ್ಠಿ. ಅಂದು ಸ್ನಾನಾಹ್ನಿಕಗಳನ್ನು ಮುಗಿಸಿ, ಪಂಚಗವ್ಯಪ್ರಾಶನಮಾಡಿ, ಮುಸುಕಿದ ಮೋಡದಿಂದ ಆಗಾಗ ಮುಖವನ್ನು ಹೊರಗಿಕ್ಕುವ ಸೂರ್ಯದೇವನನ್ನು ನೋಡಿ, ಆತನನ್ನು ವಿಧ್ಯುಕ್ತವಾಗಿ ಪೂಜಿಸಿದರೆ, ಅಶ್ವಮೇಧಫಲವು ಲಭಿಸುವುದೆಂದು ಪರಂಪರೆಯ ಧರ್ಮನಿಯಮ ಹೇಳುತ್ತದೆ. ಅದರಂತೆಯೆ ಆ ದಿನ ಕಾರ್ತಿಕೇಯನೆಂದು ಕರೆಯಿಸಿಕೊಳ್ಳುವ ಶ್ರೀಷಣ್ಮುಖನನ್ನು ಸಂದರ್ಶಿಸಿ ಪೂಜೆ ಸಲ್ಲಿಸುವುದರಿಂದ, ಬ್ರಹ್ಮಹತ್ಯಾದಿ ಮಹಾಪಾತಕಗಳೂ ಪರಿಹಾರವಾಗುವುವೆಂಬ ನಂಬುಗೆ ರೂಢಿಯಲ್ಲಿದೆ; ಆದರೆ ಸೂರ್ಯಷಷ್ಠಿಯನ್ನು ಆಚರಿಸುವ ಪದ್ಧತಿಯು ನಮ್ಮ ನಾಡಿನಲ್ಲಿ ಹೆಚ್ಚು ಪ್ರಚಾರದಲ್ಲಿಲ್ಲ.

ಶುಕ್ಲ ಸಪ್ತಮಿಯು ಜ್ಯೇಷ್ಠಾಗೌರಿಯ ಆವಾಹನದಿನ. ಶ್ರಾವಣಮಾಸದ ಶುಕ್ರವಾರದ ಗೌರಿಯ ಉತ್ಥಾಪನೆಯು ಇನ್ನೂ ಆಗಿರುವುದಿಲ್ಲ. ಅಂದು ಹೊಸತಾಗಿ ಬರುವ ಜ್ಯೇಷ್ಠಾಗೌರಿಯನ್ನು ಜೀವಂತಿಕಾಗೌರಿ ಬರಮಾಡಿಕೊಳ್ಳುವಳು. ಜ್ಯೇಷ್ಠಾಗೌರಿಯ ಪ್ರತೀಕವು, ಒಂದು ತಂಬಿಗೆಗೆ ಕೆಂಬಣ್ಣವನ್ನು ಹಚ್ಚಿ ಅದರ ಮೇಲೆ ಜೀವಂತಿಕಾಗೌರಿಯ ಗಡಿಗೆಯಮೇಲೆ ಬರೆದಂತಹ ಸಾಂಕೇತಿಕ ಚಿತ್ರಗಳನ್ನು ಬರೆದ ರೀತಿಯಲ್ಲಿಯೇ ಇರುವುದು. ಅದರ ಮೇಲೆ ಇರಿಸಿದ ಚಿಕ್ಕಗಿಂಡಿಯೇ ಗೌರಿಯ ಮುಖವಾಗಿರುವುದು. ಇಬ್ಬರೂ ಗೌರಿಯರ ಭೆಟ್ಟಿಯಾಗಿ ಎದುರುಗೊಂಡು ಕರೆತಂದುದರ ಗುರುತಾಗಿ, ತಲೆಬಾಗಿಲಿಂದ ಗೌರಿಯ ಜಗುಲಿಯವರೆಗೂ, ಅರಿಷಿಣ-ಕುಂಕುಮಗಳಿಂದ ಹೆಜ್ಜೆಗಳ ಗುರುತುಗಳನ್ನು ಕಲಾತ್ಮಕವಾಗಿ ಚಿತ್ರಿಸಲಾಗುವುದು. ಈ ಗೌರಿಯನ್ನು 'ಕರಕೊಳ್ಳುವ' ದಿನವೆಂದರೆ, ನಮ್ಮ ನಾಡಿನ ಸಾಂಪ್ರದಾಯಿಕ ಭಾವನೆಯ ಸುಮಂಗಲೆಯರಿಗೆಲ್ಲ ತುಂಬ ಸಂಭ್ರಮದ ದಿನ.

ಮರುದಿನದ ಅಷ್ಟಮಿ ದೂವಾಶಷ್ಟಮಿಯೆಂದು ಪುರಾಣನಾಮವನ್ನು ಪಡೆದುದಾಗಿದ್ದರೆ, 'ಎಳೆಯಷ್ಟಮಿ' ಅಥವಾ 'ದಾರ ಕಟ್ಟಿಕೊಳ್ಳುವ ಅಷ್ಟಮಿ' ಎಂದು ಅದಕ್ಕೆ ರೂಢಿಯ ಹೆಸರುಗಳಿವೆ. ಅಷ್ಟಮಿಯಂದು ಗಂಗೆ ಗೌರಿಯರ ಪೂಜೆ-ನೈವೇದ್ಯಗಳು ವಿಜೃಂಭಣೆಯಿಂದ ನಡೆಯುವುವು. ಅಂದಿನ ಅಡಿಗೆ ಅನೇಕ



ಬಗೆಯ ಪಕ್ವಾನ್ನ-ಭಕ್ಷ್ಯ-ಭೋಜ್ಯಗಳಿಂದ ಕೂಡಿರವುದು. ಎಣ್ಣೆ-ತುಪ್ಪಗಳಲ್ಲಿ ಕರಿದ ಕಡುಬು-ಕಜ್ಜಾಯ-ವಡೆಗಳು ವಿವಿಧರೀತಿಯವಾಗಿರುವುವು. ನಮ್ಮ ಗರತಿಯರ ಪಾಕಶಾಸ್ತ್ರದ ಪ್ರಾವೀಣ್ಯದ ಪ್ರದರ್ಶನವೇ ಅಂದಿನ ಗೌರಿಯೂಟದ ಅಡಿಗೆ ಎಂದು ಒಂದೇ ಮಾತಿನಲ್ಲಿ ಹೇಳಿಬಡಬಹುದು.

ಮರುದಿನ ನವಮಿಯಂದು ಜ್ಯೇಷ್ಠಾಗೌರಿಯ ವಿಸರ್ಜನೆ. ಆದಿನ ಗೌರಿಯ ಪೂಜೆ ಉತ್ತರಪೂಜೆಗಳನ್ನು ಮಾಡಿ, ಕಥೆಯನ್ನು ಕೇಳಿ, ಸುಮಂಗಲೆಯರೆಲ್ಲರೂ ಜ್ಯೇಷ್ಠಾಗೌರಿಯ ಹಂಗನೂಲುಗಳನ್ನು ವಿಧಿಪೂರ್ವಕವಾಗಿ ಕೊರಳಲ್ಲಿ ಧರಿಸಿ, ಮುತ್ತೈದೆಯರಿಗೆ ಬಾಗಿಣಗಳನ್ನು ಸಲ್ಲಿಸುವರು. ಅಂದು ಜ್ಯೇಷ್ಠಾಗೌರಿಯ ಉಪಾಸಕ ಮಹಿಳೆಯರೆಲ್ಲರಿಗೂ ತಂಗುಳೂಟ. ಮೊದಲದಿನ ಮಾಡಿದ ನೈವೇದ್ಯದಡಿಗೆಗಳನ್ನೇ ಮರುದಿನಕ್ಕೆ ಉಳಿಸಿ, ಅದನ್ನೇ ಪ್ರಸಾದವೆಂದು ಊಟಮಾಡುವರು. ಶ್ರಾವಣದ ಗಡಿಗೆಯ ಗೌರಿಯೂ ಅಂದೇ ಏಳುವಳು.

ಭಾದ್ರಪದ ಶುದ್ಧ ಅಷ್ಟಮಿಗೂ ಜ್ಯೇಷ್ಠಾದೇವಿಗೂ ಸಂಬಂಧಿಸಿದ ಜಾನಪದ ಸಂಪ್ರದಾಯವೊಂದನ್ನು ಇಲ್ಲಿ ಹೇಳಲೇಬೇಕು:

'ಅಷ್ಟಮೀ ದಿನಾ ಹುಟ್ಟಿದಾನಂ ನನ ಕೊಮರಾ
ಜ್ಯೇಷ್ಠಾದೇವೀ ನಿನ್ನ ಮಗಾ ಜೋಕುಮಾರ ॥'

ಎಂಬ ಜೋಕುಮರನ ಹಾಡನ್ನು ಅನೇಕರು ಕೇಳಿರಬಹುದು. ಈ ಜೋಕುಮಾರನ ಮೆರೆವಣಿಗೆಯೊಂದು ನಮ್ಮ ಉತ್ತರಕರ್ನಾಟಕದ ಜಾನಪದ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ಜೋಕುಮಾರನ ಬಗೆಗೆ ಕರ್ಣಪರಂಪರೆಯ ಮಾತುಗಳು ನಮ್ಮಲ್ಲಿ ಎಷ್ಟೋ ಇವೆ. ಆದರೆ ನಿಶ್ಚಿತಾಭಿಪ್ರಾಯವನ್ನು ಹೇಳುವ ಸುಸಂಬದ್ಧ ಪ್ರಮಾಣವಚನಗಳಾವುವೂ ಇಲ್ಲ. ನಮ್ಮ ನಾಡಿನಲ್ಲಿ ಜೋಕುಮಾರನ ವ್ಯಕ್ತಿತ್ವವನ್ನು ಸೂಚಿಸುವ ಕೆಲವು ಪಡೆನುಡಿಗಳಿವೆ. ಅವುಗಳಿಂದ ಅವನ ಜನ್ಮವೃತ್ತಾಂತವೊಂದೂ ತಿಳಿಯುವುದಿಲ್ಲ!

ಜೋಕುಮಾರ ಜ್ಯೇಷ್ಠಾದೇವಿಯ ಮಗನೆಂಬುದಕ್ಕೆ ಪೌರಾಣಿಕ ಆಧಾರಗಳಾವುವೂ ಇಲ್ಲ. ಅಷ್ಟಮಿಯ ಅವನ ಜನ್ಮದಿನವೆಂಬುದುಕ್ಕೆ, ಇದುವರೆಗೂ ಅವನನ್ನು ಭಾದ್ರಪದ ಅಷ್ಟಮಿಯಂದೇ ಬೆಳಕಿಗೆ ತರುವ ಜಾನಪದ ಪರಂಪರೆಯೇ ಮುಖ್ಯ ಪ್ರಮಾಣ.

'ಏ, ಜೋಕುಮಾರನ ಹಾಂಗ ಮೆರೀಬ್ಯಾಡ' ಎಂಬ ಪಡಿನುಡಿಯು ಜೋಕುಮಾರ ಪುಂಡನಾಗಿದ್ದನೆಂಬುದನ್ನು ಸೂಚಿಸುತ್ತದೆ. 'ಅಬಾಬಾ ಇವನ ಡೌಲ! ಜೋಕುಮಾರ ಆಗ್ಯಾನ ಜೋಕುಮಾರ' ಎಂಬ ಪಡಿನುಡಿಯು,

ಜೋಕುಮಾರನು ಸುಂದರನಾಗಿದ್ದನೆಂಬುದನ್ನೂ ವೈಭವದ ವೇಷ–ಭೂಷಣಗಳನ್ನು ಮಾಡಿಕೊಳ್ಳುತ್ತಿದ್ದನೆಂಬುದನ್ನೂ ತಿಳುಹುತ್ತದೆ. 'ಹೆಡಕು ಮುರಿಸಿಕೊಂಡೀ ಜೋಕುಮಾರನ ಹಾಂಗ' ಎಂಬುದು, ಜೋಕುಮಾರನ ದುರ್ಮರಣವನ್ನು ಸೂಚಿಸುತ್ತದೆ. ಅಶ್ಲೀಲತೆಯ ಸೊಂಕು ಇದ್ದ ಈತನ ವಿಷಯಕವಾದ ಪಡಿನುಡಿಗಳು ಇನ್ನೂ ಕೆಲವು ಇವೆ.

ಶ್ರೀಕೃಷ್ಣನಂತೆ ಜೋಕುಮಾರನಿಗೂ ಅಷ್ಟಮಿಯ ದಿನವೇ ಹುಟ್ಟಬೇಕೆಂದು ಎನಿಸಿದಂತೆ; ಸರಿ! ಅಷ್ಟಮಿಯಂದೇ ಹುಟ್ಟಿದ. ಅವನಂತೆಯೇ ಬೆಣ್ಣೆತಿನ್ನಬೇಕೆಂದು ಎನಿಸಿತಂತೆ; ತಿಂದ! ಅವನಂತೆಯೆ ಬಂಟತನವನ್ನು ತೋರಿಸಬೇಕೆಂದು ಎನಿಸಿತಂತೆ; ವಿವೇಕವಿಲ್ಲದ ಬಂಟತನದ ಪ್ರದರ್ಶನಕ್ಕೆ ತೊಡಗಿ, ಜನತೆಯ ಅಪ್ರೀತಿಗೆ ಪಾತ್ರನಾದ! ಹುಟ್ಟಿದ ಎಂಟನೆಯ ದಿನವೇ ಒಬ್ಬ ಅಗಸರ ಮುದುಕಿಯಿಂದ ಬೆನ್ನಮೂಳೆ ಮುರಿಸಿಕೊಂಡು. ಒಗೆಯುವಕಲ್ಲ ಅಡಿಯಲ್ಲಿಯೇ ಸಮಾಧಿಹೊಂದಿದ, ಭಾಗವತದಲ್ಲಿ ಬರುವ ಕೃಷ್ಣ ವಿರೋಧಿಯಾದ ಪೌಂಡ್ರಕ ವಾಸುದೇವನ ಚರಿತ್ರೆಯಿಂದ ಆವಿರ್ಭವಿಸಿದ ಜಾನಪದ ಪ್ರತಿರೂಪವೇ ಏನೋ ಈತ!

ಜೋಕುಮಾರನನ್ನು ಈಗಲೂ ಮೆರೆಸುವವರು ಕಬ್ಬಿಲಿಗ ಕುಲದವರು, ಬಾರಿಕಾರರು, ತಳವಾರರು, ಮಡಿವಾಳರು, ಸುಣ್ಣಗಾರರು, ಅಂಬಿಗರು ಇವರೆಲ್ಲರೂ ಕಬ್ಬಿಲಿಗ ಪಂಗಡಕ್ಕೆ ಸೇರಿದವರೇ! ಈ ಪಂಗಡಗಳವರಲ್ಲಿಯೇ ಜೋಕುಮಾರ ಜನಿಸಿದಂತೆಯೂ ಲೋಕಕಥೆಯಿದೆ. ಜೋಕುಮಾರನನ್ನು ಹೊತ್ತು ಮೆರೆಸುವ ಹೆಣ್ಣುಮಕ್ಕಳು, ಒಂದು ವಿಶಿಷ್ಟ ಧಾಟಿಯಲ್ಲಿ, ಜೋಕುಮಾರನಿಗೆ ಸಂಬಂಧಿಸಿದ ಹಾಡುಗಳನ್ನು ಹೇಳುವರು; ಆದರೆ ಆ ಹಾಡುಗಳಲ್ಲಿ ಅವನ ಜೀವನಚರಿತ್ರೆಗೆ ಸಂಬಂಧಿಸಿದ ಸಂಗತಿಗಳಾವುವೂ ದೊರೆಯುವುದಿಲ್ಲ;

ಸಂದೀಯ ಮನಿಯಂತಂಜೂತ ನಾ ಬಂದೆ–
ನಂದದೀವಿಗೀ ಮನಿಯವಳೆ – ಜೋಕುಮಾರ
ನಂದದೀವಿಗೀ ಮನೆಯವಳೇ ನನ್ನ ತಾಯವ್ವ
ಗಂಧವ ಇಡು ನನ್ನ ಕೊಮರಾಗ ಜೋಕುಮಾರ ॥೧॥

ಹಾದೀಯ ಮನಿಯಂತ ಸಾಧಿಸೀ – ನಾ ಬಂದೆ
ಸಾಲ್ದೀವಿಗೀ ಮನಿಯವಳ ಜೋಕುಮಾರ ॥



ಸಾಲ್ದೀವೀಗೀ ಮನಿಯವಳೇ ನನ ತಾಯವ್ವಾ
ಸಾದವಾ ಇಡು ನನ್ನ ಕೊಮರಾಗ ಜೋಕುಮಾರ ॥೨॥

ಇಂತಹ ಹಾಡುಗಳು ಎಷ್ಟಿದ್ದರೂ, ಅವುಗಳಲ್ಲಿ ಜೋಕುಮಾರನ ವ್ಯಕ್ತಿತ್ವ ನಮಗೆಲ್ಲಿ ಸಿಕ್ಕಬೇಕು?

ಜೋಕುಮಾರನ ಮೂರ್ತಿ ಎಲ್ಲಿ ನೋಡಿದರೂ ಒಂದೆ ಬಗೆಯದಾಗಿರುವುವು. ತಲೆಗೆ ಪಾಗನ್ನು ತೊಟ್ಟುಕೊಂಡ, ತಿಳಿಹಳದಿ ಬಣ್ಣದ ಮುದ್ದುಮುದ್ದಾದ ಮುಖ, ರಂಗುರಂಗಿನ ತುಟಿಯ ಮೇಲ್ಬದಿಯಲ್ಲಿ ಕಿರುಮೀಸೆಗಳು! ಚೆಂದುಟಿಗಳು ತೊಡೆದ ಬೆಣ್ಣೆಯಿಂದ ಜಿಡ್ಡುಜಿಡ್ಡಾಗಿರುವುವು. ಬಲಗೈಯಲ್ಲಿ ಬಿಚ್ಚುಗತ್ತಿ ಬರಿಬೆತ್ತಲೆಯಾಗಿ ಕುಳಿತ ಹುರಿಕಟ್ಟಾದ ದೇಹ. ರಹಸ್ಯಾಂಗವು ಎದ್ದು ಕಾಣುವಂತೆ ಮೂರ್ತಿಯ ರಚನೆಯಿರುವುದು. ನಾಲಗೆಯ ರುಚಿ, ಲೈಂಗಿಕ ಕಾಮಗಳಿಗೆ ವಶನಾದ ಮನುಷ್ಯ, ಎಂತಹ ಬಲವಂತನಾದರೂ ಅವನತಿಗೆ ಗುರಿಯಾಗುವನೆಂಬುದನ್ನು ಜೋಕುಮಾರನ ಪ್ರತಿಮೆಯೂ ಜೀವನದ ಕಥೆಯೂ ಪಾಠಕಲಿಸುವಂತಿರುವುವು.

'ಯೋಗಕುಮಾರ' ಎಂಬುದರ ಅಪಭ್ರಂಶರೂಪವೇ ಜೋಕುಮಾರ ಎಂದಾಗಿರಬಹುದೆಂದು ಕೆಲವರ ಊಹೆಯಿದೆ. ಆದರೆ ಜೋಕುಮಾರನಿಗೆ ಸಂಬಂಧಿಸಿದ ಲೋಕವಾರ್ತೆಗಳಲ್ಲಿಯೂ ಜಾನಪದ ಹಾಡುಗಳಲ್ಲಿಯೂ, ಯೋಗ ಮತ್ತು ಜೋಕುಮಾರರಿಗೆ ಸಂಬಂಧವಿದ್ದಂತೆ ಎಲ್ಲಿಯೂ ಪ್ರಮಾಣಗಳಿಲ್ಲ.

ಜೋಕುಮಾರನಿಗೂ, ಕೃಷಿಕಕುಲಕ್ಕೂ ಸಂಬಂಧವಿರುವ ಸಂಪ್ರದಾಯ ನಮ್ಮಲ್ಲಿದೆಯೆಂಬುದು ಸ್ಪಷ್ಟವಾಗಿ ಕಾಣುವುದು. ಜೋಕುಮಾರನ ಮೆರೆವಣಿಗೆಗಾತಿಯರು, ಒಕ್ಕಲಿಗರ ಮನೆಗಳಿಂದ ವರುಷಗಾಣಿಕೆಯನ್ನು ಪಡೆದು, ಜೋಕುಮಾರನ ಪ್ರಸಾದವಾಗಿ ಅಳ್ಳಂಬಲಿಯನ್ನು ಮನೆ ಮನೆಗೂ ಕೊಡುವರು. ಈ ಅಳ್ಳಂಬಲಿಯೆಂದರೆ ಬೂದಿ ಮತ್ತು ಬೇವಿನೆಲೆಗಳನ್ನು ಬೆರಸಿದ ಜೋಳದ ನುಚ್ಚು. ಒಕ್ಕಲಿಗರು ಇದನ್ನು ಸೀಗೆಯ ಹುಣ್ಣಿವೆಯವರೆಗೂ ಜೋಕೆಯಿಂದ ಕಾಯ್ದಿರಿಸಿ, ಆ ದಿನ ಚರಗದೊಂದಿಗೆ 'ಅಳ್ಳಂಬಲಿ'ಯನ್ನೂ ಸೇರಿಸಿ ಹೊಲಗಳಲ್ಲಿ ಚೆಲ್ಲುವರು. ಇದರಿಂದ ಹುಲುಸಾಗಿ ಬೆಳೆ ಬರುವುದೆಂದು ಒಕ್ಕಲಿಗರ ನಂಬುಗೆ.

ಏಕಾದಶಿಯಂತೂ ನಿತ್ಯವ್ರತ. ಈ ಏಕಾದಶಿಯ ದಿನ, ಆಷಾಢದ ಶಯನೇಕಾದಶಿಯಂದು ಮಲಗಿದ ಶ್ರೀಹರಿಯನ್ನು ಮಗ್ಗಿಲು ಬದಲಿಸಿ ಬೇರೆ ಮಗ್ಗಿಲುಮಾಡಿ ಮಲಗಿಸುವುದು ವಿಷ್ಣುಭಕ್ತರಲ್ಲಿ ಸಂಪ್ರದಾಯವಿದೆ. ಎಂತಲೇ ಇದಕ್ಕೆ 'ಪರಿವರ್ತಿನೀ ಏಕಾದಶಿ' ಎಂದು ಹೆಸರಿದೆ. ಇಂದಿನಿಂದ ಕ್ಷೀರವ್ರತ

ಪ್ರಾರಂಭವಾಗುವುದು. ಆಶ್ವಿನಶುದ್ಧ ದಶಮಿಯವರೆಗೂ ಹಾಲಿನ ಆಹಾರ ನಿಷಿದ್ಧ. ದ್ವಾದಶಿಯು ವಾಮನಜಯಂತಿ ದಿನವೆಂಬುದನ್ನು ಹಿಂದೆಯೆ ಹೇಳಲಾಗಿದೆ.

ಶುಕ್ಲ ಚತುರ್ದಶಿಯು ಅನಂತ ಚತುರ್ದಶಿ; ಈ ವ್ರತವನ್ನು ಸ್ವೀಕರಿಸಿದ ಭಾವುಕರು, ಅಂದು ಅನಂತಪದ್ಮನಾಭಸ್ವಾಮಿಯನ್ನು ಪೂಜಿಸಿ, ಅನಂತನ ವ್ರತದ ಕಥೆಯನ್ನು ಕೇಳಿ, ಪತಿ–ಪತ್ನಿಯರಿಬ್ಬರೂ ಅನಂತನ ದಾರಗಳನ್ನು ಧರಿಸುತ್ತಾರೆ. ಭವಿಷ್ಯೋತ್ತರ ಪುರಾಣೋಕ್ತವಾದ ಈ ವ್ರತಮಾಹಾತ್ಮ್ಯ ಮತ್ತು ಕಥೆಗಳನ್ನು ವನವಾಸದಲ್ಲಿರುವ ಧರ್ಮರಾಜನಿಗೆ, ಆತನ ಪುರೋಹಿತರಾದ ಧೌಮ್ಯಋಷಿಗಳು ಹೇಳಿರುವರು. ಆಯುರಾರೋಗ್ಯಗಳ ಅಭಿವೃದ್ಧಿಗಾಗಿಯೂ ಚತುರ್ವಿಧ ಪುರುಷಾರ್ಥಸಿದ್ಧಿಗಾಗಿಯೂ ಈ ವ್ರತವನ್ನು ಆಚರಿಸಬೇಕೆಂದು ಆ ಪುರಾಣ ಸಾರಿರುವುದು.

ಭಾದ್ರಪದ ಪೌರ್ಣಿಮೆಯು ನಾಗರಿಕರಲ್ಲಿ 'ಅನಂತನ ಹುಣ್ಣಿವೆ' ಎಂಬ ಹೆಸರನ್ನು ಪಡೆದಿದ್ದರೆ, ನಮ್ಮ ಜಾನಪದರಿಂದ ಅದು 'ಜೋಕುಮಾರನ ಹುಣ್ಣಿವೆ' 'ಹೊಲೆಯನ ಹುಣ್ಣಿವೆ' ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತದೆ. ಜೋಕುಮಾರನ ಹುಣ್ಣಿವೆ ಎಂಬುದೇನೋ ಸಾರ್ಥಕವೆನಿಸಬಹುದು; 'ಹೊಲೆಯನ ಹುಣ್ಣಿವೆ' ಎಂದೇಕೆ ಹೇಳುವರೆಂಬುದನ್ನು ಸಂಸ್ಕೃತಿಯ ಸಂಶೋಧಕರು ಕಂಡುಹಿಡಿಯಬೇಕಾಗಿದೆ.

ಭಾದ್ರಪದ ಶುದ್ಧ ನವಮಿಯಿಂದ ಪೌರ್ಣಿಮೆಯವರೆಗೆ ಏಳು ದಿನ ಭಾಗವತಪುರಾಣದ ಸಪ್ತಾಹ, ಭಾವುಕಸಮೂಹವಿದ್ದಲ್ಲೆಲ್ಲ ನಡೆಯುವುದು. ಈ ಸಪ್ತಾಹಕ್ಕೆ 'ಪ್ರೌಷ್ಟಪದೀಸಪ್ತಾಹ' ಎನ್ನುವರು. ಏಳು ದಿನಗಳವರೆಗೂ ಪುರಾಣಿಕನು ವ್ರತಿಯಾಗಿದ್ದು, ಪುರಾಣ ಸಪ್ತಾಹವನ್ನು ನಡೆಸುವನು. ಹುಣ್ಣಿಮೆಯ ದಿನ ಪುರಾಣ ಸಮಾಪ್ತಿಯ ಮಂಗಲ ಸಮಾರಂಭ ನಡೆಯುವುದು. ಶಾಪಪಡೆದ ಪರೀಕ್ಷಿತನು, ತನ್ನ ಆಯುಷ್ಯದ ಕೊನೆಯ ಏಳು ದಿನಗಳಲ್ಲಿ ಶುಕಮುನಿಯ ಮುಖದಿಂದ ಭಾಗವತ ಪುರಾಣವನ್ನು ಶ್ರವಣಮಾಡಿ ಮುಕ್ತಿಪಡೆದ ಪೌರಾಣಿಕ ಸಂದರ್ಭ, ಈ ಭಾಗವತ ಪುರಾಣಸಪ್ತಾಹಕ್ಕೆ ಪ್ರೇರಕವಾಗಿರುವುದು.

ಕೃಷ್ಣಪಕ್ಷದ ಪ್ರತಿಪದೆಯಿಂದ 'ಮಹಾಲಯಮಾಸ' ಪ್ರಾರಂಭವಾಗುವುದು. ಈ ಹದಿನೈದು ದಿನಗಳಲ್ಲಿ ಮನೆ–ಮನೆಯಲ್ಲಿಯೂ ಪಿತೃಗಳ ಶ್ರಾದ್ಧವಿಧಿಯನ್ನು ನೆರವೇರಿಸಬೇಕಾಗುವುದು. ಸ್ವಂತದ ತಂದೆ ತೀರಿದ ತಿಥಿಯ ದಿನವೇ ಈ ವಿಧಿಯನ್ನು ನಡೆಯಿಸಬೇಕಲ್ಲದೆ, ಅಂದು ಸಮಸ್ತ ಪಿತೃಗಳನ್ನೂ ತರ್ಪಣ–ಪಿಂಡಪ್ರಧಾನಗಳಿಂದ ಸಂತೃಪ್ತಿಗೊಳಿಸೇಕೆಂದು ಧರ್ಮವಿಧಿಯಿದೆ.



ಈ ಮಾಸಾರ್ಧದಲ್ಲಿ 'ಮಹಾಭರಣಿ,' 'ಅವಿಧವಾನವಮೀ' 'ಘಾತಚತುರ್ದಶಿ' 'ಸರ್ವಪಿತೃ ಅಮಾವಾಸ್ಯೆ' ಇವು ವಿಶಿಷ್ಟ ದಿನಗಳಾಗಿವೆ. ಈ ಕಾಲದಲ್ಲಿ ಭರಣೀನಕ್ಷತ್ರದಿಂದ ಕೂಡಿದ ದಿನದಂದು, ಹೊಸತಾಗಿ ಸತ್ತವರ ಶ್ರಾದ್ಧವನ್ನು ಮಾಡಬೇಕೆಂದು ವಿಧಿಯಿದೆ. ಇದೇ ಮಹಾಭರಣೀಶ್ರಾದ್ಧ, ಸುಮಂಗಲೆಯಾಗಿ ಸತ್ತವಳ ಶ್ರಾದ್ಧವನ್ನು ಕೃಷ್ಣಪಕ್ಷದ ನವಮಿಯಂದು ಮಾಡಬೇಕೆಂದು ನಿಯಮವಿದೆ. ಇದೇ ಅವಿಧವಾನವಮಿ. ಶಸ್ತ್ರಾಸ್ತ್ರಗಳಿಂದ ಸತ್ತವರ ಶ್ರಾದ್ಧವನ್ನು ಕೃಷ್ಣಚತುರ್ದಶಿಯಂದು ಮಾಡುವರು! ಈ ದಿನವೇ ಘಾತಚತುರ್ದಶಿ. ಅಮಾವಾಸ್ಯೆಯಂದು ಸರ್ವಪಿತೃಗಳಿಗೂ ತರ್ಪಣಪಿಂಡಗಳನ್ನು ಸಮರ್ಪಿಸುವರು. ಎಂತಲೇ ಅದು ಸರ್ವಪಿತೃ ಅಮಾವಾಸ್ಯೆ. ಅಂದು ಸನಾತನಧರ್ಮದ ಎಲ್ಲ ಪಂಗಡಗಳರೂ ತಮ್ಮ ತಮ್ಮ ಪಿತೃವರ್ಗದ ಶ್ರಾದ್ಧವನ್ನು ಮಾಡುತ್ತಾರೆ. ಆದುದರಿಂದಲೇ ಆ ದಿನವನ್ನು ನಮ್ಮ ಸರಕಾರಗಳು, ಸಾರ್ವಜನಿಕ ಬಿಡುವಿನ ದಿನವೆಂದು ಸಾರಿರುತ್ತವೆ. ಭಾದ್ರಪದ ಅಮಾವಾಸ್ಯೆಯು 'ನವರಾತ್ರಿಯ ಅಮಾಸಿ', 'ಮಾನೋಮಿಯ ಅಮಾಸಿ' ಎಂಬ ಹೆಸರುಗಳಿಂದ ನಮ್ಮ ನಾಗರಿಕರಿಗೆ ಪರಿಚಿತವಾಗಿದೆ.

'ಹರಿಕಥಾಮೃತಸಾರ' ಎಂಬ ಭಕ್ತಿತತ್ತ್ವದ ಪದ್ಯಗ್ರಂಥವನ್ನೂ ಅನೇಕ ಕೀರ್ತನ ಗೀತಪ್ರಬಂಧವನ್ನೂ ರಚಿಸಿ, ಹರಿಭಕ್ತ ಪ್ರಪಂಚದಲ್ಲಿ ಮನ್ನಣೆಯ ಪೀಠದಲ್ಲಿ ಕುಳಿತ ಹರಿದಾಸವರೇಣ್ಯ ಶ್ರೀಜಗನ್ನಾಥದಾಸರ ಪುಣ್ಯತಿಥಿಯು, ಈ ತಿಂಗಳ ಶುಕ್ಲನವಮಿಯಂದು ಬರುತ್ತದೆ. ರಾಯಚೂರು ಜಿಲ್ಲೆಯ ಮಾನವಿಯಲ್ಲಿರುವ ಈ ದಾಸರ ಸ್ಮಾರಕಸ್ಥಾನದ ಬಳಿ, ಮೂರುದಿನಗಳವರೆಗೆ ಪುಣ್ಯತಿಥಿಯ ಉತ್ಸವವು ತುಂಬ ವೈಭವದಿಂದ ಜರುಗುತ್ತದೆ.

ಯಾವ ಬಗೆಯಲ್ಲಿ ನೋಡಿದರೂ ಭಾದ್ರಪದಮಾಸವು ಶುಭಭವಿಷ್ಯ ಸಂಪ್ರಾಪ್ತಿಗಾಗಿ ಮಾಡಬೇಕಾದ ವಿವಿಧಕರ್ಮಗಳಿಗೆ ತಕ್ಕ ಕಾಲವೆನಿಸಿ ಕೊಂಡಿದೆ.

* * *

## ೭. ಅನ್ನದೇವರ ಅವತರಣಕಾಲ–ಆಶ್ವಿನಮಾಸ

ಆಶ್ವಿನಮಾಸವು ಶರದೃತುವನ್ನು ಒಡಗೊಂಡೇ ಬರುವುದು. ನಮ್ಮ ಪ್ರಾಚೀನ ಕನ್ನಡ ಕವಿರಾಜರಿಗೆ ಶರದೃತುವೆಂದರಾಯಿತು; ತುಂಬ ಮುಗ್ಧರದಕ್ಕೆ; ವರ್ಷಾಕಾಲದ ಜಿಟಿಜಿಟಿ ಜಿನುಂಗಿನಿಂದ ಅವರಿಗೂ ಬೇಸರೆನಿಸುತ್ತಿದ್ದಿತೇನೋ! ಶರತ್ಕಾಲದಿಂದ ನವಚೈತನ್ಯವನ್ನು ಪಡೆದವರಾಗಿ, ಉತ್ಸಾಹದಿಂದಲೇ ಅವರು ಈ ಋತುರಾಜನ ವಂದಿಮಾಗಧರಾಗಿ ಹೊಗಳಿ ಹಾಡಿದ್ದಾರೆ.

**ಜಗನ್ನಾಥವಿಜಯದ ಕರ್ತೃ ಹೀಗೆ ಉಗ್ಗಡಿಸಿದ್ದಾನೆ:**

ತೊಲಗದ ಮೋಡವೋಡಿದುದು ತಂದಲಗುಂದಲೆಯಾಯ್ತು ಮೇಘ ಮಂ–
ಡಲವಳರಿತ್ತು ಮಿಂಚುವೆಳಗುಂ ಬರಮಾಯ್ತು ಶಿಖಂಡಿ ತಾಂಡವಂ–
ಕ್ಕಲಸಿದುದಂದು ಕುಂದಲತೆ ಕಂದಲೊಡರ್ಚಿದುವಂಚೆ ಚಂಚುವಿಂ
ನಲಿದು ಮೃಣಾಳಮಂ ಸವಿದುದಾಯ್ತು ಶರತ್‍ಪ್ರಥಮ
ಪ್ರವೇಶದೊಳ್ ॥

**ಲೀಲಾವತಿ ಪ್ರಬಂಧದ ಕವಿ ನೇಮಿಚಂದ್ರನ ಒಕ್ಕಣಿಕೆಯಿದು:**

ಮಳೆಯಿನ್ನೆತ್ತಣದೆಂಬಿನಂ ಬೆಳಗುಗುಂ ಬಾನೊರ್ಮೆ, ಮತ್ತೊಮ್ಮೆ ಪೆ–
ರ್ಮಳೆಕೊಳ್ಗುಂ; ರವಿ ಕೊಡೆ ಪಣ್ತು ಮುಗಿಲಿಂ ಸೀಳ್ದಂದದಿಂದಂ ಬಿಸಿಲ್
ಮಳೊಕೊಳ್ಗುಂ ಗಿಳಿ ಸೋವ ಪಾಮರಿಯರಂ ಕೈಮೀರೆ ನೀರವ್ರಜಂ
ಸುಳಿಗುಂ ಶಾಡ್ವಳಮಾದ ಶಾಳಿವನದೊಳ್ ನೀರಾಜನಂ ಮಾಳ್ಪವೊಲ್ ॥

**ಜನಪ್ರಿಯ ಕವಿ ಲಕ್ಷ್ಮೀಶನು ಹೇಗೆ ಹಾಡಿದ್ದಾನೆ:**

ತುರಗಂ ನಡೆದುದು ಮಣಿಉರದಿಂದ ಶರದ್ದಿನದೊ–
ಳರಸಂಚೆ ಸಂಚರಿತೊಡಗಿದುವು ನದಿಗಳು–
ಬ್ಬರಮಡಗಿ ತಿಳಿದು ಪರಿದುವು ಬೆಳತುದಾಗಸಂ
ಮೆರೆದುದುಡುರಾಜಿ ಕೂಡೆ ॥



ತರಣಿ–ಶಶಿಗಳ ಕಿರಣಮೈದೆ ನಿರ್ಮಲವಾದು –
ವರವಿಂದದಲರನರಸಿದುವಳಿಗಳೆಣ್ದೆಸೆಯ
ತರುಣಿಯರ ಗುರುಕುಚದ ಮೇಲುದಂ ಸೆಳೆದಂತೆ
ಗಿರಿನಿಕರಮೆಸೆದಿರ್ದುದು ॥

ಒಬ್ಬೊಬ್ಬ ಕವಿಯದೂ ಒಂದೊಂದು ಬಗೆಯ ಚತುರವಚನ ವಿಲಾಸ. ಎಲ್ಲರ ಬಣ್ಣನೆಗಳನ್ನೂ ಇಲ್ಲಿ ಹೇಗೆ ಹೇಳುವುದು? ಶರತ್ಕಾಲದ ಪೂರ್ವಾರ್ಧವಾದ ಆಶ್ವಿನಮಾಸವೇ ಅವರೆಲ್ಲರ ವರ್ಣನೆಗಳಿಗೆ ಲಕ್ಷ್ಯವಾಗಿದೆ ಎಂದು ಒಂದೇ ಮಾತಿನಲ್ಲಿಯೆ ಹೇಳಬಹುದು.

ಜಿಗಿಷುವೃತ್ತಿಯವರಾದ ನಮ್ಮ ನಾಡಿನ ರಾಜ–ಮಹಾರಾಜರು, ದಿಗ್ವಿಜಯ ಪ್ರಯಾಣಕ್ಕಾಗಿ ಆಶ್ವಿನಮಾಸದ ದಾರಿಯನ್ನೇ ಕಾಯುತ್ತ ಕುಳಿತಿರುತ್ತಿದ್ದರು. ಆಶ್ವಿನಮಾಸ ಕಾಲಿಕ್ಕಿತೋ, ಎಲ್ಲ ರಾಜಧಾನಿ ಉಪರಾಜಧಾನಿಗಳಲ್ಲಿಯೂ ನವರಾತ್ರಿಯ ಶಕ್ತಿದೇವತೆಯ ಮಹಾಪೂಜೆ ನಡೆಯುತ್ತಿತ್ತು ವಿಜಯಾದಶಮಿಯ ಸೀಮೋಲ್ಲಂಘನಕಾಲವೇ, ಅವರ ಸೈನ್ಯಚಲನೆಗೆ ಶುಭಮುಹೂರ್ತವಾಗಿರುತ್ತಿದ್ದಿತು. ಕನ್ನಡನಾಡಿನ ಜನಜೀವನ ಚಿತ್ರಕಾರನಾದ ಕವಿರಾಜಹಂಸ ರತ್ನಾಕರವರ್ಣಿ, ತನ್ನ ಕೃತಿನಾಯಕನಾದ ಭರತೇಶಚಕ್ರವರ್ತಿಗೆ, ಆತನ ಹಿರಿಯ ಮಂತ್ರಿಯೊಬ್ಬನಿಂದ ಹೀಗೆ ಹೇಳಿಸಿದ್ದಾನೆ:

ಮಳೆಗಾಲ ಹೋದದು, ಬೆಳಗಾಲ ಬಂದುದು
ದಳ ನಡೆವುದಕಿನ್ನು ಚೆನ್ನು ।
ಅಲಸಿಕೆ ಪರಿಹಾರವಾಗಿ ದಿಗ್ವಿಜಯಕಿ –
ನ್ನೆಳಸುವುದೊಳ್ಳಿತು ನೃಪತಿ ॥
ದ್ವೀಪದ್ವೀಪದೊಳುಕ್ಕಿ ಸೊಕ್ಕಿದ್ದ ದಿಂಡೆಯ
ಭೂಪತಿಗಳ ಹಿಂಡ ನಿನ್ನ ॥
ಶ್ರೀಪಾದಕೆರಗಿಸಿಕೊಳಲಡಿಯಿಡು ಜಂಬೂ–
ದ್ವೀಪದಕ್ಷಿಣಲೋಕಸೂರ್ಯ ॥

ಕನ್ನಡಜಾಣನಾದ ರತ್ನಾಕರವರ್ಣಿ, ತನ್ನ ನಾಯಕ ಕೃತಯುಗದ ಪುರಾಣಪುರುಷನಾದರೂ, ಅತನಿಂದ ಕನ್ನಡರಾಯರಂತೆಯೆ ನವರಾತ್ರಿಯ

ಮಹೋತ್ಸವವನ್ನು ಮಾಡಿಸಿದ್ದಾನೆ; ವಿಜಯದಶಮಿಯ ಶಮೀಮಂಟಪಗಮನದ ಮೆರವಣಿಗೆಯನ್ನೂ ಮಾಡಿಸಿದ್ದಾನೆ. ರತ್ನಾಕರಕವಿಯ ನವರಾತ್ರಿಯ ಮಹೋತ್ಸವದ ವರ್ಣನೆಯುನ್ನು, ಆತನ ಕಾವ್ಯದಲ್ಲಿಯು 'ನವ ರಾತ್ರಿಸಂಧಿ' 'ಪಟ್ಟಣಪಯಣಸಂಧಿ'ಗಳನ್ನು ಓದಿಯೇ ಅರಿತು ಆನಂದಿಸಬೇಕು.

ಚಾಂದ್ರವತ್ಸರದಲ್ಲಿ ಆಶ್ವಿನವು ಏಳನೆಯ ಮಾಸ. 'ಆಶ್ವಯುಜ' ಎಂಬ ಹೆಸರಿನಿಂದಲೂ ಇದನ್ನು ಕೆಲವೆಡೆಗಳಲ್ಲಿ ಕರೆಯುವರು. ಮೊದಲ ನಕ್ಷತ್ರವಾದ ಅಶ್ವಿನಿಯು ಈ ಮಾಸದ ಪೌರ್ಣಿಮೆಗೆ ಸಂಬಂಧಿಸಿರುವುದರಿಂದ, ಇದಕ್ಕೆ 'ಆಶ್ವಿನ' ಎಂಬ ಸಾರ್ಥನಾಮ ನಂಬಿದೆ. ಸೌರಮಾನದ ತುಲಾಮಾಸವು ಈ ತಿಂಗಳಲ್ಲಿಯೆ ಪ್ರಾರಂಭವಾಗಿ ಮುಂದುವರೆಯುವುದು. ಬೆಳುವಲನಾಡಿಗೆ ಭಾಗ್ಯದ ಬಾಗಿಲನ್ನು ತೆರೆದುಕೊಡುವ ಹಸ್ತಾ, ಚಿತ್ತಾಮಳೆಗಳು, ಈ ತಿಂಗಳಲ್ಲಿ ತಮ್ಮ ಆಡಳಿತವನ್ನು ನಡೆಯಿಸುವುವು. 'ಹಸ್ತಾಮಳೆ ಆಗದಿದ್ದರ ಹಲ್ಲಕಿಸ್ತಾ' ಎಂದು, ಬಯಲುನಾಡಿಗರ ಜೀವನಾನುಭವ ಒಂದು ಗಾದೆಯ ಮಾತನ್ನೇ ಸೃಷ್ಟಿಸಿರುವುದು. ಚಿತ್ತಾಮಳೆಯು ಒಕ್ಕಲಿಗರಿಗೆ ನಂಬುಗೆಕೊಟ್ಟುದಲ್ಲ; ಏಕೆಂದರೆ ಅದು ಕುರುಡುಚಿತ್ತಿ! ಮನಸ್ಸಿಗೆ ಬಂದಲ್ಲಿ ಬಿದ್ದುಬಿಡುವುದು. ಒಂದು ಹೊಲದಲ್ಲಿ ನೀರು ಹರಿಸಿದರೆ, ಅದರ ಪಕ್ಕದ ಹೊಲವನ್ನು ಒಣಕಲುನೆಲವನ್ನಾಗಿಯೆ ಇರಿಸುವುದು. ಅದೇ ಹಸ್ತಾಮಳೆ, ಆನೆಸೊಂಡಿಲಿನಿಂದ ನೀರೆರಚಿದಂತೆ ಮಳೆ ಸುರಿಸಿ, ಎಲ್ಲ ಭೂಮಿಯ ಬೆಳೆಗಳನ್ನೂ ಎರೆದುಮಲಗಿಸುವಂತಹದು. ಇಳಿಹೊತ್ತಿನವರೆಗೆ ಥಳಥಳಿಸುವ ಬೆಳ್ಳಿಬಿಸಿಲು; ಆಮೇಲೆ ಸೆಳಕಿನ ಮೇಲೆ ಸೆಳಕಿನ ನೀರ್ಮಳೆ. ಇದು ಆಶ್ವಿನಮಾಸದ ದಿನಗಳ ವೈಶಿಷ್ಟ್ಯ.

ಅಶ್ವಿನಮಾಸದಲ್ಲಿ ಭೂಮಾತೆ ಅನ್ನಕುಮಾರನನ್ನು ಹೆರಲು ಸಿದ್ಧಳಾಗಿ ನಿಂತಿರುವಳು. ಮಲೆನಾಡಿನ ಗದ್ದೆಗಳಲ್ಲಿ ಬೆಳೆದು ನಳನಳಿಸುವ ನೆಲ್ಲುಕವಳೆಯ ಬೆಳೆಗಳು ಹೊತ್ತುನಿಂತ ಹೊಂದೆನೆಗಳಲ್ಲಿ, ಹಾಲುಗಾಳುಗಳು ಗಟ್ಟಿಗೊಳ್ಳುತ್ತಿರುವುವು. ಕಬ್ಬಿನ ತೋಟಗಳಲ್ಲಿ ಗರಿಗಳ ಹಸುರುಸತ್ತಿಗೆಯ ಕೆಳಗೆ, ಕಬ್ಬು ಗೆಣ್ಣುಗಟ್ಟಿ ಜಲ್ಲೆಯಾಕಾರ ತಳೆಯುತ್ತಿರುವುದು. ಹೊಲತೋಟಗಳ ಬೇಲಿಯಾಗಿ ಬೆಳೆದ ಎಲೆಗಳ್ಳಿ, ಆಡಸೋಗೆ, ಉತ್ತರಾಣಿಯ ಗಿಡ–ಗಂಟಿಗಳು, ಹಸುರೆಲೆ–ಬಣ್ಣಬಣ್ಣದ ಹೂಗಳಿಂದ ಗದ್ದೆ–ತೋಟಗಳ ಚೆಲುವನ್ನು ಹೆಚ್ಚಿಸುತ್ತಲಿರುವುವು. ಎತ್ತರದ ಗಿಡಗಳನ್ನೇರಿ ಹಬ್ಬಿ ಬೆಳೆದ ಬೆಳ್ಳೆಲೆಬಳ್ಳಿಯ ತೋಟಗಳು, ಬೆಳುಗಾಲದ ಬಿಸಿಲನ್ನು ಹೊದ್ದು ಅಂದಚೆಂದದ ಆಗರವಾಗಿರುವುವು.

ಬಯಲುಸೀಮೆಯಲ್ಲಿಯೊ–ಬಡವರ ಬರಿಹೊಟ್ಟೆಗೆ ಕವಳವಾಗಬೇಕೆಂಬ



ತವಕದಿಂದ ಬರಗು–ಸಾವೆ–ನವಣೆಯ ಹೊಲಗಳು, ಕಿರುಮುತ್ತುಗಳ ಗೊಂಚಲಿನಂತಹ ಮಾಗಿದ ತನೆಗಳನ್ನು ತೊನೆದಾಡಿಸುತ್ತಿರುವುವು. ಎಳ್ಳಹೊಲಗಳು, ಬಲಿತ ಕಾಯಿಗಳ ಗೊಂಚಲುಗಳಿಂದ ಗಿಡಗಳನ್ನು ಅಲಂಕರಿಸಿ, ಕುಡುಗೋಲಿನ ಬಾಯಿಗೆ ಬಲಿಗೊಡಲು ಸಜ್ಜುಗೊಳಿಸಿರುವುವು. ಹಾಲ್ದೆನೆಗಳಿಂದ ಕೂಡಿದ ಜೋಳದ ನಿಲುವುಗಳು, ಹಾರುವ ಹಕ್ಕಿಗಳ ಮನವನ್ನು ಆಕರ್ಷಿಸಿ ತಮ್ಮತ್ತ ಕರೆಯುತ್ತಿರುವುವು. ಹಾಲ್ದೆನೆಗಳಿಗೆ ಬಂದೆರಗುವ ಹಕ್ಕಿಗಳನ್ನು ಬೆದರಿಸಿ ಹಿಂದಕ್ಕೋಡಿಸಲು, ಕಾಪಿನವರು ಕೂಗುವ ಹಾ ಹೂ ಕೂಗುಗಳೂ ಬಾಜಿಸುವ ತಮ್ಮಟದ ಧ್ವನಿಗಳೂ ಬೆಳಗು ಬೈಗಿನಲ್ಲಿ ಎಲ್ಲೆಡೆಯೂ ಕೇಳುತ್ತಿರುವುವು. ಹುಚ್ಚೆಳ್ಳಿನ ಹೂಗಳು ತಮ್ಮ ಅರಿಸಿಣಬಣ್ಣದ ಛಾಯೆಯಿಂದ ಬೆಳ್ಳಿಬಿಸಿಲಿಗೆ ಬಣ್ಣವೀಯುತ್ತಿರುವುವು. ಹೆಸರು–ಹುರುಳಿ–ಮಡಕಿಗಳ ಕಿರುಬಳ್ಳಿಗಳು, ಹಸುರ್ಗಾಯಿಗಳ ಭಾರದಿಂದ ನೆಲವನ್ನಪ್ಪಿರುವುವು. ಹತ್ತಿಯ ಹೊಲಗಳಲ್ಲಿಯ ಎಳೆಯ ಗಿಡಗಳು, ಶರತ್ಕಾಲದ ಗಾಳಿ–ಬಿಸಿಲುಗಳಿಂದ ಜೀವಸತ್ತ್ವವನ್ನು ಪಡೆದು, ದಿನಕ್ಕೊಂದು ಚೆಂದ ಬೆಳೆಯುತ್ತಿರುವುವು. ಗೋಧಿ–ಕಡಲೆಗಳ ಬಿತ್ತಿಗೆಗಾಗಿ ಕಾಯ್ದಿರಿಸಿದ ಕರಿಯ ಹೊಲಗಳು, ಮೊದಲುಗಿತ್ತಿಯರಂತೆ ಉಡಿತುಂಬುವ ಒಕ್ಕಲಿಗರ ಬಳಗವೂ ಅವರ ಎತ್ತುಗಳೂ ಉತ್ಸಾಹದಿಂದ ದುಡಿಯುತ್ತಿರುವುವು.

ಭಾದ್ರಪದದ ಅಮಾವಾಸ್ಯೆಯ ಕತ್ತಲೆಯ ರಾತ್ರಿ ಕಳೆಯಿತೊ, ಬೆಳಗಿನ ಸೂರ್ಯ ಶರನ್ನವರಾತ್ರಿಯ ಪ್ರತಿಪದೆಯನ್ನು ಹೊತ್ತುಕೊಂಡು ಬರುವನು. ಈಗ ಈ ನವರಾತ್ರಿ, ನಮ್ಮ ನಾಡಿನ ಎಲ್ಲ ಕುಟುಂಬಗಳ ಇಷ್ಟದೇವತೆ–ಕುಲದೇವತೆಗಳ ಪೂಜೆ–ಪುರಸ್ಕಾರಗಳಿಗೆ ಅವಕಾಶ ಪಡೆದಿದೆಯಾದರೂ, ಮೂಲದಲ್ಲಿ ಇದು ಶಕ್ತಿದೇವತೆಯ ಉಪಾಸನೆಗಾಗಿ ವಿಧಿಸಿದ ಹಬ್ಬ. ಘಟಸ್ಥಾಪನೆಯಿಂದ ಪ್ರಾರಂಭವಾಗುವ ಈ ಹಬ್ಬದ ಉಪಾಸನಾ ವಿಧಿಗಳೆಲ್ಲವೂ ಶಕ್ತೇಯ ತಂತ್ರಮಾರ್ಗದುವಾಗಿರುವುವು. ನಂದಾದೀಪವನ್ನುರಿಸುವಿಕೆ, ಹೂರಣದ ಆರತಿ, 'ಮೊಗ್ಗಾರ' ನೈವೇದ್ಯ, ಯಜಮಾನ–ಯಜಮಾನಿತಿಯರ ಉಪವಾಸಕ್ರಮ, ದೇವೀಪುರಾಣ–ದೇವೀಸಹಸ್ರನಾಮಗಳ ಪಾರಾಯಣ ಇವೆಲ್ಲವುಗಳನ್ನು ನೋಡಿದರೆ, ಇದು ಶಾಕ್ತೇಯ ಪರಂಪರೆಯ ನವರಾತ್ರಿಯೇ ಎಂಬುದು ನಿಚ್ಚಳವಾಗಿ ಕಾಣುವುದು. ಇಷ್ಟೇ ಅಲ್ಲ, ಈ ಹಬ್ಬವು ಶಕ್ತಿಸಾಧಕರಾದ ಕ್ಷತ್ರಿಯರಿಗಾಗಿಯೆ ವಿಧಿಸಲಾದ ಹಬ್ಬವೆಂಬುದೂ ನಮ್ಮ ಪುರಾಣಪರಂಪರೆಯಿಂದ ಸಿದ್ಧವಾಗುವುದು.

ಭವಿಷ್ಯೋತ್ತರ ಪುರಾಣದಲ್ಲಿ ಬರುವ ಅಶ್ವಿನಮಾಸಮಹಾತ್ಮ್ಯದಲ್ಲಿ ಉಕ್ತವಾಗಿರುವ ನವರಾತ್ರಿಯ ವಿಧಿ–ವಿಧಾನಗಳು, ಕೇವಲ ದೇವಿಯ

ಅನುಗ್ರಹಸಾಧಕಗಳೇ ಆಗಿರುವುವು. ಪ್ರತಿಪದೆಯ ದಿನದ ನವರಾತ್ರಾಯರಂಭದಲ್ಲಿ ಯಜಮಾನನು, ದೇಹ–ಮನಗಳಿಂದ ಶುಚಿರ್ಭೂತನಾಗಿ, ಅಷ್ಟಾದಶ ಭುಜಾಂಕಿತೆಯಾದ ಶ್ರೀದೇವಿಯನ್ನು ಸಿಂಹರಥದಲ್ಲಿ ಪ್ರತಿಷ್ಠಾಪಿಸಿ ಪೂಜಿಸಬೇಕಂತೆ, ಆಗ ದೇವಿಯ ಸ್ತೋತ್ರಗಳನ್ನೂ, ಪುರಾಣಗಳನ್ನೂ ಪಠಿಸಬೇಕಂತೆ, ಹತ್ತುವರ್ಷದ ವಯಸ್ಸು ಮೀರದಿರುವ ಕುಮಾರಿಯನ್ನು ಆಮಂತ್ರಿಸಿ, ಭೋಜನ–ವಸ್ತ್ರಾಭರಣಗಳಿಂದ ಅವರನ್ನು ತಣಿಸಬೇಕಂತೆ. ಪ್ರತಿಷ್ಠಾಪಿಸಿದ ದೇವಿಯನ್ನು ಮೊದಲದಿನ 'ಶೈಲಪುತ್ರಿ' ಎಂಬ ನಾಮದಿಂದಲೂ, ಎರಡನೆಯ ದಿನ 'ಬ್ರಹ್ಮಚಾರಿಣಿ' ಎಂಬ ಹೆಸರಿನಿಂದಲೂ, ಮೂರನೆಯ ದಿನ 'ಚಂದ್ರಘಂಟಾ' ಎಂಬ ಅಭಿಧಾನದಿಂದಲೂ, ನಾಲ್ಕನೆಯ ದಿನ ಕೂಷ್ಮಾಂಡಾ ಎಂಬ ನಾಮದಿಂದಲೂ ಪೂಜಿಸಬೇಕು; ಹಾಗೆಯೆ ಮುಂದೆ ಕ್ರಮವಾಗಿ ಸ್ಕಂದಮಾತಾ, ಕಾತ್ಯಾಯಿನಿ, ಕಾಲರಾತ್ರಿ, ಮಹಾಗೌರಿ, ಸಿದ್ಧಿದಾ ಎಂಬ ನಾಮಗಳಿಂದ ಅರ್ಚಿಸಬೇಕು ಎಂದು ಆ ಪುರಾಣವು ವಿದಿಸುತ್ತದೆ. ಇವೆಲ್ಲವೂ ಶಕ್ತಿದೇವತೆಯ ಪರ್ಯಾಯ ನಾಮಗಳೇ. ದೇವಿಯ ಪೂಜೆಯೊಂದಿಗೆ ರಾಜ–ಮಹಾರಾಯರು ಕುದುರೆಗಳನ್ನೂ ಆನೆಗಳನ್ನೂ ಶಸ್ತ್ರಾಸ್ತ್ರಗಳನ್ನೂ ಪೂಜಿಸಬೇಕೆಂತೆ. ನವರಾತ್ರಿಯಲ್ಲಿ ಪೂಜೆಮಾಡದೆ ಕುದುರೆಗಳನ್ನು ಯುದ್ಧಕ್ಕೆ ತೆಗೆದುಕೊಂಡು ಹೋಗಬಾರದಂತೆ. ಈ ವಿಧಿಯನ್ನು ಮೀರಿದ ವೀರಬಾಹುನೆಂಬ ರಾಜನು ದೇವಿಯ ಅವಕೃಪೆಗೆ ಪಾತ್ರನಾಗಿ ಯುದ್ಧದಲ್ಲಿ ಅಶ್ವಸೈನ್ಯವನ್ನೆಲ್ಲ ಕಳೆದುಕೊಂಡ ಕಥೆಯನ್ನು ಭವಿಷ್ಯೋತ್ತರಪುರಾಣವು ಹೇಳುತ್ತದೆ. ಅದರಂತೆಯೆ ಬ್ರಹ್ಮದೇವನ ಬೆವರಿನಿಂದ ಹುಟ್ಟಿದ ಲೋಹಾಸುರನು, ಲೋಕಕಂಟಕನಾಗಿ ಇಂದ್ರನಿಂದ ಮೈಯನ್ನು ಕೊರೆಸಿಕೊಂಡ ಕಥೆಯೂ, ಲೋಹಾಸುರನು ಬ್ರಹ್ಮನಿಗೆ ಮೊರೆಯಿಟ್ಟಾಗ, ನಿನ್ನ ದೇಹದ ತುಣುಕುಗಳೆಲ್ಲ ಶಸ್ತ್ರಾಸ್ತ್ರಗಳಾಗಿ, ನವರಾತ್ರಿಯಲ್ಲಿ ಎಲ್ಲರಿಂದಲೂ ಪೂಜೆಯನ್ನು ಪಡೆಯಲಿ ಎಂದು ಬ್ರಹ್ಮದೇವನು ವರವಿತ್ತ ವಿಷಯವೂ ಆ ಪುರಾಣದಲ್ಲಿ ಬರುತ್ತದೆ. ರಾಜರಿಗಾಗಿ ಹೇಳಿರುವ ಈ ಹಬ್ಬವನ್ನು ನಮ್ಮ ನಾಡಿನ ಜನರೆಲ್ಲರೂ ಮಾಡಲು ತೊಡಗಿದುದು ಒಂದು ಚಮತ್ಕಾರದ ವಿಷಯವೇ ಸರಿ.

ದೇವಿಯ ಉತ್ಸವಗಳೆಲ್ಲ ರಾತ್ರಿಯ ಉತ್ಸವಗಳೇ ಆಗಿರುವುವು. ಅಶ್ವಿನಿ ಶುದ್ಧ ಪ್ರತಿಪದೆಯಿಂದ ನವಮಿಯ ವರೆಗಿನ ಕಾಲದಲ್ಲಿಯೆ ಕೆಲವರು ತೃತೀಯೆಯಿಂದ ಸಪ್ತರಾತ್ರ್ಯುತ್ಸವವನ್ನು ನಡೆಸುವರು. ಬೇರೆ ಕೆಲವರು ಪಂಚಮಿಯಿಂದ ಪಂಚರಾತ್ರೋತ್ಸವವನ್ನೂ, ಸಪ್ತಮಿಯಿಂದ ತ್ರಿರಾತ್ರೋತ್ಸವವನ್ನೂ ಆಚರಿಸುವರು. ಈ ಉತ್ಸವಕಾಲದಲ್ಲಿ ವಿಷ್ಣುದೇವಾಲಯಗಳಲ್ಲಿ ನವರಾತ್ರಿಯ



ವಿಶೇಷ ಪೂಜೆ–ಉತ್ಸವಗಳು ನಡೆಯುವುವಲ್ಲದೆ, ವೈಷ್ಣವರ ಮನೆಗಳಲ್ಲಿಯೂ ಶ್ರೀವೆಂಕಟೇಶನ ನವರಾತ್ರಿಯ ಪೂಜೆ–ಪಾರಾಯಣಗಳು ನಡೆಯುವುವು. ತಿರುಪತಿಯಲ್ಲಿ ಶ್ರೀತಿರುಮಲೇಶನ ವಿಶೇಷೋತ್ಸವಗಳು ನಡೆದಂತೆ, ಬೇರೆಕಡೆಯ ವೆಂಕಟೇಶನ ದೇವಾಲಯಗಳಲ್ಲಿಯೂ ಅವು ಚಿಕ್ಕ ದೊಡ್ಡ ಪ್ರಮಾಣದಿಂದ ನಡೆಯುತ್ತವೆ. ಅನೇಕ ಸ್ಥಳಗಳಲ್ಲಿ ದಸರೆಯ ದಿನ ರಥೋತ್ಸವವೂ ಜರುಗುತ್ತದೆ.

ಪ್ರತಪದೆಯ ದಿನ ಮಾತಾಮಹನ (ತಾಯಿಯ ತಂದೆ) ಶ್ರಾದ್ಧವಿಧಿಯನ್ನು ಆಚರಿಸಬೇಕೆಂದು ಧರ್ಮನಿಯಮವಿದೆ; ಆದರೆ ಘಟಸ್ಥಾಪನೆಯಂತಹ ದೇವಕಾರ್ಯದೊಂದಿಗೆ ಈ ಪಿತೃಕಾರ್ಯವನ್ನೇಕೆ ಆಚರಿಸಬೇಕೆಂಬ ಭಾವನೆಯಿಂದಲೇನೋ–ನಮ್ಮ ನಾಡಿನಲ್ಲಿ ಮಾತಾಮಹನ ಶ್ರಾದ್ಧವನ್ನು ಅಂದು ಮಾಡುವವರು, ಅಪೂರ್ವವಾಗಿ ಕಣ್ಣಿಗೆಬೀಳುವರು. ಪ್ರತಿಪದೆ ಬರುವುದಕ್ಕಿಂತ ಮೊದಲೇ ನಮ್ಮ ಜನರು ಮನೆಯ ಸಾರಣೆ ಸುಣ್ಣ–ಬಣ್ಣಗಳನ್ನು ಮುಗಿಸಿರುವರು. ಪ್ರತಿಪದೆಯ ದಿನ ಮನೆಯನ್ನೂ ದೇವಪೂಜೆಯ ಉಪಕರಣಗಳನ್ನೂ ವಿಶೇಷರೀತಿಯಿಂದ ಶುಚಿಗೊಳಿಸಾಗುವುದು. ನಂದಾದೀಪವನ್ನು ಇರಿಸುವ ಹುಟ್ಟಿಗಳೂ ಸುಣ್ಣ–ಬಣ್ಣಗಳಿಂದ ಶೋಭೆಗೊಂಡಿರುವುವು. ಅಲ್ಲದೆ ದೈವಪೂಜೆಯ ಕಾಲಕ್ಕೆ ಬೆಳಗಿಸಲು ಸಾಲುದೀಪ, ಸಮಯಿ, ನೀರಾಜನ, ಉಡಿಗೊಂಬೆಗಳನ್ನು ಎಣ್ಣೆ–ಬತ್ತಿಗಳಿಂದ ಸಿದ್ಧಪಡಿಸಿರುವರು. ಅನೇಕ ಮನೆಗಳಲ್ಲಿ ನವರಾತ್ರಿ–ದಸರೆಗಳ ಹತ್ತಿದಿನಗಳಲಿ 'ದೊಡ್ಡದೇವರಪೂಜೆ' ಎಂದರೆ ಪ್ರತಿಮಾಪೂಜೆ ನಡೆಯುವುದು.

ಪ್ರತಿಪದೆಯಂದು, ನಾರಕೇಳಫಲದ ಕಲಶದಿಂದ ಶೋಭಿತವಾದ ಘಟವನ್ನು ವಿಧಿಪೂರ್ವಕವಾಗಿ ದೇವರ ಜಗುಲಿಯ ಬಳಿಯೆ ಸ್ಥಾಪಿಸಲಾಗುವುದು. ಕೆಲವು ಮನೆತನಗಳಲ್ಲಿ ಘಟದ ಕೆಳಗೆ ಎರೆಯಮಣ್ಣನು ವೇದಿಕೆಯಂತೆ ಹರಡಿ, ಅದರಲ್ಲಿ ನವಧಾನ್ಯಗಳಲ್ಲಿ ಚೆಲ್ಲಿ ಸಸಿಯನ್ನು ಬೆಳೆಸುವ ಸಂಪ್ರದಾಯವು ಇರುವುದು. ಇಲ್ಲಿ ಬೆಳೆಸಿದ ಸಸಿಯನ್ನು ದಸರೆಯ ದಿನದ ಬನ್ನಿಯೊಂದಿಗೆ ಬೆರಸಿ ಎಲ್ಲರಿಗೂ ಬೀರಲಾಗುವುದು. ಸ್ಥಾಪಿಸಿದ ಘಟದಲ್ಲಿ ಒಂಬತ್ತು ದಿನಗಳವರೆಗೂ ದೇವಿಯ ಸಾನ್ನಿಧ್ಯವನ್ನು ಭಾವಿಸಿ ಪೂಜಿಸಬೇಕು. ನಿತ್ಯವೂ ಹೂರಣದ ಆರತಿ, ಮೊಗಹಾರದ ನೈವೇದ್ಯಗಳನ್ನು ದೇವಿಗೆ ಸಮರ್ಪಿಸಬೇಕು.

ಆಶ್ವಿನಶುದ್ಧ ಪಂಚಮಿಯೆಂದರೆ ಲಲಿತಾಪಂಚಮಿ. ಅಂದು ದೇವಿಯ ಅನುಗ್ರಹ ಸಂಪಾದನೆಗಾಗಿ ಉಪಾಂಗ ಲಲಿತಾವ್ರತವನ್ನು ಆಚರಿಸಬೇಕೆಂದು ಪುರಾಣಗಳು ಹೇಳುತ್ತವೆ. ಈ ವ್ರತದ ಕಥೆಯೂ ಭವಿಷ್ಯೋತ್ತರ ಪುರಾಣದಲ್ಲಿದೆ. ನವರಾತ್ರಿಯ ಕಾಲದಲ್ಲಿ ಬರುವ ಮೂಲಾನಕ್ಷತ್ರದಂದು, ಸರಸ್ವತೀದೇವಿಯನ್ನು

ಆವಾಹನಮಾಡಿ, ಮೂರುದಿನಗಳವರೆಗೆ ಸರಸ್ವತಿಯ ಪೂಜೆಯನ್ನು ನಡೆಸುವ ಸಂಪ್ರದಾಯ ಅನೇಕ ಮನೆತನಗಳಲ್ಲಿ ನಡೆದುಬಂದಿದೆ. ಆಗ ಪೂಜೆಗೊಳ್ಳುವ ಸರಸ್ವತಿಯೆಂದರೆ ಪ್ರತಿಮಾರೂಪಿಣಿಯಲ್ಲ; ಧಾರ್ಮಿಕ ಗ್ರಂಥಗಳ ರೂಪದಲ್ಲಿರುವ ವಾಗ್ದೇವಿ. ಶುಕ್ಲಅಷ್ಟಮಿಯೆ ದುರ್ಗಾಷ್ಟಮಿ. ಅಂದು ಬಲದಾಯಿನಿಯಾದ ಶ್ರೀದುರ್ಗೆಯ ಪೂಜೆ-ಪ್ರಾರ್ಥನೆಗಳು ವಿಶೇಷರೀತಿಯಲ್ಲಿ ನಡೆಯುವುವು. ನೈವೇದ್ಯದಡಿಗೆ ಕೂಡ ತಂತ್ರನಿಯಮವನ್ನು ಅನುಸರಿಸಿದುದಾಗಿ ಇರುವುದು. ಬಂಗಾಲ, ಅಸಾಮ, ಉತ್ಕಲ ಮೊದಲಾದ ದುರ್ಗಾಭಕ್ತರಿರುವ ಪ್ರದೇಶಗಳಲ್ಲಿ, ದುರ್ಗಾಷ್ಟಮಿಯ ಉತ್ಸವ ಸಮಾರಂಭಗಳು ವಿಶಿಷ್ಟ ರೀತಿಯವಾಗಿರುವುವು.

ಶುಕ್ಲನವಮಿಯು ಮಹಾನವಮಿ. 'ಖಂಡೆಯನವಮಿ' ಎಂಬ ಹೆಸರೂ ಇದಕ್ಕಿದೆ. ಖಂಡೆಯು ಎಂದರೆ ಶಸ್ತ್ರ. ಇಂದು ಶಸ್ತ್ರಾಸ್ತ್ರಗಳನ್ನು ಪೂಜಿಸುವರಾದುದರಿಂದಲೇ ಇದಕ್ಕೆ 'ಖಂಡೆಯನವಮಿ' ಎಂಬ ಹೆಸರು ಬಂದಿದೆ. ಕ್ಷತ್ರಿಯರಲ್ಲದವರಲ್ಲಿ ಶಸ್ತ್ರಾಸ್ತ್ರಗಳೆಲ್ಲಿಂದ ಬರಬೇಕು? ಆದರೆ ಎಲ್ಲ ಜನರೂ ತಮ್ಮ ತಮ್ಮ ವ್ಯವಸಾಯ-ವ್ಯವಹಾರಗಳಲ್ಲಿ ಬಳಸಲಾಗುವ ಎಲ್ಲ ಉಪಕರಣಗಳನ್ನೂ ಶಸ್ತ್ರಾಸ್ತ್ರಗಳ ಸ್ಥಾನದಲ್ಲಿರಿಸಿ ಪೂಜಿಸುವ ರೂಢಿ ನಮ್ಮನಾಡಿನಲ್ಲಿದೆ. ಶಸ್ತ್ರಾಸ್ತ್ರಗಳ ಪೂಜೆಗೆ ಸಜೀವ ಪಶುಬಲಿಯನ್ನು ಅರ್ಪಿಸಬೇಕಾಗುವುದು. ಈ ಉಪಕರಣಗಳ ಪೂಜೆಯ ಕಾಲದಲ್ಲಿಯೂ ಪಶುಬಲಿಯ ಅಣಕ ನಡೆಯುವುದು. ಅದು ಹೇಗೆಂದರೆ; ಬಲಿಯ ಮಂತ್ರಗಳನ್ನು ಹೇಳುತ್ತ ಕೂಷ್ಮಾಂಡಫಲವನ್ನು ಎಂದರೆ ಬೂದುಗುಂಬಳಕಾಯನ್ನು ಒಡೆದು, ಅದರಲ್ಲಿ ಓಕಳಿ, ಕುಂಕುಮವನ್ನು ಹಾಕಿ, ರಕ್ತದ ಆಭಾಸವನ್ನು ಹುಟ್ಟಿಸಲಾಗುವುದು. ಜೀವಹಿಂಸೆ ಪಾಪವೆಂಬ ಮಾತು ಪ್ರಚಾರದಲ್ಲಿ ಬಂದಾಗ, ಪ್ರತ್ಯಕ್ಷ ಪ್ರಾಣವಧೆ ಬೇಡವೆನಿಸಿದರೂ, ಬಲಿಯ ಸಂಪ್ರದಾಯವನ್ನು ಬಿಡಬಾರದೆಂಬ ಮುಗ್ಧಭಾವನೆ, ಈ ಬಲಿಯ ಪರ್ಯಾಯವನ್ನು ಕಲ್ಪಿಸಿರಬಹುದಾಗಿದೆ.

ಅಶ್ವಿನಶುಕ್ಲ ದಶಮಿಯೇ ವಿಜಯದಶಮಿ-ಅಥವಾ ದಸರೆ. ದೇವಿಯ ಉಪಾಸನಾ ಪ್ರಧಾನವಾದ ನವರಾತ್ರಿಯಿಂದ ಇದು ಪ್ರತ್ಯೇಕ ಉತ್ಸವದಿನ. ಮಹಾನವಮಿಯ ದಿನವೇ ಪ್ರತಿಷ್ಠಾಪಿತದೇವಿಯ ಅಥವಾ ಆಕೆಯ ಸಂಕೇತವಾದ ಘಟದ ಉತ್ಥಾಪನೆಯು ಆಗಿಯೇ ಇರುವುದು. ದಸರೆಯು ಅಪರಾಜಿತಾಶಮಿಯ ಪೂಜೆಗಾಗಿ ಸರ್ವಮಾನ್ಯತೆಯನ್ನು ಪಡೆದಿರುವುದು. ಈ ಅಪರಾಜಿತಾಶಮೀಪೂಜೆಯು ನಾಡನ್ನಾಳುವ ರಾಜ-ಮನ್ನೆಯರಿಗಾಗಿಯೇ ಹೇಳಿದುದಾಗಿರುವುದು. ಶಿಷ್ಟರ ಆಚಾರಗಳನ್ನು ಇತರರೂ ಅನುಸರಿಸುವ ಸಾಮಾನ್ಯ



ಲೋಕನಿಯಮದಂತೆ, ರಾಜ-ಮಹಾರಾಜರ ಶಮೀಪೂಜೆಯ ಈ ಆಚಾರವನ್ನು ಪೂಜೆಗಳೂ ಸ್ವೀಕರಿಸಿರಬಹುದು.

ವಿಜಯದಶಮಿಯ ದಿನ ನಕ್ಷತ್ರೋದಯಸಮಯದಲ್ಲಿ 'ವಿಜಯಾ' ಎಂಬ ಶುಭಮುಹೂರ್ತವು ಬಂದಿರುವುದು. ಆಗ ರಾಜ-ಮಹಾರಾಜರು ಆನೆ, ಕುದುರೆ, ಕಾಲಾಳುಗಳೊಡನೆ ಕೂಡಿಕೊಂಡು, ವಾದ್ಯಘೋಷಗಳೊಂದಿಗೆ ಸಿಮೋಲ್ಲಂಘನಮಾಡಿ, ಅಲ್ಲಿ ಇರುವ ಬನ್ನಿಯ ಮರದಡಿಯಲ್ಲಿ ವಾಸ್ತುಪೂಜೆ-ದಿಕ್ಪಾಲಕಪೂಜೆಗಳನ್ನು ಮೊದಲು ಮಾಡಿ, ಆಮೇಲೆ,

"ಅಮಂಗಲಾನಾಂ ಶಮನೀಂ ಶಮನೀಂ ದುಷ್ಕೃತಸ್ಯಚ ।
ದುಸ್ವಪ್ನನಾಶಿನೀಂ ಧನ್ಯಾಂ ಪ್ರಪದ್ಯೇಹಂ ಶಮೀಂ ಶುಭಾಂ ॥"

ಎಂದು ಪ್ರಾರ್ಥಿಸಿ, ಶಮೀಪೂಜೆಯನ್ನು ಮಾಡಿ, ಶಮಿಯನ್ನು ತಲೆಯಲ್ಲಿ ಮುಡಿದುಕೊಳ್ಳಬೇಕು. ಅಲ್ಲಿಯೇ ಶತ್ರುವಿನ ಪ್ರತಿಮೆಯೊಂದನ್ನು ಮಾಡಿ, ಅದನ್ನು ಶಸ್ತ್ರದಿಂದ ಛೇದಿಸಿ, ವಾದ್ಯಘೋಷಣೆಯೊಂದಿಗೆ ಮರಳಿ ಅರಮನೆಯನ್ನು ಪ್ರವೇಶಿಸಬೇಕು.

ಇದೆಲ್ಲವೂ ನಮ್ಮ ಹಿಂದಿನ ರಾಜರಿಗೆ ನಮ್ಮ ಧರ್ಮಪರಂಪರೆಯು ವಿಧಿಸಿದ ನಿಯಮ. ಪುರಾಣಕಾಲದ ಈ ನಿಯಮವನ್ನು ಕನ್ನಡನಾಡಿನ ಇತಿಹಾಸಕಾಲದ ರಾಜರುಗಳೂ ತಪ್ಪದೆ ನಡೆಸಿಕೊಂಡು ಬಂದರೆಂಬುದಕ್ಕೆ, ವಿಜಯನಗರದಲ್ಲಿರುವ ಮನೋಮೀದಿಬ್ಬವು ಈಗಲೂ ಸಾಕ್ಷ್ಯ ಹೇಳುತ್ತದೆ. ಮೈಸೂರಿನ ಒಡೆಯರು ಇದುವರೆಗೂ ಈ ಉತ್ಸವಪರಂಪರೆಯನ್ನು ನಡೆಸಿಕೊಂಡು ಬಂದಿದ್ದಾರೆ. ಇವರು ಆಚರಿಸುವ ನವರಾತ್ರಿಯ ಹಬ್ಬದ ಕಾರ್ಯಕಲಾಪಗಳೆಲ್ಲ ನಮ್ಮ ಪುರಾಣ-ಇತಿಹಾಸಗಳನ್ನು ಕಣ್ಣೆದುರು ನಿಲ್ಲಿಸುವುವು.

ಹಳ್ಳಿಗಳಲ್ಲಿ ನೋಡಬೇಕು! ನವರಾತ್ರಿಯ ಒಂಬತ್ತು ದಿನಗಳಲ್ಲಿಯೂ ಸಾಯಂಕಾಲ ಗ್ರಾಮದೇವತೆಯ ಪೂಜೆ, ಡೊಳ್ಳಿನ ಓಲಗದೊಂದಿಗೆ ಪಲ್ಲಕ್ಕಿಯ ಸೇವೆ, ದೇವಿಯ ಆಳುಮಕ್ಕಳ ದಟ್ಟಿಯ ಕುಣಿತ, ಡೊಳ್ಳಿನ ಪದಗಳು ಇವೆಲ್ಲ ನಡೆದಿರುತ್ತವೆ. ದೇವಿಯ ಗರ್ಭಗುಡಿಯ ತುಂಬ ಭಕ್ತರು ಸಲ್ಲಿಸಿದ ನಂದಾದೀಪಗಳು ಉರಿಯುತ್ತಿರುವುವು. ದೇವಿಯ ಮೂಲಮೂರ್ತಿಯನ್ನೂ ಉತ್ಸವಮೂರ್ತಿಯನ್ನೂ ಬೆಲೆಯುಳ್ಳ ವಸ್ತ್ರಾಲಂಕಾರಗಳಿಂದ ಶೃಂಗರಿಸಿರುವರು. ಮಹಾನವಮಿಯ ದಿನ ಮಧ್ಯಾಹ್ನ ಊರಲ್ಲಿಯ ಎಲ್ಲದೇವರ ಪಲ್ಲಕ್ಕಿಗಳೂ ಮೆರವಣಿಗೆ ಹೊರಟು, ಜಲಾಶಯದವರೆಗೆ ಹೋಗಿ ವಾದ್ಯ-ವೈಭವದೊಂದಿಗೆ ಮರಳಿ ಊರೊಳಗೆ ಬರುವುವು. ಆಗ ಕುದುರೆಗಳಿದ್ದವರೆಲ್ಲ ಅವುಗಳನ್ನು ವಿವಿಧರೀತಿಯಿಂದ ಅಲಂಕರಿಸಿ,

ದೇವರ ಪಲ್ಲಕ್ಕಿಗಳ ಹಿಂಗಡೆಯಲ್ಲಿ ನಿಲ್ಲಿಸಿ, ಮೆರವಣಿಗೆಯಲ್ಲಿ ಪಾಲುಗೊಳ್ಳುವರು. ದೇವಿಯ ಪಲ್ಲಕ್ಕಿ ಊರಗಸೆಯ ಬಳಿ ಬಂದಾಗ, ಓಲೆಕಾರರು ಅವಳಿಗೆ ಪಶುಬಲಿಯನ್ನು ಅರ್ಪಿಸುವ ಪರಂಪರೆ ಇದುವರೆಗೂ ನಡೆದುಕೊಂಡು ಬಂದಿದೆ. ಆಡಿನ ಮರಿಯೊಂದನ್ನು ಪೂಜೆಮಾಡಿದ ಕತ್ತಿಯಿಂದ ಕಡಿಯುವರು. 'ಹರಿಮರಿ ಕಡಿಯುವುದು' ಎಂದು ಈ ಕ್ರಿಯೆಗೆ ಹಿಂದಿನಿಂದ ನಡೆದುಬಂದ ಹೆಸರು.

ದಸರೆಯ ದಿನ, ಹಳ್ಳಿಯ ಗೌಡನೇ ದೊರೆಯ ಪ್ರತಿನಿಧಿಯಾಗಿ, ಊರ ಹಿರಿಯರನ್ನು ಕರೆದುಕೊಂಡು, ದೇವರ ಪಲ್ಲಕ್ಕಿಗಳೊಂದಿಗೆ, ಬನ್ನಿ ಮುಡಿಯುಲು ಸೀಮೆಯನ್ನು ದಾಟಿಹೋಗುವನು. ಅಲ್ಲಿ ಬನ್ನಿಗಿಡದ ಪೂಜೆಯದ ಮೇಲೆ, ಎಲ್ಲರೂ ಬನ್ನಿಯೆಲೆಯನ್ನು ದೇವರುಗಳಿಗೆ ಸಲ್ಲಿಸಿ, ಆಮೇಲೆ ಪರಸ್ಪರರು 'ಬಂಗಾರ' ಎಂಬ ಹೆಸರಿನಿಂದ ಬನ್ನಿಯನ್ನು ಕೊಡುವರು, ಕೊಳ್ಳುವರು. ಇದು ನಮ್ಮ ನಾಡಿನ ಸಾರ್ವಜನಿಕ ಹಬ್ಬ. ಎಂತಲೇ ಆಧುನಿಕ ಕರ್ನಾಟಕವೂ ನವರಾತ್ರಿಯ ಹಬ್ಬವನ್ನು ನಾಡಹಬ್ಬವೆಂದು ಪುರಸ್ಕರಿಸಿ, ಅದಕ್ಕೊಂದು ವಿಧಾಯಕಸ್ವರೂಪವನ್ನು ಕೊಟ್ಟು ವರುಷವರುಷವೂ ಉತ್ಸಾಹದಿಂದ ಆರಿಸುತ್ತಲಿದೆ. ಇದರ ಆಚರಣೆಯೆಂದರೆ, ಕರ್ನಾಟಕದ ಪ್ರಾಚೀನ ವರ್ತಮಾನ ಸಾಂಸ್ಕೃತಿಕ ಸ್ವರೂಪದ ವಾಸ್ತವ ಪ್ರದರ್ಶನವಾಗಬೇಕು; ನಮ್ಮ ಜನಕ್ಕೆ ಮಾನವಜೀವನದ ಆದರ್ಶಗಳೇನೆಂಬುದನ್ನು ತಿಳಿಸಬೇಕು.

ನಮ್ಮ ನಾಡಿನ ನಾಗರಿಕ ಮನೆತನಗಳಲ್ಲಿ, ನವರಾತ್ರಿಯ ಕಾಲದಲ್ಲಿ ವೆಂಕಟೇಶಮಾಹತ್ಮ್ಯ, ಭಾಗವತ ಮೊದಲಾದ ಪುರಾಣಕಾಲಕ್ಷೇಪ ನಡೆಯುವುದು. ಕುಮಾರಿಯರು ಮೇಳಗಳನ್ನು ಕಟ್ಟಿ, ಅನಂತಾದ್ರೀಶಕವಿಯ ವೆಂಕಟೇಶಪಾರಿಜಾತದಲ್ಲಿಯ ಗೀತಗಳನ್ನು ಹಾಡುತ್ತ ಬೀದಿಯ ಜನರ ಕಣ್ಣುಗಳನ್ನು ಆಕರ್ಷಿಸುವರು.ಈ ಗೀತಮೇಳಗಳೊಂದಿಗೆ ರಾಧಾ–ಕೃಷ್ಣ, ರಾಮ–ಸೀತಾ, ವೆಂಕಟೇಶ–ಪದ್ಮಾವತಿ ಮೊದಲಾದ ದೇವ–ದೇವತೆಗಳ ವೇಷಧಾರಿಗಳನ್ನೂ ನಾವು ನೋಡಬಹುದು. ದಸರೆಯ ಶಮಿಯನ್ನು ಅಂಚೆಯೊಂದಿಗೆ ಊರಿಂದೂರಿಗೆ ಕಳುಹುವ ಪದ್ಧತಿಯೂ ಕಲಿತ ಕನ್ನಡಿಗರಲ್ಲಿ ಬೆಳೆಯತೊಡಗಿದೆ. ಮಾಧ್ವಸಂಪ್ರದಾಯಿಗಳು, ಅಶ್ವಿನಶುದ್ಧ ದಶಮಿಯ ದಿನ ಶ್ರೀಮಧ್ವಾಚಾರ್ಯರ ಜಯಂತ್ಯುತ್ಸವವನ್ನು ಆಚರಿಸುವರು. ದಸರೆಯ ಹಬ್ಬ ಮೂರುವರೆ ಶುಭದಿನಗಳಲ್ಲಿ ಒಂದು! ಅನೇಕ ಕುಟುಂಬಗಳಲ್ಲಿ ಸುಮಂಗಲೆಯರಿಂದ ಪೂಜಿಸಿಕೊಳ್ಳುವ ಸೀಗೆಯಗೌರಿ, ದಸರೆಯ ದಿನವೇ ಪ್ರತಿಷ್ಠಾಪನೆಗೊಳ್ಳುವಳು. 'ಸೀಗೆ' ಎಂದರೆ ದೀಪವನ್ನು ಹೊರುವ ಮರದ ಕಂಬ. ಆ ಕಂಬದ ಆಕಾರದಲ್ಲಿಯೇ ಎರಡು



ಮಣ್ಣಿನ ಪ್ರತಿಮೆಗಳನ್ನು ಮಾಡಿರುವರು. ಮರಿಗಳೆಂದು ಬೇರೆ ಐದು ಚಿಕ್ಕ–ಚಿಕ್ಕ ಕಂಬಗಳನ್ನು ಮಾಡಿರುವರು. ಈ ಎಲ್ಲ ಪರಿವಾರದೊಂದಿಗೆ ಸೀಗೆಗೌರಿಯ ಪೂಜೆ ನಡೆಯಬೇಕು. ಇದಕ್ಕೆ ಪೌರಾಣಿಕ ಪ್ರಮಾಣಗಳಾವುವೂ ಇಲ್ಲ. ಜಾನಪದ ಪರಂಪರೆಯಿಂದ ಇದು ಮೇಲೆದ್ದುದಾಗಿರಬೇಕು.

ಅಶ್ವಿನಿ ಶುಕ್ಲ ಪೌರ್ಣಿಮೆಯೆ ಸೀಗೆಯಹುಣ್ಣಿಮೆ, ಬಯಲುನಾಡಿನ ಒಕ್ಕಲಿಗರಿಗೆಲ್ಲ ಇದು ತುಂಬ ಸಂಭ್ರಮದ ಹಬ್ಬ. ಅಂದು ಮನೆಯಲ್ಲಿಯೂ ಹೊಲದಲ್ಲಿಯೂ ಅವರು ಪಾಂಡವರ ಪೂಜೆಯನ್ನು ಮಾಡುವರು. ಜೋಕುಮಾರನ ಅಳ್ಳಂಬಲಿಯೊಂದಿಗೆ, ಅಂದಿನ ಪಾಂಡವರ ನೈವೇದ್ಯದನ್ನವನ್ನು ಸೇರಿಸಿ, ಬೆಳೆಯ ಹೊಲಗಳಲ್ಲಿ ಚರಗವನ್ನು ಚೆಲ್ಲುವರು. ಮನೆಯಲ್ಲಿ ಮಾಡಿದ ವಿಧವಿಧದ ಹುಗ್ಗಿ–ಹೂರಿಗೆ–ಕಡುಬು–ಕರಚೀಕಾಯಿಗಳನ್ನೂ, ವಡೆ–ಗಾರಿಗೆಗಳನ್ನೂ ಹೆಡಿಗೆಗಳಲ್ಲಿ ತುಂಬಿಕೊಂಡು ಹೊಲಗಳಿಗೆ ಹೋಗಿ, ಬಳದವರೆಲ್ಲಕೂಡಿ ಅಲ್ಲಿಯೇ ಊಟಮಾಡುವರು.

ಅಂದಿನಿರುಳು ಬೆಳುದಿಂಗಳಲ್ಲಿ ಹಳ್ಳಿಯ ಹುಡುಗರೆಲ್ಲರೂ, ಹೊಲದಿಂದ ತಂದ ಜೋಳದ ತೆನೆದಂಟಿನ ತುದಿಯಲ್ಲಿ ಎಣ್ಣೆಯ ಕಕ್ಕಡವನ್ನು ಕಟ್ಟಿ, ದೀಪಹಚ್ಚಿ ಓಣಿ–ಓಣಿ ತಿರುಗುವ ಆ ದೃಶ್ಯವು ಚಿತ್ತಾಕರ್ಷಕವಾಗಿರುವುದು; ಅಲ್ಲದೆ ಹೆಣ್ಣುಮಕ್ಕಳು ಚಿಕ್ಕ–ಚಿಕ್ಕ ಮಡಕೆಗಳಿಗೆ ಚಿತ್ರಾಕಾರದ ಛಿದ್ರಗಳನ್ನು ಮಾಡಿ, ಅವುಗಳೊಳಗೆ ದೀಪಹೊತ್ತಿಸಿ, ಕೋಲುಪದಗಳನ್ನು ಹಾಡುತ್ತಹೋಗಿ, ಹೊಳೆ–ಹಳ್ಳಗಳ ಪ್ರವಾಹದಲ್ಲಿ ಅವುಗಳನ್ನು ತೇಲಿಬಿಡುವ ನೋಟವು ಮನೋಹಾರಿಯಾಗಿರುವುದು. ಈ ದೀಪದ ಮಡಕೆಗಳಿಗೆ 'ಹೊಂಗೊಡ' ಎಂದು ಹಳ್ಳಿಗರು ಹೇಳುವರು. ದಸರೆಯ ದಿನ ಕುಳಿತ ಸೀಗೆಯಗೌರಿಯು ಇಂದು ವಿಶೇಷ ಪೂಜೆ–ನೈವೇದ್ಯಗಳನ್ನು ಪಡೆಯುವಳು.

ಚಾತುರ್ಮಾಸದಲ್ಲಿ ಆಶ್ವಿನವು ಮೂರನೆಯದು. ಶುದ್ಧ ಏಕಾದಶಿಯಿಂದ ದ್ವಿದಲಧಾನ್ಯ, ಬಹುಬೀಜಫಲ ಇವೆಲ್ಲ ನಿಷಿದ್ಧವೆನಿಸುವುವು. ಈ ಕಡೆಯ ವ್ರತದಲ್ಲಿ ಅನೇಕ ಪದಾರ್ಥಗಳು ವರ್ಜ್ಯವಾಗುವುದರಿಂದ, ವ್ರತಿಗಳು ತುಂಬ ಸಂಯಮದಿಂದ ವರ್ತಿಸಬೇಕಾಗುವುದು. ಹುಳಿ–ಕಾರಗಳನ್ನು ಬಯಸುವವರಿಗೆ ಈ ವ್ರತಪಾಲನೆಯು ತುಂಬ ಕಠಿಣವೆನಿಸುವುದು. ಹುಣ್ಣಿಮೆಯ ರಾತ್ರಿ ನಾಗರಿಕಸಮಾಜದಲ್ಲಿ 'ಕೋಜಾಗರೀವ್ರತ'ವನ್ನು ನಡೆಸುವರು. ಈ ವ್ರತವು ಕಷ್ಟದ್ದಲ್ಲ; ರಸವಂತಿಕೆಯದು. ರಸಗವಳ, ಅಕ್ಷಕ್ರೀಡೆ ಇದರ ಕಾರ್ಯಕ್ರಮಗಳು.

ಅಶ್ವಿನ ಕೃಷ್ಣಪಕ್ಷದಿಂದ ದ್ವಾದಶಿಯವರೆಗೆ ವಿಶಿಷ್ಟ ದಿನಗಳಾವುವೂ ಇಲ್ಲ.

ಇದೇ ಗೋವತ್ಸದ್ವಾದಶಿ. 'ವಸುದ್ವಾದಶಿ' ಎಂದು ಇನ್ನೊಂದು ಹೆಸರೂ ಇದಕ್ಕಿದೆ. ಇಂದು ಕರುವಿನಿಂದ ಸಹಿತವಾದ ಆಕಳನ್ನು ಪೂಜಿಸುವ ಸಂಪ್ರದಾಯ ಅನೇಕ ಮನೆತನಗಳಲ್ಲಿದೆ. ಅಂತಹ ಆಕಳು ಸಿಕ್ಕದವರು, ಗೋಡೆಯ ಮೇಲೆ ಗಂಧರ ಕದಡಿನಿಂದ ಆಕಳು ಮತ್ತು ಕರುವಿನ ಚಿತ್ರಬರೆದು, ಅದನ್ನು ವಿಧ್ಯುಕ್ತವಾಗಿ ಪೂಜೆಮಾಡುವರು. ಸಾಯಂಕಾಲ ಸವತ್ಸಗೋವಿಗೆ ಅರತಿಯನ್ನು ಬೆಳಗುವರು.

ಮರುದಿನದ ತ್ರಯೋದಶಿಯು 'ಧನತ್ರಯೋದಶಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. 'ಹಟ್ಟಿಯಹಬ್ಬ' ಇಂದಿನಿಂದಲೇ ಪ್ರಾರಂಭ. ಗವಳಿಗರು ತಮ್ಮ ನೀರುತುಂಬುವ ಹಬ್ಬ. ಅಳಿಯತನಕ್ಕೆ ಮಾವನ ಮನೆಗೆ ಬಂದ ಹೊಸ ಮದುಮಗನ ಆದರ–ಸತ್ಕಾರಗಳು ಇಂದಿನಿಂದಲೆ ಪ್ರಾರಂಭವಾಗುವುವು. ನೀರಮನೆಯಲ್ಲಿರುವ ಹಂಡೆ–ತಪ್ಪೇಲಿಗಳನ್ನೆಲ್ಲ ನೀರಿನಿಂದ ತುಂಬಿ, ಸುಣ್ಣ–ಬಣ್ಣಗಳಿಂದ ಅವುಗಳನ್ನು ಸಿಂಗರಿಸಿ, ಕಂಠಕ್ಕೆ ಮಾಲಿಂಗನ ಬಳ್ಳಿಯನ್ನು ಸುತ್ತಿ, ಸಾಯಂಕಾಲ ಅವುಗಳ ಬಳಿ ದೀಪಗಳನ್ನು ಬೆಳಗಿಸುವರು. ಅಂದು ಸಂಜೆ ಪಾಯಸ–ಪರಮಾನ್ನಗಳ ಸವಿಯೂಟ. ಮನೆ ಮನೆಯಲ್ಲಿಯೂ ಇಂದಿನಿಂದ ಪಗಡೆಯಾಟ ನಡೆಯುವುದು. ಹಳ್ಳಿಗರು 'ಭರಮನ ಹಬ್ಬ' ಎಂಬ ಹೆಸರಿನಿಂದ ಇಂದು ಸಾಯಂಕಾಲ ಹಬ್ಬವನ್ನು ಮಾಡುವರು. ದನದ ಹಟ್ಟಿಯ ಸಂಕರ್ಷಕನೆಂದು ನಂಬಿದ ಹಟ್ಟಿಯ ಭರಮದೇವರ ಸಂತೃಪ್ತಿಗಾಗಿ ಅವರು ಪೂಜೆ–ನೈವೇದ್ಯಗಳನ್ನು ಸಲ್ಲಿಸುವರು. ದನಗಳನ್ನು ಸಾಕುವವರು ಈ ಹಬ್ಬವನ್ನು ಮಾಡಿಯೇ ಮಾಡುವರು.

ಮರುದಿನವೇ ನರಕಚತುರ್ದಶಿ. ಶ್ರೀಕೃಷ್ಣನು ನರಕಾಸುರನನ್ನು ಸೋಲಿಸಿ, ಅನೇಕ ಜನ ರಾಜಪುತ್ರರ ರಾಜಪುತ್ರಿಯರ ಸೆರೆಬಿಡಿಸಿದ ವಿಜಯ ಸಂಸ್ಮರಣೆಯ ಉತ್ಸವ ದಿನವದು. ಅಂದು ಅರುಣೋದಯ ಸಮಯದಲ್ಲಿಯೆ ಮನೆ–ಮನೆಗಳಲ್ಲಿಯೂ ಆರತಿಯ ಸಂಭ್ರಮ ನಡೆಯುವುದು. ಅಂದು ಆರತಿ ಮಾಡಿಸಿಕೊಳ್ಳುವ ಗಂಡಸರಿಂದ, ಆರತಿ ಮಾಡುವ ಹೆಣ್ಣುಮಕ್ಕಳಿಗೆ ಹಬ್ಬದ ಕಾಣಿಕೆ–ಉಡುಗೊರೆಗಳು ಸಲ್ಲುವುವು. ಅಕ್ಕ–ತಂಗಿಯರು ಅಣ್ಣ–ತಮ್ಮಂದಿರಿಗೆ ಪರಿಮಳತೈಲವನ್ನು ಪೂಸಿ, ಅಭ್ಯಂಜನಸ್ನಾನ ಮಾಡಿಸುವರು. ಅಳಿಯದೇವರ ವಿಶಿಷ್ಟ ಪೂಜೆ–ಪುರಸ್ಕಾರಗಳಂತೂ ನಡೆದೇ ಇರುವುವು. ಎಲ್ಲರ ಸ್ನಾನವಾದ ಮೇಲೆ, ಉಪಾಹಾರದ ಪಙ್ತಿ ನಡೆಯುವುದು. ಒಳ್ಳೆಯ ಕಾಲದಲ್ಲಿ ಈ ಉಪಾಹಾರ ಪದಾರ್ಥಗಳು ವಿವಿಧ ರೀತಿಯವಾಗಿರುತ್ತಿದ್ದುವು. ಮಧ್ಯಾಹ್ನದಲ್ಲಿ ಮಧುರಾನ್ನದ ಊಟ. ಸಾಯಂಕಾಲ ಆಕಾಶದೀಪವನ್ನು ಮನೆಯಮೇಲೆ ಏರಿಸುವುದು ಸಂಪ್ರದಾಯ. ಮನೆಯ ಎಲ್ಲ ಭಾಗಗಳಲ್ಲಿ ಹಣತೆಯ ದೀಪಗಳನ್ನು ಬೆಳಗಿಸುವ



ಪದ್ಧತಿಯಿರುವುದು. ನರಕಚತುರ್ದಶಿಯ ರಾತ್ರಿಯ ಪಗಡೆಯಾಟ ತುಂಬ ತುರುಸಿನಿಂದ ನಡೆಯುವುದು.

ಅಮಾವಾಸ್ಯೆಯು ಉತ್ತರಭಾರತದ ಕೆಲವು ಪ್ರದೇಶಗಳಲ್ಲಿ ಪ್ರಚಾರದಲ್ಲಿರುವ ವಿಕ್ರಮಶಕವರ್ಷದ ಕೊನೆಯ ದಿನವಾಗಿರುವುದು. ಉತ್ತರದ ಕಡೆಯ ವರ್ತಕ–ವ್ಯಾಪಾರಿಗಳೆಲ್ಲರೂ ಈ ಅಮಾವಾಸ್ಯೆಯಂದು ತಮ್ಮ ವ್ಯವಹಾರದ ಲೆಕ್ಕಾಚಾರವನ್ನು ಮುಗಿಸಿದ ಸಂತೋಷದಲ್ಲಿ, ತಂತಮ್ಮ ಅಂಗಡಿಮಳಿಗೆಗಳನ್ನು ಅನೇಕ ಬಗೆಯಿಂದ ಶೃಂಗರಿಸಿ, ಸಾಯಂಕಾಲ ಲಕ್ಷ್ಮೀ–ಸರಸ್ವತಿಯರ ಪೂಜೆಯನ್ನು ವೈಭವದಿಂದ ಜರುಗಿಸುವರು. ಕರ್ನಾಟಕದ ಪೇಟೆಗಳಲ್ಲಿ ಉತ್ತರದ ಕಡೆಯ ವ್ಯಾಪಾರಿಗಳು ಎಣಿಸಲುಬಾರದಷ್ಟು ಜನರಿದ್ದಾರೆ. ಇವರು ಇಲ್ಲಿಯೂ ತಮ್ಮ ಲಕ್ಷ್ಮೀಪೂಜಾಪರಂಪರೆಯನ್ನು ಮುಂದುವರೆಸಿದರು. ಇವರ ಪದ್ಧತಿಯ ಪ್ರಭಾವಕ್ಕೊಳಗಾಗಿ, ನಮ್ಮ ನಾಡಿನ ವ್ಯಾಪಾರಿಗಳೂ ಆಶ್ವಿನವದ್ಯ ಅಮಾವಾಸ್ಯೆಯನ್ನು, ತಮ್ಮ ಲಕ್ಷ್ಮೀಪೂಜೆಯ ದಿನವನ್ನಾಗಿ ಮಾಡಿಕೊಂಡಿದ್ದಾರೆ; ದೀಪಾವಳಿಯ ಅಮಾವಾಸ್ಯೆಯನ್ನು ಕನ್ನಡಿಗರ ಹಬ್ಬವನ್ನಾಗಿಯೂ ಮಾಡಿದ್ದಾರೆ.

ಅಶ್ವಿನಮಾಸವು ಕೇವಲ ಹಬ್ಬಗಳ ಮೂಲಕ ಮೇಲ್ಮೆಪಡೆದ ಮಾಸವೆಂತಲ್ಲ; ಮುಂಗಾರುಬೆಳೆಯ ಧಾನ್ಯಗಳಲ್ಲಿ ಅನ್ನಸತ್ತ್ವವನ್ನು ತುಂಬುವುದು; ಹಿಂಗಾರುಬೆಳೆಯ ಬಿತ್ತಿಗೆಗೆ ಹದಗಾಲವನ್ನು ತಂದುಕೊಟ್ಟು, ನಾಟಿದ ಎಳೆಯ ಸಸಿಗಳಿಗೆ ಜೀವರಸವನ್ನು ಎರೆಯುತ್ತಿರುವುದು.

* * *

# ೮. ಕಾಲರಾಜ್ಯದ ಕಲಾವಿಧಾತೃ–ಕಾರ್ತಿಕಮಾಸ

"ನಕಾರ್ತಿಕ ಸಮೋ ಮಾಸೋ
ನಕೃತೇನ ಸಮಂ ಯುಗಂ ।
ನಚ ವೇದ ಸಮಂ ಶಾಸ್ತ್ರಂ
ನ ತೀರ್ಥಂ ಗಂಗಯಾ ಸಮಂ ॥"

ಎಂದು ಸ್ಕಾಂದಪುರಾಣದಲ್ಲಿ ಸಾಕ್ಷಾತ್ ಬ್ರಹ್ಮದೇವನು ನಾರದಮಹರ್ಷಿಗಳೆದುರು ಕಾರ್ತಿಕಮಾಸದ ಮೇಲ್ಮೆಯನ್ನು ಕೊಂಡಾಡಿದ್ದಾನೆ. ಧರ್ಮಸಾಧನೆಗೆ ಈ ಮಾಸವು ಸುಯೋಗ್ಯಕಾಲವೆಂದು ನಮ್ಮ ಧರ್ಮವಿಧಾಯಕ ಗ್ರಂಥಗಳೆಲ್ಲ ಏಕಕಂಠದಿಂದ ಒಕ್ಕಣಿಸಿರುತ್ತವೆ. ಭಕ್ತ್ಯಾಗಮಿಕರ ಅಭಿಪ್ರಾಯದಂತೆ ಈ ಮಾಸದ ನಿಯಾಮಕದೈವತ ದಾಮೋದರನಾಮಕ ಶ್ರೀಹರಿಯು. ಭಾಗವತಧರ್ಮಿಗಳಿಗೆ ಕಾರ್ತಿಕವು ತುಂಬ ಮೆಚ್ಚಿಕೆಯ ಮಾಸ. ಆಷಾಢಶುದ್ಧ ಏಕಾದಶಿಯಂತೆಯೆ ಕಾರ್ತಿಕಶುದ್ಧ ಏಕಾದಶಿಯಂದೂ ಪಂಢರಪುರದಲ್ಲಿ ಶ್ರೀವಿಟ್ಠಲನ ಭಕ್ತರ ಮೇಳ ಕೂಡುವುದು.

ಚಾಂದ್ರವತ್ಸರ ಕಾಲಮಾನದಲ್ಲಿ ಕಾರ್ತಿಕವೂ ಎಂಟನೆಯ ತಿಂಗಳು. ಸೌರಮಾನದ ವೃಶ್ಚಿಕಮಾಸವು ಈ ತಿಂಗಳಲ್ಲಿಯೇ ಪ್ರಾರಂಭವಾಗುವುದು. ಪೂರ್ವೋದಯ ಪಶ್ಚಿಮಾಸ್ತ. ಪೌರ್ಣಿಮಾಸಂಬಂಧಿಯಾಗಿ ಕೃತ್ತಿಕಾನಕ್ಷತ್ರಕಾರ್ಯ ನಡೆಯಿಸುವುದಾದುದರಂದ, ಈ ಮಾಸಕ್ಕೆ ಕಾರ್ತಿಕ ಎಂದು ಹೆಸರು ಬಂದಿದೆ. ಹಿಂದೆ ಒಂದು ಕಾಲದಲ್ಲಿ, ಮಾರ್ಗಶೀರ್ಷ ಮಾಸಾದಿಯಾಗಿ ಚಾಂದ್ರವತ್ಸರದ ಎಣಿಕೆ ನಡೆಯುತ್ತಿದ್ದಿತು. ಆ ಎಣಿಕೆಯಂತೆ ಕಾರ್ತಿಕವು ವರ್ಷದ ಕೊನೆಯ ತಿಂಗಳಾಗುತ್ತಿದ್ದಿತಾದುದರಿಂದ, ಅಂದಿನಿಂದಲೇ ಕಾರ್ತಿಕಮಾಸವು ಒಂದು ಬಗೆಯ ವೈಶಿಷ್ಟ್ಯವನ್ನು ಪಡೆದುಕೊಂಡು ಬಂದಿದೆ.

ಕಾರ್ತಿಕವು ಶರದೃತುವಿನ ಉತ್ತರಭಾಗ; ಅಲ್ಲದೆ ಹೇಮಂತಋತುವಿನ ಕೆಲವೊಂದು ಲಕ್ಷಣಗಳಿಂದಲೂ ಕೂಡಿದುದಾಗಿರುವುದು. ದೊಡ್ಡದೊಡ್ಡ ನೀರ್ಮಳೆಗಳನ್ನು ಸುರಿಸುವ ಹಸ್ತಾ, ಚಿತ್ತಾ ಮಳೆಗಳ ಆಳಿಕೆ ಆಶ್ವಿನದಲ್ಲಿಯೆ



ಮುಗಿದಿರುವುದು. ಬಯಲುಸೀಮೆಯ ಒಕ್ಕಲಿಗರು ದಿಟ್ಟಿಯಿಟ್ಟು ಕುಳಿತಿರುವ ಸ್ವಾತಿಮಳೆಯ ಕೈಯನ್ನು ಹಿಡಿದುಕೊಂಡೇ ಕಾರ್ತಿಕಮಾಸವು ಈ ಲೋಕಕ್ಕೆ ನಡೆದುಬರುವುದು. ಬಯಲುಸೀಮೆಯ ಒಕ್ಕಲಿಗರು ಬಿತ್ತಿದ ಹಿಂಗಾರಿಯ ಬೆಳೆಗಳಿಗೆಲ್ಲ, ಸ್ವಾತಿಯು ಅಮೃತರಸಸೇಚನವನ್ನು ಮಾಡುವಂತಹದು. ಎಂತಲೇ 'ಸ್ವಾತಿ ಮಳೆ ಹೋದಮ್ಯಾಗ ಐತೇನು?' ಎಂದು ನಾಡನುಡಿ ಬೆಳುವಲನಾಡಿನಲ್ಲಿ ರೂಢವಾಗಿರುವುದು. ಸ್ವಾತಿಯ ಹನಿಯಿಂದ ಜಾತಿಮುತ್ತಾಗುವುದು ಕವಿಸಮಯದ ಮಾತು ಎನಿಸಬಹುದಾದರೂ, ಬೆಳುವಲನಾಡಿನ ಬಿಳಿಜೋಳದ ತೆನೆಗಳಲ್ಲಿ ಅದು ಮುತ್ತಿನ ಗೊಂಚಲನ್ನು ಹೆಣೆಯುವುದು ಅನುಭವಸಿದ್ಧವಾದ ಮಾತು. ಕಡಲೆ–ಗೋಧಿಗಳ ಬೆಳೆಗಳಿಗಂತೂ ಸ್ವಾತಿಯ ಹದಮಳೆಯೇ ಚೈತನ್ಯದಾಯಿ!

ಮಲೆನಾಡಿನ ಗದ್ದೆಗಳಲ್ಲಿ ಬೆಳೆದು ತೆನೆಗಳು ಮಾಗಿನಿಂತ ನೆಲ್ಲುಸಾಳಿಗಳ ಪಯಿರುಗಳು, ಒಕ್ಕಲಿಗನು ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಕೊಡುವ ತವಕದಿಂದ ತೊನೆದಾಡುತ್ತಿರುವುವು. ಬಡವರ ಬರಿಯೊಡಲುಗಳಿಗೆ ಬೇಗನೆ ಕವಳವನ್ನು ಒದಗಿಸಬೇಕೆಂಬ ಕನಿಕರದಿಂದ ಮೊದಲೇ ಬೆಳೆದುಬಂದ 'ದೊಡಿಗನ ಬತ್ತ,' ಒಕ್ಕಲಿಗರ ಬರಿಮನೆಯನ್ನು ತುಂಬುತ್ತಿರುವುವು. ಜಲ್ಲಿಗಳನ್ನು ಬೆಳೆಯಿಸಿರುವ ಗರಿಗಬ್ಬುಗಳು, ತಮ್ಮ ರಸದಲ್ಲಿ ಮಾಧುರ್ಯವನ್ನು ತುಂಬಿಕೊಳ್ಳುತ್ತಿರುವುವು. ನಾಗವಲ್ಲಿಯ ತೋಟಗಳ ಸೌಂದರ್ಯವನ್ನು ನೋಡಬೇಕು; ನಳನಳಿಸಿ ಮರಗಳು ಹಸುರೆಲೆಗಳಿಂದ ತುಂಬಿಕೊಂಡು ಹೊಸಕಾಲದ ಫಲದಾನಕ್ಕಾಗಿ ಸಿದ್ಧತೆಯನ್ನು ನಡೆಸಿರುವುವು. ಬಾಳೆ–ಪೇರಲ ತೋಟಗಳು ಫಲಭಾರದಿಂದ ಬೀಗಿನಿಂತಿರುವುವು. ಕಾರ್ತಿಕಮಾಸದಲ್ಲಿ ದೇವತೆಯೆಂದು ಪೂಜೆಗೊಳ್ಳುವ ನೆಲ್ಲೆಯ ಮರಗಳು, ಸೆಳೆಗೊಂಬು ತುದಿಗೊಂಬುಳಲ್ಲೆಲ್ಲ ಕಾಯಿಗಳನ್ನು ಹೆಣೆದುಕೊಂಡು ನಿಂತಿರುವುವು.

ಬಯಲುಸೀಮೆಯ ಹೊಲ–ಹೊಲಗಳಲ್ಲಿಯೂ ಕಣಗಳು ಅಣಿಗೊಂಡಿದ್ದು, ಅಲ್ಲಿ ಮುಂಗಾರುಧಾನ್ಯಗಳ ರಾಶಿಯ ಕಾರ್ಯ ಆರಂಭವಾಗಿರುವುದು. ಬಯಲುನಾಡಿನ ಒಕ್ಕಲಿಗರ ಬರಿಮನೆಯನ್ನು ಎಲ್ಲಕ್ಕಿಂತ ಮೊದಲು ತುಂಬುವ ಧಾನ್ಯಗಳೆಂದರೆ ನವಣೆ–ಬರಗು–ಸಾವೆಯ ರಾಶಿಗಳು. ಈ ರಾಶಿಗಳು ಬರುವ ಸಂತೃಪ್ತಿಯಲ್ಲಿಯೇ ಅವರು ಕಾರ್ತಿಕಮಾಸವನ್ನು ಸ್ವಾಗತಿಸುವರು. ಅಲಸಂದಿ–ಹೆಸರ ಬಳ್ಳಿಗಳೂ ಆಗ ತಮ್ಮ ಸಫಲಜೀವನದ ಪೂರ್ಣತೆಯನ್ನು ಪಡೆದಿರುವುವು. ಮುಂಗಾರುಜೋಳದ ಹೊಲ–ಹೊಲಗಳಲ್ಲಿ, ಅನ್ನದೇವಿಯ ಮಂದಿರವೆನಿಸುವಂತಹ ವಿವಿಧಾಕಾರದ ಗೂಡುಗಳು ಎದ್ದುನಿಂತಿರುವುವು. ಇನ್ನೂ ಪರಿಪೂರ್ಣತೆಯನ್ನು ಪಡೆಯಬೇಕಾಗಿರುವ ಹುರುಳಿ,

ಪುಂಡಿ, ತೊಗರೆಯ ಬೆಳೆಗಳು, ಜೋಳ ಕೊಯ್ದು ಹೊಲಗಳಲ್ಲಿ ಎದ್ದುಕಾಣುತ್ತಿರುವುವು. ಹಿಂಗಾರುಧಾನ್ಯಗಳ ಎಳಬೆಳೆಗಳೂ ಹಸಿರು ಸಸಿಗಳೂ ಒಕ್ಕಲಿಗರಲ್ಲಿ ಭವಿಷ್ಯದ ಸವಿಯ ಬಯಕೆಯನ್ನು ಹೆಚ್ಚಿಸುತ್ತಿರುವುವು. ಅಲ್ಲಲ್ಲಿ ನಿಂತುಕೊಂಡಿರುವ ಭೂತಾಕಾರದ ಹುಣಿಸೆಯ ಮರಗಳು, ಮೈತುಂಬ ಹುಳಿಗಾಯಿಗಳನ್ನು ಹೊತ್ತುಕೊಂಡಿರುವುವು. ಬೆಟ್ಟ-ಗುಡ್ಡಗಳಲ್ಲಿ ನೋಡಿದಲ್ಲೆಲ್ಲ ಶ್ಯಾಮಲ ವನಶ್ರೀ! ನವಿಲುಗಳ ಕೇಗು, ಕಾಡಹಕ್ಕಿಗಳ ಕೂಗು, ಮಧುವನ್ನರಸುತ್ತ ಹೊರಟ ಜೇನುನೊಣಗಳ ಗುಂಯ್-ಗುಂಯಾಟ, ಜೀರುಂಡೆಗಳ ಜಿರ್‌ಜಿಟ್ಟೆಂಬ ಚೀರಾಟ ಇವುಗಳಿಂದ, ನಾಡೆಲ್ಲವೂ ಸಹಜ ಸಂಗೀತದಿಂದ ತುಂಬಿಕೊಂಡಿರುವುದು. ಎಂತಲೆ ಕಾರ್ತಿಕಮಾಸವು 'ಕಾಲ ರಾಜ್ಯದ ಕಲಾವಿಧಾತೃ!'

ಕಾರ್ತಿಕಮಾಸವು ದೀಪಾವಳಿಯ ಹಬ್ಬದ ದಿನಗಳಲ್ಲಿಯೆ ಪ್ರಾರಂಭವಾಗುತ್ತದೆ. ನೀರುತುಂಬುವ ಹಬ್ಬ, ನರಕಚತುರ್ದಶಿ, ಲಕ್ಷ್ಮೀಪೂಜೆಯಿಂದ ಪ್ರತಿಷ್ಠೆ ಪಡೆದಿರುವ ಅಮಾವಾಸ್ಯೆ ಈ ಮೂರು ದಿನಗಳು ಅಶ್ವಿನಮಾಸದಲ್ಲಿಯೆ ಬಂದಿರುತ್ತವೆ. ದೀಪಾವಳಿಯ ಹಬ್ಬದ ನಾಲ್ಕನೆಯ ದಿನವಾದ ಬಲಿಪ್ರತಿಪದೆಯೊಂದಿಗೆ ಕಾರ್ತಿಕವು ತನ್ನ ಆಡಳಿತವನ್ನು ಪ್ರಾರಂಭಿಸುತ್ತದೆ. ಶ್ರೀಹರಿಯು ವಾಮನಾವತಾರವನ್ನು ತಳೆದು, ಬಲಿಯಲ್ಲಿ ಮೂರುಪಾದ ಭೂಮಿಯ ದಾನವನ್ನು ಬೇಡಿ, ತ್ರಿವಿಕ್ರಮರೂಪದಿಂದ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ಇಳುಹಿದ ಪೌರಾಣಿಕ ಸಂಗತಿಗೆ ಇದು ಸ್ಮಾರಕದಿನವಾಗಿದೆ. ಇಷ್ಟೇ ಅಲ್ಲ, ನರ್ಮದೆಯಿಂದ ಉತ್ತರದಲ್ಲಿರುವ ಭಾರತದಲ್ಲೆಲ್ಲ ಪ್ರಚಾರದಲ್ಲಿರುವ ವಿಕ್ರಮಶಕವರ್ಷದ ಮೊದಲದಿನವಾಗಿ, ಐತಿಹಾಸಿಕ ಪ್ರಾಶಸ್ತ್ಯವನ್ನೂ ಪಡೆದುದಾಗಿದೆ. ಎಂತಲೆ ಅನೇಕ ವ್ಯಾಪಾರಸ್ಥರು ತಮ್ಮ ಲಕ್ಷ್ಮೀ-ಸರಸ್ವತಿಯರ ಪೂಜೆಗಾಗಿ ಈ ವರ್ಷಾದಿಯ ದಿನವನ್ನೇ ಆಯ್ದುಕೊಂಡಿರುತ್ತಾರೆ. ಆಶ್ವಿನ ವದ್ಯ ಅಮಾವಾಸ್ಯೆಯಂತೆಯೆ ಈ ಕಾರ್ತಿಕಶುದ್ಧ ಪ್ರತಿಪದೆಯ ದಿನವೂ ಪೇಟೆಯ ಅನೇಕ ಅಂಗಡಿಗಳಲ್ಲಿ ಪೂಜೆ ನಡೆಯುತ್ತದೆ. ಬಲಿಚಕ್ರವರ್ತಿಯ ಪೂಜೆ ಇಂದು ವಿಧಿವಿಹಿತ.

ಭಾಗವತ ಸಂಪ್ರದಾಯಿಗಳು ಈ ಪ್ರತಿಪದೆಯನ್ನು 'ಗೋವರ್ಧನ ಪ್ರತಿಪದೆ' ಎಂಬ ಹೆಸರಿನಿಂದ ಆಚರಿಸುವರು. ಶ್ರೀಕೃಷ್ಣನು ಗೊಲ್ಲರನ್ನು ಗೋಪಾಲಕರನ್ನು ಮಹಾವೃಷ್ಟಿಯಿಂದ ಸಂರಕ್ಷಿಸಲು ಗೋವರ್ಧನ ಪರ್ವತವನ್ನು ಕೊಡೆಯಂತೆ ಎತ್ತಿಹಿಡಿದ ದಿನವು ಇದೇ ಅಂತೆ. ಅದರ ಜ್ಞಾಪಕಕ್ಕಾಗಿ, ಅನೇಕ ಮನೆತನಗಳಲ್ಲಿ ಗೋವರ್ಧನಪರ್ವತವನ್ನು ಪೂಜಿಸುವ ಸಂಪ್ರದಾಯವೂ ಇದೆ. ಆಕಳ



ಸಗಣಿಯಿಂದಾಗಲಿ, ಮಣ್ಣಿನಿಂದಾಗಲಿ ಗೋವರ್ಧನ ಪರ್ವತದ ಪ್ರತಿಮೆಯನ್ನು ರಚಿಸಿ, ವಿಧ್ಯುಕ್ತವಾಗಿ ಅದನ್ನು ಪೂಜಿಸಬೇಕೆಂದು ಧರ್ಮಸಿಂಧುಗ್ರಂಥವು ವಿಧಿಸಿರುತ್ತದೆ.

ದೀವಳಿಗೆಯ ಪಾಡ್ಯವು ಮೂರುವರೆ ಶುಭಮುಹೂರ್ತ ದಿನಗಳಲ್ಲಿ ಒಂದೆಂಬ ನಂಬುಗೆ ನಮ್ಮ ನಾಡಿಗರಲ್ಲಿದೆ. ಎಂತಲೇ ಯಾವುದೇ ಹೊಸ ಕಾರ್ಯವನ್ನು ಆರಂಭಿಸುವವರು, ಈ ದಿನ ಆಗಮನಕ್ಕಾಗಿ ದಾರಿಕಾಯುತ್ತಿರುತ್ತಾರೆ. ಸನಾತನಧರ್ಮಿಯರೆಲ್ಲರಿಗೂ ಇದೊಂದು ದೊಡ್ಡ ಹಬ್ಬ. ಮನೆ-ಮನೆಯಲ್ಲಿಯೂ ಅಭ್ಯಂಗಸ್ನಾನ, ಆರತಿ, ಮೃಷ್ಟಾನ್ನಭೋಜನ, ವಸ್ತ್ರಾಭರಣಧಾರಣ ಇವೆಲ್ಲ ನಡೆಯುವುವು. ಅಶ್ವಿನ ವದ್ಯತ್ರಯೋದಶಿಯಿಂದಲೇ ಮುಖವೆತ್ತಿ ನಿಲ್ಲಲು ಮೊದಲುಮಾಡಿದ ಆಕಾಶದೀಪದ ಬುಟ್ಟಿಗಳು ಇಂದು ಪೂರ್ಣಸಂಖ್ಯೆಯಲ್ಲಿ ಪ್ರಜ್ವಲಿಸುತ್ತಿರುವುವು. ಹಳ್ಳಿ-ಹಳ್ಳಿಗಳಲ್ಲಿಯೂ ರಸಿಕಜನರು ದೀಪವಿಮಾನಗಳನ್ನು ಬಣ್ಣ-ಬಣ್ಣದ ಕಾಗದಗಳಿಂದ ನಿರ್ಮಿಸಿ, ಬಾನಂಗಳದಲ್ಲಿ ತೇಲಬಿಡುವರು. ಗ್ರಾಮದೇವತೆಯ ಗುಡಿಯಲ್ಲಿ ವಾದ್ಯ-ವೈಭವದೊಂದಿಗೆ 'ಪಲ್ಲಕ್ಕಿಯ ಸೇವೆ' ನಡೆಯುವುದು. ದೇವಿಯ 'ಆಳುಮಕ್ಕಳು' ಕೈಪೆಟ್ಟಿನ ಡೊಳ್ಳಿನ ಗತಿಯೊಂದಿಗೆ ದಟ್ಟಿಯ ಕುಣಿತ ಕುಣಿಯುವರು. ಊರಲ್ಲಿ ಬಯಲಾಟದ ಮೇಳವಿದ್ದರೆ, ಹಬ್ಬದ ಪಾಡ್ಯದ ದಿನ ಅದರ ಪ್ರದರ್ಶನವು ಸಾರ್ವಜನಿಕರೆದುರು ನಡೆಯಲೇ ಬೇಕು. ಹಲಗೆ-ಕರಡೆಗಳ ಮೇಳಗಳಿದ್ದರೆ, ಕಲಿಗಿ-ತುರಾಯಿ ಲಾವಣಿಗಳೊಂದಿಗೆ ಅವುಗಳ ಮೇಲಾಟಗಳೂ ಜರುಗುವುದುಂಟು.

ದೀವಳಿಗೆಹಬ್ಬ ಉತ್ತರಕರ್ನಾಟಕದಲ್ಲಿ 'ಹಟ್ಟಿಯಹಬ್ಬ'ವೆಂದು ಹೆಸರಾಗಿದೆ. ಈ ಕಾಲದಲ್ಲಿ ನಡೆಯುವ ಜಾನಪದ ಸಂಪ್ರದಾಯಗಳನ್ನು ನೋಡಿದರೆ, ಅವುಗಳಲ್ಲಿ ಗವಳಿಗರ ಅಥವಾ ದನಗಾಹಿಗಳ ಸಂಸ್ಕೃತಿಪರಂಪರೆಯೆ ಒಡೆದು ಕಾಣುವುದು. ನಾಗರಿಕರಲ್ಲಿ ಈ ಪರಂಪರೆ ಪೌರಾಣಿಕ ಪ್ರಮಾಣಗಳನ್ನು ಪಡೆದುಕೊಂಡು, 'ಗೋವತ್ಸದ್ವಾದಶಿ', 'ಧನತ್ರಯೋದಶಿ', 'ಗೋವರ್ಧನಪಾಡ್ಯ', 'ಗೋಪಾಷ್ಟಮಿ' ಮೊದಲಾದ ಪೂಜಾದಿನಗಳನ್ನು ಅವರಿಗೆ ವಿಧಿಸಿರುವುದು; ನಾಗರಿಕರಿಗೆ ವಿಧಿಸಲಾಗಿರುವ ಪ್ರತಿಪದೆಯಂದಿನ 'ಮಾರ್ಗಪಾಲೀಬಂಧನ', ವಿಧಾನವೂ, ಈ ದನಗಾಹಿಗಳ ಸಂಪ್ರದಾಯದ ಸುಧಾರಿತ ರೂಪವೇ ಆಗಿದೆ. 'ಮಾರ್ಗಪಾಲೀ' ಎಂಬ ದೇವತೆ ಪಶುಧನವನ್ನು ಸುರಕ್ಷಿತವಾಗಿ ಇರಿಸುವವಳು. ಆದುದರಿಂದ ಹಳ್ಳಿಯ ಅಥವಾ ನಗರದ ಅಧಿಪತಿಗಳು, ಸಾಮೂಹಿಕವಾಗಿ ಈ ದೇವತೆಯ ಉತ್ಸವವನ್ನು ಕಾರ್ತಿಕಶುದ್ಧ ಪ್ರತಿಪದೆಯಂದು ಮಾಡಲೇಬೇಕೆಂದು

ಧರ್ಮಸಿಂಧುಗ್ರಂಥದಲ್ಲಿ ವಿಧಿಸಲಾಗಿದೆ. ಈಗ ನಮ್ಮ ಪ್ರತಿಯೊಂದು ಹಳ್ಳಿಯಲ್ಲಿಯೂ ನಡೆಯುವ ದನಗಳ ಮೆರೆವಣಿಗೆಗಳೂ, ಕುರಿ ಬೆದರಿಸುವ ಪದ್ಧತಿಗಳೂ, ಈ ವರ್ಾಗರ್ಪಾಲೀಬಂಧ'ನ ಸಂಪ್ರದಾಂಯುಕ್ಕೆ ಮೂಲಕಾರಣವಾಗಿರಬಹುದು.

ಹಟ್ಟಿಯ ಹಬ್ಬ ಬಂದೊಡನೆಯೆ ಗವಳಿಗರು ತಮ್ಮ ಹಟ್ಟಿಗಳನ್ನೆಲ್ಲ ಸುಣ್ಣ–ಬಣ್ಣ ಸಾರಣೆ–ಕಾರಣೆಗಳಿಂದ ಸಿಂಗರಿಸುವರು. ಎಲ್ಲ ದನಗಳ ಮೈಯನ್ನೂ ತೊಳೆದು, ಅವುಗಳ ಕೋಡುಗಳಿಗೆ ಬಣ್ಣವನ್ನು ಹಚ್ಚುವರು. ಪ್ರತಿಪದೆಯ ದಿನ ಹಟ್ಟಿಯ ದನಗಳನ್ನು ಪೂಜಿಸಿ, ರಾತ್ರಿಯಲ್ಲಿ ಪಂಜಿನ ದೀಪಗಳೊಂದಿಗೆ ಮೆರವಣಿಗೆ ತೆಗೆಯುವರು. ಗವಳಿಗರಿಗೆ ದೀಪಾವಳಿ ತುಂಬ ಮಹತ್ತ್ವದ ಹಬ್ಬ.

ಪ್ರತಿಯೊಂದು ಹಳ್ಳಿಯ ಕುರುಬರೂ ತಮ್ಮ ತಮ್ಮ ಕುರಿಯ ಮಂದೆಗಳನ್ನು ತಳಿರು–ತೋರಣಗಳಿಂದ ಅಲಂಕರಿಸುವರು. ಎಲ್ಲ ಕುರಿ–ಆಡುಗಳ ಕೊರಳಲ್ಲಿಯೂ ಚೆಂಡುಹೂ, ಹೊನ್ನವರೆ ಹೂಗಳ ಮಾಲೆಗಳನ್ನು ತೊಡಿಸುವರು. ಹಣೆಗಳಿಗೆ ಭಂಡಾರ (ಅರಿಸಿಣ ಹುಡಿ) ಹಚ್ಚುವರು. ಇಳಿಹೊತ್ತಿ ವೇಳೆಯಲ್ಲಿ ಎಲ್ಲ ಕುರಿಗಳನ್ನೂ ಮೆರೆಸುತ್ತ ಊರಮುಂದಿನ ಹೊರಬಯಲಲ್ಲಿ ತರುವರು. ಆಗ ಆ ಮೆರೆವಣಿಗೆಯ ಹಿಂಬದಿಯಲ್ಲಿ ಹಬ್ಬದ ವೇಷ–ಭೂಷಣಗಳನ್ನು ತೊಟ್ಟು, ಕಲಶದ ತಳಿಗೆಯಾರತಿಯನ್ನು ಕೈಯಲ್ಲಿ ಹಿಡಿದುಕೊಂಡು, ಸಾಲುಸಾಲಾಗಿ ನಡೆದಿರುವ ಹಳ್ಳಿಯ ಸುಮಂಗಲೆಯರು, ಆ ಕಾಲಕ್ಕೆ ತಕ್ಕುದಾದ ಸಾಂಪ್ರದಾಯಿಕ ಜಾನಪದ ಗೀತಗಳನ್ನು, ಇಂಪಾಗಿ ಹೇಳುತ್ತಿರುವರು. ಎಲ್ಲ ಕುರಿಗಳೂ ಬಯಲಲ್ಲಿ ಸೇರಿದ ಮೇಲೆ, ಅವುಗಳನ್ನು ಬೆದರಿಸುವ ಕಟ್ಟಳೆ ನಡೆಯುತ್ತದೆ. ನೆರೆದವರೆಲ್ಲ ಕೂಗಿ, ಚೀರಿ, ಬೆದರಿಸಿ ಕುರಿಗಳನ್ನು ಓಡಿಸುವರು. ಬಳಿಕ ಚೆದರಿ ಚೆಲ್ಲಾಪಿಲ್ಲಿಯಾದ ಕುರಿಗಳನ್ನು ಒಟ್ಟುಗೂಡಿಸಿ, ವಾದ್ಯ–ವೈಭವದೊಂದಿಗೆ ಅವುಗಳನ್ನು ಮರಳಿ ಮಂದೆಗೆ ತರುವರು. ಇದೂ ಒಂದು ಪಶುಪೂಜೆಯ ಪದ್ಧತಿಯೇ.

ಈ ಹಬ್ಬದ ಕಾಲದ ಇನ್ನೊಂದು ಸಂಪ್ರದಾಯವೂ, ಇದು ದನಗಾಹಿಗಳ ಹಬ್ಬವೆಂಬುದಕ್ಕೆ ಸಾಕ್ಷ್ಯ ನುಡಿಯುತ್ತದೆ. ಹಳ್ಳಿಯ ಅನೇಕ ಜನ ಒಕ್ಕಲು ಮಕ್ಕಳು, ಬೆಳೆದ ಜೋಳದ ದಂಟು–ಗರಿಗಳಿಂದ ಅಂದವಾದ ಗೂಡುಗಳನ್ನು ನಿರ್ಮಿಸಿ, ಅದರಲ್ಲಿ ದೀಪವನ್ನು ಇರಿಸಿಕೊಂಡು, ಸಂಜೆಯ ವೇಳೆಯಲ್ಲಿ ಒಕ್ಕಲಿಗರ ಮನೆಯ ಮುಂಗಡೆ ನಿಂತು 'ಆಡಿಪೀಡಿ ಜಾಣಿಗೊ' ಎಂದು ಕೂಗಿ, ದನಗಳ ಕ್ಷೇಮವನ್ನು ಹಾರೈಸಿ ದನಗಳ ಯಜಮಾನನಿಂದ ಉಡುಗೊರೆ–ಕಾಣಿಕೆಗಳನ್ನು ಪಡೆದುಕೊಳ್ಳುವರು. ಈ ಕಾಲದಲ್ಲಿ ಅವರು ದನಗಳ ಯೋಗಕ್ಷೇಮ ಕುರಿತಾದ



ವಿಶಿಷ್ಟ ಜಾನಪದ ತುಂಡು ಪದ್ಯಗಳನ್ನೂ ಹೇಳುತ್ತಿರುವರು.

ದೀವಳಿಗೆಯ ಹಬ್ಬದ ದಿನಗಳಲ್ಲಿ ನಮ್ಮ ನಾಡಿಗರ ಮನೆ–ಮನೆಗಳಲ್ಲಿಯೂ ಸಗಣಿಯಿಂದ ಪಾಂಡವರನ್ನು ಮಾಡಿ ಪೂಜಿಸುವ ಪದ್ಧತಿಯಿದೆ. ಕನ್ನಡನಾಡಿನ ಒಕ್ಕಲಿಗರು ಪಾಂಡವರ ಪೂಜೆಯನ್ನು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ವಿಧಗಳಲ್ಲಿ ಮಾಡಿಯೇ ಮಾಡುತ್ತಿರುವರು. ಈ ಹಟ್ಟಿಯ ಹಬ್ಬದ ಕಾಲದಲ್ಲಿ ಸಗಣಿಯ ಪಾಂಡವರನ್ನು ಪೂಜಿಸಿ, ಪಶುಪಾಲನೆಯ ಮಹತ್ತ್ವವನ್ನು ಪ್ರದರ್ಶಿಸುವರೆಂದು ಊಹಿಸುವಂತಿದೆ. ನರಕಚತುರ್ದಶಿಯಿಂದ ಪ್ರಾರಂಭವಾದ ಈ ಪಾಂಡವರ ಪೂಜೆ, ಕೆಲವರಲ್ಲಿ ಪ್ರತಿಪದೆಯಂದೇ ಕೊನೆಗೊಳ್ಳುವುದು. ಇನ್ನು ಕೆಲವರಲ್ಲಿ ಕಾರ್ತಿಕ ಶುದ್ಧ ಪಂಚಮಿಯವರೆಗೂ ಮುಂದುವರೆಯುವುದು. ಕೊನೆಯ ದಿನದ ಪಾಂಡವರ ಪ್ರತಿಮೆಗಳ ರಚನೆ, ಹಳ್ಳಿಯ ಜನಜೀವನದ ಪ್ರತಿಕೃತಿಯಂತಿರುವುದು. ಅಂದು ಪೂಜೆಯ ಮುಕ್ತಾಯದೊಂದಿಗೆ, ಆ ಎಲ್ಲ ಪ್ರತಿಮೆಗಳನ್ನೂ ಮನೆಯ ಮುಮ್ಮಾಳಿಗೆಯ ಕುಂಬೆಗಳ ಮೇಲೆ ಸಾಲುಸಾಲಾಗಿ ಇರಿಸುವರು. ಹೊಸವರ್ಷದ ಗೊಬ್ಬರ, ಕುರುಳುಗಳ ಸಂಗ್ರಹಕ್ಕೆ ದಿವಳಿಗೆಯ ಪಾಡ್ಯ ಶುಭದಿನವೆಂಬ ಶ್ರದ್ಧೆ ನಮ್ಮ ಹಳ್ಳಿಗರಲ್ಲಿದೆ.

ದೀಪಾವಳಿಯ ದಿನಗಳಲ್ಲಿ ದ್ಯೂತವನ್ನಾಡಬೇಕೆಂಬ ನಿಯಮವೂ ಇದೆ. ಆದುದರಿಂದಲೆ ನಮ್ಮ ನಾಡಿನಲ್ಲಿ ಪಗಡೆಯನ್ನಾಡುವ ಸಂಪ್ರದಾಯ ನಡೆದುಕೊಂಡು ಬಂದಿದೆ.

ಪ್ರತಿಪದೆಯ ದಿನವಂತೂ ಎಲ್ಲರೂ ತಪ್ಪದೆ ಪಗಡೆಯನ್ನಾಡುವರು. ಪಾಂಡವರು–ಕೌರವರು ಸೇರಿ ಜೂಜನ್ನಾಡಿದ ಪೌರಾಣಿಕ ಕಥೆಯನ್ನು ಈ ಪರಂಪರೆಗೆ ಹೊಂದಿಸಿ ಹೇಳುವುದುಂಟು; ಆದರೆ ಹಬ್ಬದ ಕಾಲದ ಉಲ್ಲಾಸ ಸೂಚಕವಾದ ನಮ್ಮ ಪಗಡೆಯಾಟಕ್ಕೆ, ಪಾಂಡವ–ಕೌರವರ ಪಗಡೆಯಾಟದ ಸಂದರ್ಭವನ್ನು ಹೊಂದಿಸಿ ಹೇಳುವುದು ನಮ್ಮವರ ಪುರಾಣಪ್ರಿಯತೆಗೊಂದು ಪ್ರಮಾಣ!

ಮರುದಿನದ ದ್ವಿತೀಯೆ 'ಯಮದ್ವಿತೀಯಾ', 'ಬಂಧುದ್ವಿತೀಯಾ' ಎಂಬ ಹೆಸರುಗಳಿಂದ ಪರಿಚಿತವಾಗಿದೆ; ಅದರೂ ಇದು 'ಭಾವುಬಿದಿಗೆ' ಎಂಬ ಹೆಸರಿನಿಂದ ಹೆಚ್ಚು ರೂಢವಾಗಿದೆ. ಈ ಹೆಸರು ಮಹಾರಾಷ್ಟ್ರ ಸಂಸ್ಕೃತಿಯ ಪ್ರಭಾವದಿಂದ ನಮ್ಮಲ್ಲಿ ಬಂದುದು. 'ಬಂಧುದ್ವಿತೀಯಾ' ಎಂಬುದರ ಮರಾಠೀರೂಪವೇ 'ಭಾವುಬಿದಿಗೆ' ಇಂದು ಅಣ್ಣ–ತಮ್ಮಂದಿರು, ಅಕ್ಕ ತಂಗಿಯರಿಂದ ಆರತಿ ಮಾಡಿಸಿಕೊಂಡು, ಅವರ ಮನೆಯಲ್ಲಿಯೆ ಹಬ್ಬದೂಟವನ್ನು ಉಣ್ಣುವ ಸಂಪ್ರದಾಯ

ನಡೆದುಬಂದಿದೆ. ಇದಕ್ಕೊಂದು ಪೌರಾಣಿಕ ಸಂದರ್ಭದ ಪ್ರಮಾಣವನ್ನೂ ಹೇಳುವರು. ಸೂರ್ಯಪುತ್ರನಾದ ಯಮದೇವನು, ತನ್ನ ತಂಗಿಯಾದ ಯಮುನೆಯ ಮನೆಗೆ ಹೋಗಿ, ಅವಳಿಂದ ಸಹೋದರೀಸಹಜ ಪ್ರೀತ್ಯಾತಿಥ್ಯಗಳನ್ನು ಪಡೆದುಬಂದ ದಿನವಂತೆ ಇದು. ಇಂದು ಅಕ್ಕ-ತಂಗಿಯರ ಕೈಯಿಂದ ಊಟಮಾಡಿದರೆ, ಆಯುರ್ವರ್ಧನೆಯಾಗುವುದೆಂಬ ನಂಬುಗೆಯೂ ಇದೆ.

ಕಾರ್ತಿಕಶುದ್ಧ! ತೃತೀಯೆಯು ಭಗಿನೀ ತೃತೀಯಾ! 'ಅಕ್ಕನ ತದಿಗೆ' ಎಂಬ ಹೆಸರಿನಿಂದ ಇದು ಸರ್ವಜನಪರಿಚಿತವಾಗಿದೆ. ಇಂದು ಅಣ್ಣ-ತಮ್ಮಂದಿರ ಮನೆಗೆ ಅಕ್ಕ-ತಂಗಿಯರು ಬಂದು, ಹಬ್ಬದ ಸವಿಯೂಟವನ್ನುಂಡು, ಸೋದರರಿಂದ ಪ್ರೀತಿಯ ಉಡುಗೊರೆ ಪಡೆದುಕೊಳ್ಳಬೇಕು. ಯಮುನೆ ಯಮಧರ್ಮನ ಮನೆಗೆ ಹೋಗಿ, ಹಬ್ಬದ ಆತಿಥ್ಯ ಪಡೆದ ಕಥೆಯು ಈ ಹಬ್ಬದ ಪರಂಪರೆಗೆ ಪೌರಾಣಿಕ ಪ್ರಮಾಣವೆನಿಸಿಕೊಂಡಿದೆ.

ಮರುದಿನದ ಚತುರ್ಥಿ 'ಅಮ್ಮನ ಚೌತಿ' ಎಂಬ ಹೆಸರಿನಿಂದ ಕರೆಯಿಸಿಕೊಳ್ಳುವುದಾದರೂ, ಇಂದು ನಡೆಸಬೇಕಾದ ವಿಶಿಷ್ಟ ವಿಧಾನಗಳಾವುವೂ ಈಗ ಪ್ರಚಾರದಲ್ಲಿಲ್ಲ. ಆದರೆ ಇದಕ್ಕಿರುವ ಹೆಸರನ್ನು ನೋಡಿದರೆ, ದಕ್ಷಿಣಕರ್ನಾಟಕದ 'ಅಮ್ಮ' (ತಾಯಿ)ನನ್ನಾಗಲಿ, ಉತ್ತರಕರ್ನಾಟಕದ 'ಅಮ್ಮ' (ಅಜ್ಜಿ)ನನ್ನಾಗಲಿ, ಈ ದಿನ ಗೌರವಿಸುವ ಪರಂಪರೆ ಇರಬಹುದೆಂದು ಭಾವಿಸುವಂತಿದೆ.

ಶುದ್ಧ ಪಂಚಮಿಯನ್ನು 'ಪಾಂಡವಪಂಚಮಿ' ಎಂದು ಹೇಳುವರು; ಆದರೆ ದೀವಳಿಗೆಹಬ್ಬದ ಕಡೆಯ ದಿನವಾದುದರಿಂದ 'ಕಡೆಪಂಚಮಿ' ಎಂಬ ಹೆಸರಿನಿಂದಲೆ ಇದು ಹೆಚ್ಚು ಜನರಿಗೆ ಪರಿಚಿತವಾಗಿದೆ. ಪಾಂಡವರ ಪೂಜೆಯ ಇಂದಿನ ವಿಶಿಷ್ಟವಿಧಿ. ಅಳಿಯತನಕ್ಕೆಂದು ಅತ್ತೆಯ ಮನೆಗೆ ಬಂದ ಹೊಸ ಅಳಿಯಂದಿರ ವೈಭವದ ಆದರೋಪಚಾರಗಳಿಗೂ ಇದು ಕೊನೆಯ ದಿನವಾಗಿರುವುದು. ದೀಪಾವಳಿಯ ಇಂದಿನ ನಡೆವಳಿಗಳನ್ನು ನೋಡಿದರೆ, ಇದು ದೇವ-ದೇವತೆಗಳ ಪ್ರಸನ್ನತೆಗಿಂತ ಹೆಚ್ಚಾಗಿ, ಬಂಧು-ಬಾಂಧವರ ಪ್ರೇಮ ಸಂಪಾದನೆಗಾಗಿಯೆ ಇದೆಯೆಂದು ಎನಿಸದಿರದು.

ಮದುವೆಯಾಗದ ಕನ್ನಿಕೆಯರು, ದೀಪಾವಳಿಯ ಏಳುದಿನ, ಕೋಟೆಯಿಕ್ಕಿ ಆಡುವ ಸಂಪ್ರದಾಯ, ಉತ್ತರಕರ್ನಾಟಕದ ಗ್ರಾಮ-ನಗರಗಳಲ್ಲಿ ಎದ್ದುಕಾಣುವಂತಹದು. ಒಂದು ಬೀದಿಯ ಹುಡುಗಿಯರೆಲ್ಲ ಸೇರಿ, ಒಂದು ಮನೆಯ ಮೊಗಸಾಲೆಯಲ್ಲಿ ಕೋಟೆಯ ಮಾದರಿಯನ್ನು ರಚಿಸುವರು. ಕೋಟೆಯ



ಮಧ್ಯದ ಗದ್ದುಗೆಯ ಮೇಲೆ ಬಸವನ ಮೂರ್ತಿಯಿರುವುದು. ಕೋಟೆಯ ಬೇರೆ ಬೇರೆ ಭಾಗಗಳಲ್ಲಿ ಅಂಗಡಿಬೀದಿ, ಒಕ್ಕಲಿಗರ ಬೀದಿ, ಅರಮನೆ, ಸೈನಿಕರ ಮನೆ ಇವೆಲ್ಲವುಗಳಿದ್ದು, ಬೇರೆ ಬೇರೆ ಗೊಂಬೆಗಳು ಅಲ್ಲಿಯ ವ್ಯವಹಾರಗಳನ್ನು ಪ್ರತಿನಿಧಿಸುವುವು. ಈ ಕೋಟೆಯಾಟವೆಂದರೆ ಒಂದು ರಸಪ್ರಸಂಗ. ಹಾಡು-ಕಥೆ, ವಿನೋದ, ಆಟ, ಊಟ ಎಲ್ಲವೂ ಈ ಆಟದ ವಿವರದಲ್ಲಿ ಒಳಗೊಳ್ಳುವುವು. ಈ ಕೋಟೆಯಾಟದ ಕಾಲದಲ್ಲಿ ಬಳಸುವ ಜಾನದಪ ಸಾಹಿತ್ಯ, ವಿವಿಧ ಭಾವಗಳನ್ನು ಪರಿಪೋಷಿಸುವಂತಹದಾಗಿದೆ. ಹುಡುಗಿಯರೆಲ್ಲರೂ ಮೇಳಗೊಂಡು ಕೋಲಾಟಮಾಡಿ ಹಾಡುತ್ತ ಬೆಳಗು ಬೈಗು ಎರಡು ಸಲ ಕೋಟೆಯ ಬಸವನನ್ನು ಕೆರೆಗೆ ಒಯ್ದು ನೀರು ಕುಡಿಸಿಕೊಂಡು ಬರುವರು. ಹುಡುಗಿಯರೊಂದಿಗೆ ಇದು ಹಿರಿಯ ಹೆಣ್ಣುಮಕ್ಕಳ ಕಣ್ಮನಗಳನ್ನೂ ಆಕರ್ಷಿಸುತ್ತದೆ. ದುರ್ದೈವದಿಂದ ಈಗ ಈ ಆಟದ ಸ್ವಾರಸ್ಯಪ್ರಸಂಗ ಕಣ್ಮರೆಯಾಗುತ್ತ ನಡೆದಿದೆ. ಅದು ಸಂಪೂರ್ಣ ಅಳಿದು ಹೊಗುವುದರೊಳಗಾಗಿ ಈ ಆಟದ ಕಾಲದ ಜಾನಪದ ಸಹಿತ್ಯವನ್ನಾದರೂ ನಾವು ಸಂಗ್ರಹಿಸಿ ಇಡಬೇಕಾಗಿದೆ.

ಶುದ್ಧ ಅಷ್ಟಮಿಯು 'ಗೋಪಾಷ್ಟಮಿ' ಎಂದು ಕರೆಯಿಸಿಕೊಳ್ಳುತ್ತದೆ. ಇಂದು ಎಲ್ಲರೂ ಸವತ್ಸ ಗೋಪೂಜೆಯನ್ನು ಮಾಡಬೇಕು. ಆಕಳಿಗೆ ಪ್ರದಕ್ಷಿಣೆ ನಮಸ್ಕಾರ ಗ್ರಾಸಗಳನ್ನು ಸಲ್ಲಿಸಿ, ಕೆಲವು ಹೆಜ್ಜೆಗಳನ್ನಾದರೂ ಆಕಳನ್ನು ಹಿಂಬಾಲಿಸಿ ನಡೆಯಬೇಕೆಂದು ಧರ್ಮನಿಯಮವಿದೆ. ಆದರೆ ನಗರದಲ್ಲಿರುವ ಜನರಿಗೆ ಸಜೀವ ಗೋಗಳು ಪೂಜೆಗೆ ಹೇಗೆ ದೊರೆಯಬೇಕು? ಪ್ರತಿಯೊಬ್ಬನೂ ತಾನು ಗೋಪನಿರುವೆನೆಂಬುದನ್ನು ಪ್ರದರ್ಶಿಸುವುದಕ್ಕಾಗಿ ಈ ಗೋಪಾಷ್ಟಮೀವ್ರತದ ಯೋಜನೆಯಿದ್ದಂತೆ ಕಾಣುವುದು. ಮರುದಿನದ ನವಮಿಯು 'ಕೂಷ್ಮಾಂಡನವಮಿ!' ಇಂದು ಕೂಷ್ಮಾಂಡ ಎಂದರೆ ಬೂದುಗುಂಬಳಕಾಯಿಯನ್ನು ಸತ್ಪಾತ್ರರಿಗೆ ದಕ್ಷಿಣೆಯೊಂದಿಗೆ ದಾನಕೊಡಬೇಕೆಂದು ಸಂಪ್ರದಾಯನಿಯಮ ಹೇಳುತ್ತದೆ. ಶುಕ್ಲ ಏಕಾದಶಿಯು 'ಪ್ರಬೋಧಿನೀ ಏಕಾದಶಿ' ಎಂಬ ಹೆಸರನ್ನು ಹೊಂದಿದೆ. ಚಾತುರ್ಮಾಸದಲ್ಲಿ ಮಲಗಿ ನಿದ್ದೆಮಾಡುತ್ತಿರುವ ಶ್ರೀಹರಿಯನ್ನು ಎಚ್ಚರಿಸುವ ವಿಶಿಷ್ಟ ಪೂಜಾಕಾರ್ಯಕ್ರಮಗಳನ್ನಿಂದು ಭಕ್ತರೆಲ್ಲರೂ ನೆರವೇರಿಸಬೇಕಾಗುವುದು. ಚಾತುರ್ಮಾಸದ ಕೊನೆಯ ತಿಂಗಳಲ್ಲಿ ನಿಷಿದ್ಧಾಹಾರವೆನಿಸಿದ ದ್ವಿದಲಧಾನ್ಯ ಮತ್ತು ಬಹುಬೀಜ ಫಲಗಳ ವ್ರತವು ಇಂದು ಕೊನೆಗೊಳ್ಳುವುದು.

ಮರುದಿನವೇ ಉತ್ಥಾನದ್ವಾದಶಿ. ಮಲಗಿ ನಿದ್ದೆಮಾಡುತ್ತಿದ್ದ ಶ್ರೀಮನ್ನಾರಾಯಣನು, ಇಂದು ತನ್ನ ಶಯನವನ್ನುಳಿದು ಎದ್ದೇಳುವನು.

ವೃಂದಾವನದಲ್ಲಿ ನೆಟ್ಟ ಧಾತ್ರಿ ಎಂದರೆ ನೆಲ್ಲಿ, ತಿಂತ್ರಿಣಿ ಎಂದರೆ ಹುಣಿಸೆ ಇವುಗಳೊಂದಿಗೆ ಇಂದು ಶ್ರೀತುಲಸಿಯನ್ನು ಪೂಜಿಸಿ, ವಿವಿಧರೀತಿಯ ಸವಿಯಡಿಗೆಗಳ ನೈವೇದ್ಯವನ್ನು ಸಲ್ಲಿಸಲಾಗುವುದು. ಸಾಯಂಕಾಲ ತುಲಸಿಯ ವೃಂದಾವನದ ಮೇಲೆ ಗರಿಗಬ್ಬುಗಳಿಂದ ಮಂಗಲಮಂಟಪವನ್ನು ರಚಿಸಿ, ತಳಿರು–ಹೂಮಾಲೆಗಳ ತೋರಣದಿಂದ ಅಲಂಕರಿಸುವರು. ಸಾರಣೆ ರಂಗವಲ್ಲಿಗಳಿಂದ ನೆಲವನ್ನು ಸಿಂಗರಿಸುವರು. ಆಗ ಶ್ರೀತುಲಸಿಯ ವಿವಾಹ. ದಾಮೋದರನಾಮಕ ಶ್ರೀಹರಿಯೊಂದಿಗೆ ರಾಧಾಸ್ವರೂಪದ ಶ್ರೀತುಲಸೀ ದೇವಿಯು ಕಲ್ಯಾಣಮಹೋತ್ಸವವನ್ನು ವಿಧ್ಯುಕ್ತವಾಗಿ ನೆರವೇರಿಸುವರು. ಭಾಗವತ ಪಂಥೀಯರೆಲ್ಲರೂ ಈ ಮಹೋತ್ಸವ ಪೂಜೆಗಳನ್ನು ಶ್ರದ್ಧೆಯಿಂದ ನೆರವೇರಿಸುವರು.

ಕಾರ್ತಿಕಶುದ್ಧ ಚತುರ್ದಶಿಯೇ ವೈಕುಂಠಚತುರ್ದಶಿ. ಇಂದಿನ ಪ್ರಾತಃಸ್ನಾನಕ್ಕೆ ವಿಶಿಷ್ಟ ಫಲ ದೊರೆಯುವುದೆಂಬ ನಂಬುಗೆಯಿಂದ ಭಾವುಕರೆಲ್ಲ ನದೀ ಜಲಾಶಯಗಳಲ್ಲಿ ಸ್ನಾನಮಾಡುವರು. ಸ್ನಾನಕ್ಕೆ ಮೊದಲು ದೊನ್ನೆಗಳಲ್ಲಿ ಹಚ್ಚಿದ ದೀವಿಗೆಗಳನ್ನು ತಿಳಿನೀರಿನ ಪ್ರವಾಹದೊಂದಿಗೆ ತೇಲಬಿಡುವರು. ಪ್ರವಾಹದಲ್ಲಿ ತೇಲುತ್ತಿರುವ ದೀಪವೃಂದಗಳ ಆ ದೃಶ್ಯ, ತುಂಬ ಮನೋಹರವಾಗಿರುವುದು. ಇಂದು ಎಲ್ಲರೂ ಧಾತ್ರೀದೇವಿಯ ಸಾನ್ನಿಧ್ಯದಿಂದ ಕೂಡಿದ ನೆಲ್ಲೆಯ ಗಿಡವನ್ನು ಪೂಜಿಸಬೇಕೆಂದು ಧರ್ಮನಿಯಮವಿದೆ. ಅನೇಕ ಜನ ಭಾವುಕರು ನೆಲ್ಲೆಯ ಗಿಡಗಳಿದ್ದಲ್ಲಿ ನವಭೋಜನವನ್ನು ಮಾಡಿ, ಧಾತ್ರೀದೇವಿಗೆ ತಮ್ಮ ಭಕ್ತಿಯ ಕಾಣಿಕೆ ಸಲ್ಲಿಸುವರು.

ಏಕಾದಶಿಯಂದು ಪ್ರಾರಂಭವಾಗುವ ಭೀಷ್ಮಪಂಚಕವ್ರತವು, ಕಾರ್ತಿಕ ಪೌರ್ಣಿಮೆಯಂದು ಕೊನೆಗೊಳ್ಳುವುದು. ಕುರುಪಿತಾಮಹರಾದ ಭೀಷ್ಮರ ಮಹಾವ್ಯಕ್ತಿತ್ವಕ್ಕೆ ಸನಾತನಿಗಳಿಂದ ಇದುವರೆಗೂ ಸಲ್ಲುತ್ತಲಿರುವ ಮನ್ನಣೆಗೆ ಸಾಕ್ಷ್ಯವಿದು. ಕಾರ್ತಿಕ ಪೌರ್ಣಿಮೆಯು 'ತ್ರಿಪುರೀ ಪೌರ್ಣಿಮೆ', 'ಗೌರೀಹುಣ್ಣಿಮೆ' ಎಂಬ ಹೆಸರುಗಳಿಂದ ಕರೆಯಿಸಿಕೊಳ್ಳುತ್ತದೆ. ಶೈವಕ್ಷೇತ್ರಗಳಲ್ಲೆಲ್ಲ ಇಂದು ಆಗಮೋಕ್ತಪೂಜೆ–ಕಾರ್ತಿಕ ದೀಪೋತ್ಸವಗಳು ನಡೆಯುವುವು. ಶ್ರೀಶಂಕರನು ತ್ರಿಪುರರಾಕ್ಷಸರನ್ನು ಸಂಹರಿಸಿ, ಜಗತ್ತನ್ನು ಸಂರಕ್ಷಿಸಿದ ಶುಭದಿನವಿದು. ಈ ಹುಣ್ಣಿಮೆಯಂದು ನಮ್ಮ ನಾಡಿನ ಅನೇಕರ ಮನೆಗಳಲ್ಲಿ ಗೌರಿಯ ಪೂಜಾವ್ರತ ನಡೆಯುವುದು. ನಂದಿಯ ಮೇಲೆ ಆರೂಢರಾದ ಶ್ರೀ ಶಿವ–ಪಾರ್ವತಿಯರ ಪೂಜೆಯನ್ನು ಸುಮಂಗಲೆಯರೆಲ್ಲರೂ ವಿಧಿ ಪೂರ್ವಕವಾಗಿ ಮಾಡುವರು. ಹಳ್ಳಿಗಳಲ್ಲಿಯೂ ಒಕ್ಕಲಿಗರ ದೊಡ್ಡ ಮನೆತನಗಳಲ್ಲಿ ಈ ಗೌರಿಯ ಪೂಜೆ



ನಡೆಯುವುದು. ಗೌರೀಹುಣ್ಣಿಮೆಯ ಬೆಳುದಿಂಗಳಲ್ಲಿ ಕುಳಿತು, ನಮ್ಮ ಹಳ್ಳಿಗಳ ಚೆನ್ನೆಯರು ಹಾಡುವ ವಿವಿಧರೀತಿಯ ಜಾನಪದ ಗೀತಗಳು, ತುಂಬ ಭಾವೋತ್ತೇಜಕವಾಗಿರುವುವು. ಈ ಗೌರಿಯನ್ನು ಹೊಳೆಗೆ ಕಳಿಸುವ ಕಾರ್ಯಕ್ರಮಗಳೂ ವಿಜೃಂಭಣೆಯಿಂದ ನಡೆಯುವುವು.

ಕಾರ್ತಿಕಮಾಸದುದ್ದಕ್ಕೂ ಪೂತಿದಿನ ದೇವಾಲಯಗಳಲ್ಲಿ ದೀಪೋತ್ಸವ ನಡೆದೇ ಇರುವುದು. ವದ್ಯ ಪಕ್ಷದಲ್ಲಿ ಯಾವ ವಿಶಿಷ್ಟ ದಿನಗಳೂ ಇರುವುದಿಲ್ಲ. ಅಮಾವಾಸ್ಯೆಯು, ಮುಂದೆ ಬರುವ ಛಟ್ಟಿಯಹಬ್ಬದ ಕಾರಣದಿಂದ 'ಛಟ್ಟೀ ಅಮಾಸೆ' ಎಂಬ ಹೆಸರನ್ನು ಪಡೆದಿದೆ. ಕಾರ್ತಿಕಶುದ್ಧ ದಶಮಿಯ ದಿನ ಹರಿದಾಸಶ್ರೇಷ್ಠರಾದ ಶ್ರೀವಿಜಯದಾಸರ ಪುಣ್ಯತಿಥಿ. ಗುಂತಕಲ್ಲ ಬಳಿಯಿರುವ ಚಿಪ್ಪಗಿರಿ ಗ್ರಾಮದಲ್ಲಿ ಶ್ರೀವಿಜಯದಾಸರ ಸ್ಮಾರಕ ವೇದಿಕೆಯಿರುವ ಸ್ಥಳದಲ್ಲಿಯೂ ದಾಸರ ಜನ್ಮಗ್ರಾಮವಾದ ಚೀಕಲಪರಿವೆಯಲ್ಲಿಯೂ ಪುಣ್ಯತಿಥಿಯ ಮಹೋತ್ಸವ ಜರುಗುತ್ತದೆ.

ನಿತ್ಯ ದೀಪೋತ್ಸವದ ಮೂಲಕ ಕಾರ್ತಿಕಮಾಸವೆಲ್ಲವೂ ಉತ್ಸವಕಾಲವಾಗಿ ಕಳೆಯುತ್ತದೆ; ಎಂತಲೇ 'ನಕಾರ್ತಿಕ ಸಮೋಮಾಸಃ' ಎಂದಿದೆ, ಸ್ಕಾಂದಪುರಾಣ.

* * *

# ೯. ಮಹಾಮಹಿಮಾಶಾಲಿ–ಮಾರ್ಗಶಿರಮಾಸ

ಭಗವಾನ್ ಶ್ರೀಕೃಷ್ಣನು, ತನ್ನ ಸದ್ಭಕ್ತನಾದ ಅರ್ಜುನನೆದುರು, ವಿಭೂತಿಸ್ವರೂಪಗಳನ್ನು ಕುರಿತು ವಿವರಿಸುತ್ತಿರುವಾಗ 'ಮಾಸಾನಾಂ ಮಾರ್ಗಶೀರ್ಷೋಽಹಂ' ಎಂದರೆ 'ಮಾರ್ಗಶೀರ್ಷಮಾಸವು ನನ್ನ ವಿಭೂತಿ ಸ್ವರೂಪದ ಪ್ರತೀಕ' ಎಂದು ಹೇಳಿ ಮಾರ್ಗಶೀರ್ಷಮಾಸದ ಮಾಹಾತ್ಮ್ಯವನ್ನು ಸ್ವಮುಖದಿಂದಲೇ ಕೊಂಡಾಡಿದ್ದಾನೆ. ಎಂತಲೇ ವರ್ಷದ ಹನ್ನೆರಡು ತಿಂಗಳುಗಳಲ್ಲಿ ಮಿಕ್ಕೆಲ್ಲವುಗಳಿಗಿಂತ ಮಾರ್ಗಶೀರ್ಷಮಾಸವು ಮಹಾಮಹಿಮಾಶಾಲಿಯಾಗಿ ಪ್ರತಿಷ್ಠೆ ಪಡೆದಿದೆ.

ಚಾಂದ್ರಮಾನ ಸಂವತ್ಸರದ ತಿಂಗಳುಗಳ ಎಣಿಕೆಯಲ್ಲೀಗ ಈ ಮಾಸವು ಒಂಭತ್ತನೆಯದಾಗಿದ್ದರೂ, ಹಿಂದೆ ಒಂದು ಕಾಲದಲ್ಲಿ ಈ ಮಾಸದಿಂದಲೇ ವರ್ಷಾಧಿಯಾಗುತ್ತಿದ್ದಿತು. 'ವರ್ಷ' ಎಂಬ ಶಬ್ದವು ಮಳೆಗಾಲದ ಪ್ರಾಧಾನ್ಯವನ್ನು ಸೂಚಿಸುವುದಾದುರಿಂದ, ಪುರಾತನ ಕಾಲದಲ್ಲಿ ಮಳೆಗಾಲದ ಕೊನೆಯೊಂದಿಗೆ ಹನ್ನೆರಡು ತಿಂಗಳುಗಳು ಮುಗಿಯುತ್ತಿದ್ದುವೇನೋ! ಎಂತಲೇ ಹೇಮಂತಋತುವಿನ ಪ್ರಾರಂಭಮಾಸವಾದ ಮಾರ್ಗಶಿರದಿಂದಲೇ ನವವರ್ಷವನ್ನು ಪ್ರಾರಂಭಿಸುತ್ತಿದ್ದರೆಂದು ಭಾವಿಸುವಂತಿದೆ. ಸೌರಮಾನದ ಕಾಲಗಣನೆಯಿಂದ, ದಕ್ಷಿಣಾಯನದ ಕೊನೆಯ ತಿಂಗಳಾದ ಧನುರ್ಮಾಸವು, ಮಾರ್ಗಶಿರಮಾಸದಲ್ಲಿಯೇ ಪ್ರಾರಂಭವಾಗುತ್ತದೆ.

'ಮಾರ್ಗಶಿರ' ಎಂದಿರುವ ಈ ಮಾಸದ ಹೆಸರನ್ನು ನೋಡಿದ ಸಾಮಾನ್ಯ ಜನರಿಗೆ, ಈ ಹೆಸರು ಏಕೆ ಹೇಗೆ ಬಂದಿರಬಹುದೆಂಬುದು ಸಹಜವಾಗಿ ಗೊತ್ತಾಗಲಿಕ್ಕಿಲ್ಲ. ಎಂತಲೇ ಅವರು 'ಮಾರ್ಗ' ಶಬ್ದಕ್ಕೂ ಈ ತಿಂಗಳಿಗೂ ಸಂಬಂಧವನ್ನು ಹಚ್ಚಿ ಹುಡುಕುತ್ತ ಹೊರಡಬಹುದು; ಆದರೆ ಮಾರ್ಗಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಇಪ್ಪತ್ತೇಳು ನಕ್ಷತ್ರಗಳಲ್ಲಿ ಐದನೆಯದಾದ ಮೃಗಶಿರಾ ನಕ್ಷತ್ರವು ಬಹುಜನರಿಗೆ ಸುಪರಿಚಿತವಾದುದು. ಆ ನಕ್ಷತ್ರದ ಉದಯಾಸ್ತಗಳು ಈ ತಿಂಗಳಲ್ಲಿ ಬೈಗು–ಬೆಳಗುಗಳನ್ನು ಮಾಡುವುದಾದುರಿಂದ, ಮೃಗಶಿರಾ ನಕ್ಷತ್ರದ ಸಂಬಂಧಸೂಚಕವಾಗಿ 'ಮಾರ್ಗಶಿರ' ಎಂಬ ಪದವು



ಉಂಟಾಗಿದೆ. ಇದರಲ್ಲಿಯೂ 'ಶಿರ' ಎಂಬುದು ಸಮಾನಾರ್ಥಕವಾದ 'ಶೀರ್ಷ' ಎಂದಾಗಿ, ಮಾರ್ಗಶಿರಮಾಸವು 'ಮಾರ್ಗಶೀರ್ಷ' ಎಂಬ ಹೆಸರಿನಿಂದಲೂ ಅನೇಕರಿಂದ ಕರೆಯಿಸಿಕೊಳ್ಳುತ್ತದೆ.

### ವಿಶಿಷ್ಟ ಗುಣಸೌಂದರ್ಯ

ಮಾರ್ಗಶೀರ್ಷಮಾಸವು ತನ್ನ ಹಿಂದಿನ ಎಲ್ಲ ತಿಂಗಳುಗಳಿಗಿಂತ ವಿಶಿಷ್ಟ ಗುಣಸೌಂದರ್ಯಗಳಿಂದ ತುಂಬಿದುದಾಗಿರುವುದು. ಬೇಸಗೆಕಾಲದ ಬಿರುಬಿಸಿಲಿನ ಬೇಗೆಯಿಲ್ಲ; ಬರಿ ಮಣ್ಣಿನ ಹೊಲ–ನೆಲಗಳಿಲ್ಲ, ಅದರಂತೆಯೆ ಮಳೆಗಾಲದ ಮೋಡಮುಸುಕಿದ ದುರ್ದಿನಗಳ ದರ್ಶನವಿಲ್ಲ; ಕೆಸರು–ಕದಡು ನೀರುಗಳ ಸಂಪರ್ಕವಿಲ್ಲ; ಮನೆ ಸೋರುವ ಭೀತಿಯಿಲ್ಲ. ಮುಂಗಾರುಧಾನ್ಯಗಳ ಬೆಳೆ ತನ್ನ ಜೀವನದ ಪೂರ್ಣನೆಯಿಂದ ಅನ್ನದ ಉಗ್ರಾಣವನ್ನು ತುಂಬುತ್ತಿರುವುದು; ಹಸುಗೂಸಿನಂತೆ ದಿನಕ್ಕೊಂದು ಚೆಂದದಲ್ಲಿ ಬೆಳೆಯುತ್ತಿರುವ ಹಿಂಗಾರುಧಾನ್ಯಗಳ ಬೆಳೆಯು, ಲೋಕಕ್ಕೆ ಶುಭಭವಿಷ್ಯದ ಸೂಚನೆಯನ್ನು ಕೊಡುತ್ತಿರುವುದು. ಒಕ್ಕಲಿಗನಿಗೂ ಅವನ ಜೀವದ ಜೀವಗಳಾದ ಎತ್ತುಗಳಿಗೂ ಹೆಚ್ಚಿನ ಕಷ್ಟದ ದುಡಿಮೆಯಿಲ್ಲ. ಜೀವಸತ್ತ್ವಗಳಿಂದ ತುಂಬಿದ ರಸಗವಳವು ಹೊಟ್ಟೆತುಂಬ ಸುಲಭವಾಗಿ ಸಿಕ್ಕುವುದು. ಎಂತಲೇ ಈ ತಿಂಗಳು, ಪರಮಾತ್ಮನ ವಿಭೂತಿರೂಪದ ಸ್ಥಾನಕ್ಕೇರಿನಿಂತಿರಬಹುದು. ಸಮೃದ್ಧಿ, ಸಂತೃಪ್ತಿ, ಸೌಂದರ್ಯ, ಸುಭಗತೆಗಳೇ ಪರಮಾತ್ಮಶಕ್ತಿಯ ವಿಶಿಷ್ಟ ಲಕ್ಷಣಗಳಲ್ಲವೆ?

ಮಲೆನಾಡಿನ ನೆಲ್ಲುಗದ್ದೆಗಳೆಲ್ಲ ಈಗ, ಮಾನವಕಲ್ಯಾಣದ ಮಹಾಯಜ್ಞಕ್ಕೆ ತಮ್ಮ ಸಂತಾನಫಲದ ಪೂರ್ಣಹುತಿಯನ್ನು ಸಲ್ಲಿಸಿದ ಯಜಮಾನನಂತೆ ಕಾಣುತ್ತಿರುವುವು. ಎಲ್ಲ ಗದ್ದೆಗಳೂ ಬೆಳೆಯಿಲ್ಲದ ಬೋಳುನೆಲಗಳಿಂದ ಕೂಡಿರುವುವು. ಆದರೆ ಇವುಗಳ ಯಜ್ಞಾಹುತಿಯ ಪ್ರತ್ಯಕ್ಷಫಲ ಒಕ್ಕಲಿಗರ ಕಣಗಳಲ್ಲಿ, ಬತ್ತದ ರಾಶಿಯ ರೂಪದಿಂದ ಎಲ್ಲೆಲ್ಲಿಯೂ ಕಾಣುತ್ತಿರುವುದು. ಹಾಡಿಹಾಡಿ ಹೊಡೆಯುವ ಹಂತಿ, ಬೀಸುವ ಮೂಡುಗಾಳಿಯಲ್ಲಿ ಹೊಟ್ಟನ್ನು ತೂರಿ ಕಾಳನ್ನು ಹಸನುಗೊಳಿಸುವ ಕೆಲಸ, ಕಣವನ್ನು ತುಂಬಿನಿಂತ ನೆಲ್ಲರಾಶಿಗಳು, ರಾಶಿಯ ಕಾಳುಗಳ ಚೀಲಗಳನ್ನು ತುಂಬಿಕೊಂಡು ಹಳ್ಳಿಯ ಮನೆಯಕಡೆಗೆ ಹೊರಟ ಬಂಡಿಗಳು ನೋಡಿದಲ್ಲೆಲ್ಲ ಕಣ್ಣಿಗೆ ಕಾಣುವುವು. ಕೆರೆಯ ಹತ್ತಿರದ ಕಿರುಗದ್ದೆಗಳಲ್ಲಿ ಬಗೆಬಗೆಯ ಕಾಯಿಪಲ್ಲೆಯ ಬೆಳೆಯು ಹಸುರಿಂದ ಕಂಗೊಳಿಸುತ್ತಿರುವುದು.

ಮಲೆನಾಡಿನ ಕಬ್ಬಿನ ತೋಟಗಳೂ ಈಗ ತ್ಯಾಗಕ್ಕೆ ಸಿದ್ಧವಾಗಿ ನಿಂತಿರುವುವು.

ಅವು ನಡೆಸಿದ ಹೋಮದ ಹೊಗೆ, ಅಲ್ಲಿ ಮೇಲ್ಮೊಗದಿಂದ ಹೊರಟಿರುವುದು. ಯಜ್ಞಾಹುತಿಯ ಸೊವಡುಗಂಪಿನಂತೆ, ಕಬ್ಬಿನ ರಸಕುದಿದು ಬೆಲ್ಲವಾಗುವ ಸೊವಡುಗಂಪು ವಾತಾವರಣದಲ್ಲಿ ಹಬ್ಬಿರುವುದು. ಆಲೆಮನೆಗಳಿಗೆ ಹೋಗಿ ನೋಡಬೇಕು! ಅಲ್ಲಿ ಹೋದವರೆಲ್ಲರ ಬಾಯಿಯೂ ಸಿಹಿಯಾಗುವುದು. ಬರಿಗೈಯಿಂದ ಯಾರೂ ಮರಳರು. ಕಬ್ಬಿನ ರಸ, ಕಾಕಂಬಿ, ಕೆನೆಬೆಲ್ಲ, ಬಿಸಿಬೆಲ್ಲ, ಕೆರಕಿನುಂಡೆ–ಯಾವುದು ಬೇಕೆಂದರೂ ಅದು ಸಿಕ್ಕುವುದು. ಆಲೆಮನೆ ಇರಿಸಿದ ಒಕ್ಕಲಿಗ, ಕಾಶೀಯಾತ್ರೆಗಿಂತ ಹೆಚ್ಚಿನ ಪುಣ್ಯಕ್ಕೆ ಪಾತ್ರನಾಗುವನೆಂದು ನಮ್ಮ ನಾಡಿಗರಲ್ಲಿ ನಂಬಿಗೆ ರೂಢವಾಗಿದೆ.

ಮಲೆನಾಡಿನ ಸೆರಗಿನ ಜನರ ಭಾಗ್ಯಗಳಾದ ಮೆಣಸಿನಗಿಡ–ತಂಬಾಕುಗಳ ಬೆಳೆಯ ಭರದ ಕಾಲವಿದು. ಹಳ್ಳಿಗಳ ಮನೆಯ ಅಂಗಳದಲ್ಲಿ ಮಾಳಿಗೆಗಳ ಮೇಲೆ ಒಣಗಲು ಹರಡಿದ ಮೆಣಸಿನ ಹಣ್ಣುಗಳು, ಮಾಣಿಕ್ಯದ ಸೆಳೆಗಳಂತೆ ಕಾಣುತ್ತಿರುವುವು. ತ್ರಿಪಥಗಾಮಿಯಾದ ತಂಬಾಕನ್ನು ಬೆಳದ ಒಕ್ಕಲಿಗ, ಹಣದ ಪೆಟ್ಟಿಗೆಗಳನ್ನು ಹೊಸತಾಗಿ ಮಾಡಿಸುವ ಯೋಚನೆಯಲ್ಲಿರುವನು.

ಬಯಲುನಾಡಿನಲ್ಲಂತೂ ಮುಂಗಾರುಧಾನ್ಯಗಳ ಸುಗ್ಗಿಯ ಕಾಲ. ಹೊಲ–ಹೊಲಗಳಲ್ಲಿಯೂ ಕಣಗಳು, ಕಣ–ಕಣಗಳಲ್ಲಿಯೂ ಒಂದಿಲ್ಲೊಂದು ಬಗೆಯ ಧಾನ್ಯದ ರಾಶಿಯ ಕಾರ್ಯ. ಜೋಳದ ರಾಶಿಯನ್ನು ಮುಗಿಸುವ ರೈತರು, ಆ ದಿನ ಕಣದಮ್ಮನಿಗೆ ಪೂಜೆ–ನೈವೇದ್ಯಗಳನ್ನು ಸಲ್ಲಿಸಿ, ಬಂಧುಮಿತ್ರರೊಂದಿಗೆ ಕೂಡಿ, ಕಣದೂಟವನ್ನು ಮಾಡುವರು. ಒಕ್ಕಲಿಗರ ಇಂದಿನ ಉತ್ಸಾಹ–ಉಲ್ಲಾಸಗಳು ಅಪೂರ್ವವೆನಿಸುವಂತಹವು. ಈ ರಾಶಿಯಜ್ಞದ ಆಹುತಿಯ ಶೇಷಾನ್ನವು, ಇಂದು ಕಣಕ್ಕೆ ಬಂದವರೆಲ್ಲರಿಗೂ ಸಿಕ್ಕುವುದು. ಬರಿಗೈಯಿಂದ ಯಾರೂ ಮರಳುವಂತಿಲ್ಲ ಯಜ್ಞಕರ್ತೃವಾದ ಒಕ್ಕಲಿಗ, ನಿತ್ಯ–ನೈಮಿತ್ತಿಕ ಯಾಚಕರೆಲ್ಲರನ್ನೂ ಧಾನ್ಯದಾನದಿಂದ ಸಂತೃಪ್ತಿಗೊಳಿಸುತ್ತಿರುವನು. ಮಾರ್ಗಶಿರಮಾಸದ ಈ ಸುಗ್ಗಿಯ ದಿನಗಳಲ್ಲಿ ನಮ್ಮ ನಾಡಿಗರಲ್ಲಿಯ ಯಾವ ದೀನ–ದರಿದ್ರರೂ ಬರಿಹೊಟ್ಟೆಯಿಂದ ಮಲಗಲಾರರು. ಎಲ್ಲೆಲ್ಲಿಯೂ ಹಾಲು–ಹಯನಗಳ ಹೊನಲು ಹರಿಯುವುದು.

**ಒಕ್ಕಲಿಗನಿಗೆ ತವನಿಧಿ**

ಮುಂಗಾರಿಯ ಬೆಳೆಯೆಂದರೆ ಒಕ್ಕಲಿಗನಿಗೆ ತವನಿಧಿಯೆಂದು ಹೇಳಬಹುದು. ಮುಖ್ಯ ಬೆಳೆಯಾದ ಜೋಳವನ್ನು ಕೊಯ್ದರೂ, ಅಕ್ಕಡಿಯ ಬೆಳೆಗಳಾದ ಹುರುಳಿ, ತೊಗರಿ, ಹೆಸರು, ಮಡಕಿ, ಪುಂಡಿ, ಅವರೆ ಇವುಗಳು



ಹೊಲವನ್ನು ತುಂಬಿಕೊಂಡೇ ಇರುವುವು. ಜೋಳ ಕೊಯ್ದ ಕೋಲಿಗಳು ಮತ್ತೆ ಚಿಗಿತು, ದನಗಳಿಗೆ ಹಸುರು ಮೇವನ್ನು ಒದವಿಸುವುವು. ಎಂತಲೇ ಬಯಲುನಾಡಿನ ಒಕ್ಕಲಿಗರು ಹೇಳುವ ಅನುಭವೋಕ್ತಿಯಿದು 'ನೂರಕ್ಕೆ ನೂರು ಬೆಳೆಯೆಂದರೆ, ಮುಂಗಾರು ಬೆಳೆಯೇ ಸರಿ!'

ಹಿಂಗಾರುಬೆಳೆಯು ಹೊಲಗಳು ಈಗ ಬರೀ ಆಶೆಯು ಕೂಸುಗಳಾಗಿರುವುವು. ಮುಖ್ಯ ಬೆಳೆಯಾದ ಬಿಳಿಜೋಳ ಅಥವಾ ಎಣಿಗಾರಜೋಳದ ಬಗೆಗೆ ಹೇಳಬೇಕೆಂದರೆ, ಬೆಳುವಲ ರೈತನ ಭಾಷೆಯಲ್ಲಿ ಅದು 'ಹೆಳವ ಬೆಳಿ!' ಪ್ರಾರಂಭದಶೆಯಲ್ಲಂತೂ ಅದು ಒಕ್ಕಲಿಗನನ್ನು ನಿರಾಶೆಗೀಡುಮಾಡುವುದು. ಎಂತಲೇ ಬಿಳಿಜೋಳ ಬಿತ್ತಿದ ಒಕ್ಕಲಿಗನ ಬಗೆಗೆ ಒಂದು ನಾಡನುಡಿ ರೂಢವಾಗಿದೆ; 'ಚಟ್ಟಿಮುಂದ ಹೊಲಾ ಬಿಟ್ಟು ಹ್ವಾದ; ಎಳ್ಳಮಾಸಿಗೆ ಹೊಳ್ಳಿಹೊಳ್ಳಿ ನೋಡುತ ಬಂದ!' ಮರ್ಗಶಿರಮಾಸದ ಕೊನೆಗೆಂದರೆ, ಬಡಕಲಾಗಿದ್ದ ಬಿಳಿಜೋಳದ ಬೆಳೆ, ಬೆಳೆದು ನಳನಳಿಸುತ್ತಿರುವುದು. ಗೋಧಿಯ ಬೆಳೆ ತೆನೆಗಳನ್ನು ಹೊತ್ತಿರುವುದು. ಕಡಲೆಯ ಬೆಳೆ ನೀಲಗೆಂಪುಬಣ್ಣದ ಕಿರಿಹೂಗಳನ್ನು ತಳೆದಿರುವುದ. ಕುಸುಬೆಯ ಹಸುರು ಗಿಡಗಳು ಬೆಳೆದು, ಮುಳ್ಳು–ಮೊಗೆಗಳಿಂದ ತುಂಬಿರುವುವು. ಅಗಸೆಯ ಬಡಕಲು ಗಿಡಗಳನ್ನು ನೀಲವರ್ಣದ ಹಲವಾರು ನಲ್ಹೂಗಳು ಅಲಂಕರಿಸಿರುವುವು.

ಚಾತುರ್ಮಾಸದಲ್ಲಿ ಹಬ್ಬ–ಹರಿದಿನಗಳು ಒಂದರ ಹಿಂದೊಂದು ಬಂದೇ ಬರುತ್ತಿರುವುವು; ಆದರೆ ಮಾರ್ಗಶಿರ ಮಾಸದಲ್ಲಿ ಅವುಗಳ ಬಾಹುಲ್ಯ ಪರಿಮಿತಸಂಖ್ಯೆಗೆ ಇಳಿದಿರುವುದು. ಶುಕ್ಲ ಪ್ರತಿಪದೆಯಿಂದ ಶುಕ್ಲ ಷಷ್ಠಿಯವರೆಗಿನ ಆರು ದಿನಗಳಲ್ಲಿ ಶ್ರೀಮಲ್ಲಾರಿದೇವರ ಭಕ್ತರ ಮನೆಗಳಲ್ಲಿ ಛಟ್ಟಿಯ ನವರಾತ್ರಿಯ ಪೂಜೆ–ಪಾರಾಯಣಗಳು ನಡೆಯುವುವು. ಆರು ರಾತ್ರಿಗಳ ಈ ಹಬ್ಬವು ಸಂಪ್ರದಾಯಸಾಮ್ಯದ ಮೂಲಕ 'ನವರಾತ್ರಿ' ಎಂದು ಕರೆಯಿಸಿಕೊಳ್ಳುತ್ತಿರುವುದು ಮೋಜಿನ ವಿಷಯವಾಗಿದೆ. ಶ್ರೀಮಲ್ಲಾರಿದೇವರ ಕ್ಷೇತ್ರಸ್ಥಾನಗಳಾದ ದೇವರುಗುಡ್ಡ, ಹಿರಿಯಮೈಲಾರ, ಮಂಗಸೂಳಿ, ಜೇಜೂರಿ ಮೊದಲಾದ ಎಲ್ಲ ಕಡೆಗಳಲ್ಲಿಯೂ ಈ ಛಟ್ಟಿಯಹಬ್ಬದ ವಿಶೇಷೋತ್ಸವಗಳು ನಡೆಯುತ್ತವೆ.

ಈ ಹಬ್ಬದ ದಿನಗಳಲ್ಲಿ. ಶ್ರೀಮಲ್ಲಾರಿದೇವರ ಉಪಾಸಕರ ಮನೆಗಳಲ್ಲಿ, ಈ ದೇವರಿಗೆ ತಮ್ಮನ್ನು ನಿವೇದಿಸಿಕೊಂಡ 'ಗೊರವಪ್ಪ' ಅಥವಾ 'ವಗ್ಗಯ್ಯ'ಗಳನ್ನು ಭಕ್ತಿಯಿಂದ ಬರಮಾಡಿಕೊಂಡು, ಔತಣದೂಟವನ್ನವರಿಗೆ ಸಲ್ಲಿಸುತ್ತಿರುವುದುಂಟು. ಕೆಲವು ಮನೆತನಗಳಲ್ಲಿ ಗೊರವಪ್ಪಗಳ ಡೋಣಿಗಳನ್ನು ತುಂಬಿಸುವ

ಸಂಪ್ರದಾಯವಿರುತ್ತದೆ. ಇನ್ನು ಕೆಲವರಲ್ಲಿ ವಗ್ಗಯ್ಯ–ಮುರುಳಿಯರ ಹಾಡು–ಕುಣಿತಗಳನ್ನು ಮಾಡಿಸುವ ಪದ್ಧತಿಯಿರುತ್ತದೆ. ಶುಕ್ಲಷಷ್ಠಿಯೆ ಈ ಹಬ್ಬದ ಕೊನೆಯ ದಿನ. 'ಚಂಪಾಷಷ್ಠಿ' ಎಂಬ ಹೆಸರಿನಿಂದ ಇದು ನಾಡಿಗರೆಲ್ಲರಿಗೆ ಸುಪರಿಚಿತವಾಗಿದೆ. ಈ ಹಬ್ಬದ ಆರುದಿನಗಳಲ್ಲಿ ಶ್ರೀಮಲ್ಲಾರಿದೇವನಿಗಾಗಿ ನಂದಾದೀಪಗಳನ್ನು ಇರಿಸಲಾಗುವುದು. ತಂಬಿಟ್ಟನಾರತಿ, ವಿಶಿಷ್ಟ ಪದಾರ್ಥಗಳ ನೈವೇದ್ಯಗಳನ್ನೂ ಅರ್ಪಿಸಲಾಗುವುದು. ಶ್ರೀಮಲ್ಲಾರಿಯ ಸ್ತುತಿ–ಸ್ತೋತ್ರಗಳ ಪಾರಾಯಣ–ಪುರಶ್ಚರಣಗಳೂ ನಡೆಯುವುವು. ದಕ್ಷಿಣಭಾರತದಲ್ಲಿ ಶ್ರೀಸುಬ್ರಹ್ಮಣ್ಯಸ್ವಾಮಿಯ ದೇವಸ್ಥಾನಗಳಿರುವೆಡೆಯಲ್ಲಿಯೂ ಷಷ್ಠಿಯ ದಿನ ವಿಶೇಷ ಪೂಜೆ–ಉತ್ಸವಗಳು ನಡೆಯುತ್ತವೆ. ಎಂತಲೇ ಆ ಪ್ರದೇಶದಲ್ಲಿ ಮಾರ್ಗಶಿರ ಶುಕ್ಲಷಷ್ಠಿಯು 'ಸುಬ್ರಹ್ಮಣ್ಯಷಷ್ಠಿ' ಎಂಬ ಹೆಸರನ್ನು ಪಡೆದುಕೊಂಡಿದೆ.

ಈ ತಿಂಗಳ ಶುಕ್ಲಾಷ್ಟಮಿಯು ಪಾಂಡವ ಮಹಾವ್ಯಕ್ತಿ ಭೀಮಸೇನನು ಹುಟ್ಟಿದ ದಿವಸ. ಸಂಪ್ರದಾಯವಂತರ ಕೆಲವು ಮನೆತನಗಳಲ್ಲಿ 'ಭೀಮಜಂತಿಯ' ಹಬ್ಬವನ್ನು ಆಚರಿಸುವರು. ಶುಕ್ಲ ಏಕಾದಶಿಯು 'ಗಿರಿಜಾಜಯಂತಿ'ಯ ಮೂಲಕ, ಅಖಿಲಭಾರತೀಯ ಖ್ಯಾತಿಯನ್ನು ಪಡೆದಿದೆ. ಶುಕ್ಲತ್ರಯೋದಶಿಯಂದು ಅನೇಕ ಜನ ಭಾವುಕರು, ಹನುಮದ್‌ವ್ರತವನ್ನು ಆಚರಿಸುವರು. ಪುರಾಣಪ್ರಸಿದ್ಧವಾದ ಈ ವ್ರತವು, ಮಿಕ್ಕ ಹಲವಾರು ವ್ರತಗಳಂತೆ ವಿಶಿಷ್ಟ ವಿಧಿ–ವಿಧಾನಗಳಿಂದ ಕೂಡಿರುವುದು. ಅನಂತನ ವ್ರತದಂತೆ ಈ ಹನುಮದ್‌ವ್ರತದಲ್ಲಿಯೂ 'ದೋರಬಂಧನ'ದ ವಿಧಿಯಿರುತ್ತದೆ.

ಮಾರ್ಗಶಿರ ಪೌರ್ಣಿಮೆಯು 'ಹೊಸತಿಲ ಹುಣ್ಣಿಮೆ' ಎಂಬ ಹೆಸರಿನಿಂದ ಉತ್ತರಕರ್ನಾಟಕದಲ್ಲಿ ಸರ್ವಜನ ಪರಿಚಿತವಾಗಿದೆ. ಶ್ರೀಚಂದಲಾಂಬೆಯ ಉಪಾಸಕರೆಲ್ಲರಿಗೂ ಇದು ಕುಲಧರ್ಮ ಹುಣ್ಣಿಮೆಯಾಗಿದೆ. ಇಂದೆಯೇ ದತ್ತಾತ್ರೇಯಜಯಂತಿ. ನಮ್ಮ ನಾಡಿನ ದತ್ತಾತ್ರೇಯ ಭಕ್ತರೆಲ್ಲರೂ 'ಗುರು ಪೌರ್ಣಿಮೆ' ಎಂದು, ಪೂಜೆ–ನೈವೇದ್ಯಗಳನ್ನೂ ಸೇವೆ–ಉತ್ಸವಗಳನ್ನೂ ವಿಜೃಂಭಣೆಯಿಂದ ಜರುಗಿಸುತ್ತಾರೆ.

**ಧನುರ್ಮಾಸದ ಉತ್ಸವಗಳು**

ಈ ತಿಂಗಳಲ್ಲಿ ಪ್ರಾರಂಭವಾಗುವ ಸೌರಮಾನದ ಧನುರ್ಮಾಸದ ದಿನಗಳು, ವಿಷ್ಣುಭಕ್ತರಿಗೆ ನಿತ್ಯೋತ್ಸವ ದಿನಗಳಾಗಿರುವುವು. ಪ್ರಾತಃಸ್ನಾನವಂತೂ ಸರಿಯೇ ಸರಿ! ದೇವರ ಪೂಜೆ–ನೈವೇದ್ಯಗಳೂ ಬೆಳಗಿನಲ್ಲಿಯೆ ನಡೆಯಬೇಕು. ಹೆಸರುಬೇಳೆಯ ಹೂರಣಗಡುಬು, ಹುಗ್ಗಿ–ಗೊಜ್ಜು, ದೋಸೆ–ಬೆಣ್ಣೆ ಇವು



ಧನುರ್ಮಾಸದ ನೈವೇದ್ಯದಲ್ಲಿ ಅವಶ್ಯಕ ಪದಾರ್ಥಗಳಾಗಿರುವುವು. ಧನುರ್ಮಾಸದ ನಿತ್ಯಪೂಜೆ–ನೈವೇದ್ಯಗಳನ್ನು ಸಾಧಿಸಲಾಗದ ಭಾವುಕ ಭಕ್ತರು, ಒಂದೇ ಒಂದು ದಿನವಾದರೂ ಧನುರ್ಮಾಸದ ವಿಶೇಷ ಪೂಜೋತ್ಸವಗಳನ್ನು ಶ್ರದ್ಧೆಯಿಂದ ಆಚರಿಸುವರು. ಧನುರ್ಮಾಸದ ಸ್ನಾನ–ಪೂಜೆಗಳ ಪುಣ್ಯವು ವಿಶೇಷರೀತಿಯದಾಗಿರುವುದು. ಅನೇಕ ಪುರಾಣಗಳಲ್ಲಿ ಧನುರ್ಮಾಸದ ಮಾಹಾತ್ಮ್ಯವು ವಿವರಿತವಾಗಿದೆ. ಅದರಲ್ಲಿ ಧನುರ್ಮಾಸದ ಆಚರಣೆಯ ರೀತಿ–ನೀತಿಗಳನ್ನು ಹೇಳಲಾಗಿದೆಯಲ್ಲದೆ, ಈ ಆಚರಣೆಯ ಅನುಷ್ಠಾನದಿಂದ ಸದ್ಗತಿಯನ್ನು ಸಂಪಾದಿಸಿದ ಬೇರೆ ಬೇರೆ ಭಾವುಕ ಭಕ್ತರ ಕಥೆಗಳನ್ನೂ ಬಿತ್ತರಿಸಲಾಗಿದೆ.

ಕಾರ್ತಿಕಮಾಸದಲ್ಲಿ ಪ್ರಾರಂಭವಾದ ದೇವಮಂದಿರದ ದೀಪೋತ್ಸವಗಳು ಈ ತಿಂಗಳಲ್ಲಿ, 'ಕಾರ್ತಿಕ ಇಳಿಸುವುದು' ಎಂಬ ಹೆಸರಿನ ಉತ್ಸವದೊಂದಿಗೆ ವಿಸರ್ಜಿತವಾಗುತ್ತವೆ. ನಮ್ಮ ನಾಡಿನ ಪ್ರತಿಯೊಂದು ಹಳ್ಳಿಯ ಮುಖ್ಯ ದೇವಾಲಯದಲ್ಲಿಯೂ ಈ ಬಗೆಯ ಉತ್ಸವಗಳು ಸಾರ್ವಜನಿಕವಾಗಿ ನಡೆಯುವುವು. ಕೆಲವೊಂದು ಹಳ್ಳಿಗಳಲ್ಲಿ ಕಾರ್ತಿಕ ಇಳಿಸುವ ಉತ್ಸವ ದಿನಗಳು, ದೊಡ್ಡದೊಡ್ಡ ಜಾತ್ರೆಗಳನ್ನೇ ಸೇರಿಸುವುವು. ಜಾತ್ರೆಯ ಕಾಲದ ಸೇವೆ–ಸಂಭ್ರಮಗಳೆಲ್ಲವೂ ಈಗ ನಡೆಯುವುವು. ಅನೇಕ ಕಡೆಗೆ ಗ್ರಾಮದೇವತೆಯ ತೆಪ್ಪೋತ್ಸವಗಳೂ ನಡೆಯುವುವು. ಈ ಕಾರ್ತಿಕ ವಿಸರ್ಜನೋತ್ಸವವಾಗುವವರೆಗೆ, ಹೊಲಗಳಲ್ಲಿ ಕಣಗಳನ್ನು ಮಾಡಲಾಗದೆಂಬ ನಿಯಮವನ್ನು ತಪ್ಪದೆ ನಡೆಸಿಕೊಂಡು ಬಂದ ಹಳ್ಳಿಗಳೂ ನಮ್ಮ ನಾಡನಲ್ಲಿ ಕೆಲವು ಇವೆ.

ಈ ತಿಂಗಳ ಅಮಾವಾಸ್ಯೆಯು, ಉತ್ತರಕರ್ನಾಟಕದಲ್ಲಿ 'ಎಳ್ಳಮಾವಾಸ್ಯೆ' ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದಿದೆ. ನಾಗರಿಕಲೋಕಕ್ಕೆ ಈ ಅಮಾವಾಸ್ಯೆ ಸಾಮನ್ಯ ದಿನವಾಗಿದ್ದರೂ ಹಳ್ಳಿಯ ಒಕ್ಕಲಿಗರಿಗೆ ಇದೊಂದು ಮಹತ್ತ್ವದ ಹಬ್ಬದ ದಿನವಾಗಿದೆ. ಮುಂಗಾರುಬೆಳೆಯ ನಾಡಿನಲ್ಲಿ ಸೀಗೆಯಹುಣ್ಣಿಮೆಯು ಒಕ್ಕಲಿಗನ ವಿಶಿಷ್ಟ ಹಬ್ಬವಾಗಿರುವಂತೆ, ಹಿಂಗಾರು ಬೆಳೆಯ ಪ್ರದೇಶದಲ್ಲಿ ಎಳ್ಳಮಾಸೆ ಒಕ್ಕಲಿಗರ ಮಹತ್ತ್ವದ ಹಬ್ಬದ ದಿನವಾಗಿದೆ. ಅಂದು ಪಾಂಡವರ ಪೂಜೆ, ಚರಗ ಚೆಲ್ಲುವುದು. ಹಬ್ಬದ ವನಭೋಜನ ಇವೆಲ್ಲ ಸಾಂಪ್ರದಾಯಿಕ ಸಮಾರಂಭಗಳು ನಡೆಯುವುವು. ಹಸುರು–ಹಸುರಾಗಿ ಬೆಳೆದ ಬಿಳಿಜೋಳದ ಹೊಲಗಳಲ್ಲಿ ಪೂಜೆ–ಊಟಗಳಿಗೆಂದು ಬಂದು ತಿರುಗಾಡುವ ಹಳ್ಳಿಯ ಗರತಿಯರು, ಸಡಗರದ ವೇಷಭೂಷಣಗಳನ್ನು ಅಳವಡಿಸಿಕೊಂಡು, ಬಂಧು–ಬಾಂಧವರೊಂದಿಗೆ ವಿನೋದ ಸಂಭ್ರಮದಲ್ಲಿರುವ ಆ ದೃಶ್ಯವು ನಯನಮನೋಹರವಾಗಿರುವುದು. ಅಂದವರು

ಹದಮಾಡಿ ತಂದ ಎಳ್ಳಹೋಳಿಗೆ, ಎಳ್ಳು ಬೆಲ್ಲದ ಕರಜೀಕಾಯಿ, ಕರಿಗಡುಬು, ವಡೆಗಳು ನೋಡಿದವರ ಬಾಯಲ್ಲಿ ನೀರನ್ನು ಊರಿಸುವುವು. ರಾತ್ರಿಯಲ್ಲಿ ನಡೆಯುವ ಬಯಲಾಟಗಳು, ಹಳ್ಳಿಯ ಹಬ್ಬದ ಉತ್ಸವದ ಗುಡಿಯ ಕಳಸವಾಗಿರುವುವು.

ಮಾರ್ಗಶೀರ್ಷ ಪೌರ್ಣಿಮೆಯಂದು ಸವದತ್ತಿಯ ಎಲ್ಲಮ್ಮನ ಗುಡ್ಡದಲ್ಲಿ ದೊಡ್ಡ ಪರಿಸೆ ಸೇರುವುದು. ಗೊಡಚಿಯೆಂಬ ಗ್ರಾಮದಲ್ಲಿ ಶ್ರೀವೀರಭದ್ರದೇವರ ಸುಪ್ರಸಿದ್ಧ ಜಾತ್ರೆ ಜರುಗುವುದು. ದಕ್ಷಿಣಕನ್ನಡ ಜಿಲ್ಲೆಯ ಧರ್ಮಸ್ಥಳದ ಮಂಜುನಾಥದೇವರ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯುವ ಮಹೋತ್ಸವವು ಇದೇ ತಿಂಗಳಲ್ಲಿ ಪ್ರತಿವರ್ಷ ಜರುಗುವುದು. ಬಹುಜನ ಕನ್ನಡಿಗರ ಆರಾಧ್ಯದೈವತವಾದ ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ, ಧನುರ್ಮಾಸದ ನಿತ್ಯೋತ್ಸವಗಳು ಈಗ ನಡೆದಿರುವುವು. ಮದುವೆಯ ಸಮಾರಂಭಗಳಿಗಂತೂ ಇದು ತುಂಬ ಅನುಕೂಲವಾದ ಕಾಲ. ಹೇಮಂತ ರಾಜನ ಪ್ರಸಾದವನ್ನು ಪಡೆದ ಈ ಮಾಸವು, ತರುಣ–ತರುಣಿಯರ ಹೃದಯದಲ್ಲಿ ಪ್ರಣಯದ ಕಾರಂಜಿಯನ್ನು ಪುಟಿಯಹಚ್ಚುವ ಶುಭಕಾಲವಾಗಿರುವುದು.

ಪ್ರಕೃತಿದೇವಿ ಈ ಮಾಸಕ್ಕೆ ಒಂದು ಸಹಜ ಸೌಂದರ್ಯವನ್ನು ಒದಗಿಸಿಕೊಟ್ಟಿದ್ದಾಳೆ. ಲೌಕಿಕಸೌಂದರ್ಯವೂ ಪರಮಾತ್ಮಭಾವದ ನಿರ್ದಶನವಾಗಿದೆ. ಎಂತಲೇ ಋತು – ಸತ್ಯಗಳ ಸಾಕಾರ ರೂಪಿಯಾದ ಶ್ರೀಕೃಷ್ಣ, ಮಾರ್ಗಶಿರ ಮಾಸವೆಂದರೆ ತಾನು ಎಂದು ಸಾರಿ ಹೇಳಿದ್ದಾನೆ. ಈ ಮಾಸದ ಮೇಲ್ಮೆಗೆ ಇದಕ್ಕಿಂತಲೂ ಹೆಚ್ಚಿನ ಆಪ್ತವಾಕ್ಯ ಪ್ರಮಾಣ ಇನ್ನೇನು ಬೇಕು?

* * *



## ೧೦. ಪರ್ವಪ್ರವರ ಪ್ರತಿಷ್ಠಿತ–ಪೌಷ್ಯಮಾಸ

ಉತ್ತರಕರ್ನಾಟಕದಲ್ಲಿಯ ಜನತೆ, 'ಪುಷ್ಯಮಾಸವನ್ನು' ಚೂನೆಯತಿಂಗಳು ಎಂದರೆ ಶೂನ್ಯಮಾಸ ಎಂದು ತಿಳಿಯುವುದು; ಎಂತಲೇ ಯಾವ ಶುಭಕಾರ್ಯಗಳನ್ನೂ ಈ ತಿಂಗಳಲ್ಲಿ ಜರುಗಿಸುವುದಿಲ್ಲ; ಯಾವ ಉದ್ಯಮಗಳನ್ನೂ ಪ್ರಾರಂಭಿಸುವುದಿಲ್ಲ. ಹೊಸ ಮದುವಣಿಗಿತ್ತಿಯರಿಗೆ ಅತ್ತೆಯ ಮನೆಯ ವಾಸ ಈ ತಿಂಗಳಲ್ಲಿ ವರ್ಜ್ಯವಿರುವುದು. ಜನಸಾಮಾನ್ಯರು ಇದನ್ನು ಇಷ್ಟೊಂದು ಅಮಂಗಲಕಾಲವೆಂದು ಕಾಣುತ್ತಿದ್ದರೂ ನಮ್ಮ ಪೌರಾಣಿಕ ಸಾಂಸ್ಕೃತಿಕ ಪರಂಪರೆ. ಪೌಷ್ಯಮಾಸದ ಹಿರಿಮೆಯನ್ನು ಕೊನೆದು ಕೊಂಡಾಡುತ್ತದೆ. ಸ್ಕಾಂದಪುರಾಣದಲ್ಲಿ ಸೂತರು ಶೌನಕಾದಿ ಋಷಿವರ್ಗದೆದುರು ವಿವರಿಸಿದ ಪೌಷ್ಯಮಾಸದ ಮಹಾತ್ಮ್ಯ ವಿಸ್ತಾರವಿದೆ.

ಚಾಂದ್ರವತ್ಸರದಲಿ ಪೌಷ್ಯವು ಹತ್ತನೆಯ ಮಾಸ. ಸೌರವತ್ಸರದ ಮಕರಮಾಸವು ಇದೇ ತಿಂಗಳಲ್ಲಿ ಪ್ರಾರಂಭವಾಗುವುದು. ಹೇಮಂತಋತುವಿನ ಆಡಳಿತದ ಮಧ್ಯಕಾಲದಲ್ಲಿಯೇ ಈ ಮಾಸವು ಪ್ರಾರಂಭ. ಧನುರ್ಮಾಸದ ಗದಗುಟ್ಟಿಸುವ ಚಳಿಯ ಬೆಳವಣಿಗೆಯ ಕಾಲದಲ್ಲಿಯೇ ಪೌಷ್ಯಮಾಸದ ಅವತಾರವಾಗುವುದು. ಶುಭನಕ್ಷತ್ರವಾದ ಪುಷ್ಯನಕ್ಷತ್ರದ ಸಂಬಂಧವು ಈ ತಿಂಗಳ ಪೌರ್ಣಿಮೆಗೆ ಬರುವುದರಿಂದ, ಪೌಷ್ಯಮಾಸವೆಂದು ಇದಕ್ಕೆ ಹೆಸರು ಬಂದಿದೆ. ಪುರಾಣಪ್ರಿಯರ ಅಭಿಪ್ರಾಯದಲ್ಲಿ ಇದು ತುಂಬ ಪವಿತ್ರವಾದ ಮಾಸ; ದಾನ, ಧರ್ಮ, ಪೂಜೆ, ಪಾರಾಯಣಗಳಿಗೆ ಅತ್ಯಂತ ಯೋಗ್ಯವಾದ ಕಾಲ.

### ಧನುರ್ಮಾಸ

ಪುಷ್ಯಮಾಸವನ್ನು ಇಳೆಗೆ ಬರಮಾಡಿಕೊಳ್ಳುವ ಧನುರ್ಮಾಸವು, ತನ್ನೊಂದಿಗೆ ಹಿಮರಾಜನನ್ನು ಕರೆದುಕೊಂಡೇ ಬಂದಿರುವುದು. ಧನುರ್ಮಾಸದ ಚಳಿಗೆ ಮಾನವನ ದೇಹ ಧನುರಾಕಾರವಾಗುವುದಂತೆ; ಮುಂದೆ ಮಕರಮಾಸದಲ್ಲದು ಚಳಿಯುನ್ನು ಸಹಿಸದೆ ಕುಂಡಲಾಕಾರವಾಗುವುದಂತೆ. ಈ ಮಾತು ಅಸ್ವಾಭಾವಿಕವಾದುದೇನೂ ಅಲ್ಲವೆಂಬುದು ಎಲ್ಲರ ಅನುಭವದ ವಿಷಯ. ನಮ್ಮ

ಪರಂಪರಾಧರ್ಮನಿಯಮ, ಧನುರ್ಮಾಸದಲ್ಲಿ ನಿತ್ಯ ಪ್ರಾತಃಸ್ನಾನ ಜಪ ಪೂಜೆಗಳನ್ನು ವಿಧಿಸಿದೆ. ಸ್ನಾನ ನದೀ–ಜಲಾಶಯಗಳಲ್ಲಿಯೇ ಆಗಬೇಕು. ಆ ಅಸಹನೀಯವಾದ ಚಳಿ ಮೈಯನ್ನು ನಡುಗಿಸುತ್ತಿರುವಾಗ ತಣ್ಣೀರಲ್ಲಿ ಸ್ನಾನಮಾಡುವುದೆಂದರೆ, ಅದೊಂದು ಕಠಿಣ ತಪಸ್ಸೇ ಎಂದು ಹೇಳಬೇಕು. ಸೂರ್ಯೋದಯವಾಗಿ ಮೂರು ಗಳಿಗೆಯೊಳಗಾಗಿಯೇ ಧನುರ್ಮಾಸದ ಪೂಜೆ–ಪ್ರಸಾದ, ವಿಧಿಗಳೆಲ್ಲ ಮುಗಿಯಲೇಬೇಕು. ಪ್ರಸಾದಕ್ಕಾಗಿ ಮಾಡಿದ ಹೆಸರುಬೇಳೆಯ ಹುಗ್ಗಿ, ಗೊಜ್ಜು, ಬಿಸಿಬಿಸಿ ಕಡುಬು, ತುಪ್ಪ, ದೋಸೆ ಬೆಣ್ಣೆ ಇವೆಲ್ಲ ತಿನ್ನಲು ರುಚಿರುಚಿಯೆನಿಸಬಹುದಾದರೂ, ತಣ್ಣೀರಿನ ಸ್ನಾನಮಾಡುವ ಮನದ ದಾರ್ಢ್ಯವನ್ನು ಎಷ್ಟು ಜನರು ತೋರಿಸಬಹುದು? ಭಾವುಕಭಕ್ತರೇನೋ ಕಷ್ಟವನ್ನು ಸಹಿಸಿಯೇ ಸಹಿಸುವರು. ಅವರ ಧರ್ಮದಿಂದ ಮಿಕ್ಕವರಿಗೂ ರುಚಿಯಾದ ಸವಿಯೂಟ ಸಿಕ್ಕುವುದು. ಧನುರ್ಮಾಸದ ಪೂಜಾ–ನೈವೇದ್ಯನಿಯಮವನ್ನು, ತಿಂಗಳುದ್ದಕ್ಕೂ ಪ್ರತಿದಿನ ನಡೆಯಿಸಬೇಕೆಂದು ವಿಧಿಸಲಾಗಿರುವುದಾದರೂ, ಆಪದ್ಧರ್ಮಿಗಳು ಒಂದೆ ಒಂದು ದಿನವಾದರೂ ಧನುಮಾಸವ್ರತವನ್ನು ನಡೆಯಿಸಿ ತೃಪ್ತಿ ಪಡುವುದುಂಟು. ಇದನ್ನೂ ಮಾಡಲಾರದವರು, ಪೌಷ್ಯಮಾಸದಲ್ಲಿ ಬರುವ 'ಮುಕ್ಕೋಟಿದ್ವಾದಶಿ'ಯಂದು ಧನುರ್ಮಾಸ ವ್ರತದ 'ಪೂಜೆ–ನೈವೇದ್ಯ'ಗಳನ್ನು ದೇವರಿಗೆ ಸಲ್ಲಿಸಿ, ಕೃತಾರ್ಥತೆಯ ಸಮಾಧಾನವನ್ನು ತಾಳುವರು. ಧನುರ್ಮಾಸ, ಮುಕ್ಕೋಟಿದ್ವಾದಶಿ ಇವೆಲ್ಲ ವಿಷ್ಣುಭಕ್ತಿಪರಂಪರೆಗೆ ಸೇರಿದುವು. ಶೈವಸಂಪ್ರದಾಯದವರು, ಧನುರ್ಮಾಸವ್ರತದ ಹೊರೆಯಿಂದ ಮುಕ್ತರು. ತಿರುಪತಿಯ ತಿಮ್ಮಪ್ಪನಿಗೆ ಸಲ್ಲುವ ಧನುರ್ಮಾಸ, ಮುಕ್ಕೋಟಿ ದ್ವಾದಶಿಯ ಪೂಜಾ–ಸಮಾರಂಭಗಳು ವೈಶಿಷ್ಟ್ಯಪೂರ್ಣವಾಗಿರುವುವು. ಶ್ರೀವೆಂಕಟಗಿರಿಯಲ್ಲಿ ಮುಕ್ಕೋಟಿದ್ವಾದಶಿಯ ಮಹೋತ್ಸವಕ್ಕೆ, ಭಕ್ತರದೊಡ್ಡ ಜನಜಂಗುಳಿಯೇ ಸೇರುವುದು. ನೈವೇದ್ಯದ ಪೊಂಗಲ್, ಸಕ್ಕರೆ ಪೊಂಗಲ್, ದೋಸೆ, ವಡೆಗಳ ಕಂಪು ಅಲ್ಲಿಯ ವಾತಾವರಣದಲ್ಲೆಲ್ಲ ತುಂಬಿಕೊಂಡಿರುವುದು. ವೈಷ್ಣವಸ್ವಾಮಿಗಳ ಮಠಗಳಲ್ಲಿಯೂ ಧನುರ್ಮಾಸದ ಪೂಜೆ–ನೈವೇದ್ಯಗಳ ವೈಭವವು ಆಕರ್ಷಕವಾಗಿರುವುದು.

### ಹಳ್ಳಿಗಾಡಿನಲ್ಲಿ

ಮಲೆನಾಡಿನ ಒಕ್ಕಲಿಗರು, ಕಣಜ–ಬೋರಿ–ಬಣತಗಳಲ್ಲಿ ಹೊಸ ಬತ್ತವನ್ನು ತುಂಬಿಕೊಂಡು, ಸುಖ–ಸಂತೃಪ್ತಿಗಳಲ್ಲಿ ಓಲಾಡುತ್ತಿರುವರು. ಕಬ್ಬಿನ ತೋಟಗಳಲ್ಲಿ ಆಲೆಗಳು ಇನ್ನೂ ಆಡುತ್ತಲೇ ಇರುವುವು; ಹೊಸ ಬೆಲ್ಲದ ಸವಿ ಸೊವಡನ್ನು



ದಶದಿಕ್ಕುಗಳಲ್ಲಿಯೂ ಪಸರಿಸಿರುವುವು. ಭೂಮಿ–ನೀರುಗಳ ಅನುಕೂಲತೆಯಿರುವ ಒಕ್ಕಲಿಗರು, ಕಡೆಫಲದ ಬಟಗಡಲೆ, ಮೊನೆಗಡಲೆ, ಅವರೆ, ಸಾಸಿವೆ ಮೊದಲಾದುವುಗಳ ಬೆಳೆಗಳಿಂದ ಗದ್ದೆಗಳನ್ನು ಅಲಂಕರಿಸಿರುವರು; ಬನದಹುಣ್ಣಿಮೆಯ ಬನವನ್ನು ನಡುಗಿಸುವ ಚಳಿಯಲ್ಲಿ ಉರಿಯನ್ನು ಕಾಸುತ್ತ ಅವರು ಭವಿಷ್ಯದ ಕೃಷಿಯ ಬಗೆಗೆ ಹರಟೆಹೊಡೆಯುತ್ತಿರುವರು.

ಕಾಡುಗಳಲ್ಲಲಿಯ ಅನೇಕ ಗಿಡ–ಮರಗಳು, ಹೇಮಂತರಾಜನ ಸ್ನೇಹದಿಂದ ಹೊಂಪುಳಿಯೋದವರಂತೆ, ಮೈತುಂಬ ಹೂಗಳನ್ನು ಅರಳಿಸಿಕೊಂಡು ನಿಂತಿರುವುವು. ಮಧುಮಕ್ಷಿಕೆಗಳ ಬಳಗ ಝೇಂಕರಿಸುತ್ತ ಮಧುರಗಾನದೊಂದಿಗೆ ಬಂದು, ಪುಷ್ಪಗಳಿಂದ ಮಧುರರಸವನ್ನು ಕಾಣಿಕೆಪಡೆದು, ತಮ್ಮ ಶಿಲ್ಪಕಲಾಮಂದಿರಗಳಲ್ಲಿ ಸಂಗ್ರಹಿಸಿ ಇಡುತ್ತಿರುವುವು. ಕಾಡಿನಲ್ಲಿ ನೋಡಿದಲ್ಲೆಲ್ಲ ಮಧುಕರಗಳ ಗುಂಜಾರವೇ ಗುಂಜಾರವ. ಪಾಪ, ಅವುಗಳಿಗೆ ಭವಿಷ್ಯದ ಮಾನವನಿರ್ಮಿತ ಆಪತ್ತಿನ ಕಲ್ಪನೆ, ಈಗಿನ ಉಲ್ಲಾಸದ ಉಲಿದಾಟದಲ್ಲಿ ಹೇಗೆ ಬರಬೇಕು?

ಪೌಷ್ಯದ ಚಳಿಗೆ ಮಾವಿನ ಬನಗಳು, ಹಳೆಯ ಎಲೆಗಳನ್ನುದುರಿಸಿ ಕಳೆಗೆಟ್ಟಂತೆ ಕಾಣುತ್ತಿದ್ದರೂ, ಬರಲಿರುವ ದಿನದ ಫಲವಂತಿಕೆಗಾಗಿ ಸಂಕಲ್ಪವನ್ನು ಮಾಡುತ್ತಿರುವುವು. ಕೆಲ–ಕೆಲವು ಮರಗಳು ಎಳದಳಿರುಗಳನ್ನು ಹೊರಕ್ಕೆ ತೋರಿಸಿ, ಭವಿಷ್ಯದ ಸೌಂದರ್ಯಸಂಪೂರ್ಣತೆಯ ಕನಸನ್ನು ಕಾಣುತ್ತಿರುವುವು. ಮುಂದೆ ಬರಲಿರುವ ಕಾಲದ ಮಂಗಲಕಾರ್ಯಗಳಲ್ಲಿ ಭಾಗವಹಿಸಿ, ಕೃತಾರ್ಥತೆಯನ್ನು ಪಡೆಯುವ ಮಾಂದಳಿರಗಳು ಎಷ್ಟೋ ಏನೋ!

ಬಯಲುಸೀಮೆಯವರ ಬದುಕಿನ ಸಿರಿಯಂತೂ ಈ ತಿಂಗಳಲ್ಲಿ ಅವರ್ಣನೀಯವಾಗಿರುವುದು. ಮುಂಗಾರು ಬೆಳೆಗಳು ಅನ್ನಯಜ್ಞದ ಕಾರ್ಯವನ್ನೀಗ ಮುಗಿಸಿಬಿಟ್ಟಿದ್ದರೂ, ಹಿಂಗಾರು ಬೆಳೆ ಆ ಯಜ್ಞಸಮಾರಂಭವನ್ನು ಪ್ರಾರಂಭಿಸಿರುವುದು ಬಿಳಿಜೋಳದ ಹೊಲಗಳು, ಎಳಗಾಳಿನ ಹಸುರ್ದೆನೆಗಳಿಂದ ಕಂಗೊಳಿಸುತ್ತಿರುವುವು. ಅಡಿಯಿಂದ ಮುಡಿಯವರೆಗೂ ಅಲ್ಲಲ್ಲಿ ಹೊರಟು ಹಾರಾಡುತ್ತಿರುವ ಹಸುರುಬಣ್ಣದ ಗರಿಗಳು, ತಮ್ಮ ಸಫಲಜೀವನಕ್ಕಾಗಿ ನಲಿದಾಡುತ್ತಿರುವುವೇನೋ ಎಂಬಂತೆ ಕಾಣಿಸುತ್ತಿರುವುವು. ಗೋಧಿಯ ಬೆಳೆಗಳ ಹಸಿರು ತೆನೆಗಳು ಮಾಗಿ, ತಿಳಿಹಳದಿಯ ಬಣ್ಣಕ್ಕೆ ತಿರುಗುತ್ತಿರುವುವು. ಸವಿಗಾಳುಗಳಿಂದ ಕೂಡಿದ ಕಾಯಿಗಳಿಂದ ಕಡಲೆಯು ಗಿಡಗಳು ಮೈಮುಚ್ಚಿಕೊಂಡಿರುವುವು. ಕೇಸರೀಬಣ್ಣದ ಕೇಸರಗಳಿಂದ ಅಂದವಡೆದ ಕುಸುಬೆ

ಹೂಗಾಯಿಗಳು, ಒಳಗೆ ಕಾಳುಗಳನ್ನು ಬೆಳಸುತ್ತಿರುವುವು. ಹತ್ತಿಯ ಹೊಲಗಳು, ಅರಿಸಿಣಬಣ್ಣದ ಹೂ, ಹಸಿರುಗಾಯಿಗಳಿಂದ ತುಂಬಿಕೊಂಡು, ಬಸಿರುಹೆಂಗುಸಿನ ಗಾಂಭೀರ್ಯದಲ್ಲಿ ನಿಂತಿರುವುವು. ಬಿಳಿಜೋಳದ ಹಸಿರುಮೇವನ್ನು ಹೈನದ ದನಗಳು ಉಂಡು ಸಾಕಾಗುವಷ್ಟು ತನಿವಾಲನ್ನು ಕೊಡುತ್ತಿರುವುವು. ಎರೆಯ ಹೊಲಗಳಲ್ಲಿ ತಾವಾಗಿಯೇ ಹುಟ್ಟಿಬೆಳೆದ ಕೆಕ್ಕರ, ಪುಟ್ಟಿಯಹಣ್ಣುಗಳೂ ಮೆಕ್ಕೆ-ಸವತಿಯ ಕಾಯಿಗಳೂ ಬೆಳುವಲದ ಒಕ್ಕಲಿಗರ ಆಹಾರಕ್ಕೆ ಹೊಸ ಸವಿಯ್ನು ಕೊಡುತ್ತಿರುವುವು. ಬದನೆಯ ಮಡಿಗಳಲ್ಲಿ ಕಾಣುವ ಹೂ-ಮಿಡಿ-ಕಾಯಿಗಳು, ಒಕ್ಕಲಿಗರಲ್ಲಿ ರೊಕ್ಕ ದೊರಕಿಸುವ ಆಶೆಯನ್ನು ಹೆಚ್ಚಿಸುತ್ತಿರುವುವು. ಇಂತಹ ವೈಭವಪೂರ್ಣ ಪುಷ್ಯಮಾಸವನ್ನೂ ಅವರು 'ಚೂನೆಯ ತಿಂಗಳು' ಎಂದು ಬೇಸರದಿಂದ ಕಾಣುತ್ತಿರುವುದು ಅಚ್ಚರಿಯ ಸಂಗತಿಯೇ ಸರಿ!

**ಮಕರಸಂಕ್ರಮಣ**

ಕಳೆದ ನಾಲ್ಕೈದು ತಿಂಗಳುಗಳಷ್ಟು ಹಬ್ಬ-ವ್ರತದಿನಗಳು ಈ ತಿಂಗಳಲ್ಲಿ ಇರಲಿಕ್ಕಿಲ್ಲ; ಅದು ಸರಿಯೆ! ಆದರೆ ದಕ್ಷಿಣಾಯನವನ್ನು ಮುಗಿಸಿ ಉತ್ತರಾಯಣವನ್ನು ಪ್ರಾರಂಭಿಸುವ ಮಹಾಪರ್ವದಿನವಾದ ಮಕರಸಂಕ್ರಮಣ ಬರುವುದು ಇದೇ ತಿಂಗಳಲ್ಲಿಯೇ! ಇಂತಹ ತಿಥಿಯೇ ಈ ಪರ್ವಬರುವುದೆಂಬ ನಿಯಮವೇನೂ ಇಲ್ಲವಾದರೂ, ಈ ಹಬ್ಬ ತನ್ನ ಆಗಮನಕ್ಕಾಗಿ ಪೌಷ್ಯಮಾಸವನ್ನೇ ಆಯ್ದುಕೊಂಡಿದೆ. ಮಕರಸಂಕ್ರಮಣದ ಹಬ್ಬ ಅದಕ್ಕೆ ಮೊದಲದಿನದ ಭೋಗಿಯಿಂದಲೇ ಪ್ರಾರಂಭವಾಗುವುದು. ಇಂದು ಸುಮಂಗಲೆಯರು, ನಿತ್ಯಜೀವನವಸ್ತುಗಳನ್ನಿರಿಸಿ ಮರದ ಬಾಗಿನಗಳನ್ನು ಕೊಡುವರು. ಧನುರ್ಮಾಸದ ಕೊನೆಯ ದಿನವಾದ ಇಂದು, ದೇವರಿಗೆ ಹುಗ್ಗಿ-ಗೊಜ್ಜು, ಸೆಜ್ಜೆಯರೊಟ್ಟಿ-ಬೆಣ್ಣೆ, ವಡೆ-ಪಾಯಸಗಳ ನೈವೇದ್ಯವಾಗಲೇಬೇಕು. ಮರುದಿನ ಸೂರ್ಯ ಮಕರರಾಶಿಯನ್ನು ಪ್ರವೇಶಿಸುವ ಸಮಯವೇ ಸಂಕ್ರಮಣದ ಪುಣ್ಯಕಾಲ. ಇಂದು ಎಲ್ಲರೂ ಎಳ್ಳೆಚಟ್ಟನ್ನು ಮೈಗೆ ಹಚ್ಚಿಕೊಂಡು ಅಭ್ಯಂಜನಸ್ನಾನಮಾಡುವರು. ಇಂದಿನ ಹಬ್ಬದ ಸವಿಯೂಟದಲ್ಲಿ ಎಳ್ಳು-ಬೆಲ್ಲದ ತಿಂಡಿ-ತಿನಿಸುಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿರುವುದು. ಕನ್ನಡನಾಡಿನಲ್ಲಿರುವ ರಾಮಾನುಜೀಯ ಸಂಪ್ರದಾಯದವರು ಮಾಡುವ ಈ ಹಬ್ಬದ ತಿಂಡಿ-ತಿನಿಸುಗಳಂತೂ ಇನ್ನೂ ವೈಶಿಷ್ಟ್ಯಪೂರ್ಣವಾಗಿರುವುವು.

ಇಂದು ಇಳಿಹಗಲಿನಲ್ಲಿ ಎಲ್ಲರೂ ಒಬ್ಬರಿಗೊಬ್ಬರು 'ಎಳ್ಳು-ಬೆಲ್ಲ' ಕೊಡುವರು; ಕೊಳ್ಳುವರು. ಇದೊಂದು ಮನೋಹಾರಿಯಾದ ದೃಶ್ಯ



'ಎಳ್ಳು-ಬೆಲ್ಲ ತಿಂದು ಒಳ್ಳೆಯ ಮಾತನಾಡೋಣ' ಎಂದು ಎಲ್ಲರೂ ಬಾಯಿಂದ ಹೇಳುವರಾದರೂ, ಕೊಡುವುದು ಎಳ್ಳು-ಬೆಲ್ಲವನ್ನಲ್ಲ; ಸಕ್ಕರೆ ಗೂಡಿದ ಎಳ್ಳುಗಳನ್ನು ಮನೆ-ಮನೆಯಲ್ಲಿಯೂ ಚದುರೆಯರು, ಈ ಹಬ್ಬಕ್ಕಾಗಿಯೆ ಕುಸುರೆಳ್ಳುಗಳನ್ನು, ವಿವಿಧ ಆಕಾರದಿಂದಲೂ ವಿವಿಧ ವರ್ಣಗಳಿಂದಲೂ ಅಣಿಗೊಳಿಸಿರುವರು. ಹೆಚ್ಚಿನ ಜನರು ಈ ಬಗೆಯ ಕುಸುರೆಳ್ಳುಗಳನ್ನೇ ಕೊಟ್ಟು-ಕೊಳುವರು. ದಕ್ಷಿಣಕರ್ನಾಟಕದಲ್ಲಿ ಎಳ್ಳು ಬೀರುವ ಸಂಪ್ರದಾಯ ಹೀಗಲ್ಲ. ಅಲ್ಲಿ ಸುಮಂಗಲೆಯರು, ತಮಗೆ ಬೇಕಾದವರ ಮನೆಗಳಿಗೆ ಮಾತ್ರ ಎಳ್ಳು-ಸಕ್ಕರೆ, ಸಕ್ಕರೆಯ ಅಚ್ಚಿನ ಗೊಂಬೆಗಳನ್ನು ಕೊಡುತ್ತಾರೆ.

ಸಂಕ್ರಮಣದ ಮರುದಿನ ಪರ್ವಕಾಲದ ಕರಿ. ಇಂದು ಎಳೆಯಮಕ್ಕಳಿದ್ದವರ ಮನೆಗಳಲ್ಲಿ 'ಕರಿ ಎರೆಯುವ' ಸಂಪ್ರದಾಯ ಉತ್ತರಕರ್ನಾಟಕದಲ್ಲಿ ಎಲ್ಲೆಡೆ ರೂಢಿಯಲ್ಲಿದೆ. ಮಗುವನ್ನು ಹಸೆಯಮೇಲೆ ಕುಳ್ಳಿರಿಸಿ, ಕಬ್ಬು, ಕಡಲೆಕಾಯಿ, ಸವಿದಿನಿಸು, ಗಜ್ಜರಿಯ ಹೋಳು ಇವುಗಳನ್ನು ಮಗುವಿನ ತಲೆಯಮೇಲೆ ಎರೆದು, ಆರತಿಮಾಡಿ, ಸುಮಂಗಲೆಯರಿಗೆ ಅರಿಸಿಣ-ಕುಂಕುಮ, ಎಳ್ಳಚಿಗುಳೆಗಳನ್ನು ಕೊಡುವರು. ಮಕ್ಕಳಿದ್ದ ಮನೆಗಳಲ್ಲಿ ಈ ಕರಿಯ ದಿನದ ಆರತಕ್ಷತೆಯ ಸಂಭ್ರಮ ಉತ್ಸಾಹಪೂರ್ಣವಾಗಿರುವುದು.

**ಬನಶಂಕರಿ**

ಬಾದಾಮಿಯ ಶ್ರೀಬನಶಂಕರಿ, ಉತ್ತರಕರ್ನಾಟಕದ ಅನೇಕ ಸಂಪ್ರದಾಯವಂತರ ಮನೆಗಳಲ್ಲಿ ಕುಲದೈವತವಾಗಿ ಪೂಜೆಗೊಳ್ಳುವಳು. ಪೌಷ್ಯಶುದ್ಧ ಅಷ್ಟಮಿಯಿಂದ ಮೊದಲಾಗಿ ಪೌರ್ಣಿಮೆಯವರೆಗೆ ಬನಶಂಕರಿಯ ಭಕ್ತರ ಮನೆಗಳಲ್ಲಿ ನವರಾತ್ರಿಯ ಉತ್ಸವ ನಡೆಯುವುದು. ನಂದಾದೀಪ, ಘಟಸ್ಥಾಪನೆ, ಪೂಜೆ, ಆರತಿ, ನೈವೇದ್ಯ ಇವೆಲ್ಲ ಆಗ ವಿಧ್ಯುಕ್ತವಾಗಿ ನಡೆಯಲೇಬೇಕು. ಪೌಷ್ಯಶುದ್ಧ ಚತುರ್ದಶಿಯಂದಿನ ನೈವೇದ್ಯದಡಿಗೆ ವಿಶಿಷ್ಟರೀತಿಯದಾಗಿರುವುದು. ಅಂದು 'ಪಲ್ಲೆಯ ಹಬ್ಬ' ಬನಶಂಕರಿಗೆ ಅಂದು ನೂರಾಎಂಟುಬಗೆಯ ಪಲ್ಲೆಯಗಳ ನೈವೇದ್ಯವಾಗಬೇಕು. ಇದೇ ದಿನಗಳಲ್ಲಿಯೇ ಪ್ರತಿವರ್ಷ ಬಾದಾಮಿಯಲ್ಲಿ ಶ್ರೀಬನಶಂಕರಿಯ ಜಾತ್ರೆಯು ವಿಜೃಂಭಣೆಯಿಂದ ಜರುಗುತ್ತದೆ. ನಮ್ಮ ನಾಡಿನ ಜಾತ್ರೆಗಳಲ್ಲಿ ಈ ಬನಶಂಕರಿಯ ಜಾತ್ರೆ ಸುಪ್ರಸಿದ್ಧವಾದುದು. ಲಕ್ಷಗಟ್ಟಲೆ ಜನರು ದೇವಿಯ ದರ್ಶನಕ್ಕೆ ಬಂದು, ಮುಡಿಪು-ಹರಕೆಗಳನ್ನು ಸಲ್ಲಿಸುತ್ತಾರೆ. ಈ ಬನದಮ್ಮನ ಉತ್ಸವದ ಕಾರಣದಿಂದಲೇ ಪೌಷ್ಯಪೌರ್ಣಿಮೆಯು 'ಬನದ ಹುಣ್ಣಿಮೆ' ಎಂಬ ಹೆಸರನ್ನು ಪಡೆದಿದೆ.

ಪೌಷ್ಯಮಾಸದ ಪೂತಿ ರವಿವಾರದಂದೂ, ಉತ್ತರಕರ್ನಾಟಕದ ಹಳ್ಳಿಗಳಲ್ಲಿಯ ಉತ್ಸಾಹಿಗಳು, ಹಲಿಗೆ–ರಣಹಲಿಗೆಗಳ ಮೆರವಣಿಗೆಯೊಂದಿಗೆ, ಬೇಟೆಯಾಡಲು ಹೋಗುವ ಸಂಪ್ರದಾಯ ಹಳೆಯ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇದನ್ನು 'ಚೂನೆಯ ಬೇಟೆ' ಎಂದು ಹೇಳುವರು. ಬೇಟೆಗಾರರು ಸಾಯಂಕಾಲ ಮರಳಿ ಬಂದಮೇಲೆ, ಹಲಿಗೆಯ ವಾಲಗದೊಂದಿಗೆ ಊರ ಹಿರಿಯರ ಮನೆಗೆ ಹೋಗಿ, ತಾವು ತಂದ ಬೇಟೆಗಳನ್ನು ತೋರಿಸಿ, ಅವರಿಂದ ಉಡುಗೊರೆ–ಕಾಣಿಕೆಗಳನ್ನು ಪಡೆದುಕೊಂಡು ಹೋಗುವ ಪದ್ಧತಿ, ಮೊನ್ನೆ–ಮೊನ್ನೆಯವರೆಗೂ ಇದ್ದಿತು. ಇಂದಿನ ಹೊಸ ಕಾಲದ ವೈಚಾರಿಕ ಕ್ರಾಂತಿ, ಹಳ್ಳಿಗಳಿಗೂ ಹೋಗಿಮುಟ್ಟಿರುವುದರಿಂದ, ಈ ಚೂನೆಯ ಬೇಟೆಗಾರಿಕೆಯ ಪದ್ಧತಿಯು ಕಣ್ಮರೆಯಾಗುತ್ತ ನಡೆದಿರಬಹುದು.

**ಮಾಧ್ವರಿಗೆ**

ಪೌಷ್ಯವದ್ಯ ಅಮಾವಾಸ್ಯೆಯನ್ನು ಈ ಭಾಗದ ಜನರು, 'ಅವರಾತ್ರಿ ಅಮಾಸಿ' 'ಇಸಾಳಿ ಅಮಾಸಿ' ಎಂಬ ಹೆಸರಿನಿಂದ ಕರೆಯುವರು. ಕನ್ನಡ ಸಾಂಸ್ಕೃತಿಕ ಪ್ರಪಂಚಕ್ಕೆ ಈ ಅಮಾವಾಸ್ಯೆ ಒಂದು ಮಹತ್ವವಾದ ದಿನವಾಗಿರುವುದು. ಹರಿದಾಸಶ್ರೇಷ್ಠ ಶ್ರೀಪುರಂದರದಾಸರು, ತಮ್ಮ ಅವತಾರಕಾರ್ಯವನ್ನು ಮುಗಿಸಿ, ದೈವೀಸಾನ್ನಿಧ್ಯವನ್ನು ಪಡೆದ ಪುಣ್ಯದಿನವಿದು. ಹಂಪೆಯ ತುಂಗಭದ್ರಾತೀರದಲ್ಲಿರುವ ಶ್ರೀಪುರಂದರದಾಸರ ಮಂಟಪದಲ್ಲಿ ಪ್ರತಿವರ್ಷವೂ ಈ ಮಹನೀಯರ ಆರಾಧನಾ ಮಹೋತ್ಸವವನ್ನು ಜರುಗಿಸಲಾಗುತ್ತದೆ. ಹರಿದಾಸ ಸಂಪ್ರದಾಯದಲ್ಲಿ ಶ್ರದ್ಧೆಯಿರುವ ಅನೇಕ ಭಕ್ತಜನರು ಹಂಪೆಯ ಉತ್ಸವಕ್ಕೆ ಬಂದಿರುವರು. ಅಲ್ಲದೆ ನಮ್ಮ ನಾಡಿನ ಅನೇಕ ಪುರ–ಪಟ್ಟಣಗಳಲ್ಲಿ, ಶ್ರೀದಾಸರ ಪುಣ್ಯತಿಥಿಯ ಉತ್ಸವವನ್ನು ಸಾರ್ವಜನಿಕವಾಗಿ ನಡೆಯಿಸಲಾಗುತ್ತದೆ. ಪೂಜೆ, ಭಜನೆ, ಸಂಕೀರ್ತನೆ, ಅನ್ನಸಂತರ್ಪಣೆ ಇವೆಲ್ಲ ನಡೆಯುವುವಲ್ಲದೆ, ಹರಿದಾಸಸಂಸ್ಥೆಯ ಸಾಹಿತ್ಯ–ಸಂಸ್ಕೃತಿಗಳ ಪ್ರಚಾರ ಪ್ರಸಾರಗಳ ಕಾರ್ಯಕ್ರಮಗಳೂ ನಡೆಯುವುವು.

ವದ್ಯ ಸಪ್ತಮಿಯಂದು, ಪಂಪಾಕ್ಷೇತ್ರದಲ್ಲಿ ಶ್ರೀಮನ್ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀನರಹರಿತೀರ್ಥರ ಪುಣ್ಯತಿಥಿಯ ಸಮಾರಂಭ ಜರುಗುವುದು. ಲೌಕಿಕ–ಪರಮಾರ್ಥಗಳೆರಡರಲ್ಲಿಯೂ ಅಸಮಾನರಾಗಿ ಬೆಳಗಿದ ಈ ಮಹನೀಯರು, ಬಂಗಾಲ, ಕಳಿಂಗ, ಕಾಮರೂಪದೇಶಗಳಲ್ಲೆಲ್ಲ ಕನ್ನಡನಾಡಿನ ದ್ವೈತಭಕ್ತಿವೇದಾಂತದ ಬೀಜವನ್ನು ಬಿತ್ತಿಬಂದವರು. ಇವರು ಮಾಡಿದ ಕೃಷಿಯ ಫಲ, ಆ ಪ್ರದೇಶಗಳಲ್ಲಿಯ ಜನಮನವನ್ನು ಈಗಲೂ ಪಾವನಗೊಳಿಸುತ್ತಲಿದೆ.



ವದ್ಯ ಅಷ್ಟಮಿಯು, ಶ್ರೀವಿಜಯದಾಸರ ಶಿಷ್ಯವರೇಣ್ಯರಾದ ಶ್ರೀ ಗೋಪಾಲದಾಸರು ದೇವಸಾನ್ನಿಧ್ಯವನ್ನು ಪಡೆದ ದಿನವಾಗಿದೆ. ಹೈದರಾಬಾದ್ ರಾಜ್ಯದ ಉತ್ತನೂರಿನಲ್ಲಿ, ಶ್ರೀಗೋಪಾಲದಾಸರ ಆರಾಧನೆಯು ಪ್ರತಿವರ್ಷ ಜರುಗುತ್ತದೆ. ಕೀರ್ತನೆ–ಸುಳಾದಿಗಳ ರಚನಾಕಾರ್ಯದಲ್ಲಿ ಈ ದಾಸರು, ತಮ್ಮ ಗುರುಗಳಿಗೆ ಸರಿದೊರೆಯಾಗಿ ಕಾರ್ಯಮಾಡಿದ್ದಾರೆ.

ದ್ವೈತಮತ ಪ್ರಕಾಶಕರಾದ ಶ್ರೀಮನ್ಮಧ್ವಾಚಾರ್ಯರ ಕರ್ಮಕ್ಷೇತ್ರ ಉಡುಪಿಯೂ ಪೌಷ್ಯಮಾಸದ ಮಹತಿಯನ್ನು ಪರಿಪೋಷಿಸುತ್ತದೆ. ಅಷ್ಟಮಠದ ಯತಿಗಳಿಂದ ಎರಡು ವರ್ಷಗಳಿಗೊಮ್ಮೆ ನಡೆಯುವ ಶ್ರೀಕೃಷ್ಣ ಪೂಜಾಪರ್ಯಾಯ ಸಮಾರಂಭವು, ಮಕರಸಂಕ್ರಮಣ ಕಾಲದಲ್ಲಿ, ಎಂದರೆ ಪೌಷ್ಯಮಾಸದಲ್ಲಿಯೆ ನಡೆಯುವುದು. ಈ ಪರ್ಯಾಯ ಮಹೋತ್ಸವ ಸಂದರ್ಭದಲ್ಲಿ ಉಡುಪಿಯಲ್ಲಿ ಜರುಗುವ ವಿಶಿಷ್ಟ ಉತ್ಸವಗಳೂ, ಸಾಂಸ್ಕೃತಿಕ ಕಾರ್ಯಕಲಾಪಗಳೂ, ಅನ್ನದಾನವೂ, ಭಕ್ತಿ–ಜ್ಞಾನಸತ್ರವೂ ಭಾರತೀಯರೆಲ್ಲರ ಹೃದಯ–ಮನಗಳನ್ನೂ ಆಕರ್ಷಿಸುವಂತಹದವಾಗಿವೆ. ಪೌಷ್ಯಮಾಸವೆಂದರೆ, ಉಡುಪಿಯ ಯಾತ್ರಾರ್ಥಿಗಳು ಹೃತ್ಪೂರ್ವಕವಾಗಿ ಕುತೂಹಲದಿಂದ ನಿರೀಕ್ಷಿಸುವ ಕಾಲವಾಗಿದೆ. ಸಾಂಪ್ರದಾಯಿಕ ಮಹತ್ತ್ವ ಪೌಷ್ಯಮಾಸಕ್ಕೆ ಅಷ್ಟೊಂದು ಇರಲಿಕ್ಕಿಲ್ಲವಾದರೂ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ ತನ್ನ ಮಹಾತ್ಮ್ಯದಿಂದ ಈ ತಿಂಗಳ ಹಿರಿಮೆಯನ್ನು ಹೆಚ್ಚಿಸಿರುವುದು. ಪೌಷ್ಯಮಾಸ ಶೂನ್ಯಮಾಸವಲ್ಲ; ಪುಣ್ಯಪೂರ್ಣಮಾಸ; ಪರ್ವಪ್ರವರ ಪ್ರತಿಷ್ಠಿತಮಾಸ!

* * *

# ೧೧. ಮಹಾಮಹಿಮ ಭೀಷ್ಮಸ್ಮಾರಕ–ಮಾಘಮಾಸ

ಮಂಗಲಕಾರ್ಯಾರ್ಥಿಗಳೆಲ್ಲರೂ ಮಾಘಮಾಸದ ದಾರಿಯನ್ನು ಕಾಯುತ್ತಿರುವರು. ಚಾತುರ್ಮಾಸದಲ್ಲಿ ಮದುವೆ–ಮುಂಜಿವೆಯಂತಹ ಶುಭಕಾರ್ಯಗಳಾವುವೂ ನಡೆಯುವುದಿಲ್ಲ. ಅದಾದ ಮೇಲೆ ಬರುವ ಮಾರ್ಗಶೀರ್ಷಮಾಸದಲ್ಲಿ ಮಂಗಲಕಾರ್ಯಗಳನ್ನು ನಡೆಸಬಹುದಾದರೂ, ಕೃಷಿಸಂಪತ್ತಿಯನ್ನವಲಂಬಿಸಿರುವ ನಮ್ಮ ನಾಡಿನ ಬಹುಜನರಿಗೆ, ಅವಶ್ಯಕ ಸಾಧನ–ಸಲಕರಣೆಗಳ ಅನುಕೂಲತೆಯಿರುವುದಿಲ್ಲ. ಮುಂದೆ ಬರುವ ಪುಷ್ಯಮಾಸವು, ಶುಭಕಾರ್ಯಗಳಿಗೆ ನಿಷಿದ್ಧವೆನಿಸಿದ 'ಚೂನೆಯ' ತಿಂಗಳು. ಮಾಘಮಾಸವೋ ಮಂಗಲ ಕಾರ್ಯಗಳಿಗೆ ಎಲ್ಲ ಬಗೆಯಿಂದಲೂ ಅನುಕೂಲವಾದುದು. ಮಳೆಮಾರಿನ ಹೆದರಿಕೆಯಿರದು ಶಿಶಿರಋತುವಿನ ಚಳಿಯು, ಹೇಮಂತಕಾಲದ ತೀಕ್ಷ್ಣತೆಯನ್ನು ಕಳೆದುಕೊಂಡಿರುವುದು. ಎಲ್ಲ ಜಲಾಶಯಗಳೂ ಹಸನಾದ ನೀರಿನಿಂದ ಸಮೃದ್ಧವಾಗಿರುವುವು. ಬಿಸಿಲು ಹದದ ಕಾಹಿನಿಂದ ಕೂಡಿರುವುದು. ನಿರಭ್ರವಾದ ನೀಲಾಕಾಶ; ಪ್ರಯಾಣಕ್ಕೆ ಸುಖಕರವಾದ ಕಾಲ; ಅಲ್ಲದೆ ಮುಂಗಾರುಬೆಳೆಯ ಸುಗ್ಗಿ ಹಣದ ನೆರವನ್ನು ಒದಗಿಸಿರುವುದು; ಹಿಂಗಾರು ಬೆಳೆಯು ಹೊಸ ಗೋದಿ, ಹೊಸ ಕಡಲೆ, ತೊಗರೆಗಳನ್ನೂ ಸಲ್ಲಿಸಿರುವುದು. ಎಂತಲೇ ನವವಧೂ–ನವವರರೂ, ಮಕ್ಕಳ ಮದುವೆಮಾಡಿ ಕೃತಕೃತ್ಯರಾಗಬೇಕೆಂಬ ತಾಯಿ–ತಂದೆಗಳೂ, ಸವಿಯೂಟದ ಔತಣವನ್ನು ಬಯಸುವ ನಂಟರಿಷ್ಟರೂ, ಮಾಘಮಾಸದ ಸ್ವಾಗತಕ್ಕಾಗಿ ಮನವಾರೆ ಸಿದ್ಧರಾಗಿ ಕುಳಿತಿರುವರು. ಮಾಘ ಬಂದುಬಿಟ್ಟಿತೋ, ಮದುವೆಯ ಮೊದಲಮಾತು, ಕನ್ಯಾನಿಶ್ಚಯ, ಸಮಾವರ್ತನಸಂಸ್ಕಾರ, ಮದುವೆಯ ಸಮಾರಂಭದ ಸಿದ್ಧತೆ ಇವು, ಎಲ್ಲೆಲ್ಲಿಯೂ ಕಣ್ಣಿಗೆ ಬೀಳುತ್ತಿರುವುವು. ಇದುವರೆಗೆ ಅನಿವಾರ್ಯವಾಗಿ ವಿರಹತಾಪವನ್ನು ಅನುಭವಿಸಬೇಕಾಗಿ ಬಂದು, ದಿನಗಳನ್ನು ಕಾತರಭಾವದಿಂದ ದೂಡುತ್ತಲಿದ್ದ ವಿವಾಹ ನಿಶ್ಚಿತ ನಲ್ಲ–ನೀರೆಯರಿಗೆ, ಮಾಘಮಾಸದ ಆಗಮನ ದೇವರ ದಯೆಯಾಗಿ ಕಾಣಬಹುದು.



**ಮಾಘಸ್ನಾನ**

ಚಾಂದ್ರವತ್ಸರದ ಎಣಿಕೆಯಲ್ಲಿ ಮಾಘವು ಹನ್ನೊಂದನೆಯ ಮಾಸ. ಈ ತಿಂಗಳ ಬೈಗು–ಬೆಳಗುಗಳಿಗೆ ಸಂಬಂಧಿಯಾದುದು 'ಮಘಾ' ನಕ್ಷತ್ರವಾದುದರಿಂದ, ಇದಕ್ಕೆ 'ಮಾಘಮಾಸ' ಎಂಬ ಹೆಸರುಬಂದಿದೆ. ಸೌರವತ್ಸರದ ಕುಂಭಮಾಸದ ಪ್ರಾರಂಭ ಇದೇ ತಿಂಗಳಲ್ಲಿ ಆಗುತ್ತದೆ. ಶ್ರೀಹರಿಯ ಮಾಧವನಾಮಕ ರೂಪವು ಈ ಮಾಸದ ನಿಯಾಮಕನೆಂಬುದು ನಮ್ಮ ಪರಂಪರೆಯ ನಂಬಿಕೆ. ಈ ಮಾಸದ ಮಾಹಾತ್ಮ್ಯವು ಅನೇಕ ಮಹಾಪುರಾಣಗಳಲ್ಲಿ ಕಥಿತವಾಗಿದೆ; ಆದರೆ ವಾಯುಪುರಾಣದಲ್ಲಿ ವಿಸ್ತೃತವಾಗಿ ಬಂದಿರುವ ಈ ಮಾಸದ ಮಾಹಾತ್ಮವು ನಮ್ಮ ಭಾವುಕ ಜನತೆಯಲ್ಲಿ ಹೆಚ್ಚು ಪ್ರಚಾರದಲ್ಲಿದೆ. ಈ ತಿಂಗಳಲ್ಲಿ ಮಾಘಮಾಸ ಮಾಹಾತ್ಮ್ಯವನ್ನು ಪುರಾಣಿಕರು ತಪ್ಪದೆ ಹೇಳುವರು; ಶ್ರದ್ಧಾಲುಶ್ರಾವಕರು ತುಂಬ ಭಕ್ತಿಯಿಂದ ಅದನ್ನು ಕೇಳುವರು.

ಮಾಘಸ್ನಾನದ ಪುಣ್ಯ ಅಪೂರ್ವವಾದುದೆಂದು ಎಲ್ಲ ಪುರಾಣಗಳೂ ಒತ್ತಿಹೇಳುವುವು. ಎಂತಲೇ ಸಂಪ್ರದಾಯಪ್ರಿಯರಾದ ಅನೇಕ ಜನರು, ಪೌಷ್ಯಶುದ್ಧ ಪೌರ್ಣಿಮೆಯಿಂದಲೇ ಮಾಘಸ್ನಾನವಿಧಿಯನ್ನು ಪ್ರಾರಂಭಿಸಿರುವರು. ಮಾಘಶುದ್ಧ ಪೌರ್ಣಿಮೆಯವರೆಗೂ ಇದನ್ನು ನಡೆಸುವರು. ವಾಯುಪುರಾಣದಲ್ಲಿ, ಚತುರ್ಮುಖ ಬ್ರಹ್ಮದೇವನು ತನ್ನ ಮಗನಾದ ನಾರದ ಋಷಿಯ ಎದುರು ವಿವರಿಸಿರುವ ಮಾಘಸ್ನಾನವ್ರತದ ವಿಧಿ–ನಿಯಮಗಳನ್ನು ಸಾರ್ವಜನಿಕ ಸ್ವಚ್ಛತೆ–ಆರೋಗ್ಯಗಳ ಕಡೆಗೆ ಸಂಪೂರ್ಣ ಕಣ್ಣುಮುಚ್ಚಿ ನಡೆದಿರುವ ನಮ್ಮ ಜನರು, ಮನಗೊಟ್ಟು ಅಭ್ಯಸಿಸಬೇಕಾಗಿದೆ; ಅದರಂತೆ ವರ್ತಿಸಬೇಕಾಗಿದೆ. ಇದರಿಂದ ಹಳ್ಳಿ–ಪಟ್ಟಣಗಳ ಬೀದಿಗಳೂ ಜಲಾಶಯಗಳೂ ಶುಚಿಯಾಗಿ ಉಳಿಯಬಹುದಲ್ಲದೆ, ವ್ಯಕ್ತಿ–ವ್ಯಕ್ತಿಗಳ ಮೈ–ಮನಗಳೂ ಶುಚಿಯಾಗಿರಬಹುದು. ಮಡಿಯ ಮರ್ಮವನ್ನರಿಯದೆ, ಮಡಿಯನ್ನು ಮಾಡುವ ಅತಿವಾದಿಗಳು, ಮಾಘಸ್ನಾನಪೂರ್ವದ ಆರೋಗ್ಯಾವಶ್ಯಕ ಆಚಾರ–ನಿಯಮಗಳನ್ನು ಅವಶ್ಯವಾಗಿ ಅರಿತುಕೊಳ್ಳಬೇಕು.

ಮಾಘಮಾಸದಲ್ಲಿ ಮಲೆನಾಡಿನ ನೆಲ್ಲುಗದ್ದೆಗಳಲ್ಲಿ ಭಣಭಣಗುಟ್ಟುವುವಾದರೂ, ಕಡೆಯ ಫಲದ ಬೆಳೆಯ ಹೊಲಗಳು ಹಸುರು–ಹಸುರಾಗಿ ಕಾಣುವುವು. ಬಟ್ಟಗಡಲೆಯ ಬಳ್ಳಿಗಳು ಸವಿಗಾಳು ತುಂಬಿದ ಕಾಯಿಗಳನ್ನು ಹೊತ್ತುನಿಂತಿರುವುವು; ನೋಡುವವರ ಕಣ್ಮನಗಳ್ನು ಕೆಣಕುತ್ತಲಿರುವುವು. ಕಡಲೆಯ ಕಿರುಗಿಡಗಳು ಸುಲಿಗಾಯಿಗಳನ್ನು ಹೊಂದಿನಿಂತು, ಜನರ ದಿಟ್ಟಿಗಳನ್ನು ತಮ್ಮತ್ತ ಸೆಳೆಯುತ್ತಿರುವುವು. ಅವರೆಯು ಬಳ್ಳಿಗಳು

ಹಸುರ್ಗಾಳುಗಳನ್ನು ನೀಡಿ, ರುಚಿಕರವಾದ ಉಸುಳಿ–ಸಾಂಬಾರುಗಳಿಗೆ ಸಾಧನವನ್ನು ಒದಗಿಸುವುವು. ಸೊವಡುಗಂಪನ್ನು ಹರಡುತ್ತಿರುವ ಆಲೆಮನೆಗಳು ಎಲ್ಲಿಯೋ ಅಲ್ಲೊಂದು ಇಲ್ಲೊಂದು ಕಾಣುತ್ತಿರುವುವು. ಹೆಚ್ಚಿನ ಕಬ್ಬುದೋಟಗಳೆಲ್ಲ, ಒಡೆಯನಿಗೆ ಬೆಲ್ಲದ ಸಹಿಯನ್ನಿತ್ತು ತಾವು ಬೋಳುಬೋಳಾಗಿ ಬಿದ್ದಿರುವುವು.

**ಮಾಘಸೌರಭ**

ಮಾಘಮಾಸದಲ್ಲಿ ಕಾಡಿನ ಗಿಡ–ಮರಗಳನ್ನು ನೋಡಬೇಕು! ಶಿಶಿರ ಋತುರಾಜ, ಅವುಗಳ ಶುಭಭವಿಷ್ಯಕ್ಕಾಗಿಯೇ ಹಳೆಯ ಎಲೆಗಳನ್ನೆಲ್ಲ ಹಣ್ಣಾಗಿಸಿ, ನೆಲಕ್ಕೆ ಬೀಳಿಸಿ, ಗಿಡ–ಮರಗಳನ್ನು ಬರಲು ಬರಲಾಗಿಸಿರುವನು; ಆದರೂ ಮುತ್ತುಗದ ಮರಗಳು, ಹಸುರಾದ ಹೊಸ ಎಲೆಗಳನ್ನು ತಳೆದುನಿಂತು ಅಂದವಾಗಿ ಕಾಣುವುವು. ಕಾಡಿನಲ್ಲಿ ಹೂಗಳು ಕಣ್ಮರೆಯಾದುದರಿಂದ, ಮಧುಕರಗಳು ನಿರುದ್ಯೋಗಿಗಳಾಗಿ, ತಮ್ಮ ಜೇನುಗೂಡುಗಳನ್ನೇ ಹಿಡಿದು ಕುಳಿತಿರುವುವು.

ಬೆಳುವಲನಾಡಿನ ಭೂತಾಯಿಯ ದಾನದ ಕೈಗಳೆಂತಹವೆಂಬುದನ್ನು ಮಾಘಮಾಸದಲ್ಲಿ ನೋಡಬೇಕು. ಹಿಂಗಾರು ಬೆಳೆಗಳೆಲ್ಲವೂ ಪರಿಪಕ್ವತೆಯನ್ನು ಪಡೆದಿರುವುವು. ಬಿಳಿಜೋಳದ ಬೆಳೆಯ ಮಾಗುಗಾಳಿನ ತೆನೆಗಳು, ಮುತ್ತಿನ ತೆನೆಗಳ ಭ್ರಾಂತಿಯನ್ನು ಹುಟ್ಟಿಸುವುವು. ಹತ್ತಿಯ ಹೊಲಗಳಲ್ಲಿ ಹಣ್ಣುಗಾಯಿಗಳು ಬಿರಿದು, ಶುಭ್ರವಾದ ಹತ್ತಿಯನ್ನು ಬಯಲಿಗೆ ಬಿಟ್ಟಿರುವುವು. ಗೋಧಿ–ಕಡಲೆಯ ಬೆಳೆಗಳು ಜನರಿಗೆಲ್ಲ ಗುಡಿಯ ಹುಣ್ಣಿಮೆಯ ಹೋಳಿಗೆಯೂಟಕ್ಕೆ ಹೊಸ ಗೋಧಿ, ಹೊಸ ಕಡಲೆಗಳನ್ನು ಒದಗಿಸಿ ಕೊಟ್ಟಿರುವುವು. ಎಣ್ಣೆತುಂಬಿದ ಕುಸುಬೆಯ ಕಾಳುಗಳು ಮಾತ್ರ, ಇನ್ನೂ ತಮ್ಮ ಮುಳ್ಳುಬೇಲಿಯ ತಾಯ್ಮನೆಯಲ್ಲಿಯೆ ಅಡಗಿ ಕುಳಿತಿರುವುವು. ಅವುಗಳನ್ನು ಹೊರಗೆತಂದು, ತಿಂದು ತಮ್ಮ ಮೈಯ ಕೊಬ್ಬನ್ನು ಬೆಳೆಸಬೇಕೆನ್ನುವ ಕೊಡರ್‌ಕೊಂಚೆಗಳು, ಸಾಲು–ಸಾಲುಗೊಂಡು ಶಿಸ್ತಿನ ಸೈನಿಕರಂತೆ ಮುಗಿಲಲ್ಲಿ ಹಾರುತ್ತಬಂದು, ಕುಸುಬೆಯ ಹೊಲಗಳ ಮೇಲೆ ದಾಳಿಯಿಕ್ಕುವ ಆ ದೃಶ್ಯ ಚಿತ್ತಾಕರ್ಷಕವಾಗಿರುವುದು.

ಬಿಳಿಜೋಳದ ಹೊಡೆಹಸುರನ್ನು ತಿಂದು–ತಿಂದು ಕೊಬ್ಬಿದ ಎತ್ತುಗಳೂ ಹೋರಿಗಳೂ ಒಕ್ಕಲಿಗನ ಸೌಭಾಗ್ಯಗಳಾಗಿರುವುವು. ಹೋರಿಗಳಂತೂ ಅವನ ಭವಿಷ್ಯತ್‌ಸಂಪತ್ತಿನ ಸಾಧನ! ಮಾಘಮಾಸದಲ್ಲಿ ದನದ ಜಾತ್ರೆಸಂತೆಗಳಲ್ಲಿ ತುಂಬಿರುವ ಹೋರಿಗಳ ಚೆಲುವನ್ನು ಪ್ರತ್ಯಕ್ಷ ನೋಡಿಯೇ ಅನುಭವಿಸಬೇಕು. ಹೈನದ ದನಗಳ ಸಿರಿಯೂ ಇಂತಹದೆ... ಹಾಲು ಮೊಸರುಗಳ ಹೊಳೆಗಳನ್ನೇ



ಅವು ಹರಿಸುತ್ತಿರುವುವು. ಮಾಘಮಾಸದ ಬೆಣ್ಣೆಯಿಂದ ದೊರೆಯುವ ತುಪ್ಪ, ವಿಶಿಷ್ಟವಾದ ಕಂಪು–ಸವಿಗಳಿಂದ ಕೂಡಿರುವುವು.

ಮಾಘಮಾಸದಲ್ಲಿ ಮಾವಿನ ಬನಗಳ ವೈಸಿರಿಯು ಮನೋಹಾರಿಯಾಗಿರುವುದು. 'ಗುಡಿಯ ಹುಣ್ಣಿಮೆಗೆ ಗುಂಡಗಾಯಿ' ಎಂಬ ಗಾದೆ ಕನ್ನಡಿಗರಲ್ಲಿ ರೂಢವಾಗಿದೆ. ಮಾಮರಗಳ ಬುಡದ ನೆಲವೆಲ್ಲ ಉದುರಿಬಿದ್ದ ಒಣ ಹೂಗಳಿಂದ ಮುಚ್ಚಿಹೋಗಿರುವುದು. ಹೂಗೊನೆಗಳಲ್ಲೆಲ್ಲ ಗುಲಗಂಜಿಗಾತ್ರದ ಒಗರುಮಿಡಿಗಳು ತುಂಬಿನಿಂತಿರುವುವು. ಮಧುವನ್ನು ಸಲ್ಲಿಸುತ್ತಿದ್ದ ಹೂಗಳೆಲ್ಲ ಉದುರಿಹೋಗಿದ್ದರೂ, ಯವುದೋ ಹುಸಿಯಾಶೆಯಿಂದ ಗುಂಯ್‌ಗುಡುತ್ತ ಮಧುಕರಗಳು ಮರ–ಮರಗಳಲ್ಲಿಯೂ ಹಾರಾಡುತ್ತಿರುವುವು. ಉತ್ತರಾಯಣದ ಸೂರ್ಯ ತನ್ನ ಬಿಸಿಲನ್ನು ಬಲಿಸುತ್ತ ನಡೆದಂತೆಲ್ಲ ಮಾವು–ಬೇವುಗಳ ತಣ್ಣೆಳಲನ್ನು ಜನರ ಅಪೇಕ್ಷಿಸುವರು.

**ರಥಸಪ್ತಮಿ**

ಈ ತಿಂಗಳಲ್ಲಿ ಹಬ್ಬ–ವ್ರತ–ಪೂಜೆಗಳ ಸಂಖ್ಯೆ ಕಡಮೆಯೆನಿಸಿದರೂ, ಮದುವೆಯ ಮಾಸವಾದುದರಿಂದ, ನಿತ್ಯೋತ್ಸವ ನಿತ್ಯಮಂಗಲಗಳಿಂದ ಇದು ಕೂಡಿರುವುದು. ಶುದ್ಧ ಸಪ್ತಮಿಯು 'ರಥಸಪ್ತಮಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಚಾಂದ್ರಮಾನದವರ ಅಭಿಪ್ರಾಯದಂತೆ, ಉತ್ತರಾಯಣದ ಪ್ರಾರಂಭದಿನವಿದು. ಎಂತಲೇ ಸಂಪ್ರದಾಯಪ್ರಿಯರೆಲ್ಲರೂ, ಇಂದು ರಥವೇರಿದ ಸೂರ್ಯದೇವನನ್ನು ಪೂಜೆಮಾಡುವರು. ಒಂದು ಮರದ ಹಲಗೆಯಮೇಲೆ, ರಕ್ತಚಂದನದ ಕಲ್ಕದಿಂದಾಗಲಿ, ಶ್ರೀಗಂಧದ ಕದಡಿನಿಂದಾಗಲಿ, ರಥವೇರಿದ ಸೂರ್ಯನ ಚಿತ್ರವನ್ನು ಬರೆಯುವರು; ನಿತ್ಯದ ದೇವಪೂಜೆಯಾದ ಮೇಲೆ, ಈ ಚಿತ್ರದ ಮಣೆಯನ್ನು ತುಲಸಿಯ ವೃಂದಾವನದ ಮುಂದೆ ಇರಿಸಿ, ವಿಧ್ಯುಕ್ತವಾಗಿ ಪೂಜೆಮಾಡುವರು. ರಥದ ನೈವೇದ್ಯದ ಪಾಯಸ ಅಲ್ಲಿಯೇ ಸಿದ್ಧವಾಗಬೇಕು. ಇದಕ್ಕಾಗಿ ಕುರುಳುತಾಳಿಯನ್ನು ಹೊತ್ತಿಸಿ, ಅದರ ಮೇಲೆ ಹಾಲಿನ ಪಾತ್ರೆಯನ್ನಿರಿಸುವರು. ಹಾಲು ಕಾಯ್ದು ಒಂದುಸಲ ಉಕ್ಕೇರಿ ಹೊರಸೂಸಿದ ಮೇಲೇ ಅದರಲ್ಲಿ ಪಾಯಸೋಚಿತ ಪದಾರ್ಥಗಳನ್ನು ಹಾಕಿ ಬೇಯಿಸುವರು. ಈ ಪಾಯಸವೇ ಇಂದು ಸೂರ್ಯದೇವನಿಗೆ ನೈವೇದ್ಯ. ಹಬ್ಬದೂಟದೊಂದಿಗೆ ಈ ಪಾಯಸದ ಪ್ರಸಾದವನ್ನೂ ಭಕ್ತರು ಸೇವಿಸುವರು.

ಸೌರಮಾನದ ಉತ್ತರಾಯಣ ಪರ್ವದಿನವಾದ ಮಕರಸಂಕ್ರಮಣದ

ಮೊದಲದಿನ ಭೋಗಿಯ ಹಬ್ಬವಿರುವಂತೆ, ಈ ರಥಸಪ್ತಮಿಯ ಮೊದಲ ದಿನವನ್ನೂ ಭೋಗಿಯ ಹಬ್ಬವನ್ನಾಗಿ ಆಚರಿಸಲಾಗುವುದು. ಸಂಕ್ರಮಣದ ಭೋಗಿಯಂತೆಯೆ ಅಂದು ಎಲ್ಲ ವಿಧಿ-ವಿಧಾನಗಳೂ ನಡೆಯುವುವು. ರಥಸಪ್ತಮಿಯಂದು, ಕೊಡಗೂಸುಗಳು ಬದನೆಕಾಯಿ-ಬಾಳೆಹಣ್ಣುಗಳನ್ನು ಮನೆ ಮನೆಗೆ ಬೀರುವ ಸಂಪ್ರದಾಯ ನಮ್ಮ ನಾಡಿನ ಅನೇಕ ಮನೆತನಗಳಲ್ಲಿದೆ. ಎಳಗೂಸುಗಳಿಗೆ ಇಂದು ಕರಿಯೆರೆಯುವ ರೂಢಿಯಿದೆ. ಕೂಸುಗಳಿಗೆ ವ್ಯಾಧಿ-ಗ್ರಹಬಾಧೆಗಳಾಗಬಾರದೆಂಬ ಭಾವನೆಯೇ ಈ ಕರಿಯ್ನು ಎರೆಯುವುದರ ಉದ್ದೇಶ.

**ಭೀಷ್ಮನ ನೆನಹು**

ರಥಸಪ್ತಮಿಯ ಮರುದಿನದ ಅಷ್ಟಮಿಯೇ ಭೀಷ್ಮಾಷ್ಟಮಿ. ಇಚ್ಛಾಮರಣಿಯಾದ ಕುರುಪಿತಾಮಹ ಭೀಷ್ಮನು, ಅರ್ಜುನನ ಬಾಣದೇಟುಗಳಿಂದ ಗಾಯಗೊಂಡನವಾಗಿ, ಉತ್ತರಾಯಣದ ಆಗಮನದ ದಾರಿಯನ್ನು ನೋಡುತ್ತ ಶರಪಂಜರದ ಮೇಲೆ ಮಲಗಿಕೊಂಡಿದ್ದ ದಕ್ಷಿಣಾಯನದಲ್ಲಿ ಮರಣಹೊಂದಿದವರಿಗೆ ಮರುಜನುಮ ಬರುವುದೆಂದು ನಮ್ಮ ಪೌರಾಣಿಕ ಸಂಪ್ರದಾಯದವರ ನಂಬುಗೆ. ಪಿತಾಮಹ ಭೀಷ್ಮನಾದರೂ ಈ ನಂಬುಗೆಯಿಂದಲೇ ತನ್ನ ನಿರ್ವಾಣಕ್ಕಾಗಿ ದಕ್ಷಿಣಾಯನದ ನಿರ್ಗಮನಕಾಲವನ್ನು ಕಾಯುತ್ತಿದ್ದ. ರಥಸಪ್ತಮಿಯಂದು ಉತ್ತರಾಯಣ ಪ್ರಾರಂಭವಾಯಿತು. ಮರುದಿನವೇ ಆ ಮಹಾಮಹಿಮ ಭೀಷ್ಮನು ನಿರ್ವಾಣಪದವನ್ನು ಹೊಂದಿದ.

ಕುರುಪಿತಾಮಹ ಭೀಷ್ಮನು ಭಾರತರಾಷ್ಟ್ರದ ಪಿತೃಸ್ಥಾನವನ್ನು ಪಡೆದವನು. ಎಂತಲೇ ಅವನ ನಿರ್ವಾಣದ ದಿನದ ಸ್ಮರಣೆಗೆಂದು, ಭಾರತೀಯರೆಲ್ಲರೂ, ಆ ಭಾರತಧರ್ಮಮೂರ್ತಿಗೆ ತರ್ಪಣವನ್ನು ಸಲ್ಲಿಸಬೇಕೆಂದು ವಿಧಿಸಲಾಗಿದೆ. ನಮ್ಮ ನಾಡಿನ ಪರಂಪರೆಯ ಅಭಿಮಾನಿಗಳೆಲ್ಲರೂ ಇಂದು, ಶ್ರದ್ಧಾಪೂರ್ವಕವಾಗಿ ತರ್ಪಣಗಳನ್ನು ಸಲ್ಲಿಸುವರು. ಇದು ಇದುವರೆಗೂ ನಡೆದುಕೊಂಡು ಬಂದ ಧರ್ಮಾಚಾರವಾಗಿದೆ. ಭೀಷ್ಮಾಷ್ಟಮಿಯ ಮೂಲಕ ಮಾಘಮಾಸವು, ವರು-ವರುಷವೂ ಮಹಾಭಾರತದ ಪುಣ್ಯಚರಿತ್ರೆಯನ್ನು ನಮ್ಮ ಜ್ಞಾಪಕಕ್ಕೆ ತಂದುಕೊಡುತ್ತದೆ.

ಮಾಘಶುದ್ಧನವಮಿಯೇ ಮಧ್ವನವಮಿ. ದ್ವೈತಮತೋದ್ಧಾರಕರಾದ ಶ್ರೀಮದಾನಂದತೀರ್ಥರು, ಬದರಿಕಾಶ್ರಮಕ್ಕೆ ತೆರಳಿದ ಪುಣ್ಯದಿನವಿದೆಂಬ ನಂಬುಗೆ ಮಾಧ್ವರೆಲ್ಲರಲ್ಲಿಯೂ ಇದೆ. ಎಲ್ಲ ಮಾಧ್ವ ಮಠ-ಮಂದಿರಗಳಲ್ಲಿಯೂ, ದೇವಸ್ಥಾನಗಳಲ್ಲಿಯೂ, ಮನೆಗಳಲ್ಲಿಯೂ ಶ್ರೀಮದಾಚಾರ್ಯರ ಸ್ಮರಣೆ, ಪೂಜೆ,



ಸೇವೆ, ಪ್ರಸಾದಗಳು ವಿಶಿಷ್ಟ ರೀತಿಯಿಂದ ನಡೆಯುವುವು. ಆಚಾರ್ಯರ ಕರ್ಮಕ್ಷೇತ್ರವಾದ ಉಡುಪಿಯಲ್ಲಂತೂ ಮಧ್ವನವಮಿಯ ಉತ್ಸವವು ವೈಭವಪೂರ್ಣವಾಗಿ ನಡೆಯುವುದು. ಅಲ್ಲಲ್ಲಿ ಭಜನೆ, ಕೀರ್ತನೆ, ಗ್ರಂಥಪಾರಾಯಣ, ವ್ಯಾಖ್ಯಾನ ಮೊದಲಾದ ಸಾಂಸ್ಕೃತಿಕ ಕಾರ್ಯಕಲಾಪಗಳೂ ಜರುಗುವುವು.

ಮಾಘಮಾಸದ ಹುಣ್ಣಿಮೆಯ ಹೆಸರು 'ಭಾರತಹುಣ್ಣಿಮೆ' ಎಂದು ಉತ್ತರಕರ್ನಾಟಕದಲ್ಲಿ ಇದಕ್ಕೆ ಜನಸಾಮಾನ್ಯರಲ್ಲಿ ರೂಢವಾಗಿರುವ ಹೆಸರು 'ಗುಡಿಯ ಹುಣ್ಣಿಮೆ' ಎಂದು. 'ಭಾರತಹುಣ್ಣಿಮೆ' ಎಂದು ಇದಕ್ಕೆ ಏಕೆ ಹೆಸರು ಬಂದಿದೆಯೆಂಬುದನ್ನು ಪ್ರಮಾಣಗಳೊಂದಿಗೆ ಹೇಳಲು ಬರುವಂತಿಲ್ಲ. ಪ್ರಮಾಣಗಳು ನಮ್ಮ ಹಳೆಯ ಪುರಾಣವಾಙ್ಮಯದಲ್ಲಿ ಎಲ್ಲಿಯಾದರೂ ಸಿಕ್ಕಬಹುದು. ಹುಡುಕಿನೋಡಬೇಕು! ಅಷ್ಟಮಿಗೂ ಭೀಷ್ಮರಿಗೂ ಇರುವ ಸಂಬಂಧದಂತೆಯೆ, ಈ ಹುಣ್ಣಿಮೆಗೂ ಭಾರತದ ಕೃತಿಗೂ ಏನಾದರೂ ಸಂಬಂಧವಿರಲೇಬೇಕು. ಪರಂಪರೆಯ ಅಜ್ಞಾನದ ಮೂಲಕ, ಈ ಸಂಬಂಧವನ್ನು ಖಚಿತವಾಗಿ ಹೇಳುವ ಆಧಾರಗಳು, ಇದುವರೆಗೂ ನನಗೆ ನೋಡಲು ದೊರೆತಿಲ್ಲ, ಕೇಳಲೂ ಸಿಕ್ಕಿಲ್ಲ.

'ಗುಡಿಯ ಹುಣ್ಣಿಮೆ' ಎಂಬ ಜಾನಪದ ನಾಮವನ್ನು ಎತ್ತಿಹಿಡಿಯುವ ಪ್ರಮಾಣಗಳು, ಈಗಲೂ ನಮಗೆ ನೋಡಲು ಸಿಕ್ಕುವುವು. ಗುಡಿಯೆಂದರೆ ಧ್ವಜವೆಂಬುದನ್ನು ಬಹುಜನರು ಬಲ್ಲರು. ಯುಗಾದಿ ಪ್ರತಿಪದೆಯು ಮಹಾರಾಷ್ಟ್ರದಲ್ಲಿ 'ಗುಡಿಪಾಡವಾ' ಎಂದು ಕರೆಯಿಸಿಕೊಳ್ಳುತ್ತದೆ. ಅಂದು ಧ್ವಜಪೂಜೆಯನ್ನು ಮಾಡುವ ಪರಂಪರೆ, ಮಹಾರಾಷ್ಟ್ರದಂತೆ ಉತ್ತರಕರ್ನಾಟಕದ ಅನೇಕ ಮನೆತನಗಳಲ್ಲಿಯೂ ಇರುವುದು. 'ಗುಡಿಹುಣ್ಣಿಮೆ' ಎಂದು ಹೆಸರಿರುವ ಈ ಮಾಘಪೌರ್ಣಿಮೆಯಂದೂ, ಒಂದು ಕಾಲದಲ್ಲಿ ನವವರ್ಷದಾದಿಯ ಧ್ವಜಪೂಜೆ ಪ್ರತ್ಯಕ್ಷವಾಗಿ ನಡೆಯುತ್ತಿರಬಹುದೆಂದು ಭಾವಿಸುವಂತಿದೆ. ಇಂದು ಉತ್ತರಕರ್ನಾಟಕದ ಪುರ-ಹಳ್ಳಿಗಳ ಪ್ರತಿಯೊಂದು ಮನೆಯವರೂ ಮುಂಬಾಗಿಲುಗಳಿಗೆ ಕಟ್ಟುತ್ತಿರುವ ತೋರಣಗಳ ವೈಶಿಷ್ಟ್ಯವು, ಹಿಂದಿನ ಕಾಲದ ಪೂಜಾಧ್ವಜದ ಸಂಕೇತವೇ ಅಗಿರುವುದೆಂದು ಭಾವಿಸುವಂತಿದೆ. ಏಕೆಂದರೆ ಬೇರೆ ಹಬ್ಬದ ಕಾಲದಲ್ಲಿ ಮನೆಗಳಿಗೆ ಕಟ್ಟುವ ತೋರಣಗಳಲ್ಲಿ ಮಾವಿನ ಚಿಗುರೆಲೆಗಳು ಮಾತ್ರವಿದ್ದರೆ, ಗುಡಿಯ ಹುಣ್ಣಿಮೆಯ ತೋರಣವು, ಕುಸುಬೆಯ ತೊಂಡಲು, ಗೋಧಿಯ ತೆನೆ, ಕಡಲೆಯ ಗಿಡದ ಕೊಂಬೆ, ಎಕ್ಕೆಯ ಹೂವಿನ ಗೊನೆ-ಇವೆಲ್ಲವುಗಳಿಂದ ಕೂಡಿರುವುದು. ಮಾವಿನ ಚಿಗುರೆಲೆಗಳಂತೂ ಸರಿಯೇ ಸರಿ! ಒಕ್ಕಲಿಗನ ಕೃಷಿಸಂಪತ್ತಿನ ಪ್ರತೀಕವಾಗಿರುವ ಇಂದಿನ ಈ ತೋರಣ, ಹಿಂದೆ

ಒಂದು ಕಾಲದಲ್ಲಿ ಗುಡಿಯೇ ಆಗಿರಬಹುದು. ಮಲೆನಾಡಿನ ಒಕ್ಕಲಿಗರು, ಚೈತ್ರಶುದ್ಧ ಪ್ರತಿಪದೆಯೆಂದು ಹೊಸವರ್ಷದ ಧಾನ್ಯವನ್ನು ದೇವರಿಗೆ ಅರ್ಪಿಸಿ, ಬಳಸಲು ಪ್ರಾರಂಭಿಸುವಂತೆ, ಬಯಲುನಾಡಿನ ಒಕ್ಕಲಿಗರು ಹೊಸ ಗೋಧಿ ಹೊಸ ಕಡಲೆಗಳನ್ನು ದೇವರಿಗೆ ಸಮರ್ಪಿಸಿ, ಬಳಸಲು ಪ್ರಾರಂಭಿಸುವುದು ಗುಡಿಯಹುಣ್ಣಿಮೆಯ ಹಬ್ಬದಿಂದಲೇ! ನಮ್ಮ ನಾಡಿನ ಒಕ್ಕಲಿಗರು, ಗುಡಿಯ ಹುಣ್ಣಿಮೆಯಿಂದಲೇ ನವವರ್ಷವನ್ನು ಪ್ರಾರಂಭಿಸುತ್ತಿರಬಹುದೆಂದು ಸಂಸ್ಕೃತಿ ಸಂಶೋಧಕರು ಭಾವಿಸುವಂತಿದೆ.

### ದೇವರನ್ನು ಕರೆಯುವರು

ಈ ಭಾವನೆಯನ್ನು ಪರಿಪೋಷಿಸುವಂತಹ, ಬೇರೆ ಕೆಲವು ಸಂಕೇತಗಳನ್ನೂ ನಾವು ಈ ಹಬ್ಬದ ಆಚರಣೆಯಲ್ಲಿ ಕಾಣಬಹುದು. ಮಾಘಮಾಸದ ಮೋಡಗಳಿರದ ಆಕಾಶದಲ್ಲಿ ತೊಳಗುವ ಚಂದಪ್ಪನ ಬೆಳುದಿಂಗಳು, ಮಿಕ್ಕಕಾಲದಲ್ಲಿ ಕಾಣಲು ಸಿಗದಂತಹದು. ನಿಸರ್ಗಪೂಜಕರಾದ ನಮ್ಮ ನಾಡಿನ ಹಳ್ಳಿಗರು, ನಿತ್ಯವೂ ಅಂಗಳದಲ್ಲಿ ಸಾರಣೆ–ಕಾರಣೆಗಳನ್ನು ಮಾಡಿ ಹೊಯ್ಯುವ ರಂಗವಲ್ಲಿಯ ಚಿತ್ರಗಳು, ಅವರ ಕಲಾಪ್ರೀತಿಯನ್ನು ಸಾರಿ ಹೇಳುವುವು. ಹುಣ್ಣಿಮೆಯವರೆಗೂ ದಿನಕ್ಕೊಂದು ಬಗೆಯ ಹೊಸ ಸುಳಿವು; ಹೊಸ ಚಿತ್ರ! ಬೆಳುದಿಂಗಳ ಪಂಕ್ತಿಯೂಟ, ಕೋಲಾಟ, ಜಾನಪದ ಸಂಗೀತ ಇವೆಲ್ಲ ದಿನದಿನವೂ ಮನೆ–ಮನೆಗಳಲ್ಲಿಯೂ, ಮೊನ್ನೆಮೊನ್ನೆಯವರೆಗೂ ನಡೆಯುತ್ತಿದ್ದುವು.

ಮಾಘಶುದ್ಧ ಚತುರ್ದಶಿಯಂದು, ಎಂದರೆ ಗುಡಿಯ ಹುಣ್ಣಿಮೆಯ ಮೊದಲದಿನ ರಾತ್ರಿ, ಉತ್ತರ ಕರ್ನಾಟಕದ ಒಕ್ಕಲಿಗರ ಮನೆ–ಮನೆಗಳಲ್ಲಿಯೂ 'ದೇವರನ್ನು ಕರೆದುಕೊಳ್ಳುವ' ವಿಶಿಷ್ಟ ಕಾರ್ಯಕ್ರಮವೊಂದು ನಡೆಯುವುದು. ಮಳೆಗಾಲ ದಿನದಂದು ಮೊದಲುಮಾಡಿ, ಅಂದಿನವರೆಗೆ ದೇವರು ಹೊಲಗಳಲ್ಲಿ ವಾಸಿಸಿರುನೆಂಬುದು ಅವರ ಪರಂಪರೆಯ ನಂಬುಗೆ. ಗುಡಿಯ ಹುಣ್ಣಿಮೆಯ ಮೊದಲದಿನ ಅವನು ಮರಳಿ ಮನೆಗೆ ಬರುವನಂತೆ. ಅವನ ಸ್ವಾಗತ ಸಮಾರಂಭಕ್ಕಾಗಿಯೆ ಮನೆಗಳಿಗೆ ಗುಡಿ–ತೋರಣಗಳನ್ನು ಕಟ್ಟುವರು. ರಾತ್ರಿಯ ಮೊದಲಜಾವದಲ್ಲಿ ಮನೆಯ ಮುಂಬದಿಯ ಜಗುಲಿಯನ್ನು ಸಾರಿಸಿ, ರಂಗವಲ್ಲಿಯನ್ನಿಕ್ಕಿ, ಮನೆಯೊಳಗಿದ್ದ ದೇವರ ಮೂರ್ತಿಗಳನ್ನೇ ಅಲ್ಲಿ ತಂದು ಇರಿಸಿರುವರು. ಆಮೇಲೆ ಮನೆಯ ಯಜಮಾನ, ಆ ದೇವರ ಮೂರ್ತಿಗಳನ್ನು ಎತ್ತಿಕೊಂಡು, ಒಳಗೆ ಒಯ್ಯುವನು. ಮನೆಯವರೆಲ್ಲರೂ ಊಟದ ತಾಬಂಡಿಗಳನ್ನು



ಗುಣಿಗಳಿಂದ ಬಾರಿಸುತ್ತ ಆ ನಾದದೊಂದಿಗೆ ಧ್ವನಿಯನ್ನು ಬೆರೆಸುತ್ತ 'ದೇವರು ಬಂತು, ದೇವರು ಬಂತು' ಎಂದು ಕೂಗುತ್ತ ಮುಂಗಡೆಯಲ್ಲಿ ನಡೆದಿರುವರು. ದೇವರಮನೆಯ ಜಗುಲಿಯ ಪೀಠದಲ್ಲಿ, ಮನೆಗೆ ಬಂದ ದೇವರನ್ನು ಪ್ರತಿಷ್ಠಾಪಿಸಿ ಆದಮೇಲೆ, ಪೂಜೆ–ನೈವೇದ್ಯಗಳಾಗಿ, ಸೇವಗೆಯ ಸವಿಯೂಟವಾಗುವುದು. ಇಂದು ಪ್ರಾರಂಭವಾದ ಗುಡಿಯ ಹುಣ್ಣಿಮೆಯ ಕಾರ್ಯಕ್ರಮಗಳು ಮರುದಿನ ಸಂಜೆಯವರೆಗೂ ನಡೆದಿರುವುವು.

ಎಲ್ಲಮ್ಮದೇವಿಯ ಭಕ್ತರ ಮನೆಗಳಲ್ಲಿ ಇಂದು ಜೋಗಮ್ಮಗಳನ್ನು ಬರಮಾಡಿಕೊಂಡು, ಅವರ ಹಡಲಿಗೆಗಳನ್ನು ತುಂಬಿಸುವ ಸಂಪ್ರದಾಯವೂ ಇರುವುದು. ಬೇಡಿಕೊಂಡ ಭಕ್ತರನೇಕರು ಇಂದು ಎಲ್ಲಮ್ಮದೇವಿಗೆ ವಿವಿಧ ರೀತಿಯ ಹರಕೆಗಳನ್ನು ಮುಡಿಪು–ಕಾಣಿಕೆಗಳನ್ನು ಸಲ್ಲಿಸುವರು. ದೇವಿಯ ಗುಡ್ಡದಲ್ಲಿ 'ಪರಿಸೆ'ಯು ನೆರೆದು, ವಿಶೇಷ ಪೂಜಾಸಮಾರಂಭಗಳು ನಡೆಯುವುವು.

### ಮಹಾಶಿವರಾತ್ರಿ

ಮಾಘದಲ್ಲಿಯೆ ಇನ್ನೊಂದು ಪ್ರಮುಖವಾದ ಹಬ್ಬವೆಂದರೆ ಮಹಾಶಿವರಾತ್ರಿಯದು. ಶಿವೋಪಾಸಕರಿಗೆ ಇದು ದೊಡ್ಡ ಹಬ್ಬ. ವರ್ಷದ ಹನ್ನೆರಡು ತಿಂಗಳು ಕೃಷ್ಣತ್ರಯೋದಶಿಯಂದೂ ಶಿವರಾತ್ರಿಯ ವ್ರತವು ಇದ್ದೇ ಇರುವುದು. ಮಿಕ್ಕ ತಿಂಗಳಲ್ಲಿಯವು ಮಾಸಶಿವರಾತ್ರಿಯೆನಿಸಿಕೊಂಡು, ವ್ರತಿಗಳಾದ ಕೆಲವರಿಗೆ ಮಾತ್ರ ಅವುಗಳ ಸಂಬಂಧ ಬರುವುದು. ಮಾಘದಲ್ಲಿಯ ಮಹಾಶಿವರಾತ್ರಿ ಮಾತ್ರ ಸಾರ್ವಜನಿಕ ಹಬ್ಬವಾಗಿರುವುದು. ಶೈವಸಂಪ್ರದಾಯದವರೆಲ್ಲರೂ ಇಂದು ಉಪವಾಸವ್ರತವನ್ನು ಆಚರಿಸಿದರೆ, ಮಾಧ್ವವೈಷ್ಣವರು, ಹಬ್ಬದಡಿಗೆಗಳನ್ನು ಮಾಡಿ, ಶಿವನಿಗೆ ನೈವೇದ್ಯ ಸಲ್ಲಿಸಿ ಪ್ರಸಾದದ ಊಟವನ್ನು ಮಾಡುವರು.

ಶಿವೋಪಾಸಕರೆಲ್ಲರೂ ಅಂದು ಶಿವಭಜನೆ ಮಾಡುತ್ತ ರಾತ್ರಿಯುದ್ದಕ್ಕೂ ಜಾಗರಣೆ ಮಾಡಬೇಕು. ಶಿವಮಂದಿರಗಳಲ್ಲೆಲ್ಲ ಇಂದು ರಾತ್ರಿ ಯಾಮಪೂಜೆಗಳು ನಡೆಯುವುವು. ನಾಮಸಂಕೀರ್ತನೆ, ಶಿವಕಥಾಕಾಲಕ್ಷೇಪ, ಪುರಾಣಶ್ರವಣ, ನಾಮಸ್ಮರಣ, ಸಂಗೀತಭಜನೆ ಇವು ಎಲ್ಲೆಲ್ಲಿಯೂ ನಡೆದಿರುವುವು. ಅನೇಕ ಶೈವಕ್ಷೇತ್ರಗಳಲ್ಲಿಯೂ ಶೈವತೀರ್ಥಗಳಲ್ಲಿಯೂ ಮಠಗಳಲ್ಲಿಯೂ ಶಿವರಾತ್ರಿಯ ಜಾತ್ರೆಗಳು ಕೂಡುವುವು. ಕೆಲವೆಡೆ ರಥೋತ್ಸವಗಳೂ ನಡೆಯುವುವು.

ಮರುದಿನ ಪಾರಣೆ. ಉಪವಾಸ ಮಾಡಿದ ಶಿವಭಕ್ತರಿಗೆಲ್ಲ ಇಂದು ಹಬ್ಬದ ಸವಿಯೂಟ; ಅಲ್ಲದೆ ಮಂದಿರ ಮಠಗಳಲ್ಲಿ ಪೂಜೆ ಭಜನೆಗಳ ಕಾರ್ಯಕ್ರಮಗಳೂ

ವಿಶೇಷೋತ್ಸವಗಳೂ ಇಂದು ಕೂಡ ಇದ್ದೇ ಇರುವುವು. ಶಿವರಾತ್ರಿಯ ಹಬ್ಬದ ಆಚರಣೆ, ಭಾರತರಾಷ್ಟ್ರದ ಪ್ರತಿಯೊಂದು ಪ್ರದೇಶದಲ್ಲಿಯೂ ರೂಢವಾಗಿದೆ. ದಕ್ಷಿಣೋತ್ತರ ಭಾರತಗಳೆರಡರಲ್ಲಿಯೂ ಪುರಾಣಪ್ರಸಿದ್ಧ ಪ್ರಾಚೀನ ಶಿವಮಂದಿರಗಳಿವೆ. ಎಂತಲೇ ಶಿವರಾತ್ರಿಯು ಹಬ್ಬದ ವ್ಯಾಪ್ತಿ ಮಿಕ್ಕೆಲ್ಲ ಹಬ್ಬಗಳಿಗಿಂತಲೂ ಹೆಚ್ಚಾಗಿರುವುದು. ನಮ್ಮ ಕನ್ನಡನಾಡಿನಲ್ಲಂತೂ ಊರೂರಿಗೂ ಶಿವಮಂದಿರಗಳಿವೆ. ಎಲ್ಲ ಮಂದಿರಗಳಲ್ಲಿಯೂ ಶಿವರಾತ್ರಿಯ ವ್ರತದ ಉತ್ಸವದ ಸಮಾರಂಭಗಳನ್ನು ಆಚರಿಸಲಾಗುತ್ತದೆ.

ಶಿವರಾತ್ರಿಯ ಅಮಾವಾಸ್ಯೆ ಎಂದು ಕರೆಯಿಸಿಕೊಳ್ಳುವ ಮಾಘಕೃಷ್ಣ ಅಮಾವಾಸ್ಯೆಯೂ ಶಿವರಾತ್ರಿಯ ಹಬ್ಬದಲ್ಲಿಯೆ ಎಣಿಕೆಗೊಳ್ಳುತ್ತದೆ. ಈ ಹಬ್ಬದ ಉತ್ಸವಗಳೊಂದಿಗೆ ಮಾಘಮಾಸವು ತನ್ನ ಆಡಳಿತವನ್ನು ಮುಗಿಸಿ, ಗಂಟು–ಮೂಟೆ ಕಟ್ಟುತ್ತದೆ.

* * *



## ೧೨. ಪಂಚಬಾಣಲೀಲಾಪ್ರಸಂಗದ–ಫಾಲ್ಗುಣಮಾಸ!

ಫಾಲ್ಗುಣಮಾಸ! ಎಷ್ಟೊಂದು ವೈಶಿಷ್ಟ್ಯಪೂರ್ಣ ಮಾಸವಿದು, ಮೊದಲೇ ಉಲ್ಲಾಸ! ಅದರೊಳಗೆ ಫಾಲ್ಗುಣಮಾಸ! ಎಂಬ ನಾಡುನುಡಿ, ಈ ತಿಂಗಳ ವೈಶಿಷ್ಟ್ಯವನ್ನು ವ್ಯಕ್ತಪಡಿಸುವುದಕ್ಕಾಗಿಯೇ ರೂಪುಗೊಂಡುದಾಗಿದೆ. ವಸಂತರಾಜನ ಆಳಿಕೆಯ ಪ್ರಾರಂಭಕಾಲವನ್ನು, ಬಂದ ಮಾಮರದಲ್ಲಿ ಕುಳಿತ ಪಂಚಮದಿಂಚರದ ಕೋಗಿಲೆಗಳು, ನಿಡುದನಿಯಿಂದ ಎತ್ತಿಎತ್ತಿ ಹೊಗಳುತ್ತಿರುವುವು. ನೀಲಗಗನದಲ್ಲಿ ಬಿದಿಗೆಯ ಸಂಜೆ ಮೂಡಿದ ಚಂದ್ರನು ದಿನಕ್ಕೊಂದು ಚೆಂದ ಬೆಳೆಯುತ್ತ ಬೆಳುದಿಂಗಳ ಸುಧೆಯನ್ನು ನೆಲತಾಯಿಗೆ ಎರೆಯುತ್ತಿರುವನು. ಉತ್ತರಾಯಣದಲ್ಲಿ ಮಾರ್ಗಕ್ರಮಿಸುತ್ತಿರುವ ನೇಸರು, ಶಿಶಿರದ ತಣ್ಪನ್ನು ಬಿಸಿಗೊಳಿಸುತ್ತಿರುವನು. ಆದರೆ ಪಡುವಣದ ಸುಳಿಗಾಳಿ ನಡುನುಡವೆ ಸುಳಿದಾಡಿ, ಬಿಸಿಲತೀವ್ರತೆಗೆ ಕಡಿವಾಣ ಹಾಕುತ್ತಿರುವುದು. ಸುಗ್ಗಿಯೆಲ್ಲ ಮುಗಿದು ಮನೆ–ಮನೆಯಲ್ಲಿಯೂ ಅನ್ನಧಾನ್ಯವು ತುಂಬಿರುವುದು. ಉಣ್ಣುವ ಅನ್ನಕ್ಕೊಂದು ಹೊಸ ರುಚಿ; ಕುಡಿಯುವ ನೀರಿಗೊಂದು ಹೊಸ ರುಚಿ. ಕೃಷಿಕರು ಕಷ್ಟಕರ ಕಾರ್ಯಗಳಿಂದ ಬಿಡುಗಡೆ ಪಡೆದಿರುವರು. ಇಷ್ಟೆಲ್ಲ ಉದ್ದೀಪನವಿಭಾವಗಳು ಜಾಗೃತವಾಗಿರುವಾಗ, ಉತ್ಸಾಹ–ಉಲ್ಲಾಸಭಾವಗಳು ಪರಿಪುಷ್ಟಿಗೊಳ್ಳದೆ ಸುಮ್ಮಗಿರುವುದೇ? ಈ ಉತ್ಸಾಹ–ಉಲ್ಲಾಸಗಳು ನಲ್ಲ–ನಲ್ಲೆಯರ ಬಗೆಗಳನ್ನು ಬಿಗಿದುಕಟ್ಟಿ ಅವರ ಪ್ರೀತಿಜೀವನದ ಪುಷ್ಪವಾಟಿಕೆಗೆ ಸವಿನೀರನ್ನು ಎರೆಯುವುವು.

ಫಾಲ್ಗುಣದ ಕೋರೆಚಂದ್ರನನ್ನು ಕಾಣುವ ತವಕ ಎಷ್ಟೊಂದು ನಮ್ಮ ನಾಡಿಗರಲ್ಲಿ? ಆತನು ಕಣ್ಣಿಗೆ ಕಂಡೊಡನೆಯೆ, ನೂಲೆಳೆಯೊಂದನ್ನು ಅವನಿಗೆ ಕಾಣಿಕೆಯನ್ನಾಗಿ ಅರ್ಪಿಸಿ, ಉತ್ಸಾಹ ಪ್ರಕಟಣೆಗೆ ತಕ್ಕ ಬೇರೆ ಸಾಧನವನ್ನು ಕಾಣದೆ ಏನೋ ಕೈಬಾಯಿಗಳಿಂದಲೇ ಶಂಖನಾದವನ್ನು ಮಾಡಿ, ಅವನನ್ನು ಸಂತೋಷದಿಂದ ಸ್ವಾಗತಿಸುವರು. ಹಿಂದೆಯೆಂದೂ ಸಿಕ್ಕದಿರುವ ಸ್ವಾಗತ ಸಿಕ್ಕ ಸಂತೃಪ್ತಿಯಿಂದಲೇನೋ ಫಾಲ್ಗುಣದ ಚಂದ್ರ ದಿನದಿನಕ್ಕೂ ತನ್ನ ಕಳೆಗಳನ್ನು ಹೆಚ್ಚಿಸಿಕೊಳ್ಳುತ್ತ ನಗೆಮಲ್ಲಿಗೆಯನ್ನು ಎಲ್ಲೆಡೆಗೂ ಚೆಲ್ಲುತ್ತಿರುವನು. ಶರಚ್ಚಂದ್ರನನ್ನೇ ಹೊಗಳಿ ಹಾಡಿದ ನಮ್ಮ ಹಳೆಯ ಕವಿಗಳನ್ನು, ಈ ಫಾಲ್ಗುಣದ ಪೂರ್ಣ

ಕಲಾನಿಧಿ, ಕುರುಡುಪರಂಪರೆಯ ಕೊರಮರೆಂದು ಹಂಗಿಸಿ ನಗುತ್ತಿರಬೇಕು. ಎಂತಹ ತುಂಬುನಗೆ ಫಾಲ್ಗುಣದ ಪೂರ್ಣಚಂದ್ರನದು? ಎಷ್ಟೊಂದು ಚೆಲ್ವು ಫಾಲ್ಗುಣದ ಬೆಳುದಿಂಗಳಿಗೆ?

ಚಾಂದ್ರವತ್ಸರದವರ ಎಣಿಕೆಯಲ್ಲಿ ಫಾಲ್ಗುಣವು ಕೊನೆಯ ಎಂದರೆ ಹನ್ನೆರಡನೆಯ ತಿಂಗಳು. ಸೌರವತ್ಸರದ ಕೊನೆಯ ತಿಂಗಳಾದ ಮೀನಮಾಸವೂ ಇದೇ ತಿಂಗಳಲ್ಲಿ ಮೊದಲಾಗಿ ಮುಂದುವರೆದಿರುವುದು. ಉತ್ತರಾನಕ್ಷತ್ರವು ಈ ತಿಂಗಳ ಸಂಜೆ–ಬೆಳಗುಗಳಿಗೆ ಸಂಬಂಧಿಯಾಗಿರುವುದು. ಉತ್ತರಾ ನಕ್ಷತ್ರಕ್ಕೆ 'ಫಲ್ಗುಣೀ' ಎಂಬ ಇನ್ನೊಂದು ಹೆಸರೂ ಇದೆ. ಇದರಿಂದಲೇ ಈ ಮಾಸಕ್ಕೆ 'ಫಾಲ್ಗುಣಿ' ಎಂಬ ಹೆಸರು ಬಂದಿದೆ. ಪಾಂಡವ ಮಧ್ಯಮನಾದ ಅರ್ಜುನನು ಹುಟ್ಟಿದುದು ಫಲ್ಗುಣೀನಕ್ಷತ್ರ ಕಾಲದಲ್ಲಿ ಎಂತಲೇ ಅವನಿಗೆ 'ಫಲ್ಗುಣ' ಎಂಬ ಸಾರ್ಥನಾಮವೂ ಒಂದು ಇದೆ.

ಮಲೆನಾಡಿನಲ್ಲಿಯೇ ಆಗಲಿ, ಬೆಳುವಲನಾಡಿನಲ್ಲಿಯೇ ಆಗಲಿ, ಫಾಲ್ಗುಣದಲ್ಲಿ ಹೊಲದ ಬೆಳೆಗಳಾವುವೂ ಇರುವುದಿಲ್ಲ. ಬೆಳುವಲದ ಹೊಲಗಳಲ್ಲಿ ಅಲ್ಲಲ್ಲಿ ಹತ್ತಿಯ ಹೊಲಗಳು ಕಣ್ಣಿಗೆ ಬೀಳಬಹುದಾದರೂ, ಅವೂ ಕಡೆಯ ಬೀಡುಗಳಿಗೆ ಬಂದಿರುವುವು. ಬೆಲ್ಲವೇ ಪ್ರಧಾನವಾಗಿ ಬೆಳೆಯುವ ಪ್ರದೇಶಗಳಲ್ಲಿ ಆಲೆಗಳು ಇನ್ನೂ ತಿರುಗುತ್ತಲೇ ಇರುವುವು. (ಸಕ್ಕರೆ ಕಾರಖಾನೆಗಳು ಭರದಿಂದ ಕೆಲಸಮಾಡುತ್ತಿರುವ ಈ ಕಾಲದಲ್ಲಿ ಆಲೆಯಾಡುವವರು ಅಪೂರ್ವವಾಗಿದ್ದಾರೆ) ಮಾವಿನ ಮರಗಳು ಹುಳಿ–ಹುಳಿಯಾದ ಹೋಳುಗಾಯಿಗಳನ್ನು ಕೊಂಬೆಗಳಲ್ಲಿರಿಸಿಕೊಂಡು ಉಯ್ಯಾಲೆಯನ್ನಾಡಿಸುತ್ತಿರುವುವು. ಹುಣಿಸೆಯ ಮರಗಳೆಲ್ಲ ಸುಲಿಗೆಗಾರರ ಸೂರೆಗೊಳಗಾಗಿ, ತಮ್ಮ ಫಲಸಂಪತ್ತನ್ನೆಲ್ಲ ಕಳೆದುಕೊಂಡು ಬಡವರಂತೆ ನಿಂತಿರುವುವು. ನೇರಿಲು ಮರಗಳಲ್ಲಿ ಬಿಟ್ಟ ಹೂ–ಗೊಂಚಲಲ್ಲಿಯ ಮಧುರಸಕ್ಕಾಗಿ ದುಂಬಿಗಳು ಗುಂಜಾರವದೊಡನೆ ನುಗ್ಗುತ್ತಿರುವುವು. ಬೇವಿನ ಗಿಡಗಳು ತಮ್ಮ ಕುಸುರು–ಕುಸುರಿನ ಹೂ–ಗೊಂಚಲಿನ ಸೊವಡುಗಂಪನ್ನು, ಮೆಲುಗಾಳಿಯೊಂದಿಗೆ ಸುತ್ತಲೂ ಕಳುಹುತ್ತಿರುವುವು. ದುಂಡುಮಲ್ಲಿಗೆಗೆ ಈಗ ಎಂದೂ ಇಲ್ಲದ ಸಿರಿವಂತಿಕೆ. ಅದರ ಮಾದಕಸುಗಂಧ, ಸ್ತ್ರೀ–ಪುರುಷರ ಮನಸ್ಸನ್ನು ಸವಿಗನಸಿನ ರಾಜ್ಯಕ್ಕೆ ಒಯ್ಯುತ್ತಿರುವುದು.

ವಸಂತರಾಜನ ಆಡಳಿತದಲ್ಲಿ ಸೂರ್ಯನ ಬಿಸುಗದಿರುಗಳು ಬಲಿಯುತ್ತ ನಡೆಯುವುವಾದರೂ, ಮೇಘರಾಜನ ಆಜ್ಞೆಯಿಂದ ಅಣಿಗೊಂಡು ಬರುವ ಅಡ್ಡಮಳೆಗಳು ಸೂರ್ಯನ ಬಲುಮೆಯನ್ನು ತಗ್ಗಿಸುವುವು. ಈ ಬಿಸಿಲು ಮಳೆಗಳ ಸೆಣಸಾಟ, ಬೆಟ್ಟದ ಓವರಿಯ ಕಾಡುಗಳಿಗೆಲ್ಲ ಪಥ್ಯಕರವಾಗಿ ಪರಿಣಮಿಸಿ, ಕಾಡಿನ ಗಿಡಮರಗಳೆಲ್ಲ ಹೊಸ ಚಿಗುರುಗಳನ್ನು ಹೊರಹಾಕಿ, ನವಜೀವನವನ್ನು ಪಡೆಯುವುವು. ಶಿಶಿರಕಾಲದಲ್ಲಿ ಬರಲುಬರಲಾದ ಕಾಡು, ವಸಂತನ ಆಳ್ವಿಕೆಯಲ್ಲಿ ಹಸುರಿನಿಂದ ಮೆರೆಯತೊಡಗುವುದು.



ಫಾಲ್ಗುಣಮಾಸದಲ್ಲಿ ಹೆಚ್ಚಿನ ಹಬ್ಬಗಳು ಇಲ್ಲವಾದರೂ, ಶುಕ್ಲ ದ್ವಿತೀಯೆಯಿಂದ ಕೃಷ್ಣಪಕ್ಷದ ಪಂಚಮಿಯವರೆಗೂ ತನ್ನ ಅಧಿಕಾರವನ್ನು ನಡೆಯಿಸುವ ಕಾಮನ ಹಬ್ಬವು ನಿತ್ಯೋತ್ಸಾಹ, ನಿತ್ಯೋಲ್ಲಾಸಗಳಿಂದ ಕೂಡಿದುದಾಗಿರುವುದು. ನಮ್ಮ ನಾಡಿನಲ್ಲಿದು ಸಾರ್ವಜನಿಕ ಹಬ್ಬ. ಈ ಹಬ್ಬಕ್ಕೆ ಪೌರಾಣಿಕ ಪರಂಪರೆಯೂ ಇದೆ; ಐತಿಹಾಸಿಕ ಪರಂಪರೆಯೂ ಇದೆ. ವಿಜಯನಗರದ ರಾಜರ ಕಾಲದಲ್ಲಿ ಈ ಹಬ್ಬಕ್ಕೆ ವಿಶೇಷ ಪ್ರಾಶಸ್ತ್ಯವಿದ್ದಿತೆಂಬುದಕ್ಕೆ ಐತಿಹಾಸಿಕ ಪ್ರಮಾಣಗಳು ಇವೆ. ನರಪತಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ, ವಿಜಯನಗರಕ್ಕೆ ಪೋರ್ಜುಗೀಸ್ ರಾಯಭಾರಿಯಾಗಿ ಬಂದಿದ್ದ ಡಾಮಿಂಗೊ ಪೀಜ್ ಎಂಬವನು, ರಾಜಧಾನಿಯಲ್ಲಿ ಆಚರಿಸಲಾದ ಈ ಹಬ್ಬದ ವಿವರಗಳನ್ನೆಲ್ಲ ಕಣ್ಣಾರೆ ಕಂಡು, ತನ್ನ ವರದಿಯಲ್ಲಿ ಅವುಗಳನ್ನೆಲ್ಲ ಬಿತ್ತರಿಸಿದ್ದಾನೆ. ಶ್ರೀಕೃಷ್ಣದೇವರಾಯನು ಸ್ವತಃ ಈ ಕಾಮನ ಹಬ್ಬದ ಓಕುಳಿಯಾಟದಲ್ಲಿ ಭಾಗವಹಿಸುತ್ತಿದ್ದನೆಂಬ ಸಂಗತಿಯೂ ಆ ವರದಿಯಲ್ಲಿದೆ ಇಷ್ಟೇ ಅಲ್ಲ, ತಂಜಾವೂರಿನ ಪ್ರಾಚೀನ ಗ್ರಂಥಭಂಡಾರದಲ್ಲಿ, 'ಆಕಾಶಭೈರವಕಲ್ಪ' ಎಂಬ ಪ್ರಾಚೀನ ಸಂಸ್ಕೃತಗ್ರಂಥದ ಹಸ್ತಪ್ರತಿಯೊಂದು ಇದೆಯಂತೆ. ಅದರಲ್ಲಿ ರಾಜ–ಮಹಾರಾಜರು ಆಚರಿಸಬೇಕಾದ ಹಬ್ಬ–ಹುಣ್ಣಿಮೆಗಳ ವಿವರಣೆಗಳಿದ್ದು, ಕಾಮನ ಹಬ್ಬದ ಆಚರಣೆಯ ವಿಷಯವನ್ನೊಳಗೊಂಡ ಒಂದು ಪ್ರತ್ಯೇಕ ವಿಭಾಗವೇ ಇದೆಯಂತೆ. ಕನಕದಾಸರ 'ಮೋಹನತರಂಗಿಣಿ' ಎಂಬ ಶೃಂಗಾರರಸ ಪ್ರಧಾನವಾದ ಹಾಡುಗಬ್ಬವು, ಈ ಕಾಮನ ಹಬ್ಬದ ಕಾಲದ ಹಾಡಿಕೆಗಾಗಿಯೇ ಹುಟ್ಟಿದೆಯೆಂದು ಭಾವಿಸಬಹುದಾಗಿದೆ. ನಮ್ಮ ನಾಡಿನಲ್ಲಿ, ಕಾಮನ ಹಬ್ಬಕ್ಕಾಗಿ ನಿರ್ಮಿತವಾದ ನಾಗರಿಕ ಸಾಹಿತ್ಯವೂ ಸಾಕಷ್ಟಿದೆ; ಜಾನಪದ ಸಾಹಿತ್ಯವೂ ಬೇಕಾದಷ್ಟಿದೆ. ಈ ಹಬ್ಬದ ಜಾನಪದ ಸಾಹಿತ್ಯದಲ್ಲಿ ಶೃಂಗಾರ ಉತ್ತಾನತೆಯ ಶಿಖರಕ್ಕೇರಿ ನಿಂತುದರಿಂದ, ನಾಗರಿಕರೆನಿಸಿಕೊಳ್ಳುವವರು ಅದಕ್ಕಾಗಿ ಮುಖ ಮುದುಡಿಸಬಹುದಾದರೂ, ಕನ್ನಡಿಗರ ಸಹಜಸಿದ್ಧ ರಸಿಕತೆಯು ಅದರಲ್ಲಿ ಬಿಚ್ಚುಮಾತಿನಿಂದ ವ್ಯಕ್ತವಾಗಿರುವುದನ್ನೂ ನಾವು ಕಾಣಬಹುದು.

ಕಾಮನ ಹಬ್ಬದ ಕಾಲದಲ್ಲಿ ಬಳಸುವ ನಮ್ಮ ಸಾಹಿತ್ಯದಲ್ಲಿ 'ದುಮುದುಮೆ'

ಹೋಳಿಯ ಹಾಡು, ಲಾವಣಿ, ಬಿಡಿಪದ ಇತ್ಯಾದಿ ರೂಪಭೇದಗಳಿರುವುವು. 'ಹಿಂಯಾಲು ಪದ' ಎಂದಿರುವ ತ್ರಿಪದಿಗಳು, ಹಳ್ಳಿಯ ನಾಯಕರನ್ನು ಕುರಿತ ಮಹಿಮಾಗೀತ (ಪವಾಡ) ಗಳಾಗಿರುವುವು. ಕಾಮನಹಬ್ಬದ ಈ ಸಾಹಿತ್ಯವನ್ನು ಸಂಶೋಧಿಸಿ, ಸಂಗ್ರಹಿಸಿ ಪ್ರಕಟಿಸಿದರೆ, ಸಾವಿರಾರು ಪುಟಗಳ ಸಂಪುಟವಾಗಬಹುದು. ಅದರಲ್ಲಿ ನಮ್ಮ ಸಾಮಾಜಿಕ ಸಂಸ್ಕೃತಿಯ ಅನೇಕ ವಿಷಯಗಳೂ ಸಿಕ್ಕಬಹುದು.

ಕಾಮನ ಹಬ್ಬದ ಇಂದಿನ ರೀತಿ–ನೀತಿಗಳನ್ನು ನೋಡಿದರೆ, ಈ ಹಬ್ಬವು ನಮ್ಮ ಬೇರೆ ಬೇರೆ ಸಾಂಸ್ಕೃತಿಕ ಪರಂಪರೆಗಳ ಸಂಯುಕ್ತ ಪರಿಣಾಮವಿದೆಂದು ಹೇಳಲು ಬರುವಂತಿದೆ. ಪ್ರಾಚೀನಕಾಲದ ಯಜ್ಞಾಂತ್ಯದ ಅವಭೃಥಪೂರ್ವದ ಸರ್ವಾಹುತಿ ಸಂಪ್ರದಾಯದ ಪ್ರಭಾವವೂ ಈ ಹಬ್ಬದ ನಡೆವಳಿಯಲ್ಲಿ ಕಾಣುತ್ತದೆ. ಅವಭೃಥಪೂರ್ವದಲ್ಲಿ ಯಜ್ಞಭಸ್ಮವನ್ನು ನೀರಲ್ಲಿ ಕದಡಿ, ಒಬ್ಬರ ಮೇಲೊಬ್ಬರು ಎರಚಾಡುತ್ತಿದ್ದರಂತೆ; ಆಮೇಲೆ ವಸಂತಕ್ರೀಡೆಯನ್ನಾಡಿ, ತರುವಾಯ ಶುದ್ಧೋದಕದಲ್ಲಿ ಸ್ನಾನಮಾಡಿ ಮನೆಗೆ ಮರುಳುತ್ತಿದ್ದರಂತೆ.

ವಿಷ್ಣುಪುರಾಣ, ಭಾಗವತ, ಲಿಂಗಪುರಾಣ ಮೊದಲಾದುವುಗಳಲ್ಲಿ ಶಿವನ ತಪಸ್ಸನ್ನು ಕೆಡಿಸಿ, ಗಿರಿಜಾದೇವಿಯೊಂದಿಗೆ ಅವನು ಕೂಡುವಂತೆ ಮಾಡಲು, ಕಾಮದೇವನು ತನ್ನ ಸೈನ್ಯಸಮೇತನಾಗಿ ಶಿವನ ಮೇಲೆ ಯುದ್ಧಕ್ಕೆ ಹೋದುದೂ, ಆಗ ಶಿವನ ಅಗ್ನಿನೇತ್ರದಿಂದ ಕಾಮನು ಉರಿದುಹೋದ ವಿಷಯವೂ ಬಂದಿದೆ. ರತಿದೇವಿಯ ಮೇಲೆ ಅನುಗ್ರಹ ತೋರಿಸಿ, ಶಿವನು ಆಕೆಗೆ ಭಾವೋದ್ಭವನಾದ ಅನಂಗಪತಿಯನ್ನಿತ್ತ ಕಥೆಯೂ ಆ ಪುರಾಣದಲ್ಲಿದೆ. ನಮ್ಮ ಇಂದಿನ ಕಾಮನ ಹಬ್ಬದ ಆಚರಣೆಯಲ್ಲಿ ಈ ಪೌರಾಣಿಕ ಸ್ಮೃತಿಯ ಸಂಕೇತಗಳು ಕಂಡುಬರುತ್ತವೆ. ಇಷ್ಟೇ ಅಲ್ಲ 'ಕಾಮದಹನ' ಕಾರ್ಯಕ್ರಮವೇ ಇದರಲ್ಲಿ ಪ್ರಾಮುಖ್ಯವಾಗಿರುವಂತೆ ಕಂಡುಬರುವುದು.

ಕಾಮನ ಹಬ್ಬಕ್ಕೆ 'ಹೋಳಿಯ ಹುಣ್ಣಿಮೆ' ಎಂದು ಇನ್ನೊಂದು ಹೆಸರಿದ್ದುದು ಎಲ್ಲರಿಗೂ ಗೊತ್ತಿದ್ದ ಸಂಗತಿ. 'ಕಾಮದಹನ' ಎಂಬ ಮಾತನ್ನು ಬಳಸುವವರೂ ನಮ್ಮಲ್ಲಿದ್ದಾರೆ. ಇದನ್ನು ನೋಡಿದರೆ, ಇದಕ್ಕೊಂದು ಬೇರೆ ಪುರಾಣ ಪರಂಪರೆಯು ಇರಬೇಕೆಂದು ಎನಿಸದೆ ಇರದು. ಹಾಗೆ ಇದ್ದುದೂ ವಾಸ್ತವಸಂಗತಿ. ಹೋಲಿಕಾ ಅಥವಾ ಢುಂಢಾ ಎಂಬ ಹೆಸರಿನ ರಾಕ್ಷಸಿಯೊಬ್ಬಳು ಅಯೋಧ್ಯೆಯ ಬಳಿಯ ಅರಣ್ಯದಲ್ಲಿದ್ದು ಚಿಕ್ಕಮಕ್ಕಳಿಗೆ ಪೀಡೆಕೊಡುತ್ತಿದ್ದಳಂತೆ. ಪೀಡೆಗೊಳಗಾದ ಜನರೆಲ್ಲರೂ ದೊರೆಯ ಬಳಿಗೆ ಹೋಗಿ ಮೊರೆಯಿಟ್ಟರಂತೆ. ಆಗ ದೊರೆಯು ರಕ್ಕಸಿಯ



ನಾಶಕ್ಕಾಗಿ ಹೋಗಲು, ಅವಳು ಶರಣಾಗತಳಾಗಿ 'ನನ್ನನ್ನು ನೋಡಿದಾಗ ಜನರು ಅಶ್ಲೀಲ ನುಡಿಗಳನ್ನಾಡಿ ಬಾಯಿಬಡಿದುಕೊಂಡರೆ, ನಾನು ಅಲ್ಲಿ ನಿಲ್ಲದೆ ದೂರ ಓಡಿಹೋಗುತ್ತೇನೆ' ಎಂದು ವಚನಕೊಟ್ಟಳಂತೆ. ಅದರಂತೆಯೇ ಆ ರಾಕ್ಷಸಿ ಕಣ್ಣಿಗೆ ಬಿದ್ದೊಡನೆಯೆ ಜನರು ಅಶ್ಲೀಲ ಮಾತುಗಳನ್ನಾಡಿ ಶಂಖವಾದ್ಯವನ್ನು ಮಾಡಿ ಓಡಿಸುತ್ತಿದ್ದರಂತೆ. ಆದರೂ ಮಕ್ಕಳಿಗೆ ಆ ರಕ್ಕಸಿಯ ಭೀತಿ ಬಾಧಿಸತೊಡಗಿದಾಗ, ಜನರೆಲ್ಲರೂ ಸೇರಿ, ಆಕೆಯನ್ನು ಸುಟ್ಟುಬಿಟ್ಟರಂತೆ. ಇದೂ ಒಂದು ಪುರಾಣದ ಕಥೆ. ಈ ಕಥೆಯ ಸಂಕೇತಗಳೂ ಕಾಮನ ಹಬ್ಬದ ಆಚರಣೆಯಲ್ಲಿ ನಮಗೆ ಕಂಡುಬರುವುವು.

ವಸಂತಮಾಸದ ಶುಕ್ಲಪಕ್ಷದಲ್ಲಿ ಕೌಮುದೀಮಹೋತ್ಸವವನ್ನು ಆಚರಿಸಿ, ಅಲ್ಲಿ ರತಿ–ಮನ್ಮಥರನ್ನು ಪೂಜಿಸಿ, ಗಾಯನ–ನೃತ್ಯಗಳಲ್ಲಿ ರಾತ್ರಿಗಳನ್ನು ಕಳೆಯುವ ಪರಂಪರೆ ನಮ್ಮಲ್ಲಿದ್ದುದೂ, ಪ್ರಾಚೀನ ಗ್ರಂಥಗಳಿಂದ ನಮಗೆ ಕಂಡುಬರುತ್ತದೆ. ಕಾಮನ ಹಬ್ಬದ ಕಾಲದಲ್ಲಿ ಈಗಲೂ ನಡೆಯುತ್ತಿರುವ ರತಿ–ಮನ್ಮಥನ ಮೂರ್ತಿಸ್ಥಾಪನೆ–ಪೂಜಾಸಮಾರಂಭಗಳೂ, ಗಾಯನ–ನರ್ತನಗಳೂ ಆ ಕೌಮುದೀಮಹೋತ್ಸವವನ್ನು ಜ್ಞಾಪಕಕ್ಕೆ ತಂದುಕೊಡುತ್ತವೆ. ರಂಗಪಂಚಮಿಯ ವಸಂತದ ಎರಚಾಟವಂತೂ, ಕೃಷ್ಣ–ಗೋಪಿಯರ ವಸಂತೋತ್ಸವವನ್ನು ಕಣ್ಣೆದುರು ತಂದು ನಿಲ್ಲಿಸುತ್ತದೆ. ಶ್ರೀಕೃಷ್ಣ ದೇವರಾಯನು ಕಾಮನ ಹಬ್ಬದಲ್ಲಿ ಓಕುಳಿಯಾಟವಾಡಿದುದು, ವಿಜಯನಗರದಲ್ಲಿಯ ವಿಳಾಸಿನಿಯರ ಬಳಗದೊಂದಿಗೆ ಎಂಬ ಐತಿಹಾಸಿಕ ಸಂಗತಿಯು, ಕೃಷ್ಣ–ಗೋಪಿಯರ ರಾಸಲೀಲೆಯ ಸ್ಮರಣೆಯನ್ನೇ ಪುಷ್ಟಿಗೊಳಿಸುತ್ತದೆ.

ಜಾನಪದ ಪರಂಪರೆಯ ಸಾಮಾಜಿಕ ಸಂಪ್ರದಾಯಗಳ ಸಂಕೇತಗಳನ್ನೂ ಈ ಹಬ್ಬದ ನಡವಳಿಯಲ್ಲಿ ನಾವು ಗುರುತಿಸಬಹುದು. ಹಳೆಯ ವಸ್ತುಗಳನ್ನು ಹೋಳಿಗಾಗಿ ಸಂಗ್ರಹಿಸುವುದು, ಕುಳ್ಳು–ಕಟ್ಟಿಗೆಗಳನ್ನು ಕಳವುಮಾಡಿ ತರುವುದು, ಹೋಲಿಕಾದಹನದ ಕಾರ್ಯಕ್ರಮದ ಬೇರೆ ಬೇರೆ ಕಾರ್ಯಕ್ಕಾಗಿ ಹಳ್ಳಿಗಳಲ್ಲಿ ಬೇರೆ ಬೇರೆ ಹಕ್ಕುದಾರರಿರುವುದು, ಇವರೆಲ್ಲರ ಮೇಲೆ 'ಹೋಳಿಯ ನಾಯಕ' ಎಂಬ ಹಿರಿಯನಿರುವುದು, ಅಸ್ಪೃಶ್ಯ ಸಮಾಜದವರನ್ನೂ ಈ ಕಾರ್ಯಕ್ರಮದಲ್ಲಿ ಒಳಗೊಳಿಸುವುದು, ತಮ್ಮಟಿಗಳನ್ನು ಬಾರಿಸುವುದು, ಸಕ್ಕರೆಯ ಸರಗಳನ್ನು ಒಬ್ಬರೊಬ್ಬರ ಮಕ್ಕಳಿಗೆ ಒಲವುಗಾಣಿಕೆಗಳನ್ನಾಗಿ ಕೊಡುವುದು, ಕಾಮದಹನದ ಕಾಲದಲ್ಲಿ ಉರಿಯಮೇಲೆ 'ಮಾಸ್ತಿ' ಎಂಬ ಹೆಸರಿನಿಂದ ಹೆಣ್ಣು ಕೋಳಿಯನ್ನು ಹಾರಿಸುವುದು, ಉರಿಯುವ ಹೋಳಿಯಲ್ಲಿ ಕಬ್ಬಿನಗಣಿಕೆ, ಬೆಲ್ಲದಿಂದ ಮಾಡಿದ

ಚೇಳು, ತೆಂಗಿನಕಾಯಿ ಇವುಗಳನ್ನು ಒಗೆಯುವುದು, ಹೋಳಿಯ ಬೆಂಕಿಯನ್ನು ಮನೆಗೆ ತಂದು, ಅದರಲ್ಲಿ ಕಡಲೆಗಳನ್ನು ಸುಟ್ಟು ತಿನ್ನುವುದು ಇವೆಲ್ಲ ನಮ್ಮ ಜಾನಪದ ಸಂಪ್ರದಾಯಗಳಾಗಿವೆ. ಇವೆಲ್ಲ ಹೀಗೇಕೆ? ಎಂದು ಕೇಳಿದರೆ, ಅದಕ್ಕೊಂದು ಭಾವನಾತ್ಮಕವಾದ ಉತ್ತರವು ಇದ್ದೇ ಇರುವುದು.

ನಾಗರಿಕರು ಹುಣ್ಣಿಮೆಯ ದಿನವೇ ಹೋಲಿಕಾದಹನ ವಿಧಿಯನ್ನು ತಮ್ಮ ತಮ್ಮ ಮನೆತನಗಳ ಮಟ್ಟಿಗೆ ನಡೆಸುವರು. ಸಾರ್ವಜನಿಕ ಕಾಮದಹನವು ಹುಣ್ಣಿಮೆಯ ಮರುದಿನ ಪ್ರತಿಪದೆಯ ದಿನ ನಡೆಯುವುದು. ನಾಗರಿಕರು ಈ ದಿನವನ್ನು ಧೂಲಿವಂದನ ಎಂದು ಕರೆದರೆ, ಜಾನಪದರು, 'ಧೂಳವಾಡ' ಎಂದು ಹೇಳುವರು. 'ಹೊಯ್ಕೊಂಡ ಬಾಯಿಗೆ ಹೋಳಿಗಿತುಪ್ಪ' ಎಂಬ ಗಾದೆ, ಈ ಹಬ್ಬದ ಎರಡು ದಿನ ಮಾಡುವ ಹೋಳಿಗೆಯೂಟದ ಕಾರಣದಿಂದಲೇ ಹುಟ್ಟಿರಬಹುದದಾಗಿದೆ. ಫಾಲ್ಗುಣವದ್ಯ ಪ್ರತಿಪದೆಯನ್ನು 'ಹೋಳಿಹುಣ್ಣಿಮೆಯ ಕರಿ' ಎಂಬ ಹೆಸರಿನಿಂದಲೂ ಕರೆಯುವ ರೂಢಿಯಿದೆ. ವದ್ಯ ದ್ವಿತೀಯೆಯನ್ನು 'ಹೋಳಿಯ ಬ್ಯಾಟಿ' ಎಂದು ಹೇಳುವರು. ಹಳ್ಳಿಗಳಲ್ಲಿಯ ತರುಣ ಬೇಟೆಗಾರರು, 'ಕರಿ' ಮತ್ತು 'ಬ್ಯಾಟಿ' ಎರಡು ದಿನಗಳಲ್ಲಿಯೂ ಬೇಟೆಯಾಡಲು ಕಾಡಿಗೆ ಹೋಗುವರು. ಮರಳಿಬಂದು, ಹಳ್ಳಿಯ ಹಿರಿಯರೆದುರು ತಮ್ಮ ಸಾಹಸದ ಫಲವನ್ನು ತೋರಿಸಿ ಉಡುಗೊರೆ ಪಡೆಯುವರು.

ಹೋಳಿಯ ಹಬ್ಬದ ಓಕುಳಿಯಾಟ, ಕೆಲವೊಂದು ಊರುಗಳಲ್ಲಿ ಕರಿಯ ದಿನದಿಂದ ರಂಗಪಂಚಮಿಯವರೆಗೂ ನಡೆದಿರುವುದು. ನಿತ್ಯವೂ ಸಾಯಂಕಾಲ, ಹಳ್ಳಿಯ ರಸಿಕರು ವಿವಿಧ ವೇಷಗಳನ್ನು ಹಾಕಿ ಜನರನ್ನು ರಂಜಿಸುವರಲ್ಲದೆ, ತಮ್ಮ ಸಹಜರಸಿಕತನದ ಪ್ರದರ್ಶನವನ್ನೂ ಮಾಡುವರು. ರಂಗಪಂಚಮಿಯ ಹಬ್ಬ ನಮ್ಮ ನಾಡಿನ ನಾಗರಿಕ ಸಮಾಜದಲ್ಲಿ ಮಾತ್ರ ಪ್ರತ್ಯೇಕತೆಯನ್ನು ಪಡೆದಿದೆ. ಜಾನಪದರಿಗೆ ಇದೊಂದು ಕಾಮನ ಹಬ್ಬದ ಅಂಗದಿನ ಮಾತ್ರ. ಫಾಲ್ಗುಣ ವದ್ಯ ಅಮಾವಾಸ್ಯೆ ವರ್ಷದ ಕೊನೆಯ ದಿನ. ಇದಕ್ಕೆ 'ಯುಗಾದಿ ಅಮಾವಾಸ್ಯೆ' ಎಂದು ಹೆಸರಿಸಿದೆ.

ಉತ್ತರ ಕನ್ನಡ ಜಿಲ್ಲೆಯ 'ಸೋದೆ' ಎಂಬ ಇತಿಹಾಸ ಪ್ರಸಿದ್ಧ ಗ್ರಾಮದಲ್ಲಿ ಪ್ರತಿವರ್ಷವೂ ಫಾಲ್ಗುಣವದ್ಯ ತೃತೀಯೆಯಂದು ಶ್ರೀ ಶ್ರೀ ವಾದಿರಾಜಸ್ವಾಮಿಗಳವರ ಪುಣ್ಯತಿಥಿಯ ಮಹೋತ್ಸವವು ಅತ್ಯಂತ ವೈಭವದಿಂದ ನಡೆಯುತ್ತದೆ. ಶ್ರೀ ಶ್ರೀವಾದಿರಾಜಸ್ವಾಮಿಗಳು ಶ್ರೀಪುರಂದರದಾಸರ ಸಮಕಾಲೀನರು. ಇವರು ಸಂಸ್ಕೃತ–ಕನ್ನಡ ಭಾಷೆಗಳೆರಡರಲ್ಲಿಯೂ ಅನೇಕ ಧರ್ಮಗ್ರಂಥಗಳನ್ನು



ಬರೆದಿರುವರಲ್ಲದೆ, ಕನ್ನಡದಲ್ಲಿ ಭಕ್ತಿಗೀತಗಳನ್ನು ಬಹುಸಂಖ್ಯೆಯಲ್ಲಿ ರಚಿಸಿದ್ದಾರೆ. ಇವರ ಕಾವ್ಯಾಂಕಿತ 'ಹಯವದನ' ಎಂದು. ಸೋದೆಯಲ್ಲಿ ಏಳೆಂಟು ದಿನಗಳವರೆಗೂ ಆ ಆರಾಧನಾಮಹೋತ್ಸವದ ಬೇರೆ ಬೇರೆ ಕಾರ್ಯಕಲಾಪಗಳು ಜರುಗುವುವು.

ಫಾಲ್ಗುಣ ಬಹುಳ ಚತುರ್ಥಿಯಂದು, ಹಂಪೆಯ ಬಳಿಯ ನವವೃಂದಾವನದಲ್ಲಿ ಶ್ರೀ ಶ್ರೀವ್ಯಾಸರಾಯ ಶ್ರೀಪಾದಂಗಳವರ ಪುಣ್ಯತಿಥಿಯ ಸಮಾರಂಭವನ್ನು ಆಚರಿಸಲಾಗುವುದು. ಶ್ರೀವ್ಯಾಸಯೋಗಿಗಳು ವಿಜಯನಗರದಲ್ಲಿ ರಾಜಗುರುಗಳಾಗಿದ್ದವರು; ಅಲ್ಲದೆ ಕನ್ನಡ ಹರಿದಾಸಕೂಟದ ಪ್ರತಿಷ್ಠಾಪಕರು, 'ಶ್ರೀಕೃಷ್ಣ' ಎಂಬ ಅಂಕಿತದಿಂದ ಇವರು ಅನೇಕ ಭಕ್ತಿಗೀತಗಳನ್ನು ರಚಿಸಿರುವರಲ್ಲದೆ, ಹರಿದಾಸಶ್ರೇಷ್ಠರಾದ ಪುರಂದರದಾಸ, ಕನಕದಾಸ, ವೈಕುಂಠದಾಸ ಮೊದಲಾದವರಿಗೆ ಜ್ಞಾನಗುರುಗಳು. ಕೃಷ್ಣದೇವರಾಯನಿಗೆ ಬಂದ ಕುಹುಯೋಗದ ಕಾಲದಲ್ಲಿ ವಿಜಯನಗರದ ಸಾಮ್ರಾಜ್ಯಸಿಂಹಾಸನದ ಮೇಲೆ ಕುಳಿತು ರಾಜ್ಯವಾಳಿದರು. ಶ್ರೀವಾದಿರಾಜರು, ಶ್ರೀವ್ಯಾಸರಾಯರು ಇಬ್ಬರೂ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಉಚ್ಚಸ್ಥಾನ ಪಡೆದವರು.

ಇದೀಗ ಫಾಲ್ಗುಣಮಾಸದ ಮಹಾತ್ಮ್ಯ ಕಥನವಾಯಿತು. ಚೈತ್ರದಿಂದ ಇದುವರೆಗಿನ ಹನ್ನೆರಡು ತಿಂಗಳುಗಳ ಲೇಖನಗಳನ್ನು ಓದಿದ ವಾಚಕವರ್ಗ, ತಾವೇನಾದರೂ ಹೊಸ ಮಾತುಗಳನ್ನು ಇವುಗಳಿಂದ ಅರಿತುಕೊಂಡೆವೆಂದು ತೃಪ್ತಿಯನ್ನು ತಳೆದಿದ್ದರೆ, ನನ್ನ ಶ್ರಮವು ಸಾರ್ಥಕತೆಯನ್ನು ಪಡೆಯಿತೆಂದು ಭಾವಿಸಿ ನಾನೂ ಸಂತೃಪ್ತನಾಗುತ್ತೇನೆ ನಮಸ್ತೇ!

* * *

# ಕರ್ನಾಟಕದಲ್ಲಿ ವಸಂತೋತ್ಸವ

## ೧. ಪರಿಚಯ

ವಸಂತಋತುವಿನ ಬಗೆಗೆ ಭಾರತದ ಎಲ್ಲ ಭಾಗಗಳಲ್ಲಿಯೂ ಒಂದಿಲ್ಲೊಂದು ರೀತಿಯ ಉತ್ಸವವನ್ನು ಆಚರಿಸುವ ಪರಂಪರೆ ಇದ್ದೇ ಇದೆ; ಆದರೆ ಕನ್ನಡಿಗರ ಭೂತ–ವರ್ತಮಾನ ಜೀವನವನ್ನು ಸಂಶೋಧಕ ದೃಷ್ಟಿಯಿಂದ ನೋಡುತ್ತ ಬಂದರೆ, ಕನ್ನಡಿಗರು ಆಚರಿಸುತ್ತ ಬಂದ ವಸಂತೋತ್ಸವದ ವೈಶಿಷ್ಟ್ಯ–ವೈಲಕ್ಷಣ್ಯಗಳು ಎಂತಹೆಂಬುದು ಕಂಡುಬಾರದೆ ಇರದು. ಎಂತಲೇ ಕನ್ನಡನಾಡನ್ನು ಬಿಟ್ಟು ದೂರ ಇರಬೇಕಾಗಿ ಬಂದ ಆದಿಕವಿ ಪಂಪನು'...ಮಧುಮಹೋತ್ಸವ ಮಾದೊಡಂ ಏನನೆಂಬೆನ್, ಆರ್ ಅಂಕುಸಮಿಟ್ಟೊಡಂ ನೆನವುದೆನ್ನ ಮನಂ ಬನವಾಸಿದೇಶಮಂ' ಎಂದು ತನ್ನ ಆಂತರಿಕ ಅಪೇಕ್ಷೆಯನ್ನು ಹೊರಹೊಮ್ಮಿಸಿದ್ದಾನೆ. ಕನ್ನಡದ ನಾಗರಿಕ ಜೀವನದಲ್ಲೂ ವಸಂತೋತ್ಸವಕ್ಕೊಂದು ವಿಶಿಷ್ಟ ಸ್ಥಾನವಿದೆ. ಅದರಂತೆಯೆ ಜಾನಪದ ಜೀವನದಲ್ಲಿಯೂ ಅದಕ್ಕೆ ವಿಶಿಷ್ಟ ಸ್ಥಾನವಿದೆ.

ನಮ್ಮ ಪ್ರಾಚೀನ ಸಾಹಿತ್ಯ ಪ್ರಪಂಚವನ್ನು ನೋಡಿದರೆ, ವಸಂತಋತುವನ್ನು ಮನಮೆಚ್ಚಿ ಕೊಂಡಾಡದವನು ಇಲ್ಲವೇ ಇಲ್ಲವೆಂದು ಹೇಳಬಹುದು. ವಸಂತಋತುವಿನ ಸಂದರ್ಭ ದೊರೆತರಾಯಿತು; ಕನ್ನಡ ಕವಿಗಳು ಅದನ್ನು ವಿವಿಧ ಬಗೆಯ ಅರ್ಥಾಲಂಕಾರ, ಶಬ್ದಾಲಂಕಾರಗಳಿಂದ ವರ್ಣಿಸುವರು. ಕೆಲವೊಂದು ಕವಿಗಳು, ತಮ್ಮ ತಮ್ಮ ಕಾಲದಲ್ಲಿ ರೂಢಿಯಲ್ಲಿ ಇರಬಹುದಾದ 'ಮಧುಮಹೋತ್ಸವ'ದ ಶಬ್ದ ಚಿತ್ರಗಳನ್ನೂ ರೇಖಿಸಿರುವರು. ಅವುಗಳನ್ನು ಎಷ್ಟೇ ಕವಿಕಲ್ಪನೆಯೆಂದು ಭಾವಿಸಿದರೂ ಅವು ವಾಸ್ತವದ ನೆಲಗಟ್ಟಿನ ಮೇಲೆ ಕಟ್ಟಿದ ಸುಂದರ ಮಂದಿರಗಳೆಂಬುದನ್ನು ನಾವು ಮರೆತುನಡೆಯಲಾಗದು. ಅಲ್ಲದೆ ಆ ಕವಿವರ್ಣನೆಗಳ ಅಪಭ್ರಂಶರೂಪಗಳನ್ನೋ ಸಾಂಕೇತಿಕ ರೂಪಗಳನ್ನೋ ನಾವಂದು ಕನ್ನಡ ಜನಜೀವನದಲ್ಲಿ ಕಾಣುತ್ತೇವೆ.

ಮಧ್ಯಕಾಲದಲ್ಲಿ ಕರ್ನಾಟಕದ ಹೃದಯವನ್ನು ಮಿಡಿದು ಜನತೆಯಲ್ಲಿ ಹಬ್ಬಿಹರಡಿದ ಶ್ರೀಕೃಷ್ಣಭಕ್ತಿಪ್ರಧಾನವಾದ ಭಾಗವತಧರ್ಮದಿಂದ, ವಸಂತೋತ್ಸವದ ಪರಂಪರೆ ಬೆಳೆದುಬಂದಿದೆಯೆಂದು ಹೇಳುವವರೂ ಇದ್ದಾರೆ. ಅವರ



ಈ ಹೇಳಿಕೆಗೆ ಬಲವನ್ನು ಕೊಡಬಹುದಾದ ಪ್ರಮಾಣಗಳೂ ಕನ್ನಡಿಗರ ವಸಂತೋತ್ಸವ ಪರಂಪರೆಯಲ್ಲಿ ದೊರೆಯದಿರಲಾರವು. ಭಾಗವತ ಪುರಾಣದಲ್ಲಿ ಬರುವ ಶ್ರೀಕೃಷ್ಣ–ಗೋಪಿಯರ ಜಲಕ್ರೀಡೆ–ರಾಸಲೀಲೆಗಳಿಗೆ ಈ ಪ್ರಮಾಣಗಳು ಸಂವಾದಿಯಾಗಿ ನಿಲ್ಲುವುವು. ಆದರೆ ನಮ್ಮ ನಾಡಿನಲ್ಲಿರುವ ವಸಂತೋತ್ಸವದ ವ್ಯಾಪಕತೆಯನ್ನೂ ರೂಢಿವೈವಿಧ್ಯವನ್ನೂ ನೋಡಿದರೆ, ವಸಂತೋತ್ಸವವು ಈ ನಾಡಿನಲ್ಲಿ ಭಾಗವತಧರ್ಮದ ಪ್ರಚಾರಕ್ಕಿಂತ ಪೂರ್ವದಿಂದಲೂ ಇದ್ದಿತೆಂಬುದೂ ಅದೊಂದು ನಮ್ಮ ಸಮಾಜದ ಲೌಕಿಕ ಉತ್ಸವವೂ ಆಗಿದ್ದಿತೆಂಬುದೂ ಕಂಡುಬರದಿರದು.

ಕನ್ನಡಿಗರು ಮೊದಲಿನಿಂದಲೂ ನಿಸರ್ಗಸೌಂದರ್ಯದ ಉಪಾಸಕರು. ಅದರಂತೆಯೇ ಇವರು ದೈವಶ್ರದ್ಧೆಯವರಾದುದರಿಂದ, ತಮ್ಮ ನಿಸರ್ಗ ಸೌಂದರ್ಯದ ಉಪಾಸನೆಯೊಂದಿಗೆ ದೇವರನ್ನೂ ಸೇರಿಸಿಕೊಂಡು ಬಂದಿದ್ದಾರೆ. ಋತುಗಳಲ್ಲೆಲ್ಲ ವೆಗ್ಗಳವಾದ ವಸಂತದ ಅಧಿದೇವತೆ 'ಮಾಧವ' ಎಂದು, ಪ್ರತೀಕೋಪಾಸನೆಯನ್ನು ಪ್ರತಿಷ್ಠಾಪಿಸಿದ ಆಗಮಗಳು ಹೇಳುತ್ತವೆ. ಈ 'ಮಾಧವ' ಮಧುಮಾಸದ ಎಂದರೆ ವಸಂತದ ಸೌಂದರ್ಯದ ಸಂಕೇತಮೂರ್ತಿಯೆ ಹೊರತು, ಕೇವಲ 'ಲಕ್ಷ್ಮೀಪತಿ' ಎಂಬ ಪರ್ಯಾಪ್ತ ಅರ್ಥದಿಂದ ಕೂಡಿದವನಲ್ಲ. ನಮ್ಮ ನಾಡಿನ ವಿಷ್ಣುಭಕ್ತಿಪರಂಪರೆಯವರೆಲ್ಲರೂ ಈ ವಸಂತಮಾಸದಲ್ಲಿ 'ವಸಂತಮಾಧವ' ದೈವತವನ್ನೇ ಆರಾಧಿಸುತ್ತಾರೆ. ಆಗಮೋಕ್ತ ಪೂಜೆ–ಉತ್ಸವಗಳು ನಡೆಯುವ ವಿಷ್ಣುದೇವಾಲಯಗಳಲ್ಲಿರುವ ಮೂರ್ತಿಗಳಲ್ಲಿ. ವಸಂತಮಾಧವನ ಸಾನ್ನಿಧ್ಯವನ್ನು ಕಲ್ಪಿಸಿ, ಅಲ್ಲಿ ವಿಶೇಷರೀತಿಯ ವಸಂತೋತ್ಸವಗಳನ್ನು ಅರ್ಚಕರು ನಡೆಸುತ್ತಾರೆ. ಭಕ್ತರು ಶ್ರದ್ಧೆಯಿಂದ ಅದರಲ್ಲಿ ಸಹಕರಿಸುತ್ತಾರೆ.

ನಿಜವಾಗಿ ನೋಡಿದರೆ, ವಸಂತಋತುವು ಫಾಲ್ಗುಣ ಪೌರ್ಣಿಮೆಯಿಂದಲೆ ಪ್ರಾರಂಭವಾಗುವುದು. ಎಂದರೆ ಚೈತ್ರಾದಿಯಿಂದ ವರ್ಷವನ್ನು ಎಣಿಸುವ ಸಂಪ್ರದಾಯವಿರುವಲ್ಲಿ 'ಚೈತ್ರ–ವೈಶಾಖ ವಸಂತಋತು' ಎಂದು ತಿಳಿಯುವುದುಂಟು. ಆದರೆ ವಸಂತದೂತಿಯಾದ ಕೋಗಿಲೆ, ಕಾಮನೆ ಹಬ್ಬಕ್ಕೆಂದರೆ ತನ್ನ ಪಂಚಮರಾಗದ ಇಂಚರವನ್ನು ಪ್ರಾರಂಭಿಸಿ, ನಿಸರ್ಗದಲ್ಲಿ ವಸಂತಾಗಮನವಾದುದನ್ನು ಸೂಚಿಸುವುದು. ಚೈತ್ರಾದಿಯಿಂದಲೇ ವಸಂತಾಗಮನವೆಂದು ತಿಳಿಯುವ ಸಂಪ್ರದಾಯಪ್ರಿಯರಾದ ನಮ್ಮ ಹಳ್ಳಿಗರು, ತಮ್ಮ ತಮ್ಮ ಗ್ರಾಮದೈವತದ ವಸಂತೋತ್ಸವಗಳನ್ನು ಹೆಚ್ಚಾಗಿ ಚೈತ್ರ–ವೈಶಾಖಗಳಲ್ಲಿಯೆ ನಡೆಯಿಸುತ್ತಾರೆ. ಕನ್ನಡನಾಡಿನ ಹಳ್ಳಿಗಳಲ್ಲಿ ನಡೆಯುವ

ಗ್ರಾಮದೇವತೆಗಳ ಜಾತ್ರೆ–ರಥೋತ್ಸವಗಳೆಂದರೆ, ಆಗಮಿಕ ವಸಂತೋತ್ಸವದ ಜಾನಪದ ರೂಪಾಂತರಗಳಾಗಿವೆ.

ವಸಂತೋತ್ಸವದ ಒಂದು ಮುಖ್ಯ ಸಂಕೇತವೆಂದರೆ, ಓಕುಳಿಯ ಎರಚಾಟ. ಓಕುಳಿಯೆಂದರೆ ಚೆಂಬಣ್ಣದ ನೀರು. ಸಂಸ್ಕೃತದಲ್ಲಿ 'ವಸಂತ' ಎಂಬ ಶಬ್ದಕ್ಕೂ ಇದೇ ಅರ್ಥವಿದೆ. ನಮ್ಮ ಕಾವ್ಯಗಳಲ್ಲಿ ಚಿತ್ರಿತವಾಗಿರುವ ವಸಂತೋತ್ಸವವೂ ಬಣ್ಣದ ನೀರಿನ ಎರಚಾಟದಿಂದಲೇ ಕೊನೆಗೊಳ್ಳುವುದು. ಈ ಎರಚಾಟದಲ್ಲಿ ನರ–ನಾರಿಯರೆಲ್ಲರೂ ಭಾಗವಹಿಸುತ್ತಿದ್ದಂತೆ ವರ್ಣನೆಗಳಿವೆ. ಹಾಗಾದರೆ ಈ ಚೆಂಬಣ್ಣದ ನೀರಿನ ಎರಚಾಟದ ಸಂಕೇತಾರ್ಥವೇನು?

ನಮ್ಮ ಸಂಪ್ರದಾಯ ಸಾಮಯಿಕರ ಅಭಿಪ್ರಾಯದಂತೆ, ಶೃಂಗಾರರಸದ ಬಣ್ಣ ಕೆಂಪು. ರತಿಭಾಗದ ಬಣ್ಣ ಕೆಂಪು. ಶೃಂಗಾರರಸ ಪೋಷಣೆಗೆ ಉದ್ದೀಪನವಿಭಾಗವಾಗಿ ಬರುವ ವಸಂತಋತುವಿನ ಬಣ್ಣ ಕೆಂಪು. ಶೃಂಗಾರರಸದ ಅಭೀಷ್ಟದೈವತವಾದ ಮನ್ಮಥನ ಸಾಂಕೇತಿಕ ವರ್ಣವೂ ಕೆಂಪು. ಆದುದರಿಂದಲೇ ನಮ್ಮ ಪೂರ್ವಪರಂಪರೆ, ಶೃಂಗಾರದ ಸಾಂಕೇತಿಕ ವರ್ಣವು ಕೆಂಪು ಎಂಬುದನ್ನು ಪುರಸ್ಕರಿಸಿಬಿಟ್ಟಿದೆ. ಕಾಮನ ಹಬ್ಬ ಶೃಂಗಾರಭಾವಕ್ಕೆ ಉದ್ದೀಪ ವಿಭಾವವಾದುದರಿಂದ, ಆ ಕಾಲದಲ್ಲಿ ಓಕುಳಿಯನ್ನು ನಮ್ಮ ಜನ ಹೇಗೋ ಎರಚಾಡುವುದಲ್ಲದೆ, ಶುಭಕಾರ್ಯಗಳಲ್ಲಿಯೂ ಓಕುಳಿಯಾಟಕ್ಕೆ ವಿಶಿಷ್ಟಸ್ಥಾನವನ್ನು ಒದಗಿಸಿಕೊಟ್ಟಿದೆ. ಮದುವೆಯಾದ ಮದುಮಕ್ಕಳು ಓಕುಳಿಯಾಡುವ ಸಂಪ್ರದಾಯ ಉತ್ತರ ಕರ್ನಾಟಕದಲ್ಲಂತೂ ಎಲ್ಲರಲ್ಲಿಯೂ ಇದೆ. ಅದರಂತೆಯೆ ಮದುವೆ ಮುಗಿದು 'ನಾಗೋಲಿ'ಯಾದ ಮೇಲೆ ವರ–ಕನ್ಯಾಪಕ್ಷದವರು ಪರಸ್ಪರರಲ್ಲಿ ಓಕುಳಿಯೆರಚುವ ಪದ್ಧತಿಯನ್ನು ಎಲ್ಲಿಯೂ ನೋಡಬಹುದು. ಓಕುಳಿಯಾಟವು ಶೃಂಗಾರಭಾವೋತ್ತೇಜನದ ಸಂಕೇತವೆಂಬುದಕ್ಕೆ ಇನ್ನೂ ಒಂದು ಸಂದರ್ಭವನ್ನು ಸೂಚಿಸಬಹುದು. ಹೊಸ ಮದುವಣಿಗಿತ್ತಿ ಮೊದಲಸಲ ಋತುಮತಿಯಾದಳೆಂದಾಗ, ಆಕೆಯ ಹೊಸ ಮದುವಣಿಗನ ಮೇಲೆ ಚೆಂಬಣ್ಣವನ್ನು ಎರಚುಸುವುದು! ಆಗಮಿಕ ದೇವಾಲಯಗಳಲ್ಲಿ ನಡೆಯುವ ಸಾಂವತ್ಸರಿಕ ಮಹೋತ್ಸವದ ಕಾರ್ಯಕಲಾಪಗಳೆಲ್ಲ ಮುಗಿದ ಬಳಿಕ, ಉತ್ಸವದ ಪೂರ್ಣತೆಯನ್ನು ಸೂಚಿಸುವುದಕ್ಕೆ ಭಕ್ತರಲ್ಲಿ ಓಕುಳಿಯಾಟ ಜರುಗುವುದು. ಈ ಪದ್ಧತಿಯು ಯಜ್ಞಸಂಸ್ಥೆಯ ಮೂಲಕ ಬಂದುದಾಗಿರಬಹುದು. ಯಜ್ಞವಿಧಾನಗಳು ಕೊನೆಗೊಂಡಮೇಲೆ ನಡೆಯುವ ಅವಭೃಥೋತ್ಸವದ ಅಂಗವಾಗಿ, ವಸಂತೋತ್ಸವ



ಎಂದರೆ ಚೆಂಬಣ್ಣದ ನೀರಿನ ಎರಚಾಟ ನಡೆಯುತ್ತಿದ್ದಿತೆಂಬುದು ಅನೇಕ ಜನರಿಗೆ ಗೊತ್ತಿರಬಹುದು.

ಒಟ್ಟಿನ ಮೇಲೆ ಭಾರತೀಯ ಸಂಸ್ಕೃತಿಯಲ್ಲಿ ಬಹುಜನರ ಸಂತೋಷ, ಉಲ್ಲಾಸ, ಉತ್ಸಾಹಗಳನ್ನು ಬಹಿರಂಗವಾಗಿ ಪ್ರಕಟಿಸುವ ಸಂಕೇತವೆಂದರೆ, ಅದು ಈ ವಸಂತೋತ್ಸವವೆಂದು ಹೇಳಬಹುದಾಗಿದೆ. ಎಂತಲೇ ಅದು ದೈವಿಕ ಸಮಾರಂಭಗಳಲ್ಲಿಯೂ ಲೌಕಿಕ ಸಮಾರಂಭಗಳಲ್ಲಿಯೂ ಸಮಾನವಾಗಿ ಸ್ಥಾನವನ್ನು ಪಡೆದುನಿಂತಿದೆ. ಇದರ ಪುರಾತನತೆಯನ್ನೂ ವ್ಯಾಪಕತೆಯನ್ನೂ ಸೂಕ್ಷ್ಮದೃಷ್ಟಿಯಿಂದ ನೋಡುತ್ತ ಬಂದರೆ, ನಮ್ಮ ನಾಡಿನಲ್ಲಿ ಶ್ರೀಕೃಷ್ಣೋಪಾಸನಾಪ್ರಧಾನವಾದ ಭಾಗವತಧರ್ಮವು ಬರುವುದಕ್ಕಿಂತ ಮೊದಲಿನಿಂದಲೂ ವಸಂತೋತ್ಸವ ರೂಢವಾಗಿದ್ದಿತೆಂದು ಹೇಳಬಹುದಾಗಿದೆ.

ಉತ್ತರ ಕರ್ನಾಟಕದಲ್ಲಿ ಹಳ್ಳಿ–ಹಳ್ಳಿಯಲ್ಲಿಯೂ ಪ್ರತಿವರುಷ, 'ಓಕಳಿ' ಎಂಬ ಹೆಸರಿನ ಉತ್ಸವ ಸಮಾರಂಭಗಳು ನಡೆಯುವುವು. ಇವುಗಳಲ್ಲಿ ಜಲಕ್ರೀಡೆ, ವಸಂತೋತ್ಸವ ಇವುಗಳೇ ಪ್ರಧಾನ ಕಾರ್ಯಕ್ರಮಗಳಾಗಿರುವುವು. ಹಳ್ಳಿ–ಹಳ್ಳಿಗಳಲ್ಲಿಯೂ ಹನುಮಂತದೇವರ ಗುಡಿಯ ಎದುರು ಕಾಣುವ ಓಕಳಿಕೊಂಡಗಳು ಕನ್ನಡ ಜಾನಪದ ಜೀವನದಲ್ಲಿ ವಸಂತೋತ್ಸವಕ್ಕೆ ದೊರೆತಿರುವ ಶಾಶ್ವತಮಹತಿಗೆ ಸಾಕ್ಷಿಗಳಾಗಿರುವುವು.

ಐತಿಹಾಸಿಕ ಕಾಲದಲ್ಲಿಯೂ ಈ ನಾಡಿನ ರಾಜ–ಮಹಾರಾಜರು, ಕಾಮನ ಹಬ್ಬದ ಕಾಲದ ವಸಂತೋತ್ಸವಕ್ಕೆ ಒಂದು ರಾಜಕೀಯ ಮಹತ್ತ್ವವನ್ನು ಕೊಟ್ಟಿದ್ದರೆಂಬುದಕ್ಕೆ ಸಾಕಷ್ಟು ಐತಿಹಾಸಿಕ ಪ್ರಮಾಣಗಳಿವೆ. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ನಡೆದ ಒಂದು ಸಾಂಪ್ರದಾಯಿಕ ವಸಂತೋತ್ಸವವನ್ನು ಕಣ್ಣಾರೆ ಕಂಡು ಡಾಮಿಂಗೊ ಪಾಯೆಸ್ ಎಂಬ ಪೋರ್ಚುಗೀಸ್ ರಾಯಭಾರಿಯೊಬ್ಬನು, ತುಂಬ ಬೆರಗಿನ ನುಡಿಗಳಲ್ಲಿಯೇ ಅದನ್ನು ಬಣ್ಣಿಸಿ ಬರೆದಿದ್ದಾನೆ. ಸ್ವತಃ ಸಾಮ್ರಾಟನೂ, ಮಾಂಡಲಿಕ ಮನ್ನೆಯರೂ ಕೂಡಿಕೊಂಡು, ಸುಂದರಿಯರಾದ ವಿಳಾಸಿನಿಯರೊಂದಿಗೆ ಬಣ್ಣದ ನೀರಿನ ಎರಚಾಟವನ್ನು ಅಲ್ಲಿ ನಡೆಯಿಸುತ್ತಿದ್ದರಂತೆ. ರಾಜಧಾನಿಯಲ್ಲಿರುವ ಪ್ರಜಾಜನರೂ ಈ ಸಾಂಪ್ರದಾಯಿಕ ಉತ್ಸವದಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರಂತೆ. ವಿಜಯನಗರದಲ್ಲಿ ಸಾರ್ವಜನಿಕವಾಗಿ ನಡೆಯುವ ಉತ್ಸವದಿನಗಳಲ್ಲಿ ವಿಜಯದಶಮಿಯನ್ನು ಬಿಟ್ಟರೆ, ಕಾಮನ ಹುಣ್ಣಿಮೆಗೇ ಒಂದು ಮಹತ್ತ್ವದ ಸ್ಥಾನವಿದ್ದಿತು. ಇದೇ ನಮ್ಮ ನಾಡಿನ ಮಧುಮಹೋತ್ಸವ...ವಸಂತೋತ್ಸವ!

ಸಾವಿರವರುಷಗಳಿಗಿಂತ ಮೊದಲು ಬಾಳಿದ ಕವಿರಾಜಪಂಪನು, ಇದನ್ನೇ 'ಮಧುಮಹೋತ್ಸವ'ವೆಂದು ಉಲ್ಲೇಖಿಸಿದ್ದಾನೆ.

ಕನ್ನಡನಾಡಿನ ಅನೇಕ ಕವಿಗಳು ವಸಂತೋತ್ಸವವನ್ನು ವರ್ಣಿಸಿರುವರಾದರೂ ವರ್ಣಕ ಕವಿಯಾದ ಕನಕದಾಸರು ತಮ್ಮ 'ಮೋಹನತರಂಗಿಣಿ' ಎಂಬ ಕಾವ್ಯದಲ್ಲಿ ವರ್ಣಿಸಿರುವ ವಸಂತೋತ್ಸವವು, ಕನ್ನಡಿಗರ ವಸಂತೋತ್ಸವದ ವಾಸ್ತವ ಸ್ವರೂಪವನ್ನು ತೋರಿಸುವಂತಹದಾಗಿದೆ. ಅದು ಹೇಗೆಂಬುದನ್ನು ಮುಂದೆ ನೋಡಿ!

### ೨. ಪ್ರದರ್ಶನ

ಮೋಹನ ತರಂಗಿಣಿ ಕಾವ್ಯದಲ್ಲಿ ಮೊತ್ತಮೊದಲಿಗೆ ಬರುವ ಕಥಾ ಭಾಗವೆಂದರೆ, ಶಿವನ ಉರಿಗಣ್ಣಿಗೆ ಸಿಕ್ಕಿ ಬೆಂದು ಬೂದಿಯಾದ ಕಾಮನಿಗೆ ಸಂಬಂಧಿಸಿದುದು. ಬಳಿಕ ಅವನು ಶ್ರೀಕೃಷ್ಣನು ಪತ್ನಿಯಾದ ರುಕ್ಮಿಣಿದೇವಿಯ ಹೊಟ್ಟೆಯಿಂದ ಪ್ರದ್ಯುಮ್ನನಾಗಿ ಅವತರಿಸಿ ಬರುವುದೂ, ಚಿಕ್ಕ ಕೂಸಾಗಿರುವಾಗಲೇ ಅವನನ್ನು ಶಂಬರಾಸುರನು ಮಾಯೆಯಿಂದ ಎತ್ತಿಕೊಂಡು ಹೋದುದೂ ನಿರೂಪಿತವಾಗಿರುವುದು. ಶಂಬರಾಸುರನ ಸೆರೆಯಲ್ಲಿದ್ದ ರತಿದೇವಿಗೆ, ಕೂಸಾಗಿ ಇರುವ ಕಾಮನು ಕೈಗೆ ದೊರೆತುದೂ ಆಮೇಲೆ ಆಕೆ ಆ ಕೂಸನ್ನು ಲಾಲಿಸಿ–ಪಾಲಿಸಿ ಬೆಳೆಯಿಸಿದ ಸಂಗತಿಯೂ, ಬೆಳೆದ ಪ್ರದ್ಯುಮ್ನ ಶಂಬರಾಸುರನನ್ನು ಕೊಂದು, ಶಶಿದೇವಿಯೊಂದಿಗೆ ಮರಳಿ ದ್ವಾರಕೆಗೆ ಬಂದ ಸಂಗತಿಯೂ ರಸವತ್ತಾಗಿ ನಿರೂಪಿತವಾಗಿವೆ. ಮುಂದೆ ದ್ವಾರಕೆಯಲ್ಲಿ ರತಿ–ಮನ್ಮಥ (ಪ್ರದ್ಯುಮ್ನರ ವಿವಾಹ ವಿಜೃಂಭಣೆಯಿಂದ ಜರುಗುವುದು. ಹೊಸ ಮದುಮಕ್ಕಳು ಪ್ರೀತಿಗಾಗಿ, ಶ್ರೀಕೃಷ್ಣನ ಆಜ್ಞೆಯಂತೆ ಅಲ್ಲಿ ವಸಂತೋತ್ಸವವು ಜರುಗುವುದು. ಅದನ್ನು ನಮ್ಮ ಜಾನಪದ ಕವಿ ಕನಕದಾಸರು, ವಿವರ–ವಿವರವಾಗಿ, ಹೇಗೆ–ಹೇಗೆ ಬಣ್ಣಿಸಿ ಹಾಡಿರುವರೆಂಬುದನ್ನು ಅವಲೋಕಸಿಬೇಕು.

ಶ್ರೀಕೃಷ್ಣನ ಪರಿವಾರದವರೆಲ್ಲರೂ ಜಲಕೇಳಿಯಾಟವನ್ನಾಡಿದ ಮೇಲೆ, ರಾಜಸ್ತ್ರೀಯರೆಲ್ಲರೂ ತಂತಮ್ಮ ಅಭಿರುಚಿಗನುಗುಣವಾಗಿ ಸಿಂಗರಿಸಿಕೊಂಡು ಸಿದ್ಧರಾದರು ಆಗ:–

ಇಂದುವದನೆ ರುಕ್ಮಿಣಿ ಸತ್ಯಭಾಮೆಯರ್
    ಅಂದುಗೆ ಘಲಿರೆಂಬ ರವದಿ



ಬಂದು ವಸಂತಪೂಜೆಯ ಮಾಡಬೇಕೆನಲ್
    ಅಂದು ಸಾರ್ಚಿದರು ವಸ್ತುಗಳ ॥
ಅವರ ಪೂಜೆಯ ರೀತಿ ಹೇಗಿದ್ದಿತು?
    ತೋರ ತೆಂಗಾಯಿ ನಾನವಿಧ ಪಣ್ ಫಲಾ
ಹಾರವ ರಾಶಿ ಮಾಡಿದರು;
    ಓರಂತೆ ಗಂಧಕ್ಷತೆ ಪುಷ್ಪ ನಿಖಿಳೋಪ
ಚಾರವಸ್ತುಗಳನಿಕ್ಕಿದರು ॥
ತಾಳ–ದಂಡಿಗೆವಿಡಿದಮಳಗಾನೆಯರು ಹಿಂ–
    ದೋಳ ವಸಂತರಾಗದಲಿ–
ಆಳಾಪಗೈದುತ್ಸವದಿ ಪಾಡಿದರು ಗೋ–
    ಪಾಲಕೃಷ್ಣನ ಮುದ್ರಿಕೆಯ ॥

ಪೂಜೆ ಮುಗಿದು ಓಕುಳಿಯ ಎರಚಾಟ ಮೊದಲಾಯಿತು;

ಬಳಿಕ ರುಕ್ಮಿಣಿ–ಸತ್ಯಭಾಮೆಯರುಗಳೋತು
    ಪಳಿಕಿನ ಕಲ್ಲ ತಣ್ಗೊಳದಿ
ತುಳುಕುಕಡಗ ಕಂಕಳ ಝಣ–ಝಣಿಸಲು
    ತುಳುಕಿದರ್ ಗಂಧೋದಕವ ॥

ರುಕ್ಮಿಣಿ–ಸತ್ಯಭಾಮೆಯರ ಓಕುಳಿಯಾಟವನ್ನು ಪ್ರಾರಂಭಿಸಿದುದೇ ತಡ, ಕೂಡಲೇ ಅನೇಕ ಚಲುವೆಚೆನ್ನೆಯರು ಶ್ರೀಕೃಷ್ಣನ ಮೇಲೆ ಓಕುಳಿಯನ್ನು ಎರಚಲು ಮುಂದುವರೆದರು. ಅವರ ಈ ಓಕುಳಿಯಾಟವನ್ನು ಕವಿ ಹೀಗೆ ಉತ್ಪ್ರೇಕ್ಷಿಸಿ ಹೇಳಿದ್ದಾನೆ:

ನೆಟ್ಟಗೆ ವಿಧಿ–ಭವೇಂದ್ರಾದಿ ನಿರ್ಜರರನು
    ಕಟ್ಟಿ ಆಳುವ ಕೃಷ್ಣ ನಿನಗೆ
ಪಟ್ಟಾಭಿಷೇಕವಿದೆಂಬಂತೆ ತಂದಿಳಿ
    ಬಿಟ್ಟರೋಕುಳಿಯ ಮಸ್ತಕದೆ ॥

ಲೀಲಾವತಾರಿಯಾದ ಶ್ರೀಕೃಷ್ಣನಾಗ ಸುಮ್ಮನೆ ಕುಳಿತನೇನು? ರುಕ್ಮಿಣಿ–ಸತ್ಯಭಾಮೆಯರ ಕೈಯ ಹೊಂಗೊಡಗಳನ್ನು ಸೆಳೆದುಕೊಂಡು, ತನ್ನ ಮೇಲೆ ವಸಂತವನ್ನು ಎರೆಯಲು ಬಂದ ಚೆಲ್ವೆಯರ 'ಮುಡಿ–ಮೊಲೆಗಳು ತೊಯ್ವ ತೆರದಿ' ಅವರ ಮಸ್ತಕಗಳ ಮೇಲೆ ಸುರಿದನು. ಆಗ ಶ್ರೀಕೃಷ್ಣನ ಮಹಾತ್ಮ್ಯವನ್ನರಿತ ಚತುರ ನಾರಿಯರು:

ನೀರನು ಬಿಟ್ಟಿರಲಪ್ಪುದೆ ಮತ್ಸ್ಯಾವ –
ತಾರ ನೀನೆಂದು ನಾರಿಯರು
ರಾರಾಜಿಸುತ್ತಿಪ್ಪ ಕುಂಕುಮಜಲದೊಳು
ನಾರಾಯಣನನದ್ದಿದರು ॥

ಮತ್ಸ್ಯಾವತಾರಿಯೆಂದು ಕರೆದು ತನ್ನ ಮೇಲೆ ಓಕುಳಿಯನ್ನೆರಚಲು, ಶ್ರೀಕೃಷ್ಣನು ವಿನೋದದಿಂದ 'ನಾನು ಮತ್ಸ್ಯ, ಇವು ತಮಸಾಸುರ' ಎಂದು ನುಡಿದು, ಆ ಚತುರೆಯರ ಕರಿಗುರುಳುಗಳನ್ನು ಹಿಡಿದು, ಕ್ರೀಡಾ ಕುಳಿಗಳಲ್ಲಿ ನೂಕಿದನು.

ಮುಂದೆ ಈ ವಸಂತದಾಟವನ್ನು ಶೃಂಗಾರದ ರಸಕ್ಕೆ ಉದ್ದೀಪಕವೆನಿಸುವಂತೆ ಅನೇಕ ಬಣ್ಣನೆಯ ಮಾತುಗಳನ್ನು ಕವಿ ಹೇಳಿದ್ದಾನೆ: ಮಾದರಿಯಾಗಿ ಒಂದನ್ನು ನೋಡಬಹುದು. ಓಕುಳಿಯಾಟದಲ್ಲಿ ತೋಯಿಸಿಕೊಂಡು ನಿಂತ ವಿಲಾಸಿನಿಯರ ವರ್ಣನೆಯಿದು:

ಚೆಂಬಾವುಡೆಯುಡೆ ವಸನವು ತೊಯ್ದು ನಿ
ತಂಬವು ದೃಶ್ಯತೆ ಪಡೆಯೆ–
ಪೊಂಬಾಳೆದೊಡೆ ತೋಳು ನುಣ್ಮೊಲೆ ಮೆರೆಯ ಪೀ–
ತಾಂಬರ ನೋಡಿ ಹಿಗ್ಗಿದನು॥

ಬಳಿಕ ಶ್ರೀಕೃಷ್ಣನು, ಓಕುಳಿಯಾಟಕ್ಕೆ ಬಂದ ಚೆಲುವೆಯರು ಎರಡು ಪಕ್ಷಗಳನ್ನು ನಿರ್ಮಿಸಿಕೊಂಡು ಆಡಬೇಕೆಂದು ಹೇಳಲು 'ಆಗ ಹಂಚಿದರು ರುಕ್ಮಿಣಿ–ಸತ್ಯಭಾಮೆಯರ್ ಮೇಳಕೆ ತಕ್ಕತಕ್ಕವರ!' ಆಗ ಕೆಲವು ಜನ ಹೊನ್ನಂಡೆಗಾತಿಯರು (ವಸಂತವನ್ನು ಎರಚುವುದಕ್ಕೆ ಚಿನ್ನದ ಕೊಳವೆಗಳನ್ನು ಹಿಡಿದವರು) ರುಕ್ಮಿಣಿಯ ಬೆಂಗಡೆ ಸಾರಿದರು. ಇನ್ನು ಕೆಲವು ಜನ ಅತ್ಯಂತ ರೂಪ–ಯೌವನಗಾತಿಯರು ಹೊನ್ನಪುತ್ತಳಿಗಳು ಎಡೆಯಾಡುವಂತೆ ರತ್ನಕೆತ್ತಿದ ಜೀರ್ಕೊಳವೆಗಳನ್ನು ಕೈಕೊಂಡು ಸತ್ಯಭಾಮೆಯನ್ನು ಹಿಂಬಾಲಿಸಿದರು. ಬಳಿಕ ನಡೆದ ಓಕುಳಿಯಾಟದ ಬಣ್ಣನೆ ತುಂಬ ಇದೆ:

ಉಚ್ಚವದೊಲವೊಂದು ಮನದೊಳು ಮೊಳೊದೋರ್ವ
ಮಚ್ಚರವೊಂದು, ಕಾಂತನಿಗೆ–
ಹೆಚ್ಚಳವಡಿಸಲ್ಕೆ ಕೊಂಬು ಜೀರ್ಕೊಳವೆಯೊಳ್
ಎಚ್ಚಾಡುತಿರ್ದರೋಕುಳಿಯ॥



ಅಂಡೆಯ ನೆಗಪಿ ಕುಂಕುಮರಸದುಂಬಿ ಕೈ–
ಯಂಡೆಯ ಕೊಳವೆಯ ತೆಗೆದು–
ಮಂಡೆಯ ನಿಡುಜಡೆವಿಡಿದು ಹೊಯ್ದಾಡಿದರ್
ಖಂಡೇಂದುವಕ್ತ್ರಭಾಮೆಯರು ॥

ಆಗ ಭೇರಿ, ಮದ್ದಳೆ, ಶಂಖ, ಪಟಹ, ಡಿಂಡಿಮ, ಡೋಳು ಮೌರಿ, ತಂಬಟ ಮೊದಲಾದ ವಾದ್ಯಗಳು ಮೊಳಗಿ, ಎಲ್ಲರಲ್ಲಿಯೂ ಉತ್ಸಾಹವನ್ನು ತುಂಬುತಿದ್ದುವು. ಆ ಓಕುಳಿಯಾಟದ ಕಮ್ಮಲರ್‌ಗಂಧಿಯರೆಲ್ಲ ಸೇರಿ, ನಮ್ಮಲ್ಲಿ ನಾವೇ ಓಕುಳಿಯಾಡುವುದೇನು ಚೆಂದವೆಂದು, ಎರಡು ಪಕ್ಷದವರೂ ಶ್ರೀಕೃಷ್ಣರಾಯನನ್ನು ತುಡುಕಿದರು. ಕೃಷ್ಣನ ಜೊತೆಯ ಓಕುಳಿಯಾಟವನ್ನು ಕವಿ ವಿವರವಾಗಿ ಚತುರೋಕ್ತಿಗಳಿಂದ ಬಣ್ಣಿಸಿದ್ದಾನೆ.

ಇನ್ನೊಂದೆಡೆಯಲ್ಲಿ ಶ್ರೀಕೃಷ್ಣರಾಯನ 'ಅಗ್ರಜ–ಕನಿಷ್ಠರುಗಳು' ತಮ್ಮ ತಮ್ಮ ಗಜಗಮನೆಯರೊಂದಿಗೆ ಕ್ರೀಡಾಕುಲವ್ರಜ (ಓಕುಳಿಯಾಟದ ಕಳ)ದಲ್ಲಿ ಓಕುಳಿಯನ್ನು ಆಡಿದರು ಮತ್ತೊಂದೆಡೆ,

ಕ್ಷಿತಿಯೊಳಚ್ಚರಿವೆತ್ತ ತಣ್ಗೊಳತೊಳಗುಮಾ–
ಪತಿತಪದ್ವಂಸಿ ಮುಂಕೊಂಡು
ರತಿದೇವಿ ಸಹ ವಸಂತವನಾಡುತಿರ್ದನು
ಮತಿವಂತೆ ಕೆಳದಿ ಚಿತ್ತೈಸು !

ರತಿ–ಮನ್ಮಥರ ವಸಂತದಾಟದ ಬಣ್ಣನೆಯೂ ರಸವತ್ತಾಗಿ ಬೆಳೆದುನಿಂತಿದೆ. ವಸಂತೋತ್ಸವದಿಂದ ದಣಿದ ನಾರಿಯರೆಲ್ಲರೂ ಕ್ರೀಡಾರಂಗದ ನಾಲ್ದೆಸೆಯಲ್ಲಿಯೂ ನಿಲ್ಲಿಸಿದ್ದ ರಾಟಳದುಯ್ಯಾಲೆಗಳಲ್ಲಿ ಕುಳಿತು 'ಅಂಗಜ ಚಕ್ರದಿಗ್ವನಿತೆಯರೆಂಬಂತೆ' ಎಲ್ಲರೂ ಆಡಿ ಮನಸ್ಸನ್ನು ತಣಿಸಿಕೊಂಡರು.

ನೋಟವಿಷಯದಿಂದೊಳಗಾದ ಪುರುಷರ
ಕೋಟಲೆಗೊಳಿಸಿ ಸುತ್ತಿಸುವ–
ಆಟವಿದೆಂಬಂತೆ ತಿರುಗಿಸತಿರ್ದರು
ರಾಟಳದುಯ್ಯಲೆಗಳನು ॥

ಓಕಳಿಯಾಟ ಮುಗಿದ ಬಳಿಕ ಉಟ್ಟ ಬಟ್ಟೆಗಳು ತೊಯ್ದು, ತಣ್ಣಸದಿಂದ ನಡುಗುತ್ತಿದ್ದ ನಾರಿಯರೆಲ್ಲರೂ ಶ್ರೀಕೃಷ್ಣರಾಯನನ್ನು 'ವೇಢೆಯ ವಡೆದು' ನಿಂತರು. ಕೂಡಲೆ ಆತನು ಎಲ್ಲರಿಗೂ 'ಸದ್ವಸ್ತ್ರ, ಭೂಷಣ, ಗಂಧ, ಮಾಲ್ಯದ ಜೋಡಣೆಗೆಯ್ದನು'.

ಕನಕದಾಸರು ತಮ್ಮ ಕಾಲದಲ್ಲಿ ವಿಜಯನಗರದಲ್ಲಿ ಪ್ರಚಾರದಲ್ಲಿರುವ ಓಕುಳಿಯ ಆಟವನ್ನು ವಾಸ್ತವ ರೀತಿಯಲ್ಲಿಯೆ ಬಣ್ಣಿಸಿದಂತಿದೆ. ಡಾಮಿಂಗೋ ಪಾಯೆಸ್ ಇದನ್ನು ಬರೀ ಪ್ರೇಕ್ಷಕನಾಗಿ ಬಣ್ಣಿಸಿದ್ದಾನೆ. ರಸಿಕಕವಿಯಾದ ಕನಕದಾಸರು, ಕವಿಸಹಜವಾದ ಸವಿಮಾತುಗಳಿಂದ ಬಣ್ಣಿಸಿದ್ದಾರೆ....ಇಷ್ಟೆ!

ಜಗನ್ನಾಥವಿಜಯ, ಲೀಲಾವತಿ, ಮಲ್ಲಿನಾಥಪುರಾಣ ಮೊದಲಾದ ಚಂಪೂಕಾವ್ಯಗಳಲ್ಲಿಯೂ ವಸಂತೋತ್ಸವದ ವರ್ಣನೆಯು ಬಂದಿದೆ. ಆದರೆ ಆ ಬಣ್ಣನೆಯಲ್ಲಿ ವಾಸ್ತವತೆಗಿಂತ ರಂಜಕತೆಯ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟಂತಿದೆ.

ಇಂದು ಪ್ರಚಾರದಲ್ಲಿರುವ ಓಕುಳಿಯಾಟದಲ್ಲಿ ಹಿಂದಿನ ಕಾಲದ ಸೌಂದರ್ಯಬುದ್ಧಿ ಕಾಣುವುದಿಲ್ಲ. ಅನೇಕ ಸಂಪ್ರದಾಯಗಳಂತೆ ಇದನ್ನೂ ನಮ್ಮ ಜನ, ಇದುವರೆಗೂ ಹೇಗೋ ಹೇಗೋ ನಡೆಸಿಕೊಂಡು ಬಂದಿದ್ದಾರೆ ಇಷ್ಟೆ! ಕಾಮನ ಹಬ್ಬವನ್ನು 'ವಸಂತನ ಹಬ್ಬ' ಎಂದು ಹೇಳುವ ಪರಂಪರೆಯೂ ನಮ್ಮಲ್ಲಿದೆ. ಹಳೆಯ ಕಾಲದ ದುಮದುಮೆ ಪದಗಳಿಗೆ ಇದು ಪಲ್ಲವಿಯಾಗಿರುತ್ತಿತ್ತು.

'ದುಮ್‌ದುಮೆ–ವಸಂತನ ಹಬ್ಬ!'

* * *



## ೧೪. ಶಮೀಸಂಕೇತ

ಸಾಮಾನ್ಯವಾಗಿ ನಮ್ಮ ನಾಡಿನ ನಾಗರಿಕ ಸಮಾಜಕ್ಕೆಲ್ಲ 'ಶಮೀ' ಎಂದರೆ ಏನೆಂಬುದು ಗೊತ್ತಿದೆ. ಏಕೆಂದರೆ, ವಿಜಯದಶಮಿಯಂದು ಶಮೀಪೂಜೆ ಪ್ರತಿಯೊಂದು ಹಳ್ಳಿ–ಪಟ್ಟಣಗಳಲ್ಲಿಯೂ ನಡೆಯುವುದು. ಆಗ ವಿಧ್ಯುಕ್ತವಾಗಿ ಪೂಜಿಸಿಕೊಳ್ಳುವ ಶಮೀ ದೇವತೆಯ ಸಂಕೇತವಾಗಿ ಪೂಜಿಸಿಕೊಳ್ಳುವುದು ಇನ್ನಾವುದೂ ಅಲ್ಲ, ಕನ್ನಡಿಗರಾದ ನಾವು "ಬನ್ನಿ" ಎಂಬ ಹೆಸರಿನಿಂದ ಕರೆಯುವ ಗಿಡವೇ ಶಮೀ! ಬನ್ನಿ ಚಿಕ್ಕ–ಚಿಕ್ಕ ಕಂಟಿಯಾಗಿಯೂ ಇರುವುದು; ದೊಡ್ಡ–ದೊಡ್ಡ ಮರಗಳಾಗಿ ಬೆಳೆದುನಿಂತುದೂ ಕಾಣುವುದು. ಇದರ ಎಲೆಗಳು ಜಾಲಿಯ ಎಲೆಗಳಂತೆ ತೀರ ಚಿಕ್ಕವಾಗಿದ್ದು, ಎಸಳಿನೊಂದಿಗೆ ಪೋಣಿಸಿಕೊಂಡು, ಕುಸುರು–ಕುಸುರಾಗಿ ಇರುವುವು.

"ಕಲ್ಲ ಕಡಬನೆ ಮಾಡಿ ಮುಳ್ಳ ಶಾಂವಿಗಿ ಮಾಡಿ
ಬನ್ನಿಯ ಎಲೆಯ ಪತರೋಳಿ
ಬನ್ನಿಯ ಎಲಿಯ ಪತರೋಳಿ–ಪಾಂಡವರು
ಉಂಡು ಕಳದಾರ ವನವಾಸ"

ಎಂದಿರುವ ಜನಪದವಾಣಿಯಲ್ಲಿ ಬರುವ "ಬನ್ನಿಯ ಎಲೆಯ ಪತರೋಳಿ" ಎಂಬ ಮಾತು, ಪಾಂಡವರ ಕಷ್ಟದ ಬಾಳನ್ನು ಸೂಚಿಸುತ್ತ, ಬನ್ನಿಯ ಎಲೆಯ ಆಕಾರಸೂಕ್ಷ್ಮತೆಯನ್ನೂ ಪ್ರಕಟಿಸುವುದು.

ಬನ್ನಿಯಮರದ ಅಭಾವವಿದ್ದಲ್ಲಿ ವಿಜಯದಶಮಿಯಂದು ಪೂಜೆಗೆ, ಬನ್ನಿಯ ಬದಲು ಅರೆಯ ಗಿಡವನ್ನು ಬಳಸಬಹುದೆಂದು ಧರ್ಮವಿಧಿಯಿದೆ. ಸಂಸ್ಕೃತಭಾಷೆಯಲ್ಲಿ ಇದಕ್ಕೆ "ಅಶ್ಮಂತಕ" ಎಂದು ಹೆಸರಿದೆ. ಆರೆಯ ಎಲೆಗಳು ರೂಪಾಯಿ ನಾಣ್ಯದಗಲದ ದೀರ್ಘವರ್ತುಲಾಕಾರದ ಜೋಡೆಲೆಗಳಿಂದ ಕೂಡಿದುವಾಗಿರುವುವು. ಇದರ ಗಿಡಗಳು ಕಿರಿದೆತ್ತರವಾಗಿದ್ದು ಕಂಟಿಗಳಂತೆ ಕಾಣುವುವು. ಬನ್ನಿಯ ಗಿಡಗಳು ಇಲ್ಲದ ಪ್ರದೇಶದಲ್ಲಿ ಅರೆಯ ಗಿಡದೆಲೆಗಳು ದಸರೆಯ ಬನ್ನಿಯಾಗಿರುವುವು. ಇನ್ನು ಬನ್ನಿಯ ಗಿಡವು ಶಮೀದೇವತೆಯೆಂದು ಪೂಜೆಗೊಳ್ಳುವುದಕ್ಕೆ ವಿಶೇಷ ಕಾರಣವೇನಾದರೂ ಇರಬೇಕಲ್ಲವೆ?

ವೈದಿಕಕಾಲದ ಯಜ್ಞಸಂಸ್ಥೆಗೆ ಪ್ರಯೋಜನಕಾರಿಯಾದ ಅನೇಕ ವೃಕ್ಷ–ಲತೆಗಳು ನಮ್ಮಲ್ಲಿ ಪ್ರಾಚೀನಕಾಲದಿಂದಲೂ ದೇವ–ದೇವತೆಗಳ ಸಂಕೇತಗಳಿಂದ ಪೂಜೆಗೊಳ್ಳುತ್ತ ಬಂದಿವೆ. ಸೋಮಲತೆಯಂತೂ ಸರಿಯೇ ಸರಿ; ಅದರ ಮೇಲೆ ಅನೇಕ ವೈದಿಕಸೂಕ್ತಗಳೂ ರಚನೆಗೊಂಡಿವೆ. ಅದರಂತೆಯೆ ಅಶ್ವತ್ಥ, ನ್ಯಗ್ರೋಧ, ಉದುಂಬರ, ಪಲಾಶ, ಅಶ್ಮಂತಕ ಮೊದಲಾದ ವೃಕ್ಷಗಳೂ ದೇವಪ್ರತೀಕವಾಗಿ ಪೂಜೆಗೊಳ್ಳುತ್ತಬಂದಿದೆ. ಯಜ್ಞಸಂಸ್ಥೆಗೆ ಪ್ರಮುಖ ಪರಿಕರಣವಾಗಿರುವ ಅಗ್ನಿಗೆ ಅಧಿಷ್ಠಾನವೆಂದರೆ ಶಮೀವೃಕ್ಷವೆ! ಅಗ್ನಿಪ್ರಾಪ್ತಿಗಾಗಿ ಅನುಗೊಳಿಸುತ್ತಿದ್ದ ಅರಳಿ ಮಂಥಾನಗಳನ್ನು ಬನ್ನಿಯ ಮರದಿಂದಲೇ ನಿರ್ಮಿಸಲಾಗುತ್ತಿತ್ತು. ಈ ಅರಣಿ ಮಂಥಾನಗಳಿಗೆ ಯಜ್ಞಶಾಲೆಯಲ್ಲಿ ವಿಶಿಷ್ಟಮನ್ನಣೆಯ ಸ್ಥಾನವಿರುತ್ತಿದ್ದಿತು. ಇವು ಕಳೆದುಹೋದರೆ, ಯಜ್ಞದೀಕ್ಷಿತನು ಪಡೆದುಕೊಳ್ಳಬೇಕಾದ ಪ್ರಾಯಶ್ಚಿತ್ತಗಳು ಕಠಿನತರವಾಗಿದ್ದುವು. ಪಾಂಡವರು ಅರಣ್ಯವಾಸದಲ್ಲಿದ್ದಾಗ, ಮದದಾನೆಯೊಂದು ಋಷಿಗಳ ಆಶ್ರಮದಲ್ಲಿ ಗೊಂದಲಹಾಕಿ, ಅವರ ಅರಣಿಯನ್ನು ಕದ್ದೊಯ್ದಾಗ, ಧರ್ಮರಾಜನು ಅನೇಕ ತೊಂದರೆಗಳನ್ನು ಅನುಭವಿಸಿ, ಋಷಿಗಳ ಅರಣಿಯನ್ನು ಮರಳಿ ತಂದುಕೊಟ್ಟು ಅವರ ಅನುಗ್ರಹಕ್ಕೆ ಪಾತ್ರನಾದನೆಂಬ ಕಥೆಯು ಮಹಾಭಾರತದ ಅರಣ್ಯಪರ್ವದಲ್ಲಿ ಬರುತ್ತದೆ. ಅರಣಿಯು ಬನ್ನಿಯ ಕಟ್ಟಿಗೆಯದಾಗಿರುವುದರಿಂದ, ಬನ್ನಿಯ ಮರವೂ ಅವರಿಂದ ದೇವಮಾನ್ಯತೆಯನ್ನು ಪಡೆದಿದ್ದೀತು. ಆರ್ಯರು ಶಮೀವೃಕ್ಷವನ್ನು "ಅಗ್ನಿಗರ್ಭಾ" ಎಂದು ಸಂಬೋಧಿಸಿರುತ್ತಾರೆ. ಯಜ್ಞಾಗ್ನಿಯ ತಾಯಿಯೇ ಶಮಿಯಾಗಿರುವಾಗ, ವೈದಿಕರಿಂದ ಶಮೀವೃಕ್ಷಕ್ಕೇ ಎಷ್ಟೊಂದು ಭಕ್ತಿ ಶ್ರದ್ಧೆಗಳು ಸಂದಿರಬೇಡ?

ಮುಂದೆ ಶಾಕ್ತೇಯಾಗಮಗಳ ಕಾಲದಲ್ಲಿ, ಅಗ್ನಿಗರ್ಭೆಯಾದ ಈ ಶಮಿಯು ಶಕ್ತಿದೇವತೆಯು ಒಂದು ವಿಶಿಷ್ಟರೂಪದಲ್ಲಿ ಆವಿರ್ಭವಿಸಿ ಕುಲದೇವತೆಯಾಗಿದ್ದಳೆಂಬುದಕ್ಕೆ, ಭವಿಷ್ಯೋತ್ತರಪುರಾಣದಲ್ಲಿ ಬರುವ ಶ್ರೀವೆಂಕಟೇಶನ ಕಥೆಯು ಪ್ರತ್ಯಕ್ಷ ಸಾಕ್ಷಿಯಾಗಿದೆ. ಪದ್ಮಾವತಿಯೊಂದಿಗೆ ಶ್ರೀವೆಂಕಟೇಶನ ಮದುವೆ ನಿಶ್ಚಯವಾದಾಗ, ಮಂಗಲಕಾರ್ಯದ ಪ್ರಾರಂಭದಲ್ಲಿ, ಕುಲದೇವತೆಯ ಪೂಜೆಮಾಡಬೇಕಾದ ಸಂದರ್ಭದಲ್ಲಿ ಶ್ರೀವೆಂಕಟೇಶನು ವೃಕ್ಷರೂಪದಿಂದಿರುವ ಶಮೀದೇವಿಯು ತನ್ನ ಕುಲದೇವತೆಯೆಂದು ಹೇಳಿ, ಆಕೆಯನ್ನೇ ವಿಧಿಪೂರ್ವಕವಾಗಿ ಪೂಜಿಸುತ್ತಾನೆ.

ವೈದಿಕಕಾಲದಲ್ಲಿ ಯಜ್ಞಮೂಲಕ ಪ್ರತಿಷ್ಠೆಯನ್ನು ಪಡೆದ ಶಮೀದೇವಿಯು, ಪುರಾಣಕಾಲದಲ್ಲಿ ಕ್ಷತ್ರಿಯರ ಬಲದಾತೃದೇವತೆಯಾಗಿ ಪರಿಣಾಮಗೊಂಡಿದ್ದಾಳೆ.



ಅಗ್ನಿಗರ್ಭೆಯಾದ ಶಮಿಯು ಶಾಕ್ತೇಯರಿಂದ 'ಅಪರಾಜಿತಾ ಶಮೀ' ದೇವಿಯಾಗಿ ಪೂಜೆಗೊಳ್ಳುತ್ತ, ಪುರಾಣಕಾಲದ ಕ್ಷತ್ರಿಯರಿಂದ ಶತ್ರುವಿನಾಶನ ಶಕ್ತಿದೇವಿಯಾಗಿ ಪೂಜೆಪಡೆಯುತ್ತ ಬಂದಿದ್ದಾಳೆ. ಮಹಾಭಾರತ, ರಾಮಾಯಣಗಳಲ್ಲಿ ಶಮೀವೃಕ್ಷ–ಶಮೀದೇವತೆಗಳ ಉಲ್ಲೇಖವಿದೆ. ಪಾಂಡವರು ಅಜ್ಞಾತವಾಸದ ಪ್ರಾರಂಭದಲ್ಲಿ ತಮ್ಮ ಆಯುಧಗಳನ್ನೆಲ್ಲ, ವಿರಾಟನಗರದ ಹೊರವಲಯದಲ್ಲಿರುವ ಶಮೀವೃಕ್ಷದ ಮೇಲೆ ರಹಸ್ಯವಾಗಿ ಇರಿಸುತ್ತಾರೆ. ಮುಂದೆ ಉತ್ತರಗೋಗ್ರಹಣ ಯುದ್ಧದ ಕಾಲದಲ್ಲಿ ಅರ್ಜುನನು ಅಲ್ಲಿ ಬಂದು, ಶಮೀದೇವಿಗೆ ತನ್ನ ಪೂಜೆ–ಪ್ರಾರ್ಥನೆಗಳನ್ನು ಸಲ್ಲಿಸಿ, ಅಡಗಿಸಿ ಇರಿಸಿದ್ದ ಆಯುಧಗಳನ್ನು ಪಡೆದುಕೊಂಡು, ಯುದ್ಧದಲ್ಲಿ ಜಯಶೀಲನಾಗುತ್ತಾನೆ. ಇದರಂತೆಯೆ ಶ್ರೀರಾಮಚಂದ್ರನು ರಾವಣನ ಕೂಡ ಯುದ್ಧಕ್ಕೆ ಹೊರಡುವ ಮೊದಲು, ಶಮೀದೇವತೆಯನ್ನು ಆರಾಧಿಸಿದ ವಿಷಯ ರಾಮಾಯಣದಲ್ಲಿ ಬರುತ್ತದೆ. ಪರಂಪರೆಯಿಂದ ಬಂದು ಈಗಲೂ ಸರ್ವತ್ರ ಪ್ರಚಾರದಲ್ಲಿರುವ

"ಶಮೀ ಶಮಯತೇ ಪಾಪಂ ಶಮೀ ಶತ್ರುವಿನಾಶಿನೀ
ಧರಿತ್ರ್ಯರ್ಜುನ ಬಾಣಾನಾಂ ರಾಮಸ್ಯ ಪ್ರಿಯವಾದಿನೀ"

ಎಂಬ ಶಮೀಸ್ತುತಿಯಲ್ಲಿ, ಶಮಿಗೂ ಮಹಾಭಾರತ ರಾಮಾಯಣಗಳಿಗೂ ಇರುವ ಸಮೀಪ ಸಂಬಂಧದ ಮಾತುಗಳಿವೆ.

ಸ್ಕಾಂದಪುರಾಣ, ಬ್ರಹ್ಮಾಂಡಪುರಾಣ, ಭವಿಷ್ಯೋತ್ತರಪುರಾಣ ಇವುಗಳಲ್ಲಿಯೂ ಶಮೀದೇವತೆಯ ಪೂಜಾಮಹತ್ತ್ವವನ್ನು ವಿವರಿಸಲಾಗಿದೆ. ನಿರ್ಣಯಸಿಂಧು, ಧರ್ಮಸಿಂಧು ಮೊದಲಾದ ಸ್ಮೃತಿನಿಯಮ ವಿವರಣಾತ್ಮಕ ಗ್ರಂಥಗಳಲ್ಲಿಯೂ ಶಮೀಪೂಜಾ ವಿಧಾನಗಳನ್ನು ಹೇಳಲಾಗಿದೆ. ಅವುಗಳನ್ನೆಲ್ಲ ನೋಡಿದರೆ, ಯುದ್ಧವಿಜಯವನ್ನು ಬಯಸುವ ಕ್ಷತ್ರಿಯರಾಜರು, ವಿಜಯದಶಮಿ ಎಂದರೆ ಅಶ್ವಿನ ಶುದ್ಧ ದಶಮಿಯ ವಿಜಯಮುಹೂರ್ತದಲ್ಲಿ ಸೀಮೋಲ್ಲಂಘವನ್ನು ಮಾಡಿ, ದಿಗ್ವಿಜಯಪ್ರಯಾಣಕ್ಕೆ ಮೊದಲು ಶಮೀದೇವತೆಯನ್ನು ಪೂಜಿಸಲೇಬೇಕೆಂಬ ಮಾತು ಸಿದ್ಧವಾಗುತ್ತದೆ. ಆಗ ರಾಜರು ಶಮೀದೇವಿಯಲ್ಲಿ ಕೋರುವುದೇನು?

"ಅಮಂಗಲಾನಾಂ ಶಮನೀಂ ಶಮನೀಂ ದುಷ್ಕೃತಸ್ಯಚ ।
ದುಃಖಪ್ರಣಾಶಿನೀಂ ಧನ್ಯಾಂ ಪ್ರಪದ್ಯೇಹಂ ಶಮೀಂ ಶುಭಾಂ"

ಎಂದು ಪ್ರಾರ್ಥಿಸಿ, ಆಮೇಲೆ

ಕರಿಷ್ಯಮಾಣ ಯಾತ್ರಾಯಾಂ ಯಥಾ ಕಾಲಂ ಸುಖಂ ಮಯಾ
ತತ್ರ ನಿರ್ವಿಘ್ನಕರ್ತ್ರೀತ್ವಂ ಭವ ಶ್ರೀರಾಮಪೂಜಿತೇ ॥

ಎಂಬುದಾಗಿ "ದಿಗ್ವಿಜಯ ಕಾಲದಲ್ಲಿ ಬಂದಡಸುವ ಎಡರುಗಳನ್ನೆಲ್ಲ ನೀನೇ ಪರಿಹರಿಸಬೇಕು" ಎಂದು ಶಮಿಯನ್ನು ಬೇಡಿಕೊಳ್ಳುವುದು, ಪ್ರಾಚೀನಕಾಲದಿಂದಲೂ ನಡೆದುಬಂದ ಪದ್ಧತಿಯಾಗಿದೆ. ಇತಿಹಾಸ ಕಾಲದ ನಮ್ಮ ರಾಜ-ಮಹಾರಾಜರು ಈ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿದ್ದರೆಂಬುದಕ್ಕೆ, ವಿಜಯನಗರದ ಕನ್ನಡರಾಯರು ನಡೆಯಿಸುತ್ತಿದ್ದ ಸೀಮೋಲ್ಲಂಗನ ಸಮಾರಂಭದ ಬಗೆಗಿನ ವಿದೇಶೀಯ ಯಾತ್ರಿಕರ ವರದಿಗಳು ಲಿಖಿತ ಪ್ರಮಾಣಗಳಾಗಿದ್ದರೆ, ಮೈಸೂರ ದೊರೆಗಳು ಇದುವರೆಗೂ ನಡೆಸಿಕೊಂಡು ಬಂದಿರುವ ಜಂಬೂಸವಾರಿ, ಶಮೀಪೂಜೆಗಳು ಪ್ರತ್ಯಕ್ಷ ಪ್ರಮಾಣಗಳಾಗಿವೆ. ಇಷ್ಟೇ ಅಲ್ಲದೆ, ಕನ್ನಡನಾಡಿನ ಹಳ್ಳಿ-ಪಟ್ಟಣಗಳಲ್ಲೆಲ್ಲ ನಡೆಯುವ ಬನ್ನಿಮುಡಿಯಲು ಸೀಮೆಯನ್ನು ದಾಟಿಹೋಗುವ ಸಾರ್ವಜನಿಕ ಸಮಾರಂಭಗಳು, ಈ ಕೃತಿಯ ರಾಜೋಚಿತ ಶಮೀಪೂಜೆಯ ಪ್ರತಿರೂಪಗಳೇ ಎನಿಸುತ್ತಿವೆ. ವಿಜಯದಶಮಿಯ ಶಮೀಪೂಜೆಯ ಸಂದರ್ಭದಲ್ಲಿ ಬನ್ನಿಯ ಮರವು 'ಅಪರಾಜಿತಾಶಮೀಶಕ್ತಿ'ಯ ಸಂಕೇತವಾಗಿಯೇ ಪೂಜೆಗೊಳ್ಳುತ್ತದೆ.

ವಿಜಯದಶಮಿಯ ಬನ್ನಿಮುಡಿಯುವ ಈ ಸಂಪ್ರದಾಯದಲ್ಲಿ ಶಕ್ತಿಯ ಉಪಾಸನೆಯಲ್ಲದೆ ಇನ್ನೊಂದು ಸಂಕೇತವೂ ಒಳಗೊಂಡಿದೆ. ಅದೇನೆಂದರೆ, ಶಮಿಯ ಪೂಜೆಯಾದ ಮೇಲೆ, ಎಲ್ಲರೂ ಬನ್ನಿಯನ್ನು ಮುಡಿದು, ಒಬ್ಬರಿಗೊಬ್ಬರು ಬನ್ನಿಯ ಸೊಪ್ಪನ್ನ ಕೊಟ್ಟು 'ಬಂಗಾರ ಕೊಟ್ಟುಕೊಂಡು ಬಂಗಾರದ್ಹಾಂಗ ಇರೋಣ' ಎಂದು ಒಳ್ಳೆಯ ಹಾರೈಕೆಯ ಮಾತುಗಳನ್ನಾಡುತ್ತಾರೆ. ಕೊಡುವುದು ಬನ್ನಿಯೆಲೆ, ನುಡಿಯುವದು ಬಂಗಾರವೆಂದು! ಅದೇಕೆ ಹೀಗೆ? ಬನ್ನಿ ಬಂಗಾರದ ಬೆಲೆಯನ್ನು ಏಕೆ ಪಡೆಯಿತು?

ಏಕೆ ಪಡೆಯಿತೆಂದರೆ, ಇದಕ್ಕೂ ಪುರಾಣದ ಕಥೆಯೊಂದರ ಹಿನ್ನೆಲೆಯಿದೆ:

ಪ್ರಾಚೀನಕಾಲದಲ್ಲಿ ವರತಂತು ಎಂಬ ಋಷಿಯ ಗುರುಕುಲದಲ್ಲಿ, ಉದ್ದಾಲಕನೆಂಬ ಬ್ರಾಹ್ಮಣ ತರುಣನು ವಿದ್ಯಾರ್ಥಿಯಾಗಿದ್ದ; ಶ್ರದ್ಧೆಯಿಂದ ಗುರುಸೇವೆಯನ್ನು ಮಾಡಿ, ತನಗಿಷ್ಟವಾದ ಜ್ಞಾನವನ್ನು ಗುರುವಿನಿಂದ ಪಡೆದು ವಿದ್ಯಾಪ್ರವೀಣನಾದ. ಮರಳಿ ಮನೆಗೆ ಹೊರಡುವ ಸಮಯದಲ್ಲಿ ಆ ಶಿಷ್ಯನು, 'ಗುರುದಕ್ಷಿಣೆಯನ್ನೇನು ಸಲ್ಲಿಸಲಿ?' ಎಂದು ಕೇಳಿದ. ಗುರುಗಳು ದಕ್ಷಿಣೆ ಬೇಡವೆಂದು ಬೇಕಾದಷ್ಟು ಹೇಳಿದರೂ, ಶಿಷ್ಯನು ಕೊಡುವೆನೆಂದು ಹಟವನ್ನೇ ಹಿಡಿದ. ಆಗ ಗುರುಗಳು, 'ಕೊಡಬೇಕೆಂದು ನಿನಗೆ ಇಷ್ಟೊಂದು ಅಪೇಕ್ಷೆಯಿದ್ದರೆ, ಒಂದೇ ಎಡೆಯಿಂದ ತಂದ ಹದಿನಾಲ್ಕು ಕೋಟಿ ಸುವರ್ಣಮುದ್ರಿಕೆಗಳನ್ನು ಕೊಡು!"



ಎಂದು ಹೇಳಿದರು. ಅಲ್ಪಾವಧಿಯಲ್ಲಿಯೆ ತಂದುಕೊಡುವೆನೆಂದು ಮಾತುಕೊಟ್ಟು ಶಿಷ್ಯನು ಗುರುಗಳನ್ನು ಬೀಳ್ಕೊಂಡು, ಆಶ್ರಮದಿಂದ ಹೊರಟ. ಹದಿನಾಲ್ಕುಕೋಟಿ ಸುವರ್ಣಗಳೆಂದರೆ ಸ್ವಲ್ಪ ಮೊತ್ತವೆ? ಆ ದರಿದ್ರ ಬ್ರಾಹ್ಮಣತರುಣನಿಗೆ ಅಷ್ಟೊಂದು ಧನವು ಎಲ್ಲಿ ದೊರೆಯಬೇಕು? ದೇಶ-ದೇಶಗಳನ್ನು ತಿರುಗಿದ, ಅನೇಕ ರಾಜ-ಮಹಾರಾಜರನ್ನು ಕೇಳಿದ. ಎಲ್ಲೆಲ್ಲಿಯೂ ಸಿಕ್ಕದಿರಲು, ಕೊನೆಗೆ ಸೂರ್ಯವಂಶದ ಸಾರ್ವಭೌಮನಾದ ರಘುರಾಜನಲ್ಲಿಗೆ ಬಂದು ತನ್ನ ಬೇಡಿಕೆಯನ್ನು ತಿಳುಹಿದ. ತ್ಯಾಗವೀರನಾದ ರಘುರಾಜ, ಆಗ ತಾನೇ ವಿಶ್ವಜಿತುಯಾಗವನ್ನು ಮುಗಿಸಿ, ತೀರ ಬರಿಗೈಯವನಾಗಿದ್ದ. ಬೊಕ್ಕಸದಲ್ಲಿದ್ದ ಅಗಣಿತ ಸುವರ್ಣ ನಾಣ್ಯಗಳೆಲ್ಲವೂ ಯಜ್ಞಕಾಲದ ದಾನ-ಧರ್ಮಗಳಿಗೆ ವೆಚ್ಚವಾಗಿದ್ದುವು. ಮನೆಗೆ ಬಂದಿರುವ ಸತ್ಪಾತ್ರಯಾಚಕನನ್ನು ಬರಿಗೈಯಿಂದ ಕಳುಸುವುದೆಂದರೆ, ರಘುರಾಜನಿಗೆ ಅಸಹನೀಯ ಸಂಕಟವಾಗಿ ಪರಿಣಮಿಸಿತು.

ಏನು ಮಾಡಬೇಕೆಂದು ರಘುರಾಜ ಯೋಚಿಸಿದ. ಆಗ ದೇವೇಂದ್ರನಿಂದ ತನಗೆ ಅನೇಕ ವರ್ಷಗಳಿಂದಲೂ ಸಂದಾಯವಾಗದೆ ಹೋದ ಕಾಣಿಕೆಯ ಧನದ ಜ್ಞಾಪಕವಾಯಿತು. ಇಂದ್ರಲೋಕದ ಮೇಲೆ ದಾಳಿಯಿಕ್ಕಿ, ಆ ಹಣವನ್ನು ತರಬೇಕೆಂದು ರಘುರಾಜ ಹವಣಿಸತೊಡಗಿದ. ತ್ರಿಲೋಕ ಸಂಚಾರಿಗಳಾದ ನಾರದರಿಂದ ಈ ಸಂಗತಿಯು ದೇವೇಂದ್ರನಿಗೆ ತಿಳಿಯಿತು. ರಘುರಾಜನ ಶಕ್ತಿ-ಸತ್ತ್ವಗಳನ್ನರಿತ ದೇವೇಂದ್ರ, ಕೂಡಲೇ ಕುಬೇರನನ್ನು ಕರೆಯಿಸಿ, ರಾಜನಿಗೆ ಸಲ್ಲಬೇಕಾದ ಕಾಣಿಕೆಯನ್ನು ಈಗಲೇ ಸಲ್ಲಿಸಬೇಕೆಂದು ಆಜ್ಞೆಮಾಡಲು, ಧನಪತಿಯಾದ ಕುಬೇರನು ರಘುರಾಜನ ಉದ್ಯಾನದಲ್ಲಿ ಸುವರ್ಣಮುದ್ರಿಕೆಗಳ ಮಳೆಯನ್ನು ಸುರಿಸಿದ. ರಘುರಾಜನು ಉದ್ದಾಲಕನಿಗೆ ಆ ಮುದ್ರಿಕೆಗಳನ್ನೆಲ್ಲ ತೆಗೆದುಕೊಂಡು ಹೋಗಿ, ಗುರುದಕ್ಷಿಣೆ ಸಲ್ಲಿಸಬೇಕೆಂದು ಬಿನ್ನವಿಸಿದ. ಆಗ ಉದ್ದಾಲಕನು ಅಲ್ಲಿಗೆ ಹೋಗಿ, ತನಗೆ ಬೇಕಿದ್ದ ಹದಿನಾಲ್ಕು ಕೋಟಿ ಮುದ್ರಿಕೆಗಳನ್ನು ಮಾತ್ರ ದಾನವಾಗಿ ಸ್ವೀಕರಿಸಿ, ಮಿಕ್ಕುವನ್ನೆಲ್ಲ ಅಲ್ಲಿಯೆ ಬಿಟ್ಟುಹೋದ. ಅಂದು ವಿಜಯದಶಮಿಯ ಶುಭದಿನ.

ಗುರುದಕ್ಷಿಣೆಯನ್ನು ಸಲ್ಲಿಸಿ ಉದ್ದಾಲಕನು ಗುರುವಿನ ಅನುಗ್ರಹಕ್ಕೆ ಪಾತ್ರನಾದ. ಉದ್ಯಾನದಲ್ಲಿ ಬಿದ್ದ ಮಿಕ್ಕ ಸುವರ್ಣ ಮುದ್ರೆಗಳನ್ನು ರಘುರಾಜನು ತನ್ನವೆಂದು ಸ್ವೀಕರಿಸಲಿಲ್ಲ. ದಾನವೆಂದು ಕೊಟ್ಟುದನ್ನು ತಾನು ಪಡೆಯುವುದೆಂದರೆ ಅಧರ್ಮವೆಂದು ಅವನು ಯೋಚಿದ. ಎಂತಲೇ ಆ ಸುವರ್ಣವನ್ನೆಲ್ಲ ನನ್ನ ಪ್ರಜೆಗಳೆಲ್ಲರೂ ತೆಗೆದುಕೊಂಡು ಹೋಗಬಹುದೆಂದು ಡಂಗುರ ಸಾರಿಸಿದ.

ಪ್ರಜಾಜನರೆಲ್ಲರೂ, ಆ ಉದ್ಯಾನದ ತುಂಬ ಬೆಳೆದುನಿಂತ ಶಮೀವೃಕ್ಷಗಳ ಮೇಲೆ ಕೆಳಗೆ ಬಿದ್ದ ಸುವರ್ಣ ಮುದ್ರಿಕೆಗಳನ್ನು ಹೊರಲಾರದೆ ಹೊತ್ತು ಮನೆಗೆ ತಂದರು; ಆಪ್ತೇಷ್ಟರು, ಸ್ನೇಹಿತರುಗಳಿಗೂ ಕೊಟ್ಟು ಪರಸ್ಪರರಲ್ಲಿ ಪ್ರೀತಿ–ಸ್ನೇಹಗಳನ್ನು ಹೆಚ್ಚಿಸಿಕೊಂಡರು.

ಇದೇ ಆ ಪುರಾಣದ ಕಥೆ. ಬನ್ನಿ ಬಂಗಾರದ ಸಂಕೇತವಾಗಿ ರೂಢವಾಗಿರುವುದು ಈ ಕಥೆಯ ಆಧಾರದ ಮೇಲೆಯೇ! ರಘುರಾಜನ ಕಾಲದಲ್ಲಿ ಬನ್ನಿಯ ಮರಗಳು ಜನರಿಗೆಲ್ಲ ನಿಜವಾದ ಸುವರ್ಣವನ್ನು ಇತ್ತಿರಬಹುದು, ಆದರೆ ಆ ರಘುರಾಜನ ದಿವ್ಯಚಾರಿತ್ರ್ಯದ ಆದರ್ಶವನ್ನು ನಮ್ಮ ಮನಸ್ಸಿನೆದುರು ಇರಿಸುತ್ತ ಬಂದಿರುವ ವಿಜಯದಶಮಿಯ ಬನ್ನಿಯು, ಬಂಗಾರದ ಬೆಲೆಯನ್ನೂ ಮೀರಿಸುವಂತಹದು. ರಘುರಾಜನಂತಹ ಶೂರರೂ, ತ್ಯಾಗಿಗಳೂ ನಮ್ಮ ನಾಡಿನಲ್ಲಿ ಪುನರುದಯಿಸಿದಾಗಲೇ ಅಲ್ಲವೇ ನಮ್ಮ ನಾಡಿಗೆ ಬಂಗಾರದ ಬಾಳು! ವಿಜಯದಶಮಿಯ ಹಬ್ಬ ನಮಗೆ ಪ್ರತಿವರುಷವೂ ಶಮೀದೇವತೆಯ ಸಂಸ್ಮರಣೆಯ ದಿನವಾಗಿದೆ. ದಸರೆಯ ದಿನ ನಾವೆಲ್ಲರೂ ಶಮಿಯನ್ನು ಕೊಟ್ಟು ಕೊಂಡು ಪರಸ್ಪರರ ಸ್ನೇಹ–ಸೌಹಾರ್ದವನ್ನು ಗಳಿಸಬೇಕಲ್ಲವೆ? ಇದಕ್ಕಾಗಿಯೇ ಅಂದು ಶಮಿಯ ಮಹತ್ತ್ವವನ್ನು ಸಾರಲಾಗಿದೆ.

* * *



# ನಮ್ಮ ನಾಡಹಬ್ಬ

ನಮ್ಮ ನಾಡಿನಲ್ಲಿ ಹಬ್ಬಗಳಿಗೆ ಕೊರತೆಯಿಲ್ಲ. ವರ್ಷದ ಪ್ರತಿತಿಂಗಳಲ್ಲಿಯೂ ಹಬ್ಬಗಳು ಒಂದರ ಮುಂದೆ ಒಂದು ಬಂದುಹೋಗುತ್ತಲೇ ಇರುವುವು; ಆದರೆ ಅವುಗಳಲ್ಲಿಯ ಹೆಚ್ಚಿನ ಹಬ್ಬಗಳು ಏಕದೇಶಿಯವಾಗಿರುವುವು ಎಂದರೆ ನಮ್ಮ ಸಮಾಜದಲ್ಲಿಯ ಒಂದೊಂದು ವಿಶಿಷ್ಟ ಪಂಗಡಕ್ಕೆ ಸಂಬಂಧಿಸಿದುವಾಗಿರುವುವು; ಇನ್ನು ಕೆಲವು ವ್ರತೋಪಾಸನೆಯ ಹಬ್ಬಗಳು ಒಂದೊಂದು ಕುಟುಂಬಕ್ಕೆ ಒಂದೊಂದು ವ್ಯಕ್ತಿಗೆ ಸಂಬಂಧಿಸಿದುವಾಗಿರುವುವು. ಇಂತಹ ಹಬ್ಬಗಳು ನಾಡಿನ ಎಲ್ಲ ಜನರ ಸಂಘಟನೆ–ಸಹಕಾರಗಳಿಗೆ ಪ್ರಯೋಜಕವಾಗಲಾರವು, ನಾಡಿನ ಸರ್ವತೋಮುಖವಾದ ಅಭಿವೃದ್ಧಿ ಅಭ್ಯುದಯಗಳಿಗೂ ಸಹಾಯಕವೆನಿಸವು. ತಮ್ಮ ತಮ್ಮ ಇಷ್ಟದೇವತೆ ಕುಲದೇವತೆಗಳ ಅನುಗ್ರಹ ಸಂಪಾದನೆಗಾಗಿ ಸಾಂಪ್ರದಾಯಿಕರು ಮಾಡುವ ಭಾವನಾತ್ಮಕ ಉತ್ಸವದಿನಗಳವು. ಈ ಬಗೆಯ ಹಬ್ಬಗಳ ಆಚರಣೆಯೆಂದರೆ, ನಮ್ಮ ನಾಡಿನ ವಿಶಾಲಸಂಸ್ಕೃತಿಯ ಸಂಪೂರ್ಣ ಸ್ವರೂಪವನ್ನು ಪರಿಚಯ ಮಾಡಿಕೊಡಲಾರವು; ಅದರ ಒಂದೊಂದು ಅಂಗವನ್ನು ಮಾತ್ರ ಸ್ಥೂಲರೂಪದಲ್ಲಿ ಪ್ರಕಟಿಸುವುವು ಇಷ್ಟೆ!

ಯಾವುದೇ ಒಂದು ನಾಡು ಅಭ್ಯುದಯದ ಶಿಖರಕ್ಕೇರಿ, ಜನತೆಯಲ್ಲಿ ಶಾಂತಿಪುಷ್ಟಿ–ತುಷ್ಟಿಗಳು ನೆಲೆಗೊಂಡು ನಿಲ್ಲಬೇಕಾದರೆ, ಅಲ್ಲಿ ನಾಲ್ಕು ಶಕ್ತಿಗಳ ಜಾಗೃತ ಉಪಾಸನೆ ಎಡೆಬಿಡದೆ ನಡೆಯುತ್ತಿರಬೇಕು. ಮೊದಲನೆಯದು ವಿದ್ಯಾಶಕ್ತಿ ಎರಡನೆಯದು ಜೀವ ನಿಯಮನಶಕ್ತಿ ಮೂರನೆಯದು ಸಂಪತ್‌ಶಕ್ತಿ, ನಾಲ್ಕನೆಯದು ಕಾರ್ಯಶಕ್ತಿ. ಈ ಶಕ್ತಿಗಳನ್ನು ಉಪಾಸಿಸುವ ಹಬ್ಬವೇ ನಾಡಹಬ್ಬವೆನಿಸುವುದು. ಈ ಹಬ್ಬದಲ್ಲಿ ಪ್ರಜಾಕ್ಷೇಮಪೋಷಕವಾದ ವ್ಯಕ್ತಿ–ವ್ಯಕ್ತಿಗಳ ಗುಣಗಳಿಗೆ ಪೂಜೆ ಮನ್ನಣೆಗಳು ಸಲ್ಲಬೇಕು. ಸರ್ವಜನಕಲ್ಯಾಣಕ್ಕೆ ವ್ಯಕ್ತಿಗಳ ವಿಧಾಯಕ ಗುಣಗಳೇ ಪ್ರಮುಖ ಕಾರಣವೆಂಬುದನ್ನು ಮರೆತು ನಡೆಯಲಾಗದು.

ರಾಜಕೀಯ ದೃಷ್ಟಿಯಿಂದ ಅವಲೋಕಿಸಿದರೆ, ನಮ್ಮ ನಾಡಿನ ಹಿಂದಿನ ಪರಿಸ್ಥಿತಿಗಿಂತಲೂ ಇಂದಿನ ಪರಿಸ್ಥಿತಿ ತೀರ ಬೇರೆಯಾಗಿದೆಯೆಂಬುದು ಎಲ್ಲರಿಗೂ ಕಂಡುಬರುವ ಸಂಗತಿ. ಐತಿಹಾಸಿಕ ಕಾಲದಲ್ಲಿ ನಮ್ಮ ನಾಡಿನಲ್ಲಿ ರಾಜಪ್ರಭುತ್ವವಿದ್ದಿತು;

ಇಂದು ರಾಜರಿಗೆ ನೆಲೆಯೇ ಇಲ್ಲ; ಪ್ರಜಾಪ್ರಭುತ್ವ ತಲೆಯೆತ್ತಿನಿಂತಿದೆ. ಪ್ರಭುತ್ವ ಯಾವುದೇ ಬಗೆಯದಾಗಿರಲಿ; ಅದರ ಸ್ಥಿರಜೀವಿತಕ್ಕೂ ಪ್ರಜಾಕಲ್ಯಾಣದ ಆದರ್ಶಕ್ಕೂ ಈ ಮೊದಲು ಹೇಳಿದ ನಾಲ್ಕು ಶಕ್ತಿಗಳ ಪೂರ್ಣಾನುಗ್ರಹವು ಅತ್ಯಗತ್ಯ. ಎಂತಲೇ ನಾಡಹಬ್ಬವನ್ನು ನಮ್ಮ ಐತಿಹಾಸಿಕ ಕಾಲದ ರಾಜ ಮಹಾರಾಜರು ಆಚರಿಸುತ್ತ ಬಂದರು; ಇಂದಿನ ನಮ್ಮ ಪ್ರಜಾಪ್ರಭುತ್ವದ ಆಡಳಿತಗಳೂ ಅವಶ್ಯವಾಗಿ ಆಚರಿಸಬೇಕಾಗಿದೆ.

ಕನ್ನಡನಾಡಿನ ರಾಜ ಮಹಾರಾಜರು ನಾಡಹಬ್ಬದ ಆಚರಣೆಗೆಂದು, ಶರನ್ನವರಾತ್ರಿಯನ್ನು ಎಂದರೆ, ಆಶ್ವಿನಶುದ್ಧ ಪ್ರತಿಪದೆಯಿಂದ ನವಮಿಯವರೆಗಿನ ತಿಥಿಗಳನ್ನೂ ವಿಜಯದಶಮಿಯನ್ನೂ ಆಯ್ದುಕೊಂಡಿದ್ದರು. ಈ ಹತ್ತು ದಿನ ರಾಜ್ಯದಲ್ಲಿಯ ಎಲ್ಲ ಬಗೆಯ ಜ್ಞಾನ–ಕ್ರಿಯಾ–ಸಂಸ್ಕೃತಿಗಳ ಪ್ರದರ್ಶನ, ಪೂಜೆ–ಪೋಷಣೆಗಳ ಕಾರ್ಯಕಲಾಪಗಳು ನಡೆಯುತ್ತಿದ್ದುವು. ರಾಜ್ಯದ ಯಾವ ಮೂಲೆಯಲ್ಲಿಯೇ ಇರಲಿ; ಅಲ್ಲಿಯ ಗುಣಶಾಲಿ ವ್ಯಕ್ತಿಗಳಿಗೆ ದೊರೆಯ ಕರೆಯು ತಲುಪುತಿದ್ದಿತು. ಅವರ ಗುಣಕ್ಕೆ ತಕ್ಕ ಮನ್ನಣೆ ದೊರೆಯಿಂದ ಸಲ್ಲತ್ತಿದ್ದಿತು. ಇದರಿಂದ ಪ್ರಭು ಮತ್ತು ಪ್ರಜಾಜನರಲ್ಲಿ ಪರಸ್ಪರ ಪ್ರೀತಿ ಆತ್ಮೀಯತೆಗಳು ಬೆಳೆದ, ಜನತೆಯಲ್ಲಿ ಸಂಘಟನಾಭಾವ ಬೆಳೆಯುತ್ತಿದ್ದಿತು.

ನಾಡಜನರನ್ನು ಹಬ್ಬದ ತುಂಬ ಕಾರಣದಿಂದ ಒಂದೆಡೆ ಒಟ್ಟುಗೂಡಿಸಲು, ಈ ಶರನ್ನವರಾತ್ರಿಯ ಕಾಲವು ತುಂಬ ಯೋಗ್ಯವೆನಿಸುತ್ತಿತ್ತು. ಕೃಷಿಪ್ರಧಾನವಾದ ನಮ್ಮ ನಾಡಿನಲ್ಲಿ, ಆಗ ಬಹುಜನರು ಕೃಷಿಜೀವಿಗಳೇ ಆಗಿದ್ದರು. ಅಶ್ವಿನಮಾನಸಲ್ಲಿ ಕೃಷಿಕರಿಗೆ ಹೊಲಗೆಲಸಹಳಿ ತೀರ ಕಡಮೆ. ಬಿತ್ತಿದ ಬೀಜಗಳು ಹುಲುವಾಗಿ ಬೆಳೆದುನಿಂತು, ಹೊಸಕಾಲದ ಅನ್ನವನ್ನು ನಿಸರ್ಗದ ಸಹಕಾರವನ್ನು ಪಡೆದು ನಿರ್ಮಿಸುತ್ತಿರುವುವು. ಮಲೆನಾಡಿನ ಬೆಳೆಗಳೇ ಆಗಲೀ, ಬೆಳುವಲದ ಬೆಳೆಗಳೇ ಆಗಲೀ, ಫಲಗಳನ್ನು ಹೊರಹೊಮ್ಮಿಸಿ, ಕೃಷಿಕರನ್ನು ಉತ್ಸಾಹಶಾಲಿಗಳನ್ನಾಗಿ ಮಾಡಿರುವುದು. ಮಲೆನಾಡಿನ ಬೆಳೆಗಳೇ ಆಗಲೀ, ಬೆಳುವಲದ ಬೆಳೆಗಳೇ ಆಗಲೀ, ಫಲಗಳನ್ನು ಹೊರಹಮ್ಮಿಸಿ, ಕೃಷಿಕರನ್ನು ಉತ್ಸಾಹಶಾಲಿಗಳನ್ನಾಗಿ ಮಾಡಿರುವುವು. ಮುಂಗಾರುಮಳೆಯ ಕೆಸರು–ಕೊಚ್ಚೆ ಕಣ್ಮರೆಯಾಗಿರುವುದು ಬಾನುಬಿಳಿಯದಾಗಿದ್ದರೂ ಬಾನೊಡೆಯನ ಬಿಸುಗದಿರುಗಳು ಉಗ್ರವಾಗಿರುವುದಿಲ್ಲ. ಕೆರೆತೊರೆಗಳ ನೀರು, ವರ್ಷಾಕಾಲದ ಕದಡನ್ನು ಕಳೆದುಕೊಂಡು ತಿಳಿಯಾಗಿರುವುದು. ಪ್ರಯಾಣಕ್ಕೆ ಅನುಕೂಲವಾದ ಕಾಲ ! ಜನರೆಲ್ಲರಿಗೂ ರಾಜಧಾನಿಯ ವೈಭವವನ್ನೂ ನಾಡಹಬ್ಬವಾಗಿ ಪರಿಣಮಿಸುತ್ತಿದ್ದಿತು. ಈ ಹಬ್ಬ



ಅಧಿರಾಜರ ರಾಜಧಾನಿಯಲ್ಲಿ ನಡೆಯುತ್ತಿದ್ದಂತೆಯೇ, ರಾಜಪ್ರತಿನಿಧಿಗಳು, ಮಾಂಡಲಿಕ ಮನ್ನೆಯರು ಇರುವ ಪಟ್ಟಣ ಹಳ್ಳಿಗಳಲ್ಲಿಯೂ ನಡೆಯುತ್ತಿದ್ದಿತು. ಈ ಪ್ರಾದೇಶಿಕ ನಾಡಹಬ್ಬಗಳೂ ನಾಡಿನ ಐಕ್ಯ–ಸಂಘಟನೆಗಳಿಗೆ ಪೋಷಕವಾಗಿರುತ್ತಿದ್ದುವು.

ಕನ್ನಡನಾಡು ತನ್ನ ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಂಡು ಪರದಾಸ್ಯದ ನೊಗವನ್ನು ಹೊತ್ತುನಿಂತಾಗ, ಈ ನಾಡಿನ ಬಹುಭಾಗವು ಒಡೆದು ತುಂಡು–ತುಂಡುಗಳಾಗಿಹೋಗಿತ್ತು. ಈ ಬೇರೆ ಬೇರೆ ತುಂಡುಗಳು ಬೇರೆ ಬೇರೆ ಆಡಳಿತಗಳಿಗೆ ಸೇರಿ, ಕನ್ನಡಿಗರಲ್ಲಿಯ ಪರಸ್ಪರ ಹಿತಸಂಬಂಧಗಳೂ ಭಾವೈಕ್ಯವೂ ಇಲ್ಲದಂತಾದುವು. ಇವರು ತಮ್ಮ ಭಾಷೆ–ಸಾಹಿತ್ಯ–ಸಂಸ್ಕೃತಿಗಳಿಂದಲೂ ದೂರವಾಗುವ ಸಂದರ್ಭ ಒಂದೊದಗಿತ್ತು. ಯಾವ ಆಡಳಿತಗಳ ಕಿವಿಗೂ ಕನ್ನಡಿಗರ ಕಷ್ಟ–ನಷ್ಟಗಳ ಮೊರೆಯೇ ಕೇಳುತ್ತಿರಲಿಲ್ಲ. ಎಲ್ಲೆಲ್ಲಿಯೂ ಪರಭಾಷೆ ಪರಕೀಯಸಂಸ್ಕೃತಿಗಳ ಒತ್ತಾಯಕ್ಕೆ ಒಳಗಾಗಿ, ಕನ್ನಡಿಗರು ತಮ್ಮ ವಾಸ್ತವ ಸ್ವರೂಪವನ್ನೇ ಮರೆತುಬಿಟ್ಟಿದ್ದರು. ಇಂತಹ ಕಾಲದಲ್ಲಿ ನಾಡಿಗರನ್ನು ಸಂಘಟಿಸುವಂತಹ ನಾಡಹಬ್ಬದ ಆಚರಣೆಗೆ ಅವಕಾಶವೆಲ್ಲಿ? ಮೈಸೂರಿನ ಒಡೆಯರು ನಾಡಹಬ್ಬದ ಪರಂಪರೆಯನ್ನು ವಿಜೃಂಭಣೆಯಿಂದ ಜರಗಿಸುತ್ತಿದ್ಧರಾದರೂ, ಸ್ವಸ್ವರೂಪವನ್ನೇ ಮರೆತಿದ್ದ ಮಿಕ್ಕ ಕಡೆಯ ಕನ್ನಡಿಗರನ್ನು ಅದು ತನ್ನತ್ತ ಆಕರ್ಷಿಸಲು ಸಮರ್ಥವಾಗಲಿಲ್ಲ. ಒಂದು ಕಾಲದಲ್ಲಿ ಕನ್ನಡಿಗರ ಹೃದಯಗಳನ್ನೆಲ್ಲ ಕೇಂದ್ರೀಕರಿಸಿ ತನ್ನತ್ತ ಸೆಳೆದ ತುಂಗಭದ್ರೆ, ಕಾಲದ ದುರ್ವಿಪಾಕದ ಪರಿಣಾಮವಾಗಿ ಮೈಸೂರುಪ್ರದೇಶದಿಂದ ಮಿಕ್ಕ ಕನ್ನಡಪ್ರದೇಶವನ್ನು ವಿಭಾಗಿಸಿ, ಒಬ್ಬರ ಗುರುತು ಇನ್ನೊಬ್ಬರಿಗೆ ಸಿಕ್ಕದಂತೆ ಮಡಿದ್ದಳು. ಕನ್ನಡನಾಡು ಕಣ್ಮರೆಯಾಗಿಹೋಗುವಂತಹ ಆಪತ್ತಿನಲ್ಲಿ ಸಿಕ್ಕಿ ಒದ್ದಾಡುತ್ತಿದ್ದಿತು. ಸುಂದರವಾದ ಲಿಪಿ, ಅರಮನೆ–ಗುರುಮನೆಗಳಲ್ಲಿ ಬೆಳೆದು ಸರ್ವಾಂಗ ಸಂಪನ್ನತೆಯನ್ನು ಪಡೆದ ಭಾಷೆ, ರಸಜೀವನ ಧರ್ಮಜೀವನಗಳನ್ನು ತುಂಬಿಕೊಂಡ ಪ್ರಭಾವಶಾಲಿಯಾದ ಸಾಹಿತ್ಯರಾಶಿ, ವೀರ–ವೈಭವ ಬೋಧಕವಾದ ಪ್ರಚಂಡ ಇತಿಹಾಸ ಇಷ್ಟೆಲ್ಲ ತಮ್ಮವಾಗಿದ್ದೂ, ಇದರ ಅರಿಕೆ ಒಬ್ಬರಿಗೂ ಇರಲಿಲ್ಲ. ಎಲ್ಲರೂ ಕಣ್ಣಿದ್ದು ಕುರುಡರು; ಕಿವಿಯಿದ್ದು ಬುದ್ಧಿಯಿದ್ದು ಬರಡರು.

ಭಾರತದಲ್ಲಿ ಎದ್ದ ಪರಾಧೀನತೆಯ ವಿರೋಧಕ ಚಳವಳಿಯ ಕಾಹು, ಭಾರತೀಯರಲ್ಲಿ ಸ್ವಾಭಿಮಾನದ ಜಾಗ್ರುತಿಯನ್ನು ಹುಟ್ಟಿಸಲುತೊಡಗಿತು. ಈ ಚಳವಳಿಯ ಶಕ್ತಿಯನ್ನು ಕುಗ್ಗಿಸಬೇಕೆಂದು ಬ್ರಿಟಿಷರು ಹೂಡಿದ ವಂಗಭಂಗದ

ಹೂಟವು. ಬಂಗಾಲಿಗಳಲ್ಲಿ ಸ್ವದೇಶ-ಸ್ವಭಾಷೆಗಳ ಆದರಾಭಿಮಾನಗಳನ್ನು ಇಮ್ಮಡಿಗೊಳಿಸಿತು. ಈ ಅಭಿಮಾನ ಬಂಗಾಲಿಗಳೆಲ್ಲರ ಹೃದಯವನ್ನು ಬೆಸೆದು ಒಂದುಗೂಡಿಸಿ, ವಿಧಾಯಕ ಶಕ್ತಿಯೊಂದನ್ನು ನಿರ್ಮಿಸಿತು. ಈ ಶಕ್ತಿಯ ಬಲದಿಂದ ಬಂಗಾಲಿಗಳು ಒಡೆದ ನಾಡನ್ನು ಒಮದುಗೂಡಿಸಿದರು. ಈ ಜಾಗೃತಿಯು ಅವರಲ್ಲಿ ಸ್ವೇತಿಹಾಸ, ಸ್ವಸಂಸ್ಕೃತಿ, ದೇಶೀಯ ಸಾಹಿತ್ಯಗಳ ಬಗೆಗೆ ಅನ್ಯಾದೃಶವಾದ ಆತ್ಮೀಯಭಾವವನ್ನು ಹುಟ್ಟಿಸಿತು. ಅಲ್ಲಿಯ ಪಂಡಿತ-ಪಾಮರರೆಲ್ಲರೂ ಇದನ್ನು ಪುರಸ್ಕರಿಸಿ, ವಂಗಪ್ರದೇಶದಲ್ಲಿ ಒಂದು ಹೊಸ ಚೈತನ್ಯವನ್ನೇ ತುಂಬಿದರು. ಅವರು ತಮ್ಮ ನಾಡಿನಲ್ಲಿ ಮೊದಲಿನಿಂದಲೂ ಧ್ಯೇಯವಿಲ್ಲದೆ ಆಚರಿಸುತ್ತಬಂದಿದ್ದ ದುರ್ಗಾಪೂಜಾ ಪರ್ವದಿನಗಳನ್ನು ನಾಡಹಬ್ಬವನ್ನಾಗಿ ಆಚರಿಸತೊಡಗಿದರು. ಬಂಗಾಲಿಗಳು ಎಲ್ಲಿಯೇ ಇರಲಿ; ಇದ್ದಲ್ಲಿಯೆ ಅವರು ಈ ದುರ್ಗಾಪೂಜಾ ಪರ್ವವನ್ನು ಅಭಿಮಾನದಿಂದ ಆಚರಿಸುವರು.

ಬಂಗಾಲದಂತೆಯೆ ಸ್ವಾತಂತ್ರ್ಯ ಜಾಗೃತಿಯನ್ನು ಮೊದಲು ಪಡೆದ ಇನ್ನೊಂದು ಪ್ರದೇಶವೆಂದರೆ ಮಹಾರಾಷ್ಟ್ರ. ಇದಕ್ಕೆ ಮುಖ್ಯ ಕಾರಣ ಪುರಷರಾರೆಂದರೆ, ದಿ. ಲೋಕಮಾನ್ಯ ತಿಲಕರು. ಭಾರತದಲ್ಲಿ ಎಲ್ಲ ಪ್ರದೇಶಗಳಿಗಿಂತಲೂ ತನ್ನ ಸ್ವಾತಂತ್ರ್ಯವನ್ನು ಕೊನೆಗೆ ಕಳೆದುಕೊಂಡುದೆಂದರೆ ಮಹಾರಾಷ್ಟ್ರ. ಮಹಾರಾಷ್ಟ್ರದ ಸ್ವಾತಂತ್ರ್ಯ ಜೀವನದ ಸ್ಮೃತಿ ಕಾಲದಲ್ಲಿಯೆ ಹುಟ್ಟಿಬೆಳೆದ ಲೋಕಮಾನ್ಯರು, ಭಾರತದ ಸ್ವಾತಂತ್ರ್ಯಕ್ಕಾಗಿ ಕೊನೆಯುವರೆಗೆ ಹೋರಾಡಿದರಾದರೂ, ಅದರೊಂದಿಗೆ ಮಹಾರಾಷ್ಟ್ರೀಯರಲ್ಲಿ ಸಂಘಟನಾಶಕ್ತಿಯನ್ನು ಹುಟ್ಟಿಸುವ ಪ್ರಾಂತೀಯ ಕಾರ್ಯವನ್ನೂ ಸಾಧಿಸಿದರು. ಇದಕ್ಕಾಗಿ ಹಾಕಿಕೊಟ್ಟ ಕಾರ್ಯಕ್ರಮಗಳಲ್ಲಿ ಗಣೇಶೋತ್ಸವದ ಆಚರಣೆ, ಶಿವಾಜಿ ಜಯಂತಿಯ ಆಚರಣೆ ಇವು ಪ್ರಮುಖವಾದವುಗಳು. ಭಾದ್ರಪದ ಶುದ್ಧ ಚತುರ್ಥಿಯಿಂದ ಮೊದಲಾಗಿ ಚತುರ್ದಶಿಯವರೆಗೆ ಹನ್ನೊಂದು ದಿನ ನಡೆಯುವ ಗಣೇಶೋತ್ಸವವು, ಮಹಾರಾಷ್ಟ್ರೀಯರ ನಾಡಹಬ್ಬವಾಗಿ ಪರಿಣಮಿಸಿತು. ಈ ಕಾಲದಲ್ಲಿ ನಡೆಯುವ ಸಾಂಸ್ಕೃತಿ ಕಾರ್ಯಕ್ರಮ ಕಲಾಪ್ರದರ್ಶನಗಳು, ಇದಕ್ಕೆ ನಾಡಹಬ್ಬದ ಸಂಪೂರ್ಣ ಸ್ವರೂಪವನ್ನು ತಂದುಕೊಟ್ಟು, ಮಹಾರಾಷ್ಟ್ರದಲ್ಲಿ ಐಕ್ಯ-ಹೃದಯ ಸಾಮರಸ್ಯಗಳನ್ನೂ ದೇಶ-ಭಾಷಾಭಿಮಾನಗಳನ್ನೂ ವಿಶಿಷ್ಟರೀತಿಯಿಂದ ಬೆಳೆಸಲು ಕಾರಣವಾಗಿವೆ.

ಕನ್ನಡತನವನ್ನು ಸಂಪೂರ್ಣವಾಗಿ ಮರೆತು, ಮಹಾರಾಷ್ಟ್ರದಲ್ಲಿಯ ರಾಜಕೀಯ ಜಾಗೃತಿಯ ಪ್ರಭಾವಲಯದಲ್ಲಿ ಸಿಕ್ಕಿಕೊಂಡ ಉತ್ತರ



ಕರ್ನಾಟಕದಲ್ಲಿಯೂ ಗಣೇಶೋತ್ಸವ, ಶಿವಾಜಿ ಜಯಂತಿಗಳನ್ನು ಅಲ್ಲಲ್ಲಿ ಆಚರಿಸಲಾಗುತ್ತಿದ್ದಿತು; ಆದರೆ ಅವು ಪಟ್ಟಣಗಳ ಎಲ್ಲೆಯನ್ನು ದಾಟಿ ಹಳ್ಳಿಗಳವರೆಗೆ ಹೋಗಿರಲಿಲ್ಲ. ಹಳ್ಳಿಯ ಜನರಿಗೆ ಈ ಉತ್ಸವಗಳ ಬಗೆಗೆ ಆತ್ಮೀಯತೆ ಉಂಟಾಗಲೇ ಇಲ್ಲ. ಭಾಷೆ-ಸಂಸ್ಕೃತಿಗಳ ದೃಷ್ಟಿಯಿಂದ ಪಟ್ಟಣಿಗರಲ್ಲಿ ಕೆಲವು ರಾಜಕೀಯ ಚಳವಳಿಯ ಒಲವಿನವರು ಕುಲಗೆಟ್ಟಿದ್ದರಾದರೂ, ಮಿಕ್ಕ ಜನರು ತಮ್ಮ ಮೂಲಪರಂಪರೆಯನ್ನು ಕಾಯ್ದುಕೊಂಡು ಬಂದವರೇ ಇದ್ದರು. ಆದರೆ ಪರಿಸ್ಥಿತಿಯು ಅವರನ್ನು ಕಂಗೆಡಿಸಿ ಬಿಟ್ಟಿದ್ದಿತು. ಕಾಲೋಚಿತವಾಗಿ ತಾವು ನಡೆಯಬೇಕಾದ ದಾರಿ ಯಾವುದೆಂಬುದನ್ನು ಅವರು ಅರಿಯದವರಾಗಿದ್ದರು; ಆ ದಾರಿಯನ್ನು ತೋರಿಸುವವರು ಕೂಡ ಯಾರೂ ಇರಲಿಲ್ಲ.

ಭಿನ್ನಭಾಷೆಯವರೆಂಬ ಕಾರಣದಿಂದಲೇ ಕನ್ನಡಿಗರಿಗೆ ಬೇರೆ ಬೇರೆ ಆಡಳಿತ ಕ್ಷೇತ್ರಗಳಲ್ಲಿ ಬಲವಾದ ಏಟು ಬಳತೊಡಗಿದುವು. ಆಡಳಿತಗಳಿಂದ ದೊರೆಯಬೇಕಾದ ಸಾಮಾನ್ಯ ಅನುಕೂಲತೆಗಳೂ ಕನ್ನಡಿಗರಿಗೆ ದೊರೆಯದಾದುವು. ವಿದ್ಯಾಭ್ಯಾಸದ ಸುಲಭ ಅನುಕೂಲತೆಯು ಕನ್ನಡಿಗರಿಗೆ ಬಹುಕಾಲ ದೊರೆಯಲಿಲ್ಲ. ತುಂಗಭದ್ರೆಯ ಉತ್ತರದ ಕನ್ನಡದ ವಿಶಾಲ ಪ್ರದೇಶದಲ್ಲಿ, ಕೈಬೆರಳಿನಿಂದ ಎಣಿಸಲು ಬರುವಷ್ಟು ಹೈಸ್ಕೂಲುಗಳು! ಕಾಲೇಜು ಸೊನ್ನೆಯೇ ಸೊನ್ನೆ. ಕಲಿಯಬೇಕೆಂಬ ಅಪೇಕ್ಷೆಯಿದ್ದ ಸಿರಿವಂತರ ಮಕ್ಕಳು. ಪುಣೆ-ಮುಂಬಯಿಗಳಿಗೆ ಹೋಗಬೇಕು. ಅವರು ಉಚ್ಚ ವಿದ್ಯಾಭ್ಯಾಸದ ಪ್ರಶಸ್ತಿಪತ್ರವನ್ನು ಪಡೆಯುವ ಅವಧಿಯಲ್ಲಿ ತಾವು ಕನ್ನಡಿಗರೆಂಬುದನ್ನು ಮರೆತೇ ಮನೆಗೆ ಮರಳುತ್ತಿದ್ದರು; ಆಗ ಅವರು ಪರಭಾಷೆ, ಪರಪ್ರಾಂತ್ಯಗಳ ಹೊಗಳುಭಟ್ಟರಾಗಿ ತಮ್ಮದನ್ನೆಲ್ಲ ತೆಗಳುವ 'ದೀನ ನಾನುತನ'ವನ್ನು ತುಂಬಿಕೊಂಡಿರುತ್ತಿದ್ದರು. ಇಂತಹವರಿಂದ ನಾಡಿನಲ್ಲಿ ಸ್ವಾಭಿಮಾನ ಸ್ವಸಂಸ್ಕೃತಿಗಳ ಪ್ರೀತಿಗಳು ಹೇಗೆ ಹುಟ್ಟಿಬೆಳೆಯಬೇಕು? ಎಂತಲೇ ಮಹಾರಾಷ್ಟ್ರವು ಸುಸಂಘಟಿತವಾಗಿ ರೂಪುಗೊಂಡು ೫೦ ವರ್ಷಗಳು ಕಳೆದರೂ, ಕನ್ನಡಿಗರಲ್ಲಿ ತಮ್ಮತನವು ತಲೆದೋರಲಿಲ್ಲ; ತಾವು ಅನ್ಯರಿಂದ ಪಡಬೇಕಾಗುತ್ತಿದ್ದ ಅಭಿಮಾನಭಂಗಕ್ಕೆ ಕಾರಣವೇನೆಂಬುದೂ ಗೊತ್ತಾಗಲಿಲ್ಲ.

ರಾಕ್ಷಸಗುರು ಶುಕ್ರಾಚಾರ್ಯರಿಂದಲೇ ಸಂಜೀವಿನೀ ವಿದ್ಯೆಯನ್ನು ಪಡೆದ ಸುರಗುರುಪುತ್ರ ಕಚದೇವನಂತಹ ಕಾರಣಪುರುಷರು, ಈ ಭಾಗದ ಕನ್ನಡಪ್ರದೇಶದಲ್ಲಿಯೂ ಒಬ್ಬೊಬ್ಬರಾಗಿ ಕಾಣಿಸಿಕೊಳ್ಳತೊಡಗಿದರು. ಅವರ ಪ್ರಯತ್ನದ ಫಲವಾಗಿ, ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಮಕ್ಕಳು ತಮ್ಮ ತಾಯ್ನುಡಿಯನ್ನು ಕಲಿಯುವ ಯೋಗ ಒದಗಿಬಂದಿತು. ಧಾರವಾಡದಲ್ಲಿ ಕರ್ನಾಟಕ

ವಿದ್ಯಾವರ್ಧಕ ಸಂಘ ಅವತರಿಸಿ, ಕನ್ನಡ ಸಾಹಿತ್ಯಾಭ್ಯಾಸಕ್ಕೆ ಪ್ರೇರಣೆಯನ್ನು ಕೊಡತೊಡಗಿತು. ಕನ್ನಡ ಭಾಷೆಯಲ್ಲಿ ಪುಸ್ತಕ ಬರೆಯುವವರೂ ಅಲ್ಲಲ್ಲಿ ಮುಂದೆಬರಲು ತೊಡಗಿದರು. ಕರ್ನಾಟಕ ವಿದ್ಯಾವರ್ಧಕ ಸಂಘವೇ ಅಖಿಲ ಕರ್ನಾಟಕದ ಏಕೀಕರಣದ ಕನಸನ್ನು ಕಂಡಿತು. ಅದನ್ನು ನನಸನ್ನಾಗಿ ಮಾಡಿತೋರಿಸಬೇಕೆಂಬ ವಿಚಾರ, ಕೆಲವು ಜನ ಕನ್ನಡನಾಯಕರ ಕರುಳನ್ನು ಕಚ್ಚಿತು. ಆ ಕಚ್ಚಿಕೆಯ ಪರಿಣಾಮಫಲವಾಗಿಯೇ ದಿವಂಗತ ಆಲೂರ ವೆಂಕಟರಾಯರ 'ಕರ್ನಾಟಕದ ಗತವೈಭವ' ಎಂಬ ಗ್ರಂಥವು ಬೆಳಕಿಗೆ ಬಂದು, ಕನ್ನಡಿಗರ ಸ್ವಾಭಿಮಾನ, ಸಂಸ್ಕೃತಿ ಪ್ರಜ್ಞೆಗಳನ್ನು ಬಡಿದೆಬ್ಬಿಸಿತು.

ಕನ್ನಡಿಗರ ಈ ಸಾಂಸ್ಕೃತಿಕ ಪ್ರಜ್ಞೆ, ಗಣೇಶೋತ್ಸವ–ಶಿವಾಜಿಜಯಂತಿಗಳಲ್ಲಿ ಕನ್ನಡತನವನ್ನು ಕಾಣಲಿಲ್ಲ. ಇನ್ನಾರದೋ ಇತಿಹಾಸ ಭಾಗವನ್ನು ತಂದು, ನಮ್ಮ ಸಾಂಸ್ಕೃತಿಕ ಜೀವನಕ್ಕೆ ತೇಪೆ ಹಚ್ಚಿದಂತೆ ಕಾಣಲುತೊಡಗಿತು. ತಮ್ಮ ಇತಿಹಾಸ ಸಂಸ್ಕೃತಿಗಳ ನೆನಹನ್ನು ತಂದುಕೊಡುವಂತಹ ಕನ್ನಡಿಗರ ನಾಡಹಬ್ಬವಾವುದೆಂಬುದನ್ನು ಅವರು ಶೋಧಿಸತೊಡಗಿದರು. ಆಗ ಮೈಸೂರು ಒಡೆಯರು ಪ್ರತಿವರ್ಷ ನೆರವೇರಿಸುತ್ತಲಿದ್ದ ನವರಾತ್ರಿಯ ಹಬ್ಬದ ಪ್ರತ್ಯಕ್ಷಚಿತ್ರ ಅವರ ಕಣ್ಣೆದುರು ಕಂಡಿತು. ಅದರ ಮೂಲವನ್ನು ಕಂಡುಹಿಡಿಯಲು ಹವಣಿಸತೊಡಗಿದಾಗ, ಕನ್ನಡಿಗರ ದಿವ್ಯ ಇತಿಹಾಸ, ವಿಜಯನಗರದ ರಾಜರು ನಡೆಯಿಸುತ್ತಿದ್ದ ನವರಾತ್ರಿಯ ಮಹೋತ್ಸವದ ರೋಮಹರ್ಷಕ ಚಿತ್ರವನ್ನು ಮನದ ಮೇಲೆ ಮೂಡಿಸಿತು. ಕನ್ನಡಸಾಹಿತ್ಯದ ವಿವರಣಾತ್ಮಕ ಅಭ್ಯಾಸವೂ ಕನ್ನಡಿಗರ ನಾಡಹಬ್ಬವಾವುದೆಂಬುದನ್ನು ಮನವರಿಕೆ ಮಾಡಿಕೊಟ್ಟಿತು. ಕವಿರಾಜ ರತ್ನಾಕರವರ್ಣಿ, ತನ್ನ ಕಾವ್ಯನಾಯಕನಾದ ಭರತಚಕ್ರವರ್ತಿಯು ಕೃತಯುಗದ ಪುರಾಣಪುರುಷನಾದರೂ ಅವನಿಂದ ಕನ್ನಡರಾಯರಂತೆಯೆ ನವರಾತ್ರಿಯ ಹಬ್ಬದ ರಾಷ್ಟ್ರೀಯ ಮಹೋತ್ಸವವವನ್ನು ಮಾಡಿಸಿದ್ದಾನೆ. ೧೭ನೆಯ ಶತಮಾನದ ಗೋವಿಂದ ವೈದ್ಯ ಕವಿಯು, ತನ್ನ ಕಾವ್ಯನಾಯಕನಾದ ಕಂಠೀರವ ನರಸರಾಜನು ಶ್ರೀರಂಗಪಟ್ಟಣದಲ್ಲಿ ಆಚರಿಸಿದ ನವರಾತ್ರಿಯ ಉತ್ಸವದ ಬಣ್ಣನೆಗಾಗಿ, ತನ್ನ ಕೃತಿಯ ಮೂರು ಸಂಧಿಗಳನ್ನು ಮೀಸಲಾಗಿ ಇರಿಸಿದ್ದಾನೆ. ಅಲ್ಲದೆ ಈ ನಾಡಿನ ಹಳ್ಳಿ–ಹಳ್ಳಿಗಳಲ್ಲಿಯೂ ನಡೆಯುತ್ತ ಬಂದಿರುವ ನವರಾತ್ರಿಯ ಹಬ್ಬವು, ಮಿಕ್ಕ ಹಬ್ಬಗಳಂತೆ ಏಕದೇಶೀಯುವಾಗಿರದೆ, ಸರ್ವಜನತೆಯುನ್ನೂ ಹೇಗೆ ಒಳಗೊಂಡಿರುವುದೆಂಬುದನ್ನು ಕಣ್ಣಿಟ್ಟು ನೋಡಿದಾಗ, ಕನ್ನಡ ಜನಪದವು, ನವರಾತ್ರಿಯ ಹಬ್ಬ ನಾಡಹಬ್ಬವೆಂಬುದನ್ನು ಎಂದೋ ಒಪ್ಪಿಕೊಂಡಿದೆಯೆಂಬುದು



ಕಂಡುಬಾರದಿರದು. ನಮ್ಮ ಜಾನಪದ ಜೀವನದಲ್ಲಿ ನವರಾತ್ರಿಯ ಹಬ್ಬದ ಆಚರಣೆ, ಎಷ್ಟೊಂದು ವೈಶಿಷ್ಟ್ಯಪೂರ್ಣವಾಗಿರುವುದೆಂಬುದನ್ನು ಸಂಸ್ಕೃತಿಯ ಅಭ್ಯಾಸಿಗಳು ಆಗ ಕಂಡುಹಿಡಿದು, ಏವಂಗುಣವಿಶಿಷ್ಟವಾದ ಶರನ್ನವರಾತ್ರಿಯೇ ಕನ್ನಡಿಗರ ನಾಡಹಬ್ಬವೆಂದು ನಿರ್ಣಯಿಸಿದರು.

೧೯೨೫ರಲ್ಲಿ ಧಾರವಾಡದಲ್ಲಿ ಪ್ರಾರಂಭವಾದ ಈ ನಾಡಹಬ್ಬದ ಉತ್ಸವವು, ಮೊದಲಿನೆರಡು ವರ್ಷ ಸ್ಥಳೀಯ ಕಾರ್ಯಕ್ರಮವಾಗಿಯೇ ನಡೆಯಿತು. ಸಾರ್ವಜನಿಕರು ಅದನ್ನು ಔದಾಸೀನ್ಯದಿಂದ ಕಂಡರು. ಗಣೇಶೋತ್ಸವದ ಅಭಿಮಾನಿಗಳು, ಈ ಉತ್ಸವವನ್ನು ಸಾರ್ವಜನಿಕವಾಗಿ ಬೀಳುಗಳೆದು ಮಾತನಾಡಿದರು. ಈ ವಿರೋಧದ ಮೂಲಕವಾಗಿಯೇನೋ, ಮೂರನೆಯ ವರ್ಷದ ನಾಡಹಬ್ಬವು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಪ್ರದರ್ಶನ, ಗೀತಮೇಳ ಇವೆಲ್ಲವುಗಳಿಂದ ಕೂಡಿ, ಧಾರವಾಡದ ಜನಮನವನ್ನು ಆಕರ್ಷಿಸಿತು. ಮುಂದೆ ವರ್ಷ–ವರ್ಷಕ್ಕೂ ಈ ಉತ್ಸವವು ಲೋಕಪ್ರಿಯವಾಗುತ್ತ ಉತ್ತರಕರ್ನಾಟಕದ ಹಳ್ಳಿ–ಪಟ್ಟಣಗಳತ್ತಲೂ ಹರಿಯಿತು. ಹೊರನಾಡುಗಳಲ್ಲಿ ಕನ್ನಡಿಗರಿರುವಲ್ಲೆಲ್ಲ ಅವರು ಈ ಕನ್ನಡ ಸಂಸ್ಕೃತಿಯ ಹಬ್ಬವನ್ನು ಆಚರಿಸಲು ತೊಡಗಿದರು. ಅಂದಿನ ನಿಜಾಮ್ ಕರ್ನಾಟಕದಲ್ಲಿ ಹಿಂದುಗಳ ಯಾವ ಚಟುವಟಿಕೆಗಳನ್ನೂ ಸರಕಾರ ಸಂದೇಹದಿಂದ ನೋಡುತ್ತಿದ್ದಿತಾದರೂ, ಹೈದರಾಬಾದ್, ಕಲಬುರ್ಗಿ, ರಾಯಚೂರು, ಕೊಪ್ಪಳ, ಸುರಪುರ ಮೊದಲಾದ ಪಟ್ಟಣಗಳಲ್ಲಿ, ನಾಡಹಬ್ಬದ ಕಾರ್ಯಕ್ರಮವನ್ನು ಅಲ್ಲಿಯ ಕನ್ನಡಿಗರು, ತುಂಬ ಉತ್ಸಾಹ–ಉತ್ಸವಗಳಿಂದ ನಡೆಯಿಸುತ್ತಿದ್ದರು. ನಾಡಹಬ್ಬದ ಈ ಉತ್ಸವ ಕರ್ನಾಟಕ ಏಕೀಕರಣದ ಭಾವನೆಯನ್ನು ಜಾಗೃತಗೊಳಿಸುವ ಕಾರ್ಯವನ್ನೂ ಯಶಸ್ವಿಯಾಗಿ ಮಾಡಿದೆ.

ಇಂದು ರಾಜಕೀಯ ಸ್ವಾತಂತ್ರ್ಯ, ನಾಡಿನ ಪ್ರತ್ಯೇಕತೆಗಳು ದೊರೆತ ಮೇಲೆ, ನಾಡಹಬ್ಬವನ್ನು ಆಚರಿಸುವ ಉತ್ಸಾಹ ನಮ್ಮ ಜನರಲ್ಲಿ ಕಡಿಮೆಯಾದಂತೆ ತೋರುತ್ತದೆ. ಇದು ದೇಶದ ಶುಭಭವಿಷ್ಯಕ್ಕೆ ಒಳ್ಳೆಯ ಲಕ್ಷಣವಲ್ಲ. ರಾಜಕೀಯ ಕಾಯಿದೆಗಳು ಜನರನ್ನು ಎಂದೂ ಸುಸಂಸ್ಕೃತರನಾಗಿ ಮಾಡಲರವು; ಆದರೆ ಜನರಲ್ಲಿ ಸುಸಂಸ್ಕೃತಿ ಹರಡದಿರುವಲ್ಲಿ ಸುಖ–ಸಮಾಧಾನಗಳು ಎಂದೂ ಕಾಲೂರಿ ನಿಲ್ಲಲಾರವು. ನಾಡಿಗೆ ಸುಖ–ಸಮಾಧಾನದ ಜೀವನವು ಬೇಕಾದರೆ, ನಾಡಹಬ್ಬದಂತಹ ಸಾಂಸ್ಕೃತಿಕ ಮಹೋತ್ಸವವು ಅವಿಚ್ಛಿನ್ನವಾಗಿ ನಡೆಯುತ್ತಿರಬೇಕು.

ಜಯ ಕರ್ನಾಟಕ ರಾಜ್ಯದೇವಿ!

* * * * *